# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತಮೂರನೆಯ ಅಧಿವೇಶನ

23ನೇ ಜುಲೈ 2024
ಮಂಗಳವಾರ

## ವಿಷಯಾನುಕ್ರಮಣಿಕೆ (INDEX)

01. ಪ್ರಶ್ನೋತ್ತರಗಳು

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**803 – ಗದಗ ಜಿಲ್ಲೆಯ ಕಪ್ಪತಗುಡ್ಡದ ಸುತ್ತ ಮುತ್ತಲಿರುವ ಮಣ್ಣಿನಲ್ಲಿ ಕಬ್ಬಿಣದ ಅಂಶ ಇರುವ ಬಗ್ಗೆ.**

– ಶ್ರೀ ಎಸ್.ವ್ಹಿ. ಸಂಕನೂರ

– ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು)

**748 – ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿನ ಅವ್ಯವಹಾರ ತನಿಖಾ ವರದಿ ಕುರಿತು.**

– ಶ್ರೀ ಯು.ಬಿ.ವೆಂಕಟೇಶ್
– ಶ್ರೀ ಬಿ.ಎಸ್.ಸುರೇಶ್(ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು)

**759 – ರಾಜ್ಯದಲ್ಲಿ ಸೆಮಿಕಂಡಕ್ಟರ್ ತಯಾರಿಕಾ ಕಂಪನಿಗಳನ್ನು ಸ್ಥಾಪಿಸುವ ಬಗ್ಗೆ.**

– ಶ್ರೀ ಕೆ.ಎ.ತಿಪ್ಪೇಸ್ವಾಮಿ
– ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರು)

**742 – ಹೂ ಬೆಳೆಗಳಿಗೆ ಪ್ರೋತ್ಸಾಹ ನೀಡುವ ಕುರಿತು**

– ಶ್ರೀ ಎನ್.ರವಿಕುಮಾರ್
– ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್(ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಸಚಿವರು)

**೮೦4 – ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವ ಕುರಿತು.**

- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರು)

**790 – ಕಲುಷಿತ ನೀರು ಕುಡಿದು ಪ್ರಾಣಹಾನಿಯಾಗಿರುವ ಬಗ್ಗೆ.**

- ಶ್ರೀ ಡಿ.ಎಸ್.ಅರುಣ್
- ಶ್ರೀ ಬಿ.ಎಸ್.ಸುರೇಶ್(ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು)

**751 – ರೈತರು ಪಡೆದಿರುವ ಸಾಲ ಮನ್ನಾ ಮಾಡುವ ಬಗ್ಗೆ.**

- ಶ್ರೀ ಸಿ.ಟಿ.ರವಿ
- ಶ್ರೀ ಕ್ಯಾತಂದ್ರ ಎನ್.ರಾಜಣ್ಣ (ಸಹಕಾರ ಸಚಿವರು)

**770 – ಅನಧಿಕೃತ ಬಡಾವಣೆಗಳ ನಿರ್ಮಾಣದ ಬಗ್ಗೆ.**

- ಶ್ರೀ ಪ್ರದೀಪ್ ಶೆಟ್ಟರ್
- ಶ್ರೀ ಬಿ.ಎಸ್.ಸುರೇಶ್(ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು)

**೮35 – ಶಿರಾ ನಗರಸಭೆಯಲ್ಲಿನ ಅವ್ಯವಹಾರದ ಬಗ್ಗೆ.**

- ಶ್ರೀ ಚಿದಾನಂದ್ ಎಂ.ಗೌಡ
- ಶ್ರೀ ರಹೀಂ ಖಾನ್(ಪೌರಾಡಳಿತ ಮತ್ತು ಹಜ್ ಸಚಿವರು)

**೮49 – ರಾಜ್ಯದಲ್ಲಿ ಜೇನು ಕೃಷಿಯಲ್ಲಿ ತೊಡಗಿಸಿಕೊಂಡಿರುವವರ ಕುರಿತು.**

- ಶ್ರೀ ಶಾಂತರಾಮ್ ಬುಡ್ನ ಸಿದ್ಧಿ
- ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್(ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಸಚಿವರು)

**೮02 – ತೋಟಗಾರಿಕೆ ಬೆಳೆ ಹಾನಿಯ ಕುರಿತು.**

- ಶ್ರೀ ಕೇಶವ ಪ್ರಸಾದ್.ಎಸ್
- ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್(ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಸಚಿವರು)

**779 – ಭೂ ಪರಿವರ್ತಿತ ವಿನ್ಯಾಸ ನಕ್ಷೆ ಅನುಮೋದನೆ ಕುರಿತು.**

- ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ
- ಶ್ರೀ ಬಿ.ಎಸ್.ಸುರೇಶ್ (ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು)

**೮07 – ರಾಜ್ಯದಲ್ಲಿ ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುತ್ತಿರುವ ಬಗ್ಗೆ.**

- ಶ್ರೀ ಕೆ. ಅಬ್ದುಲ್ ಜಬ್ಬರ್
- ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಸಚಿವರು)

**೮೩೬ – ನಗರ ಸಭೆಗಳಲ್ಲಿ ನಿರ್ಮಿಸುತ್ತಿರುವ ಬಡಾವಣೆಗಳ ಬಗ್ಗೆ.**

– ಶ್ರೀ ಕೆ.ಎಸ್.ನವೀನ್

– ಶ್ರೀ ಬಿ.ಎಸ್.ಸುರೇಶ್(ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು)

**ತಡೆ ಹಿಡಿಯಲಾದ ಪ್ರಶ್ನೆ**

**149 – ಬೆಂಗಳೂರು–ಹುಬ್ಬಳ್ಳಿ–ಧಾರವಾಡ ವಂದೆ ಭಾರತ್ ಎಕ್ಸ್‌ಪ್ರೆಸ್ ಟ್ರೈನ್ ಸೇವೆಯನ್ನು ಬೆಳಗಾವಿ ನಗರದವರೆಗೆ ವಿಸ್ತರಿಸುವ ಕುರಿತು.**

– ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ

– ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**೦೨. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು.**

**ಅ) ಕೆಟಿಪಿಪಿ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿ, ಕರ್ನಾಟಕ ರಾಜ್ಯ ಹ್ಯಾಬಿಟೇಟ್ ಕೇಂದ್ರ ರೂ. 400 ಕೋಟಿಗಳಿಗೂ ಅಧಿಕ ಮೊತ್ತದ ಕಾಮಗಾರಿಗಳನ್ನು ಕೈಗೊಂಡಿರುವ ಬಗ್ಗೆ.**

– ಶ್ರೀ ಕೆ.ಎ.ತಿಪ್ಪೇಸ್ವಾಮಿ

– ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)

**ಆ) ಸಹಕಾರ ಮಾರಾಟ ಮಹಾಮಂಡಳ ನಿಯಮಿತ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನಿವೃತ್ತ ಅಧಿಕಾರಿ ಕೆ.ಎಂ.ಆಶಾ ರವರನ್ನು ನೇಮಿಸಿರುವ ಕುರಿತು.**

– ಶ್ರೀಮತಿ ಹೇಮಲತಾ ನಾಯಕ್

– ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)

**ಇ) ಪತ್ರಿಕೋದ್ಯಮ ವಿಷಯದಲ್ಲಿ ರೆಗ್ಯೂಲರ್ ಆಗಿ ಸ್ನಾತಕೋತ್ತರ ಪದವಿ ಪಡೆದು ಸ್ಥಳೀಯ ಜಿಲ್ಲಾ ಮಟ್ಟದ ಕನ್ನಡ ದಿನಪತ್ರಿಕೆ ಆರಂಭಿಸಿರುವ ಸಂಪಾದಕರಿಗೆ ಪ್ರತಿ ತಿಂಗಳು ಎರಡು ಪುಟ ಜಾಹೀರಾತು ವ್ಯವಸ್ಥೆ ಮಾಡುವ ಬಗ್ಗೆ.**

– ಶ್ರೀ ಪಿ.ಹೆಚ್.ಪೂಜಾರ್

– ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)

**ಈ) ಶಿವಮೊಗ್ಗದಲ್ಲಿ ಆಯುಷ್ ವಿವಿ ಸ್ಥಾಪಿಸುವ ಬಗ್ಗೆ.**

– ಶ್ರೀ ಡಿ.ಎಸ್.ಅರುಣ್

– ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)

**ಉ) ಶಿವಮೊಗ್ಗ ನಗರದಲ್ಲಿ ಕೆಎಸ್‌ಸಿಎ ವತಿಯಿಂದ ನಿರ್ಮಾಣಗೊಂಡಿರುವ ಕ್ರಿಕೆಟ್ ಕ್ರೀಡಾಂಗಣಕ್ಕೆ ಮಳೆಯಿಂದಾಗಿ ಪಕ್ಕದಲ್ಲಿರುವ ಕೆರೆ ಹಾಗೂ ಚರಂಡಿಗಳ ನೀರು ನುಗ್ಗಿ ಕ್ರೀಡೆಗೆ ತೊಂದರೆ ಉಂಟಾಗುತ್ತಿರುವ ಬಗ್ಗೆ.**

- ಶ್ರೀ ಪ್ರಕಾಶ್ ಕೆ.ರಾಠೋಡ್
- ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)

**ಊ) ದರ್ವೇಶ್ ಗ್ರೂಪ್ ಆಫ್ ಕಂಪನಿ ಎಂಬ ಸಂಸ್ಥೆ ಹೂಡಿಕೆದಾರರಿಗೆ ಅಧಿಕ ಬಡ್ಡಿ ನೀಡುವುದಾಗಿ ಹೇಳಿ ಅವರಿಂದ ಡಿಪಾಸಿಟ್ ರೂಪದಲ್ಲಿ ಹಣ ಪಡೆದು, ವಂಚಿಸಿರುವ ಕುರಿತು.**

- ಶ್ರೀ ಎನ್.ರವಿಕುಮಾರ್
- ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)

**ಋ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸರ್ಕಾರದ ವಿವಿಧ ವಸತಿ ಯೋಜನೆಯಡಿ ನಿರ್ಮಾಣ ಹಂತದಲ್ಲಿರುವ ಮನೆಗಳ ಬಿಲ್ ಪಾವತಿ ಬಾಕಿ ಇರುವ ಬಗ್ಗೆ.**

- ಶ್ರೀ ಶಾಂತಾರಾಮ ಬುಡ್ನ ಸಿದ್ಧಿ
- ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)

**ಎ) ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲಿನ ಒತ್ತಡ ಕಡಿಮೆ ಮಾಡಲು ಬೆಂಗಳೂರು ಸಮೀಪವೇ ಪರ್ಯಾಯ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣ ಸಂಬಂಧ ಜರೂರಾಗಿ ಕೇಂದ್ರದಿಂದ ಅನುಮೋದನೆ ಪಡೆಯುವ ಕುರಿತು.**

- ಶ್ರೀ ಟಿ.ಎನ್.ಜವರಾಯಿಗೌಡ
- ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರು)

**ಏ) ಕರಾವಳಿ ಮತ್ತು ಮಲೆನಾಡಿನಲ್ಲಿ ಅತಿವೃಷ್ಟಿಯಿಂದ ಆಗುತ್ತಿರುವ ಗಂಭೀರ ಸಮಸ್ಯೆಗಳ ಬಗ್ಗೆ.**

- ಡಾ: ಧನಂಜಯ ಸರ್ಜಿ
- ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)

**3. ರಾಜ್ಯದಲ್ಲಿ ಕೊಲೆ, ಅತ್ಯಾಚಾರ, ಮಕ್ಕಳ ಮೇಲಿನ ದೌರ್ಜನ್ಯ, ಸೈಬರ್ ಅಪರಾಧ ಪ್ರಕರಣಗಳನ್ನು ತಡೆಯುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿರುವ ಬಗ್ಗೆ ನಿಯಮ 59ರ ನಿಲುವಳಿ ಸೂಚನೆಯಡಿ ವಿಷಯ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

- ಶ್ರೀ ಸಿ.ಟಿ.ರವಿ

**(ನಿಯಮ 330ಕ್ಕೆ ಪರಿವರ್ತಿಸಲಾಯಿತು)**

**4. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅಕ್ರಮದ ಬಗ್ಗೆ ಕೇಂದ್ರ ಸರ್ಕಾರದ ಇ.ಡಿ. ಅಧಿಕಾರಿಗಳು ತನಿಖೆ ನೆಪದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಉದ್ದೇಶಪೂರ್ವಕವಾಗಿ ಕಿರುಕುಳ ನೀಡುತ್ತಿರುವ ಬಗ್ಗೆ ನಿಯಮ 68ರ ಅಡಿಯಲ್ಲಿ ನೀಡಲಾದ ನೋಟೀಸಿನ ಮೇಲೆ ಚರ್ಚಿಸಲು ಅನುಮತಿ ಕೋರಿ ಪ್ರಸ್ತಾವ.**

– ಶ್ರೀ ಯು.ಬಿ.ವೆಂಕಟೇಶ್
– ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)
– ಶ್ರೀ ಟಿ.ಎ.ಶರವಣ
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**(ಅನುಮತಿಯನ್ನು ನಿರಾಕರಿಸಲಾಯಿತು)**

**5. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅಕ್ರಮದ ಬಗ್ಗೆ ಕೇಂದ್ರ ಸರ್ಕಾರದ ಇ.ಡಿ. ಅಧಿಕಾರಿಗಳು ತನಿಖೆ ನೆಪದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಉದ್ದೇಶಪೂರ್ವಕವಾಗಿ ಕಿರುಕುಳ ನೀಡುತ್ತಿರುವ ಬಗ್ಗೆ ನಿಯಮ 68ರ ಅಡಿಯಲ್ಲಿ ನೀಡಲಾದ ನೋಟೀಸಿನ ಮೇಲೆ ಚರ್ಚಿಸಲು ಅನುಮತಿ ನಿರಾಕರಿಸಿರುವುದನ್ನು ಪುನರ್ ಪರಿಶೀಲಿಸಲು ಆಡಳಿತ ಪಕ್ಷದ ಸದಸ್ಯರಿಂದ ಒತ್ತಾಯ.**

– ಶ್ರೀ ಯು.ಬಿ.ವೆಂಕಟೇಶ್
– ಶ್ರೀ ಸಿ.ಟಿ.ರವಿ
– ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)
– ಶ್ರೀ ಎನ್.ಎಸ್. ಬೋಸರಾಜು(ಸಭಾನಾಯಕರು)
– ಶ್ರೀ ಟಿ.ಎ.ಶರವಣ
– ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ(ಹಿಂದುಳಿದ ವರ್ಗಗಳು ಕನ್ನಡ ಮತ್ತು ಸಂಸ್ಕೃತಿ ಸಚಿವರು)
– ಡಾ.ಯತೀಂದ್ರ.ಎಸ್
– ಶ್ರೀ ಐವನ್ ಡಿ'ಸೋಜಾ
– ಶ್ರೀ ಕೆ. ಅಬ್ದುಲ್ ಜಬ್ಬಾರ್

**6. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**7. ವಿತ್ತೀಯ ಕಾರ್ಯಕಲಾಪ**

**2024-25ನೇ ಸಾಲಿನ ಪೂರಕ ಅಂದಾಜು (ಮೊದಲನೆ ಕಂತು)**

**8. ವರದಿಯನ್ನೊಪ್ಪಿಸುವುದು**

**2023-24ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 39ನೇ ವರದಿ.**

– ಶ್ರೀ ಟಿ.ಎನ್. ಜವರಾಯಿಗೌಡ

## 9. ಗಮನ ಸೆಳೆಯುವ ಸೂಚನೆಗಳು

**ಅ) ಕರಾವಳಿ ಹಾಗೂ ಮಲೆನಾಡಿನ ಸಾಂಸ್ಕೃತಿಕ ಕಲೆಯಾಗಿರುವ ಯಕ್ಷಗಾನವನ್ನು ಪ್ರೋತ್ಸಾಹಿಸಲು ಯಕ್ಷಗಾನ ಅಕಾಡೆಮಿಯನ್ನು ಮೇಲ್ದರ್ಜೆಗೇರಿಸಿ ಯಕ್ಷಗಾನ ಅಭಿವೃದ್ಧಿ ಪ್ರಾಧಿಕಾರ ರಚಿಸಲು ಅನುದಾನವನ್ನು ಒದಗಿಸುವ ಕುರಿತು.**

- ಶ್ರೀ ಮಂಜುನಾಥ್ ಭಂಡಾರಿ
- ಶ್ರೀ ಶಿವರಾಜ ಎಸ್. ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಐವನ್ ಡಿ'ಸೋಜಾ
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಕೆ.ಪ್ರತಾಪ ಸಿಂಹ ನಾಯಕ್

## 10. ನಿಯಮ 330ರ ಮೇರೆಗೆ ಚರ್ಚೆ

**ಅ) ಭೂ ರಹಿತರಿಗೆ ಹಾಗೂ ಬಡ ರೈತರಿಗೆ ಸರ್ಕಾರ ನೀಡಿರುವ ಭೂಮಿಗೆ ಪಹಣಿಯಲ್ಲಿ ಪಿ.ನಂ. ನಮೂದಿಸದಿರುವುದರಿಂದ ಹಾಗೂ ಸದರಿ ಭೂಮಿಯನ್ನು ಇತರರಿಗೆ ಪರಭಾರೆ ಮಾಡಲು ವಿಧಿಸಿರುವ ನಿರ್ಬಂಧವನ್ನು ಸಡಿಲಿಸದೆ ಇರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವ ಕುರಿತು.**

- ಶ್ರೀ ಎಂ.ಎಲ್.ಅನಿಲ್ ಕುಮಾರ್
- ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು)
- ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್
- ಶ್ರೀ ಕುಶಾಲಪ್ಪ ಎಂ.ಪಿ.(ಸುಜಾ)

**ಆ) ರಾಜ್ಯಾದ್ಯಂತ ಡೆಂಗ್ಯೂ ಖಾಯಿಲೆ ವ್ಯಾಪಕವಾಗಿ ಹರಡುತ್ತಿದ್ದು, ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಕುರಿತು.**

- ಡಾ: ಧನಂಜಯ ಸರ್ಜಿ
- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಶಶೀಲ್ ಜಿ.ನಮೋಶಿ
- ಡಾ: ತಳವಾರ್ ಸಾಬಣ್ಣ
- ಶ್ರೀ ಐವನ್ ಡಿ'ಸೋಜಾ
- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**ಇ) ದೇವನಹಳ್ಳಿ ತಾಲ್ಲೂಕು ಹರಳೂರಿನಲ್ಲಿ ಕೆಐಎಡಿಬಿ ಅಭಿವೃದ್ಧಿ ಪಡಿಸಿರುವ ಹೈಟೆಕ್ ಏರೋಸ್ಪೇಸ್ ಮತ್ತು ಡಿಫೆನ್ಸ್ ಪಾರ್ಕ್‌ನ 2ನೇ ಹಂತದಲ್ಲಿ ವಿಶ್ವವಿದ್ಯಾಲಯ ಸ್ಥಾಪನೆಗಾಗಿ ಮೆ: ಸೆಂಟರ್ ಫಾರ್ ಎಜುಕೇಷನ್ ಅಂಡ್ ಸೋಷಿಯಲ್ ಸ್ಟಡೀಸ್ ರವರಿಗೆ 116.16 ಎಕರೆ ಜಮೀನನ್ನು 99 ವರ್ಷದ ಗುತ್ತಿಗೆಗೆ ಶೈಕ್ಷಣಿಕ ಅಭಿವೃದ್ಧಿ/ವಿಶ್ವವಿದ್ಯಾಲಯ ಆರಂಭಕ್ಕೆ ಕ್ಯಾಬಿನೆಟ್ ಅನುಮತಿ ನೀಡಿರುವುದರ ಬದಲಾಗಿ 10 ವರ್ಷಗಳ ಗುತ್ತಿಗೆ ಕಮ್ ಮಾರಾಟ ಮಾಡುವ ಕುರಿತು.**

- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರು)
- ಶ್ರೀ ಕೆ.ಎ.ತಿಪ್ಪೇಸ್ವಾಮಿ

## 11. ಗಮನ ಸೆಳೆಯುವ ಸೂಚನೆ

**ಆ) ಪಶ್ಚಿಮಘಟ್ಟ ಮಲೆನಾಡು ಹಾಗೂ ಕರಾವಳಿ ಪ್ರದೇಶಗಳಲ್ಲಿ ಉಂಟಾಗುತ್ತಿರುವ ಭೂಕುಸಿತಕ್ಕೆ ಕಾರಣಗಳೇನು ಎಂಬ ಕುರಿತು ವೈಜ್ಞಾನಿಕವಾಗಿ ಅಧ್ಯಯನ ನಡೆಸಿ ಪಶ್ಚಿಮಘಟ್ಟಗಳ ಸಂರಕ್ಷಣೆಗೆ ಕ್ರಮ ವಹಿಸುವುದರ ಜೊತೆಗೆ ರಸ್ತೆ ಅಭಿವೃದ್ಧಿ/ನಿರ್ವಹಣೆ ಹಾಗೂ ಬೆಳೆ ಹಾನಿಗೆ ವಿಶೇಷ ಪ್ಯಾಕೇಜ್ ನಿಗದಿ ಮಾಡುವ ಕುರಿತು.**

- ಶ್ರೀ ಕೇಶವ ಪ್ರಸಾದ್ ಎಸ್.
- ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ)
- ಶ್ರೀ ಸಿ.ಟಿ.ರವಿ
- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಕೆ.ಪ್ರತಾಪ ಸಿಂಹ ನಾಯಕ್

## 12. ಅರ್ಧಗಂಟೆ ಕಾಲಾವಧಿ ಚರ್ಚೆ

**ಅ) ಅಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ವಿತರಿಸಿದ ವಸ್ತುಗಳ ಕುರಿತು.**

- ಶ್ರೀ ಎನ್.ರವಿಕುಮಾರ್
- ಶ್ರೀ ಕೆ.ಹೆಚ್.ಮುನಿಯಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು)
- ಶ್ರೀ ಶಶೀಲ್ ಜಿ.ನಮೋಶಿ

**ಆ) ಕಲ್ಯಾಣ ಕರ್ನಾಟಕದಲ್ಲಿ ಶಿಕ್ಷಕರ ಕೊರತೆ ಕುರಿತು**

- ಡಾ: ತಳವಾರ್ ಸಾಬಣ್ಣ
- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು)

– ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)
– ಶ್ರೀ ಎಸ್.ಎಲ್.ಭೋಜೇಗೌಡ

**13. ಪ್ರಕಟಣೆ**

**ಅ) ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) (ಎರಡನೇ ತಿದ್ದುಪಡಿ) ವಿಧೇಯಕ 2024**

**ಆ) ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) ವಿಧೇಯಕ, 2024**

**14. ಅರ್ಧಗಂಟೆ ಕಾಲಾವಧಿ ಚರ್ಚೆ**

**ಇ) ರಾಜ್ಯದ ನೇಕಾರರ ಕುರಿತು**

– ಶ್ರೀ ಎಸ್.ಕೇಶವ ಪ್ರಸಾದ್
– ಶ್ರೀ ಶಿವಾನಂದ ಪಾಟೀಲ್ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯ, ಸಹಕಾರ ಇಲಾಖೆಯಿಂದ ಕೃಷಿ ಮಾರುಕಟ್ಟೆ ಸಚಿವರು)
– ಶ್ರೀಮತಿ ಉಮಾಶ್ರೀ
– ಶ್ರೀ ಐವನ್ ಡಿ'ಸೋಜಾ
– ಶ್ರೀ ಎಸ್.ಎಲ್.ಭೋಜೇಗೌಡ

**15. ಪ್ರಕಟಣೆ**

**ಅ) ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2024**

**ಆ) ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2024**

**16. ಮಾನ್ಯ ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರುಗಳ ಹೇಳಿಕೆಗಳು.**

**ಅ) ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿರುವ ಅಗಸ್ತ್ಯಲಿಂಗೇಶ್ವರ ಲಿಂಗಕ್ಕೆ ಮುಕ್ತಿ ದೊರಕಿಸುವ ಕುರಿತು.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ)

**ಆ) ಆರೋಗ್ಯ ಇಲಾಖೆಯಲ್ಲಿ ಖಾಲಿಯಿರುವ ಆರೋಗ್ಯ ನಿರೀಕ್ಷಣಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ)

**ಇ) ಸಮಾಜ ಕಲ್ಯಾಣ ಇಲಾಖೆ ಅಧೀನದಲ್ಲಿ ಬರುವ ವಸತಿ ನಿಲಯಗಳಲ್ಲಿ ಸೂಕ್ತ ಸಿಬ್ಬಂದಿ ಮತ್ತು ಸೌಲಭ್ಯಗಳ ಕೊರತೆಯ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಸಮಾಜ ಕಲ್ಯಾಣ ಸಚಿವರ ಪರವಾಗಿ)

**ಈ) ಕಲಬುರಗಿ ಜಿಲ್ಲೆಯ ಆರ್‌ಎಮ್‌ಎಸ್‌ಎ ಪ್ರೌಢ ಶಾಲೆ ಸಿಬ್ಬಂದಿಗಳಿಗೆ 4-5 ತಿಂಗಳುಗಳಿಂದ ವೇತನ ಪಾವತಿಸದಿರುವ ಕುರಿತು.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಪರವಾಗಿ)

– – –

(613) 22-7-2024 10:30 ಎಸ್‌ಪಿಆರ್/ಎಕೆ

**ಕರ್ನಾಟಕ ವಿಧಾನ ಪರಿಷತ್ತು**

**ಮಂಗಳವಾರ, 23ನೇ ಜುಲೈ 2024**

**ಸದನವು ಬೆಂಗಳೂರಿನ ವಿಧಾನಸೌಧದಲ್ಲಿರುವ**

**ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ 10 ಗಂಟೆ 36 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು**

**ಪೀಠದಲ್ಲಿ ಉಪಸ್ಥಿತರಿದ್ದರು.**

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ತಮ್ಮ ಅನುಮತಿಯ ಮೇರೆಗೆ ನಾನು ಒಂದು ಸೂಚನೆಯನ್ನು ನೀಡಿದ್ದೇನೆ. ಅದನ್ನು ಪ್ರಸ್ತಾಪಿಸಲು ತಾವು ನನಗೆ ಎರಡು ನಿಮಿಷಗಳ ಕಾಲಾವಕಾಶವನ್ನು ನೀಡುವಂತೆ ಕೋರುತ್ತೇನೆ.

**ಸಭಾಪತಿಯವರು:–** ಪ್ರಶ್ನೋತ್ತರ ಕಲಾಪದ ನಂತರ ಅದನ್ನು ತೆಗೆದುಕೊಳ್ಳೋಣ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ನನಗೆ ಈಗಲೇ ಅವಕಾಶವನ್ನು ನೀಡಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರು:–** ಪ್ರಶ್ನೋತ್ತರ ಕಲಾಪದ ನಂತರ ನೀಡುತ್ತೇನೆ; ಈಗ ನೀಡುವುದಿಲ್ಲ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ಇದು ಬಹಳ ಅರ್ಜೆಂಟಾಗಿದೆ.

**ಸಭಾಪತಿಯವರು:–** ಸದನದ ಪದ್ಧತಿಯನ್ನು ಬಿಡಬೇಡಿ.

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೆ, ಇದು ಸಾರ್ವಜನಿಕ ಮಹತ್ವದ ಜರೂರು ವಿಷಯವಾಗಿದೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ಇದು ಬಹಳ ಅರ್ಜೆಂಟಾಗಿದೆ; ಹೀಗಾಗಿ ಎರಡು ನಿಮಿಷಗಳ ಕಾಲಾವಕಾಶವನ್ನು ನೀಡಿ.

**ಸಭಾಪತಿಯವರು:–** ನಾನು ಸಮಯಾವಕಾಶವನ್ನು ನೀಡುತ್ತೇನೆಂದು ಹೇಳಿದ್ದೇನೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೆ ನಾನು ವಿಷಯ ಪ್ರಸ್ತಾಪಿಸುವುದಕ್ಕೆ ಕಾಲಾವಕಾಶವನ್ನು ಕೇಳುತ್ತಿದ್ದೇನೆ.. ಆಮೇಲೆ ಚರ್ಚೆಗೆ ...,

**ಸಭಾಪತಿಯವರು:–** ಶ್ರೀ ಯು.ಬಿ.ವೆಂಕಟೇಶ್ ರವರೇ ನಾನು ಹೇಳುವುದನ್ನು ಕೇಳಿ. ಮೊನ್ನೆಯ ದಿನವೂ ಸಹ ಇದೇ ರೀತಿಯಾಗಿ ಪ್ರಸ್ತಾವನೆಯನ್ನು ಮಂಡಿಸಿದಾಗ ನಾನು ಪ್ರಶ್ನೋತ್ತರ

ಕಲಾಪದ ನಂತರವೇ ತೆಗೆದುಕೊಂಡಿದ್ದೇನೆ. ಎಲ್ಲರಿಗೂ ಅದನ್ನೇ ಹೇಳಿದ್ದೇನೆ. ಪ್ರಶ್ನೋತ್ತರ ಕಲಾಪ ಮುಗಿದ ತಕ್ಷಣವೇ ನಿಮಗೆ ಅವಕಾಶವನ್ನು ನೀಡುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:–** ಈಗ ಮೊದಲು ವಿಷಯ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ನೀಡಿ; ನಂತರದಲ್ಲಿ ಚರ್ಚೆಗೆ ಅವಕಾಶವನ್ನು ನೀಡಿ.

**ಸಭಾಪತಿಯವರು:–** ಪ್ರಶ್ನೋತ್ತರ ಕಲಾಪ ಮುಗಿದ ನಂತರ ವಿಷಯ ಪ್ರಸ್ತಾಪಿಸಲು ಮೊದಲು ಅವಕಾಶವನ್ನು ನೀಡುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ಎರಡು ನಿಮಿಷಗಳ ಕಾಲಾವಕಾಶವನ್ನು ನೀಡಿ.

**ಸಭಾಪತಿಯವರು:–** ಈಗ ಪ್ರಶ್ನೋತ್ತರ ಕಲಾಪ; ಇದು ಮುಗಿದ ಕೂಡಲೇ ನಿಮಗೆ ಅವಕಾಶವನ್ನು ನೀಡುತ್ತೇನೆ. ಶ್ರೀ ಎಸ್.ವ್ಹಿ.ಸಂಕನೂರರವರೇ ನಿಮ್ಮ ಪ್ರಶ್ನೆಯನ್ನು ಕೇಳಿ.

**1. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ: ೮೦೩**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಗದಗ ಜಿಲ್ಲೆಯ ಕಪ್ಪತಗುಡ್ಡದ ಸುತ್ತಮುತ್ತಲೂ ಮಣ್ಣು ಗಣಿಗಾರಿಕೆಯು ವ್ಯಾಪಕವಾಗಿ ನಡೆದಿದೆ. ಅಲ್ಲಿ ಮಣ್ಣಿನ ದರೋಡೆ ನಡೆದಿದೆ ಎನ್ನುವುದು ಹಲವಾರು ಪತ್ರಿಕೆಗಳಲ್ಲಿ ಪ್ರಕಟಗೊಂಡಿದೆ. ಅದರಲ್ಲೂ ವಿಶೇಷವಾಗಿ 'ವಿಜಯ ವಾಣಿ' ದಿನಪತ್ರಿಕೆಯಲ್ಲಿ ಸರಣಿಯ ರೂಪದಲ್ಲಿ ಸರಣಿ 1, ೨ ಮತ್ತು ೩ ಎಂಬುದಾಗಿ ವರದಿಯು ಪ್ರಕಟಗೊಂಡಿದೆ. ಹೀಗಾಗಿ ಈ ಬಗ್ಗೆ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳುವುದಕ್ಕೆ ನಾನು ಈ ವಿಚಾರವಾಗಿ ಪ್ರಶ್ನೆಯನ್ನು ಕೇಳಿದ್ದೇನೆ. ನನ್ನ ಪ್ರಶ್ನೆಗೆ ಸರ್ಕಾರವು ಉತ್ತರಿಸಿದೆ. ಕಪ್ಪತಗುಡ್ಡದ ಸುತ್ತಮುತ್ತಲಿನ ಪ್ರದೇಶದ ಮಣ್ಣಿನಲ್ಲಿ ಕಬ್ಬಿಣದ ಅಂಶ ಇದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆನು. ಅಲ್ಲಿನ ಮಣ್ಣಿನಲ್ಲಿ ಕಬ್ಬಿಣದ ಅಂಶ ಇದೆ ಎಂಬುದಾಗಿ ಸರ್ಕಾರವು ಉತ್ತರಿಸಿದೆ. ಆದರೆ, ಈ ಕಬ್ಬಿಣ ಅಂಶವಿರುವ ಮಣ್ಣನ್ನು ಭೂಗಳ್ಳರು ರಾತ್ರೋರಾತ್ರಿ ಕಳ್ಳತನ ಮಾಡುತ್ತಾರೆ. ಆ ಮಣ್ಣನ್ನು ಅಗೆದು, ಬೇರೆಡೆಗೆ ಸಂಗ್ರಹಣೆ ಮಾಡಿ, ಬಳ್ಳಾರಿಯಿಂದ ಬರುವ ಖನಿಜದಲ್ಲಿ ಅದನ್ನು ಮಿಶ್ರ ಮಾಡಿ ಅದನ್ನು ಗೋವಾ ರಾಜ್ಯಕ್ಕೆ ಕಳುಹಿಸುತ್ತಾರೆ ಎಂಬ ವರದಿಯು ಪತ್ರಿಕೆಗಳಲ್ಲಿ ವರದಿಯಾಗಿದೆ. ಇದರ ಸಂಬಂಧ ಯಾವುದಾದರೂ ದೂರು ಬಂದಿದೆಯೇ ಹಾಗೂ ಇಲಾಖೆಯು ಈ ಸಂಬಂಧ ಏನು ಕ್ರಮ ತೆಗೆದುಕೊಂಡಿದೆ ಎಂಬ ಪ್ರಶ್ನೆಯನ್ನು ನಾನು ಕೇಳಿದ್ದೆನು. ಸರ್ಕಾರವು ನೀಡಿರುವ ಉತ್ತರದಲ್ಲಿ "ಕಬ್ಬಿಣದ ಅಂಶವಿರುವ ಮಣ್ಣನ್ನು ಅಕ್ರಮವಾಗಿ ತೆಗೆಯುತ್ತಿರುವ ಬಗ್ಗೆ ಯಾವುದೇ ದೂರುಗಳು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಸ್ವೀಕೃತವಾಗಿರುವುದಿಲ್ಲ" ಎಂಬುದಾಗಿ ತಿಳಿಸಿರುತ್ತಾರೆ. ಅದೇ ಖಂಡಿಕೆಯ ಮುಂದಿನ ಭಾಗದಲ್ಲಿ ನಮಗೆ ಸ್ವೀಕೃತವಾದ ಮಾಹಿತಿಯ ಆಧಾರದ ಮೇಲೆ ನಾವು ಸ್ಥಳಕ್ಕೆ ಹೋಗಿ, ಅಲ್ಲಿದ್ದ ಮಣ್ಣನ್ನು ವಶಪಡಿಸಿಕೊಂಡು

ಪ್ರಕರಣವನ್ನು ದಾಖಲಿಸಲಾಗಿದೆ ಎಂಬ ಮಾಹಿತಿಯನ್ನೂ ಸಹ ಸರ್ಕಾರವು ಲಿಖಿತ ಉತ್ತರದಲ್ಲಿ ನೀಡಿದೆ. ಒಂದೆಡೆಗೆ ಸರ್ಕಾರವು ಇಂತಹ ದೂರುಗಳು ಬಂದಿಲ್ಲವೆಂದು ತಿಳಿಸಿದರೆ ಮತ್ತೊಂದೆಡೆ ಈ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ದೂರು ಎಂದರೆ ಕೇವಲ ಲಿಖಿತವಾಗಿದ್ದರೆ ಮಾತ್ರವೇ ದೂರು ಆಗುತ್ತದೆಯೇ? ಮೌಖಿಕವಾಗಿ ತಿಳಿಸಿದರೆ ಅದು ದೂರು ಆಗುವುದಿಲ್ಲವೇ ಎಂದು ನಾನು ಪ್ರಶ್ನಿಸಬಯಸುತ್ತೇನೆ. ಇದು ದ್ವಂದ್ವದಿಂದ ಕೂಡಿದ ಉತ್ತರವಾಗಿದೆ.

(ಮುಂದು)

(614)23-07-2024/10-40/bkp-ak ಸಭಾಪತಿಯವರು ಉಪಸ್ಥಿತಿ

**ಶ್ರೀ ಎಸ್.ವ್ಹಿ.ಸಂಕನೂರ (ಮುಂದು):-**

ಒಂದು ಕಡೆಗೆ ಯಾವುದೇ ದೂರು ಸ್ವೀಕೃತಗೊಂಡಿಲ್ಲವೆಂದು ಸರ್ಕಾರವು ತಿಳಿಸುತ್ತದೆ. ಅದೇ ಖಂಡಿಕೆಯಲ್ಲಿ ಮುಂದುವರೆದು, "ಗದಗ ತಾಲ್ಲೂಕಿನ ದುಂದೂರು ಗ್ರಾಮದ ಸರ್ವೆ ನಂಬರ್ 35/1+2ಬಿ ಪಟ್ಟಾ ಜಮೀನಿನಲ್ಲಿ ಅನಧಿಕೃತವಾಗಿ ಕಬ್ಬಿಣ ಅದಿರುಯುಕ್ತ ಮಣ್ಣು ಸಂಗ್ರಹಣೆ ಮಾಡಿರುವ ಸಂಬಂಧ ಮಾಹಿತಿ ಬಂದ ಮೇರೆಗೆ, ಪಟ್ಟಾ ಜಮೀನಿನ ಮಾಲೀಕರು ಹಾಗೂ ವಾಹನದ ಮಾಲೀಕರ ಮೇಲೆ ದಿನಾಂಕ 18/10/2023 ರಂದು ಜೆ.ಎಂ.ಎಫ್.ಸಿ. ನ್ಯಾಯಾಲಯ ಗದಗದಲ್ಲಿ ಪಿ.ಸಿ.ಆರ್. ಸಂಖ್ಯೆ: 129/2023 ರನ್ವಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ದೂರು ದಾಖಲಿಸಿ ಕ್ರಮ ಕೈಗೊಳ್ಳಲಾಗಿರುತ್ತದೆ" ಎಂದು ಲಿಖಿತ ಉತ್ತರದಲ್ಲಿ ತಿಳಿಸಲಾಗಿರುತ್ತದೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೆ, ಸದಸ್ಯರು ಹೇಳಿರುವುದು ನಿಜಾಂಶವಾಗಿದೆ. ಆದರೆ, ಅರಣ್ಯ ಇಲಾಖೆಯವರು ಪ್ರಕರಣವನ್ನು ದಾಖಲಿಸಿದ್ದಾರೆ ಹೊರತು ನಮ್ಮ ಇಲಾಖೆಯವರಲ್ಲ.

**(ಗೊಂದಲ)**

ಅರಣ್ಯ ಇಲಾಖೆಯಿಂದ ಮಾಹಿತಿಯು ನಮ್ಮ ಇಲಾಖೆಗೆ ಸ್ವೀಕೃತಗೊಂಡಿರುವುದಿಲ್ಲ. ಆದರೆ, ಅರಣ್ಯ ಇಲಾಖೆಯವರು ಪಿ.ಎಲ್.ಸಂಖ್ಯೆ: 3371-72 ದಿನಾಂಕ 09 ಮತ್ತು 15 ಗಳಂದು ಒಟ್ಟು 17,872 ಹೆಕ್ಟೇರ್ ಪ್ರದೇಶದಲ್ಲಿ ರಾಮಗಢ್ ಮಿನರಲ್ಸ್ ವಿರುದ್ಧ ಉಚ್ಛ ನ್ಯಾಯಾಲಯದ ಮುಂದೆ ಒಂದು

ಪ್ರಕರಣವನ್ನು ದಾಖಲಿಸಿರುತ್ತಾರೆ. ಆ ನಿಟ್ಟಿನಲ್ಲಿ ಅರಣ್ಯ ಇಲಾಖೆಯಿಂದ ಮೆಟೀರಿಯಲ್ಸ್‌ಗಳನ್ನು ಸೀಜ್ ಮಾಡಲಾಗಿರುತ್ತದೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾನು ಏನು ಹೇಳುತ್ತೇನೆಂದರೆ, ಅರಣ್ಯ ಇಲಾಖೆಯವರಿಂದ ಪ್ರಕರಣವನ್ನು ದಾಖಲಿಸಲಾಗಿದೆ ಎಂದು ಸಚಿವರು ತಿಳಿಸುತ್ತಿದ್ದಾರೆ. ಆದರೆ, ಕಬ್ಬಿಣದ ಅದಿರನ್ನು ಅರಣ್ಯ ಇಲಾಖೆಯವರು ಸೀಜ್ ಮಾಡಿದ್ದು. ಇದು ಅರಣ್ಯ ಪ್ರದೇಶದಲ್ಲಿತ್ತು. ಕೆಳಗೆ ನೀಡಿರುವ ಉತ್ತರವನ್ನು ಗಮನಿಸಬೇಕು. ಅದು ಕಬ್ಬಿಣದ ಅದಿರು. ಆದರೆ ಇದು ಕಬ್ಬಿಣದ ಅಂಶವಿರುವ ಮಣ್ಣು ಆಗಿದೆ. ಎರಡೂ ವಸ್ತುಗಳು ಬೇರೆಯಾಗಿವೆ. ಕಬ್ಬಿಣದ ಅದಿರನ್ನು ಸಂಗ್ರಹಣೆ ಮಾಡಿರುವ ಪ್ರಕರಣವನ್ನು ಅರಣ್ಯ ಇಲಾಖೆಯವರು ದಾಖಲಿಸಿದ್ದಾರೆ. ಆದರೆ, ಎರಡನೆಯದಾಗಿ, ಕಬ್ಬಿಣದ ಅಂಶವನ್ನು ಮಿಶ್ರ ಮಾಡಿರುವ ಮಣ್ಣಿನ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಸಚಿವರು ಇದನ್ನು ಅರ್ಥ ಮಾಡಿಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ಒಟ್ಟಾರೆಯಾಗಿ ನಾನು ವಿನಂತಿಸಿಕೊಳ್ಳುವುದೇನೆಂದರೆ, ಕಪ್ಪತಗುಡ್ಡದ ಬಗ್ಗೆ ತಮಗೆ ತಿಳಿದಿದೆ. ಇದರ ಸುತ್ತಮುತ್ತಲಿನ ಪ್ರದೇಶದಲ್ಲಿ ಔಷಧೀಯ ಸಸ್ಯಗಳು ಬಹಳಷ್ಟು ಅಲ್ಲಿವೆ.

**ಸಭಾಪತಿಯವರು:–** ಇದರ ಬಗ್ಗೆ ಸರ್ಕಾರ ಏನು ಮಾಡಬೇಕೆಂದು ಹೇಳಿ

**ಶ್ರೀ ಎಸ್.ವ್ಹಿ.ಸಂಕನೂರ:–** ಅಲ್ಲಿದ್ದ ಸಂಪತ್ತನ್ನು ದುರುಪಯೋಗ ಆಗದ ರೀತಿಯಲ್ಲಿ ಈ ರೀತಿಯಾಗದಂತೆ, ಈ ವಿಚಾರದಲ್ಲಿ ಬಹಳ ಕಟ್ಟುನಿಟ್ಟಾದ ಸೂಚನೆಗಳನ್ನು ನೀಡಬೇಕು. ಇದರ ಬಗ್ಗೆ ಅಲ್ಲಿನ ಪತ್ರಿಕೆಗಳಲ್ಲಿ ವರದಿಯಾಗಿದೆ.

. **ಸಭಾಪತಿಯವರು:** ಶ್ರೀ ಸಂಕನೂರ ರವರೇ ಕುಳಿತುಕೊಳ್ಳಿ; ನಾನು ಹೇಳುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೆ, ಸರ್ಕಾರವು ನೀಡಿರುವ ಉತ್ತರವು ಸುಳ್ಳಾಗುತ್ತದೆಯೇ? ಅಲ್ಲಿ ರಾತ್ರಿಯೆಲ್ಲಾ ದರೋಡೆ ಮಾಡುತ್ತಿದ್ದಾರೆ. ಪತ್ರಿಕೆಗಳಲ್ಲಿ ವರದಿಯಾಗಿರುವುದು ಹಾಗೂ ಅಲ್ಲಿನ ಜನರು ಹೇಳುವುದು ಸುಳ್ಳಾಗುತ್ತದೆಯೇ? ಈ ರೀತಿಯಾಗಿ ಆಗಬಾರದು; ಸರ್ಕಾರವು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.

**ಸಭಾಪತಿಯವರು:–** ಸಚಿವರೇ, ಸದಸ್ಯರು ಹೇಳುವುದನ್ನು ಕೇಳಿ. ನಾನೂ ಸಹ ಕಪ್ಪತ್‌ಗುಡ್ಡಕ್ಕೆ ಎರಡು ಬಾರಿ ಭೇಟಿ ನೀಡಿದ್ದೇನೆ. ಈ ರೀತಿಯ ಕೃತ್ಯಗಳು ಅಲ್ಲಿ ಬಹಳವಾಗಿ ನಡೆಯುತ್ತಿದೆ. ಹೀಗಾಗಿ ಇವತ್ತಿನ ದಿನದಿಂದಲೇ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:–** ಮಾನ್ಯ ಸಭಾಪತಿಯವರೆ, ಸಂರಕ್ಷಿತ ಅರಣ್ಯ ಎಂಬುದಾಗಿ ಘೋಷಿಸಲಾಗಿದೆ.

**ಸಭಾಪತಿಯವರು:–** ಆದರೆ, ಅದನ್ನು ಕಾಯುವವರು ಬೇಕಲ್ಲ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:–** ಮಾನ್ಯ ಸಭಾಪತಿಯವರೆ, ಕಾಯುವವರು ಬೇಕು ಮತ್ತು ಸಂರಕ್ಷಿತ ಅರಣ್ಯ ಎಂಬುದಾಗಿ ಘೋಷಿಸಿದ್ದು, ಈಗ ಅರಣ್ಯ ಇಲಾಖೆಯಡಿ ಇದೆ.

**ಸಭಾಪತಿಯವರು:–** ಈ ವಿಚಾರದಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕೋ; ತೆಗೆದುಕೊಳ್ಳಿ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:–** ಮಾನ್ಯ ಸಭಾಪತಿಯವರೆ, ಈ ವಿಚಾರದಲ್ಲಿ ಅರಣ್ಯ ಇಲಾಖೆಯವರನ್ನು ಕರೆಸಿ, ಸಭೆಯೊಂದನ್ನು ನಡೆಸಿ, ಇದರ ಬಗ್ಗೆ ಬಿಗಿ ಬಂದೋಬಸ್ತ್ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೆ, ಕೊನೆಯದಾಗಿ, ಈಗ ನಿಮ್ಮ ಇಲಾಖೆಯವರೆ, ಧಾಳಿ ಮಾಡಿ, ಕಳಸಾಪುರ ಗ್ರಾಮದ ವ್ಯಾಪ್ತಿಯ ಸರ್ವೆ ನಂ. 104; ಸಂಭಾಪುರ ಗ್ರಾಮದ ವ್ಯಾಪ್ತಿಯ ಸರ್ವೆ ನಂ.43/3 ಮತ್ತು 88/2 ಬೆಳದಡಿ 21 – ಈ ಮೂರು ಸರ್ವೆ ನಂಬರ್‌ಗಳಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರೇ ದಾಳಿ ಮಾಡಿ, ಅಲ್ಲಿ ಕಬ್ಬಿಣದ ಅಂಶವಿರುವ ಮಣ್ಣನ್ನು ತೆಗೆಯುತ್ತಿದ್ದಾರೆ ಎನ್ನುವುದನ್ನು ಪರಿಶೋಧನೆ ಮಾಡಿದ್ದಾರೆ, ಪತ್ತೆ ಹಚ್ಚಿದ್ದಾರೆ, ಇಲಾಖೆ ಅನುಮತಿ ನೀಡಿದ್ದಕ್ಕೂ ಮೀರಿ 250 ಎಕರೆ ಹೆಚ್ಚು ಪ್ರದೇಶದಲ್ಲಿ ಕಬ್ಬಿಣದ ಅಂಶವಿರುವ ಮಣ್ಣನ್ನು ಕಳ್ಳತನ ಮಾಡಿದ್ದಾರೆ. ಹೀಗಾಗಿ ಇವರ ವಿರುದ್ಧ ಪ್ರಕರಣವನ್ನು ದಾಖಲಿಸಲಾಗಿದೆಯೇ?

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:–** ಮಾನ್ಯ ಸಭಾಪತಿಯವರೆ, ನಿಟ್ಟೂರು ಗ್ರಾಮದ ಪ್ರಕರಣದಲ್ಲಿ ಕಬ್ಬಿಣದ ಅದಿರು ಇತ್ತು ಎಂಬುದು ಕಂಡುಬಂದಿರುವುದರಿಂದ ಪ್ರಕರಣವನ್ನು ದಾಖಲಿಸಲಾಗಿದೆ.

**ಶ್ರೀ ಎಸ್.ವ್ಹಿ.ಸಂಕನೂರು:–** ನಾನು ಕಳಸಾಪುರ, ಸಂಭಾಪುರ ಮತ್ತು ಬೆಳದಡಿ ಗ್ರಾಮಗಳ ಬಗ್ಗೆ ಕೇಳುತ್ತಿದ್ದೇನೆ. ಇದು ಪತ್ರಿಕೆಗಳಲ್ಲಿ ವರದಿಯಾಗಿದೆ.

**ಸಭಾಪತಿಯವರು:–** ಶ್ರೀ ಎಸ್.ವ್ಹಿ.ಸಂಕನೂರ ರವರೇ ಸಾಕು ಮಾಡಿ; ಶ್ರೀ ಯು.ಬಿ.ವೆಂಕಟೇಶ್ ರವರೇ, ನಿಮ್ಮ ಪ್ರಶ್ನೆಯನ್ನು ಕೇಳಿ. ನಾನು ಒಂದು ಪ್ರಶ್ನೆಗೆ ಐದು ನಿಮಿಷಗಳ ಕಾಲಾವಕಾಶವನ್ನು ನೀಡಿದ್ದೇನೆ. ಐದು ನಿಮಿಷಗಳ ನಂತರ ಅವಕಾಶವನ್ನು ನೀಡುವುದಿಲ್ಲ.

**ಪ್ರಶ್ನೆ ಸಂಖ್ಯೆ:– 748**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಮ್ಮ ಪ್ರಶ್ನೆ ಏನೆಂದರೆ, ಈ ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕೋಟ್ಯಂತರ ರೂಪಾಯಿಗಳ ಅವ್ಯವಹಾರವಾಗಿದೆಯೇ ಎಂದು ನಾನು ಕೇಳಿರುವ ಪ್ರಶ್ನೆಗೆ, ಸರ್ಕಾರವು ಅವ್ಯವಹಾರವಾಗಿದೆ ಎಂದು ಉತ್ತರಿಸಿದೆ. ಮುಂದುವರೆದು, ಇದರ ತನಿಖಾ ವರದಿ ಬಂದಿದೆಯೇ ಎಂದು ಕೇಳಿದ ಪ್ರಶ್ನೆಗೆ, ವರದಿ ಬಂದಿದೆ ಎಂದು ಉತ್ತರಿಸಿದ್ದಾರೆ. ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ಎಂದು ಕೇಳಿರುವ ಪ್ರಶ್ನೆಗೆ ಈಗ ಕಳೆದ ತಿಂಗಳು ದಿನಾಂಕ 13/06/2024 ರಂದು ಪ್ರಕರಣ ದಾಖಲಿಸಿರುವುದಾಗಿ ತಿಳಿಸಿದ್ದಾರೆ. ಕಳೆದ ತಿಂಗಳ 9 ನೇ ತಾರೀಖಿನಿಂದು ದೂರು ನೀಡಿದ್ದೇವೆ ಎಂದು ತಿಳಿಸಿದ್ದಾರೆ. ಅಲ್ಲಿ ಕಳೆದೆರಡು ವರ್ಷದಿಂದ ಹಗರಣ ನಡೆಯುತ್ತಿದೆ. ನಾವು ಪ್ರಶ್ನೆಯನ್ನು ಕೇಳಿದಾಗಲೆಲ್ಲಾ, ಇದೇ ಉತ್ತರವನ್ನು ನೀಡುತ್ತಿದ್ದಾರೆ. ಈ ಬಗ್ಗೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿ, ಸಂಬಂಧಿತ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಬಿ.ಎಸ್.ಸುರೇಶ್ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿದ ಪ್ರಕಾರ

**ಸಭಾಪತಿಯವರು:–** ಮಾನ್ಯ ಸದಸ್ಯರು ಈಗ ದೂರು ದಾಖಲು ಮಾಡಿದ್ದಾರೆಂದು ಹೇಳುತ್ತಾರೆ.

**ಶ್ರೀ ಬಿ.ಎಸ್.ಸುರೇಶ್ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):–** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಹೇಳಿಕೊಂಡು ಹೋಗುತ್ತೇನೆ. ಈ ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಅವ್ಯವಹಾರಗಳು ನಡೆದಿದೆ ಎಂಬುದರ ಬಗ್ಗೆ ಬಹಳಷ್ಟು ದೂರುಗಳು ಬಂದಿದ್ದವು. ಇದಕ್ಕೆ ನಾವು ಪ್ರಾದೇಶಿಕ ಆಯುಕ್ತರು, ಕಲಬುರಗಿ ಹಾಗೂ ನಗರ ಗ್ರಾಮಾಂತರ ಯೋಜನೆಯ ಅಧಿಕಾರಿಗಳನ್ನು ಒಳಗೊಂಡಂತೆ ಒಂದು ಸಮಿತಿಯನ್ನು ವಿಚಾರಣೆಗಾಗಿ ನೇಮಿಸಲಾಗಿತ್ತು. ಈ ತನಿಖಾ ತಂಡವು ತನಿಖಾ ವರದಿಯನ್ನು ನೀಡಲು ಕಾಲಾವಕಾಶವನ್ನು ತೆಗೆದುಕೊಂಡು, ವರದಿಯನ್ನು ಸಲ್ಲಿಸಿತ್ತು. ಪ್ರಾದೇಶಿಕ ಆಯುಕ್ತರು ಸಲ್ಲಿಸಿರುವ ವರದಿಯನ್ವಯ, ಪ್ರಾಧಿಕಾರದಲ್ಲಿ ತಪ್ಪು ಎಸಗಿರುವುದು

ನಿಜ ಎಂದು ನಾನು ಹೇಳಲಿಚ್ಛಿಸುತ್ತೇನೆ. ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೀದರ್ ನಗರದ ಛಿದ್ರಿ ಮತ್ತು ನೌಬಾದ್ ಸರ್ವೆ ನಂಬರುಗಳಲ್ಲಿ ನಿವೇಶನ ಹಂಚಿಕೆ ಮಾಡುವಲ್ಲಿ ಅಧಿಕಾರಿಗಳು ತಪ್ಪೆಸಗಿದ್ದಾರೆ. ಇದರಿಂದ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ನಷ್ಟವಾಗಿದೆ. ಹೀಗಾಗಿ ದೂರು ದಾಖಲಿಸಿ ಎಂದು ಈಗ ನಮ್ಮ ಇಲಾಖೆಯಿಂದ ಪೋಲೀಸ್ ಇಲಾಖೆಗೆ ತಿಳಿಸಲಾಗಿದೆ. ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಹಿಂದಿನ ಅಧ್ಯಕ್ಷರಿಂದ ಸಿವಿಲ್ ದಾವೆಯನ್ನು ಹೂಡಿ, ಅವರಿಂದ ಹಣ ವಾಪಸ್ಸು ಪಡೆದುಕೊಳ್ಳುವುದಕ್ಕೆ ಕ್ರಮ ಜರುಗಿಸಬೇಕೆಂದು ತಿಳಿಸಲಾಗಿದೆ. ಭಾರತೀಯ ದಂಡ ಸಂಹಿತೆಯ ಕಲಂ 409 ರನ್ವಯ ಕ್ರಿಮಿನಲ್ ಪ್ರಕರಣ ದಾಖಲಿಸಲು ಆದೇಶಿಸಲಾಗಿದೆ. ಈ ಬಗ್ಗೆ ಮುಂಚಿತವಾಗಿ ತಿಳಿಸಲಾಗಿದ್ದರೂ ಸಹ ಅವರು ಕ್ರಮ ತೆಗೆದುಕೊಂಡಿರಲಿಲ್ಲ. ಹೀಗಾಗಿ, ಪುನಃ ಪತ್ರ ಬರೆದು, ಈ ಬಗ್ಗೆ ದೂರು ದಾಖಲಿಸುವಂತೆ ನೇರವಾಗಿ ಅಲ್ಲಿನ ಎಸ್.ಪಿ. ರವರಿಗೆ ತಿಳಿಸಲಾಗಿದೆ. ನಮ್ಮ ಇಲಾಖೆಯ ಕಾರ್ಯದರ್ಶಿಗಳು ನೇರವಾಗಿ ಎಸ್.ಪಿ. ರವರೊಂದಿಗೆ ಮಾತನಾಡಿದ್ದಾರೆ. ಎಸ್.ಪಿ. ರವರು ಅವರ ಮೇಲೆ ಈ ಕೂಡಲೇ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದಾಗಿ ತಿಳಿಸಿದ್ದಾರೆ. ಇದನ್ನು ನಾವು ಫಾಲೋ-ಅಪ್ ಮಾಡುತ್ತೇವೆ; ಯಾವುದೇ ಸಮಸ್ಯೆ ಇಲ್ಲ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಪ್ರಾಧಿಕಾರದ ಆಯುಕ್ತರೇ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರ ಇರುವಾಗ ಇಲ್ಲಿ police complaint ಏಕೆ ಕೋಡುತ್ತೀರಿ? ನಿಮ್ಮ ಆಯುಕ್ತರಿಗೆ ಅಧಿಕಾರ ಇದೆಯಲ್ಲಾ?

**ಶ್ರೀ ಬಿ.ಎಸ್.ಸುರೇಶ್:-** ಮಾನ್ಯ ಸಭಾಪತಿಯವರೆ, ಕ್ರಿಮಿನಲ್ ಮೊಕದ್ದಮೆಯನ್ನು ಆಯುಕ್ತರು ದಾಖಲಿಸುವುದಿಲ್ಲ; ಪೋಲೀಸ್ ಇಲಾಖೆಯವರು ದಾಖಲಿಸುತ್ತಾರೆ. ಹಣ ವಸೂಲಿ ಮಾಡುವುದಕ್ಕೆ ನಮ್ಮ ಇಲಾಖೆಯು ಕ್ರಮ ವಹಿಸುತ್ತದೆ. ಕ್ರಿಮಿನಲ್ ಮೊಕದ್ದಮೆ ಹೂಡಲು ಪೋಲಿಸರಿಗೆ ಅಧಿಕಾರವನ್ನು ನೀಡಲಾಗಿದೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, 9 ನೇ ತಾರೀಖಿನಂದು ಅಧಿಕಾರ ನೀಡಿದ್ದರೂ ಇದುವರೆವಿಗೂ ಪ್ರಕರಣ ದಾಖಲಾಗಿರುವುದಿಲ್ಲ.

**ಶ್ರೀ ಬಿ.ಎಸ್.ಸುರೇಶ್:-** ಮಾನ್ಯ ಸಭಾಪತಿಯವರೆ, ಸದಸ್ಯರು ಈಗ ಹೇಳಿದ್ದಾರೆ; ನಾವು ಫಾಲೋ-ಅಪ್ ಮಾಡುತ್ತೇವೆ. ಬೇಗನೇ ಮಾಡಿಸುತ್ತೇವೆ.

**ಸಭಾಪತಿಯವರು:-** ಬೇಗನೆ ಮಾಡಿ.

**ಪ್ರಶ್ನೆ ಸಂಖ್ಯೆ: 759**

**(ಉತ್ತವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ನಾನು ಪ್ರಮುಖವಾದ ಪ್ರಶ್ನೆಯನ್ನು ಕೇಳಿದ್ದು, ಅದಕ್ಕೆ ಸರ್ಕಾರವು ಉತ್ತರಿಸಿದೆ. ಇವತ್ತಿನ ದಿವಸ ಇಡೀ ಪ್ರಪಂಚದಲ್ಲಿಯೇ ಅದರಲ್ಲೂ ಭಾರತದಲ್ಲಿ ಸೆಮಿಕಂಡಕ್ಟರ್ ಫ್ಯಾಬ್ರಿಕೇಷನ್ ಯೂನಿಟ್‌ಗಳನ್ನು ಹಾಕುವ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದು, ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಭಾರತ ಸರ್ಕಾರದ Semiconductor Mission ನಲ್ಲಿ ನೀಡಿರುವ ಅನುದಾನವನ್ನು ನಾವು ಬಳಕೆ ಮಾಡಿಕೊಳ್ಳುತ್ತಿದ್ದೇವೆಂದು ಹೇಳಿದ್ದಾರೆ. ಇತ್ತೀಚೆಗೆ ಕೇಂದ್ರ ಸರ್ಕಾರ ಮೂರು ಸೆಮಿಕಂಡಕ್ಟರ್ ಫ್ಯಾಬ್ರಿಕೇಷನ್ ಯೂನಿಟ್‌ಗಳನ್ನು ಸ್ಥಾಪಿಸಿದೆ. ಗುಜರಾತ್‌ನಲ್ಲಿ 2; ಅಸ್ಸಾಂ ರಾಜ್ಯದಲ್ಲಿ 1 ಆಗಿವೆ. ಇವುಗಳು ಮೆಗಾ ಪ್ರಾಜೆಕ್ಟ್‌ಗಳಾಗಿವೆ. ಇಂತಹ ಪ್ರಾಜೆಕ್ಟ್‌ಗಳನ್ನು ನಮ್ಮ ರಾಜ್ಯಕ್ಕೆ ತರಲು ಸರ್ಕಾರವು ಪ್ರಯತ್ನಿಸಿದೆಯೇ? ಸರ್ಕಾರವು ಹೆಚ್ಚುವರಿಯಾಗಿ ಸಹಾಯಧನವನ್ನು ನೀಡುತ್ತಿದೆಯೇ? ಏಕೆಂದರೆ, Semiconductor Mission ನಲ್ಲಿ ಶೇಕಡಾ 50 ರಷ್ಟನ್ನು ಭಾರತ ಸರ್ಕಾರವು ನೀಡುತ್ತಿದೆ. ಹೆಚ್ಚುವರಿಯಾಗಿ ನೆರೆಯ ತಮಿಳುನಾಡು ಸರ್ಕಾರವು ಶೇಕಡಾ 25 ರಷ್ಟನ್ನು ನೀಡುತ್ತಿದೆ. ಇದರಿಂದಾಗಿ ಹೊಸೂರಿನಲ್ಲಿ ಟಾಟಾ ಸಂಸ್ಥೆಯು ಚಿಪ್ ತಯಾರಿಕಾ ಯೋಜನೆಯನ್ನು ಜಾರಿಗೊಳಸುತ್ತಿದೆ. ಈ ರೀತಿಯಾಗಿ ಮಾಡುವುದಕ್ಕೆ ಸರ್ಕಾರವು ಪ್ರಯತ್ನಿಸುತ್ತಿದೆಯೇ ಎಂದು ಕೇಳಬಯಸುತ್ತೇನೆ. ಸಚಿವರು ಉತ್ತರಿಸಿದ ನಂತರ ನಾನು ಉಪ ಪ್ರಶ್ನೆಯನ್ನು ಕೇಳುತ್ತೇನೆ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೆ, ಹಿರಿಯ ಸದಸ್ಯರಾದ ಶ್ರೀ ಕೆ.ಎ. ತಿಪ್ಪೇಸ್ವಾಮಿಯವರು ಬಹಳ ಪ್ರಮುಖವಾದ ಪ್ರಶ್ನೆಯನ್ನು ಕೇಳಿದ್ದಾರೆ.

(ಮುಂದು.)

(615) 23.07.2024 10.50 ಎಸ್‌ವಿ-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಿಯಾಂಕ್ ಖರ್ಗೆ (ಮುಂದು):-**

ಇದು ನಮ್ಮ ದೇಶಕ್ಕಷ್ಟೇ ಅಲ್ಲ, ನಮ್ಮ ರಾಜ್ಯಕ್ಕೂ ಕೂಡ ಬಹಳ ಪ್ರಮುಖವಾದಂತಹ ಯೋಜನೆಯಾಗಿದೆ. Indian Semiconductor Mission ಜೊತೆ ಜೊತೆಗೆ ರಾಜ್ಯ ಸರ್ಕಾರವು ಸಾಕಷ್ಟು incentives ಮತ್ತು subsidies ಗಳನ್ನು ಕೊಡುತ್ತಿದೆ. ಕೇಂದ್ರ ಸರ್ಕಾರದ ಯೋಜನೆ ಬರುವುದಕ್ಕಿಂತಲೂ ಮೊದಲೇ KESDM (Karnataka Electronics System Design and Manufacturing) Policy ಯನ್ನು 2017ರಿಂದ 2022ರಲ್ಲಿ ತರಲಾಗಿದೆ. ಅದರಲ್ಲಿ Patent Registration, International Grant, Research and Development Grant, Capital Subsidy, Quality Certification, Prototyping, Interest Subsidy, PFI and ESI Subsidy, Stamp Duty, Land Conversion Fee, Registration Charges, Power Tariff Concession and Subsidy for setting up of ETP ಕೂಡ ಇದೆ. ಅದು ಕೂಡ ಸಮರ್ಪಕವಾಗಿ ಬಳಕೆಯಾಗುತ್ತಿದೆ. ಜೊತೆಯಲ್ಲಿ Karnataka Special Incentives Scheme for ESDM Sector 2020-2025 ಎನ್ನುವ ನೀತಿ ಕೂಡ ನಾವು ಮಾಡಿದ್ದೇವೆ. ತಮಿಳುನಾಡಿಗಿಂತಲೂ ಚೆನ್ನಾಗಿ ಈ incentive programme ಇದೆ. 25% capital subsidy ಇದೆ land ಮೇಲೆ. 20 percent capital subsidy on plant and machinery ಇದೆ. 100 percent stamp duty on registration charges ಇದೆ. 100 percent exemption for electricity duty ಇದೆ. Power tariff reimbursement and production linked incentives like the Government of India ಕೂಡ ಇದೆ. ಇದು ಕೇವಲ ಬೆಂಗಳೂರು ಸುತ್ತಮುತ್ತಲೇ ಇರಬಾರದು, ಬೆಂಗಳೂರಿನ ಹೊರಗೆ ಇರಬೇಕು ಎಂದು ನಾಲ್ಕು ಜಿಲ್ಲೆಗಳಲ್ಲಿ Electronic Manufacturing Cluster ಅನ್ನು ಮಾಡಲಾಗಿದೆ. ಹುಬ್ಬಳ್ಳಿ-ಧಾರವಾಡದಲ್ಲಿ 224 ಎಕರೆ ಮಾಡಿ Ministry of Economy, Trade and Industry ಗೆ approval ಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಮೈಸೂರಿನ ಕೋಚೇನಹಳ್ಳಿಯಲ್ಲಿ ಅಂದಾಜು

245 ಎಕರೆ ಪ್ರೊಪೋಸಲ್ ಕೂಡ ಕೇಂದ್ರ ಸರ್ಕಾರದ ಮುಂದಿದೆ. ತಮಗೆ ತಿಳಿದಿರುವಂತೆ ತುಮಕೂರಿನ ವಸಂತನರಸಾಪುರದಲ್ಲಿ ಈಗಾಗಲೇ ಪ್ರತಿಷ್ಠಿತವಾದಂತಹ ಕಂಪನಿಗಳು ಸ್ಥಾಪನೆಗೊಂಡಿವೆ. ಅಲ್ಲಿ 218 ಎಕರೆ ಭೂಮಿಯನ್ನು ನಾವು ಮೀಸಲಿಟ್ಟಿದ್ದೇವೆ. ಬೆಂಗಳೂರು ಗ್ರಾಮಾಂತರದ ಆದಿನಾರಾಯಣ ಹೊಸಹಳ್ಳಿ ಇಲ್ಲಿ 213 ಎಕರೆಗಳನ್ನು ಮೀಸಲಿಟ್ಟಿದ್ದು, ಅಲ್ಲಿ ನಾವು ರೂ.200 ಕೋಟಿಗಳನ್ನು ಖರ್ಚು ಮಾಡಿದ್ದೇವೆ. ಈ Semiconductor Companies ಗಳನ್ನು ಆಕರ್ಷಣೆ ಮಾಡುವುದು ಬಹಳ ಕಠಿಣವಾದಂತಹ ಕೆಲಸ. ಮಾನ್ಯ ಎಂ.ಬಿ.ಪಾಟೀಲ್ ಅವರು ಹಾಗೂ ನಾನು ಇತ್ತೀಚೆಗೆ ಅಮೆರಿಕಾ ಮತ್ತು ಯೂರೋಪ್ ದೇಶಗಳಿಗೆ ಭೇಟಿ ನೀಡಿದ್ದು, ಅಲ್ಲಿನ ಕಂಪನಿಗಳೊಂದಿಗೆ ಮಾತನಾಡಿದಾಗ ರೂ.75,000 ಕೋಟಿ ಬಂಡವಾಳ ಹೂಡಿಕೆಯನ್ನು ಮಾಡಲು promise ಮಾಡಿದ್ದಾರೆ. ಮಾನ್ಯ ಸದಸ್ಯರು ಹೇಳಿದ್ದು ಸರಿಯಿದೆ. ಗುಜರಾತ್ ಕಡೆ ಹೆಚ್ಚಿನ ಒಲವು ಇದೆ. ನಾವು ಎಷ್ಟೇ ಪ್ರಯತ್ನ ಮಾಡಿದರೂ ಕೂಡ ಒಂದು ಫೋನ್ ಕರೆ ದೆಹಲಿಯಿಂದ ಹೋಗಿ ಬಿಟ್ಟರೆ ನಮ್ಮ ದಕ್ಷಿಣ ಭಾರತದ ರಾಜ್ಯಗಳಿಗೆ ಬಂಡವಾಳ ತರುವುದು ಕಷ್ಟವಾಗುತ್ತಿದೆ. ಈ ನಿಟ್ಟಿನಲ್ಲಿ ನಮ್ಮ ಪ್ರಯತ್ನ ಇದೆ. ನಮ್ಮ incentives ಮತ್ತು ನಮ್ಮ ಪಾಲಿಸಿ, ವಿಶೇಷವಾಗಿ ನಮ್ಮ ಮಾನವ ಸಂಪನ್ಮೂಲವನ್ನು ಗಣನೆಗೆ ತೆಗೆದುಕೊಂಡು ಹೆಚ್ಚಿನ investment ಬರುವ ರೀತಿಯಲ್ಲಿ ನಾವು ಕೆಲಸ ಮಾಡುತ್ತೇವೆ.

**ಶ್ರೀ ಎಂ.ಬಿ.ಪಾಟೀಲ್** (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರು)**:-** ಮಾನ್ಯ ತಿಪ್ಪೇಸ್ವಾಮಿಯವರೆ, ತಾವು ಬಹಳ ಮಹತ್ವವಾದ ವಿಚಾರವನ್ನು ಎತ್ತಿದ್ದೀರಿ. ಈ Semiconductor Industries ಇಲ್ಲಿಗೆ ಬರಬೇಕೆಂಬುದು ನಮ್ಮೆಲ್ಲರ ಆಶಯ. ಕರ್ನಾಟಕವೂ ಕೂಡ Semiconductor ನಲ್ಲಿ ಮುಂಚೂಣಿಯಲ್ಲಿರಬೇಕು. ಆದರೆ ತಮಗೆ ತಿಳಿದಂತೆ Semiconductorನ policy ಏನಾಗುತ್ತದೆಯೆಂದರೆ Government of India plays a very important role. ಉದಾಹರಣೆಗೆ ಗುಜರಾತ್‌ನಲ್ಲಿ ಮೈಕ್ರಾನ್ ಕಂಪನಿ setup ಆದಾಗ

೫೦% ಹಣವನ್ನು ಕೇಂದ್ರ ಸರ್ಕಾರ ಕೊಟ್ಟಿತ್ತು. ಗುಜರಾತ್ ಸರ್ಕಾರ ೩೦% ಕೊಟ್ಟಿತ್ತು. ೮೦% is from the Central and State Government. ಕೇಂದ್ರ ಸರ್ಕಾರದಿಂದ ಸ್ವಲ್ಪ push ಬೇಕಾಗುತ್ತದೆ. ಅವರು ಗುಜರಾತ್‌ಗೆ ಹೋಗಿ ಎಂದರೆ ಗುಜರಾತ್‌ಗೆ ಹೋಗುತ್ತಾರೆ. ಕರ್ನಾಟಕಕ್ಕೆ ಹೋಗಿ ಎಂದರೆ ಕರ್ನಾಟಕಕ್ಕೆ ಹೋಗುತ್ತಾರೆ. ಈಗ ಕೇಂದ್ರದಲ್ಲಿ ಬೃಹತ್ ಕೈಗಾರಿಕೆ ಸಚಿವರು ನಮ್ಮ ರಾಜ್ಯದವರೇ ಇದ್ದಾರೆ. ನಾನೂ ಕೂಡ ಅವರೊಂದಿಗೆ ಮಾತನಾಡಿದ್ದೇನೆ. ಅವರು support ಮಾಡುವುದಾಗಿ ಹೇಳಿದ್ದಾರೆ. ಹೀಗಾಗಿ ಸ್ವಲ್ಪ push ಬೇಕಾಗುತ್ತದೆ. ಕರ್ನಾಟಕದಲ್ಲಿ ನಾವೂ ಕೂಡ incentives ಕೊಡಲಿಕ್ಕೆ ಸಿದ್ಧರಿದ್ದೇವೆ. ಯಾವ ರೀತಿ ಗುಜರಾತ್‌ಗೆ ಕೊಟ್ಟಿದ್ದಾರೆ, ಯಾವ ರೀತಿ ತಮಿಳುನಾಡಿಗೆ ಕೊಟ್ಟಿದ್ದಾರೆ ಅದಕ್ಕಿಂತ ಚೆನ್ನಾಗಿ incentives ಕೊಡುವುದಕ್ಕೆ ನಮ್ಮ ಸರ್ಕಾರ ಸಿದ್ಧವಿದೆ. ಈ ಮಾತನ್ನು ನಾನು ಕೇಂದ್ರ ಬೃಹತ್ ಕೈಗಾರಿಕಾ ಸಚಿವರಾದ ಮಾನ್ಯ ಕುಮಾರಸ್ವಾಮಿಯವರಿಗೂ ಹೇಳಿದ್ದೇನೆ. ಕೊಡಲಿಕ್ಕೆ ನಾವು ಸಿದ್ಧರಿದ್ದೇವೆ ಎಂದು ಈ ಸದನದಲ್ಲಿ ಕೂಡ ಹೇಳುತ್ತಿದ್ದೇವೆ. ಈಗ ಸ್ವಲ್ಪ ನೀವು ದೊಡ್ಡ ಮನಸ್ಸು ಮಾಡಬೇಕು. ಎಲ್ಲಾ ನಿಮ್ಮ ಕೈಯಲ್ಲಿದೆ. Divert ಮಾಡಿಬಿಟ್ಟರೆ ಬೇರೆ ಕಡೆ ಹೊರಟುಹೋಗುತ್ತಾರೆ. ನಾನು ಇದರಲ್ಲಿ ರಾಜಕೀಯ ಬೆರೆಸುವುದಕ್ಕೆ ಹೋಗುವುದಿಲ್ಲ. ಆದರೆ ಇಲ್ಲಿ ಬರಲಿಕ್ಕೆ ಸ್ವಲ್ಪ ಒತ್ತಡ ಹಾಕಬೇಕು. ನೀವೆಲ್ಲರೂ ಒತ್ತಾಯ ಮಾಡಿದರೆ ಕರ್ನಾಟಕಕ್ಕೆ Semiconductor Industries ಬರಲು ಸಾಧ್ಯವಿದೆ. ಕೇವಲ ನಾವು incentive ಕೊಡುತ್ತೇವೆ ಎಂದರೆ ಬರುವುದಿಲ್ಲ. Mission ನಲ್ಲಿ ೫೦% grant ಕೇಳಲು ಹೋಗುತ್ತಾರೆ. ಆಗ ಸ್ವಲ್ಪ ಒತ್ತಡಗಳು ಆಗುತ್ತವೆ. ಅದನ್ನು ಸ್ವಲ್ಪ ನಿಭಾಯಿಸುವಂತಹ ಕೆಲಸ ಆಗಬೇಕು.

**ಶ್ರೀ ಪಿ.ಹೆಚ್.ಪೂಜಾರ್:–** ಮಾನ್ಯ ಸಭಾಪತಿಯವರೆ....

**ಸಭಾಪತಿಯವರು:–** ಮಾನ್ಯ ಪೂಜಾರ್ ಅವರು ಮಾತನಾಡಿದ್ದು ಯಾವುದೂ ಕಡತಕ್ಕೆ ಹೋಗಬಾರದು.

**(ಸಭಾಪತಿಯವರ ಆದೇಶಾನುಸಾರ ಮಾನ್ಯ ಸದಸ್ಯರಾದ ಪೂಜಾರ್‌ರವರು ಮಾತನಾಡಿರುವುದನ್ನು ನಡವಳಿಯಲ್ಲಿ ದಾಖಲಿಸಿರುವುದಿಲ್ಲ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಚಿವರೆ, ಇದರಲ್ಲಿ ರಾಜಕೀಯ ಬೇಡ. ನಮ್ಮ ರಾಜ್ಯಕ್ಕೆ ಏನು ಸಿಗಬೇಕೋ ಅದು ಸಿಕ್ಕರೆ ಸಾಕು. ಇಲ್ಲಿ ತಾವು ಇಬ್ಬರೂ ಸಚಿವರಿದ್ದೀರಿ. ನಾನು ಮಾನ್ಯ ಎಂ.ಬಿ.ಪಾಟೀಲರಿಗೆ ಪ್ರಶ್ನೆ ಮಾಡಿದ್ದೆನು. ಅದು ಬಹುಶಃ ಮಾನ್ಯ ಪ್ರಿಯಾಂಕ್ ಖರ್ಗೆಯವರಿಗೆ ವರ್ಗಾವಣೆ ಆಗಿದೆ. ತಮಗೆ ತಿಳಿದಿರುವಂತೆ Semiconductor Fabrications ಬರಬೇಕಾದರೆ 3–4 ವರ್ಷ ಬೇಕಾಗುತ್ತದೆ. ತಾವು ಮೊನ್ನೆ ಕೂಡ ತೈವಾನ್, ಯೂರೋಪ್, ಅಮೆರಿಕಾ, ಸೌತ್ ಕೊರಿಯಾ ದೇಶಗಳಿಗೆ ಹೋಗಿ ಬಂದಿದ್ದೀರಿ.

**ಶ್ರೀ ಎಂ.ಬಿ.ಪಾಟೀಲ್:–** ತೈವಾನ್ ಇಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಎಷ್ಟೋ MOU ಗಳನ್ನು ಮಾಡಿಕೊಂಡಿದ್ದೀರಿ. ದಯವಿಟ್ಟು ಅವು MOU ಗಳಾಗಿಯೇ ಉಳಿಯಬಾರದು. ಇಂಟೆಲ್, ಐಬಿಎಂ, ಸ್ಯಾಮ್‌ಸಂಗ್ ಮುಂತಾದ ಸಾಕಷ್ಟು Multinational Companies ಗಳು ಕರ್ನಾಟಕದಲ್ಲಿ ಇವೆ. ಅಂತಹವುಗಳನ್ನು ಆಕರ್ಷಣೆ ಮಾಡಿದರೆ ಒಳ್ಳೆಯದು. ಇದರಿಂದ indirect employment ಜಾಸ್ತಿ ಸಿಗುತ್ತದೆ. ಅದು commercial ಇರಬಹುದು, ಜಿಎಸ್‌ಟಿ ಅಥವಾ ಬೇರೆ ಟ್ಯಾಕ್ಸ್ ಇರಬಹುದು, ಐಟಿ ಇರಬಹುದು, ಸಾಕಷ್ಟು ರೀತಿಯಲ್ಲಿ ಸರ್ಕಾರಕ್ಕೆ ನೆರವಾಗುತ್ತದೆ. ಈ ದೃಷ್ಟಿಯಲ್ಲಿ ತಾವು ಮಾಡಿಕೊಂಡು ಬಂದಿರುವ MOU ಗಳನ್ನು ದಯಮಾಡಿ push ಮಾಡಿ. ಮಾನ್ಯ ಕುಮಾರಸ್ವಾಮಿಯವರ ಬಳಿ Department of Steel and Heavy Industries ಇದೆ. ಬಾಕಿಯದೆಲ್ಲಾ METI ಗೆ ಬರುತ್ತದೆ. ತಾವು ಇಚ್ಛೆ ಪಟ್ಟರೆ ಸರ್ಕಾರ ಬಯಸಿದರೆ ಮುಖ್ಯಮಂತ್ರಿಯವರೊಡನೆ ಒಂದು ಸಭೆಯನ್ನು ಏರ್ಪಡಿಸಿ ಯಾವುದು ಭಾರತ ಸರ್ಕಾರದ ಮುಂದೆ ಉಳಿದುಕೊಂಡಿದೆಯೋ ಅದನ್ನು push ಮಾಡಬಹುದು.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೆ, ಇದು ಬಹಳ ಪ್ರಮುಖವಾದಂತಹ ವಿಚಾರ. ಮಾನ್ಯ ಸದಸ್ಯರು ಹೇಳಿದಂತೆ ಇದು ಬಹಳ ಮುಖ್ಯವಾದ ಬಂಡವಾಳ ಹೂಡಿಕೆ ಕ್ಷೇತ್ರವಾಗಿದೆ. ಅವರು ಹೇಳಿದಂತೆ Global Foundries, Micron, Advanced Micro Devices, N-Media, Intel ಎಲ್ಲವನ್ನೂ ನಾವು ಚರ್ಚೆ ಮಾಡಿದ್ದೇವೆ. ವಿಶೇಷವಾಗಿ ಇತ್ತೀಚೆಗೆ ದಿನಕ್ಕೆ 14 ತಾಸುಗಳ ಕೆಲಸ ಮಾಡಿಸುತ್ತೇವೆ ಎಂದು ಐಟಿ ಕಂಪನಿಯವರು ಹೇಳಿದ್ದಾರೆ ಎಂದು ಬಂದಿದೆ. ಬಹುಶಃ ಅದು ತಪ್ಪು ಸಂದೇಶ ಜನರಿಗೆ ಹೋಗಿದೆ. ನೀವು ಹೇಳಿದಂತೆ ಅದು it is very specific industries ಗೆ ಮಾತ್ರ. ಎಲ್ಲಾ IT Industries and IT Enabled Services ಗೆ ಇಲ್ಲ. Manufacturing, assembly units based on concurrence and consent of the employee and the factory owners.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಚಿವರೆ, ಅವರು stakeholders ಅನ್ನು consent ಮಾಡಿಲ್ಲ. Consent ಮಾಡಿದ್ದರೆ ಬಹುಶಃ ಇಷ್ಟೊಂದು ಸಮಸ್ಯೆಯಾಗುತ್ತಿರಲಿಲ್ಲ.

**ಶ್ರೀ ಪ್ರಿಯಾಂಕ್ ಖರ್ಗೆ:-** ಅದನ್ನು ನಾವು ಚರ್ಚೆಗೆ ತೆಗೆದುಕೊಂಡಿರಲಿಲ್ಲ. ಆದರೂ ತಾವು ಬಂಡವಾಳ ಬರಬೇಕೆಂದು ಹೇಳಿದ್ದು, ಮೊನ್ನೆ ಕೂಡ ನಾನೇ meeting ಗೆ ವೈಯಕ್ತಿಕವಾಗಿ ಹೋಗಿ ಸಚಿವರನ್ನು ಭೇಟಿಯಾಗಿ ಬಂದಿದ್ದೇನೆ. ಮಾನ್ಯ ಕುಮಾರಸ್ವಾಮಿಯವರನ್ನು ಭೇಟಿಯಾಗಿ HMT shed ಕೊಡಲಿಕ್ಕೆ Centre of Excellence Fables ಗಳನ್ನು ಪ್ರಾರಂಭ ಮಾಡಲಿಕ್ಕೆ ನಾನು ಮನವಿ ಮಾಡಿಕೊಂಡಿದ್ದೇನೆ. ಅವರು ಸ್ಪಂದಿಸುತ್ತೇನೆ ಎಂದು ಹೇಳಿದ್ದಾರೆ ಎನ್ನುವುದನ್ನು ಸದನಕ್ಕೆ ತಿಳಿಸಬಯಸುತ್ತೇನೆ.

**ಪ್ರಶ್ನೆ ಸಂಖ್ಯೆ 742**

**(ಉತ್ತರ ಒದಗಿಸಲಾಗಿದೆ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ. ಇವತ್ತು ಸಾಮಾನ್ಯವಾಗಿ ರೈತರು ಮೆಕ್ಕೆ ಜೋಳ, ಅಡಕೆ ಇವುಗಳನ್ನು ಹೆಚ್ಚು ಬೆಳೆಯುತ್ತಿರುವ ಸಂದರ್ಭದಲ್ಲಿ, difference types of farmers ಹೂವು ಬೆಳೆಯುತ್ತಿರುವವರು ಮತ್ತು ತರಕಾರಿ ಬೆಳೆಯುತ್ತಿರುವವರು ಬೇರೆ ಬೇರೆ ಕೃಷಿ ಅಳವಡಿಸಿಕೊಳ್ಳುವವರಿಗೆ ಸರ್ಕಾರ ಸ್ವಲ್ಪ effective ಆಗಿ support ಮಾಡಬೇಕಾಗುತ್ತದೆ. ಆ ನಿಟ್ಟಿನಲ್ಲಿ support ಮಾಡಿದ್ದಾರೆ. ಘಟಕ ವೆಚ್ಚ 40%, ಗಡ್ಡೆ ಜಾತಿ ಹೂಗಳಿದ್ದರೆ 40%, ಬಿಡಿ ಹೂಗಳಿದ್ದರೆ 40% ಸಹಾಯಧನ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಇದು ಸಾಕಾಗುವುದಿಲ್ಲ. ನಮ್ಮ ರಾಜ್ಯದಿಂದ ಸುಮಾರು 80 ಕೋಟಿ ರೂಪಾಯಿಗಳಷ್ಟು ಹೂವು export ಆಗುತ್ತಿದೆ. ತುಂಬಾ waste ಹೂವನ್ನು ತಿಪ್ಪೆಗೆ ಬಿಸಾಕುತ್ತಾರೆ.

(ಮುಂದು)

(616) 23-07-2024 (11.00) ಕೆಜಿ ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ರವಿಕುಮಾರ್ (ಮುಂದು):–**
ಆ waste ಹೂವನ್ನು ಬಳಸುವುದರ ಬಗ್ಗೆ ಯಾವುದೇ research ಮಾಡಿಲ್ಲ. ಮಾಡಿದ್ದರೂ ಸಹ, ನನಗೆ ಮಾಹಿತಿ ಇಲ್ಲ. ಈಗ ಉದಾಹರಣೆಗೆ, waste ಹೂವಿನಿಂದ scent ಅನ್ನು ತಯಾರು ಮಾಡಬಹುದು. Paint ಅನ್ನು ತಯಾರು ಮಾಡಬಹುದು. ಸರ್ಕಾರ waste ಹೂವುಗಳ ಬಗ್ಗೆ ಏನಾದರೂ ಯೋಚನೆ ಮಾಡಿದೆಯೇ? ಹೂವು ಬೆಳೆಗಾರರಿಗೆ ಇನ್ನೂ ಸ್ವಲ್ಪ support ಮಾಡಬೇಕು. ಇದರೊಳಗೆ ಒಂದು ದೊಡ್ಡ ಸಮುದಾಯ ಇದೆ. ಸಾಮಾನ್ಯವಾಗಿ "ತಿಗಳ" ಸಮುದಾಯ ದೊಡ್ಡ ಪ್ರಮಾಣದಲ್ಲಿ ಹೂವಿನ ವ್ಯಾಪಾರವನ್ನು ಮಾಡುತ್ತಿದ್ದಾರೆ. ಇದಕ್ಕೆ ಹೆಚ್ಚಿನ ಪ್ರಮಾಣದಲ್ಲಿ support ಮಾಡಬಹುದೇ ಎಂಬುದನ್ನು ನಾನು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎನ್.ರವಿಕುಮಾರ್‌ರವರು perfumery ಬಗ್ಗೆ ಹೇಳಿದ್ದಾರೆ. ನಮ್ಮ ರಾಜ್ಯಕ್ಕೆ ಸಾಕಷ್ಟು perfumery industry ಗಳು ಬರುತ್ತಿವೆ. ಈಗ ನಮ್ಮ ಜಿಲ್ಲೆಯ ಯರಪನಹಳ್ಳಿ ತಾಲ್ಲೂಕಿನಲ್ಲಿ ಚೆಂಡು ಹೂವಿನ perfume industry ಬರುತ್ತಿದೆ. ಅದೇರೀತಿ chilli powder ಬಗ್ಗೆ ಬಂದಿದೆ. ಇದೇರೀತಿ ಒಂದೊಂದು ಕೈಗಾರಿಕೆಗಳು ಬರುತ್ತವೆ. ಅವರು ಕೇಂದ್ರ ಸರ್ಕಾರದವರಿಗೆ ಹೇಳಿ ಇನ್ನೂ ಹೆಚ್ಚು subsidy ಹಣವನ್ನು especially export subsidy ಬರುವಂತೆ ಮಾಡಲಿ. ಇದಕ್ಕೆ ಕೇಂದ್ರ ಸರ್ಕಾರದವರು ಪ್ರೋತ್ಸಾಹ ಮಾಡಲಿ. ನಾವು ನಮ್ಮ ರಾಜ್ಯ ಸರ್ಕಾರದಿಂದ ಪ್ರೋತ್ಸಾಹ ಮಾಡುತೇವೆ. ಇದರಿಂದ ಹೆಚ್ಚಿನ ರೀತಿಯಲ್ಲಿ ರೈತರಿಗೆ ಒಳ್ಳೆಯದು ಆಗುವಂತಹ ಕೆಲಸವನ್ನು ಅವರು–ನಾವು ಸೇರಿ ಮಾಡೋಣ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, *"During the last two years, government has not allocated the budget for research and development of varieties in flower crops."* ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಾವು ಎರಡು ವರ್ಷಗಳಿಂದ ಹಣವನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಹಾಲು ಯಾವ ರೀತಿ 24 ಗಂಟೆ ಕೆಡದಂತೆ ಇರುತ್ತದೆಯೋ, ಅದೇರೀತಿ ಹೂವು ಸಹ 24 ಗಂಟೆ ಕಾಲ ಕೆಡದಂತೆ ಇರುತ್ತದೆ. ಆದರೆ, ಹೆಚ್ಚಿಗೆ ಬಿಸಲು ಇದ್ದರೆ, ಹೂವು 24 ಗಂಟೆಯೂ ಇರುವುದಿಲ್ಲ. ಸುಮಾರು 5–6 ಗಂಟೆಗಳಲ್ಲಿ ಬಾಡಿ ಹೋಗುತ್ತದೆ. ಇಂತಹ ಸಂದರ್ಭದಲ್ಲಿ export subsidy ಗೆ ಸಂಬಂಧಿಸಿದಂತೆ, ಮಾನ್ಯ ಸಚಿವರು ಕೇಂದ್ರ ಸರ್ಕಾರದ ಬಗ್ಗೆ ಹೇಳಿದರು. ಇದರ ಬಗ್ಗೆ ಕೇಂದ್ರ ಸರ್ಕಾರವೂ ಸಹ ಯೋಚನೆ ಮಾಡಬೇಕು. ಇದರ ಬಗ್ಗೆ ನನ್ನ different opinion ಇಲ್ಲ. ಹೂವು ಬಾಡಿ ಹೋದರೆ, ರೈತರು ಆ ಹೂವನ್ನು ತಿಪ್ಪೆಗೆ ಹಾಕಬೇಕಾಗುತ್ತದೆ. ಈ ತರಹದ ಸಮಸ್ಯೆಗೆ ಸರ್ಕಾರ ಏನು ಮಾಡುತ್ತಿದೆ? ಇದು ಒಂದು. ಎರಡನೆಯದಾಗಿ, ತೋಟಗಾರಿಕೆ ವಿಶ್ವವಿದ್ಯಾನಿಲಯ ಇದೆ. ಈ ವಿಷಯದ ಬಗ್ಗೆ ತೋಟಗಾರಿಕೆ ವಿಶ್ವವಿದ್ಯಾನಿಲಯದಲ್ಲಿ ಏನಾದರೂ research ಮಾಡಿದ್ದಾರೆಯೇ? ಇದರ ಬಗ್ಗೆ research ಮಾಡುವುದಕ್ಕೆ ಸರ್ಕಾರ ಏನು ಕ್ರಮಕೈಗೊಳ್ಳುತ್ತಿದೆ ಎಂಬ ವಿಷಯದ ಬಗ್ಗೆ ಹಾಗೂ ಸುಮಾರು 2 ವರ್ಷದಿಂದ ಇದಕ್ಕೆ ಹಣ ಕೊಟ್ಟಿಲ್ಲ. ಇದರ ಬಗ್ಗೆಯೂ ಮಾನ್ಯ ಸಚಿವರು ಬೆಳಕು ಚೆಲ್ಲಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:–** ಮಾನ್ಯ ಸಭಾಪತಿಯವರೇ, ಸ್ವಲ್ಪ ಬರಗಾಲ ಬಂದಿತ್ತು, ಆ ನಿಟ್ಟಿನಲ್ಲಿ horticulture crops ಕಡಿಮೆ ಇದ್ದಿದ್ದರಿಂದ ಹಾಗೂ ಮಳೆ ಸ್ವಲ್ಪ

ಕಡಿಮೆಯಾಗಿದ್ದರಿಂದ ರೈತರಿಗೆ, ಅದರಲ್ಲಿ research ಬಗ್ಗೆ ಸ್ವಲ್ಪ ಕಡಿಮೆಯಾಗಿದೆ ಎಂಬುದನ್ನು ನಾನು ಒಪ್ಪುತ್ತೇನೆ. ಇದರಲ್ಲಿ ಮುಖ್ಯವಾಗಿ ಮಾನ್ಯ ಸದಸ್ಯರು flower market ಬಗ್ಗೆ ಮಾತನಾಡಿದ್ದಾರೆ. ಅದೇರೀತಿ RIDF (Rural Infrastructure Development Fund) ನಲ್ಲಿ ನಮ್ಮ ರಾಜ್ಯ ಸರ್ಕಾರ ಮತ್ತು Central Government contribution ಮುಖಾಂತರ ಸಾಕಷ್ಟು ಆಗುತ್ತಿದೆ. ನಾವು ಈಗ research ಬಗ್ಗೆ ಸಾಕಷ್ಟು project ಗಳನ್ನು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತಿದ್ದೇವೆ. ಅದು shade net crops ಆಗಿರಬಹುದು, ವಿವಿಧ ಇಲಾಖೆಯ ವತಿಯಿಂದ ಸಾಕಷ್ಟು ಯೋಜನೆಗಳನ್ನು ತರುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿರುವಂತಹದ್ದರ ಬಗ್ಗೆ ಮುಂದಿನ ದಿವಸಗಳಲ್ಲಿ ಸರ್ಕಾರ ಯೋಚನೆ ಮಾಡುತ್ತದೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಕೊನೆಯದಾಗಿ ಒಂದು ವಿಷಯ. Tulip ಎಂಬ ಒಂದು ಜಾತಿಯ ಹೂವು ಇದೆ. ಅದನ್ನು ನಮ್ಮ ರಾಜ್ಯದ ಬೆಂಗಳೂರು ಸುತ್ತಮುತ್ತಲೂ ಹಾಗೂ ಮೈಸೂರಿನಲ್ಲಿ ಬೆಳೆಯುತ್ತಿದ್ದಾರೆ. ಅದಕ್ಕೆ ಪ್ರಪಂಚದಲ್ಲಿ ಸುಮಾರು 52% ಬೇಡಿಕೆ ಇದೆ. ಆದರೆ, ನಮ್ಮ ರಾಜ್ಯದಲ್ಲಿ ಆ ಹೂವನ್ನು ಬೆಳೆಯುವಂತಹವರಿಗೆ ಯಾವುದೇ ರೀತಿಯ support ಇಲ್ಲ. ಈ ಹೂವಿಗೆ ಪ್ರಪಂಚದಲ್ಲಿ ಬಹಳ ಬೇಡಿಕೆ ಇದೆ. ಇದರ ಬಗ್ಗೆ ಸರ್ಕಾರ ಏನಾದರೂ ಯೋಚನೆ ಮಾಡಿದೆಯೇ?

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:-** ಮಾನ್ಯ ಸಭಾಪತಿಯವರೇ, Tulip flowers ಅನ್ನು 5 degree Celsius temperature ನಲ್ಲಿ ಬೆಳೆಯಬೇಕು. ಆ ಹೂವನ್ನು ನಮ್ಮಲ್ಲಿ ಬೆಳೆಯುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಏನಾದರೂ ಮಾಹಿತಿ ಬೇಕೆಂದರೆ, Netherlands ಗೆ ಹೋಗಬೇಕಾಗುತ್ತದೆ. ನಾವು-ಅವರು Netherlands ಗೆ ಹೋಗಿ ಅಲ್ಲಿ ಯಾವ ರೀತಿ ಆ ಹೂವನ್ನು ಬೆಳೆಯುತ್ತಿದ್ದಾರೆ ಎಂಬುದನ್ನು ನೋಡಿಕೊಂಡು ಬರೋಣ. ಈ Tulip ಹೂವು April and May ತಿಂಗಳನಲ್ಲಿ ಬೆಳೆಯುತ್ತದೆ. ಈಗ ಕಾಶ್ಮೀರದಲ್ಲಿ develop ಆಗುತ್ತಿದೆ. ನಮ್ಮ ರಾಜ್ಯದಲ್ಲಿ temperature ಜಾಸ್ತಿ ಇದೆ. ಹಾಗಾಗಿ, ಬೆಳೆಯುವುದಕ್ಕೆ ಕಷ್ಟವಾಗುತ್ತದೆ. ಇದನ್ನು ಊಟಿ ಮತ್ತು ಕೊಡೈಕೇನಾಲ್‌ನಲ್ಲಿ ಸ್ವಲ್ಪ ಮಟ್ಟಿಗೆ ಬೆಳೆಯುತ್ತಿದ್ದಾರೆ. ಇದನ್ನು ಚಿಕ್ಕಮಗಳೂರಿನಲ್ಲಿ ಬೆಳೆಯುವುದು ಕಷ್ಟ. ಕೆಮಣ್ಣುಗುಂಡಿ ಆ ಭಾಗದಲ್ಲಿ ಮಾಡುತ್ತಿದ್ದಾರೆ.

**ಪ್ರಶ್ನೆ ಸಂಖ್ಯೆ: ೮೦೪**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಕಲ್ಯಾಣ ಕರ್ನಾಟಕ ಭಾಗ ಅತ್ಯಂತ ಹಿಂದುಳಿದ ಭಾಗ ಎಂದು ಎಲ್ಲರಿಗೂ ಗೊತ್ತಿರುವಂತಹ ವಿಚಾರ. ನಾವು ಏನಾದರೂ ಕೈಗಾರಿಕೆಗಳ ಬಗ್ಗೆ ವಿಚಾರ ಮಾಡುತ್ತೇವೆಂದರೆ, ಆ ಭಾಗದಲ್ಲಿ ಏನು ಮಾಡಬಹುದು ಎಂಬುದನ್ನು ಮೊದಲು ವಿಚಾರ ಮಾಡಬೇಕೆಂದು ನನ್ನ ಒಂದು ಸಲಹೆಯನ್ನು ಈ ಸಂದರ್ಭದಲ್ಲಿ ಮಾನ್ಯ ಸಚಿವರಿಗೆ ನೀಡಲಿಕ್ಕೆ ಬಯಸುತ್ತೇನೆ. ಆ ಭಾಗದಲ್ಲಿ ಇದುವರೆಗೂ ಯಾವ ಯಾವ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಂಡಿದೆ ಎಂಬ ಬಗ್ಗೆ ಪ್ರಶ್ನೆ ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಕಳೆದ 2 ವರ್ಷಗಳಲ್ಲಿ ಒಟ್ಟು 129 ಬಂಡವಾಳ ಹೂಡಿಕೆ ಯೋಜನೆಗಳಿಗೆ ಅನುಮೋದನೆಯನ್ನು ನೀಡಲಾಗಿದೆ ಎಂದು ಹೇಳಿದ್ದಾರೆ. ಇದರಿಂದ ಒಟ್ಟು 97,813 ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯಾಗುತ್ತದೆ ಎಂದು ತಿಳಿಸಿದ್ದಾರೆ. ನಾನು ಇಲ್ಲಿ ಒಂದು ವಿಚಾರಕ್ಕೆ ಒತ್ತು ಕೊಟ್ಟು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. India must aim for 500 billion US Dollars in electronics, semiconductors and other industries. ಇದರ ಬಗ್ಗೆ ಈಗ ಸಾಕಷ್ಟು ಚರ್ಚೆ ನಡೆಯಿತು. ಇದನ್ನು ನೀತಿ ಆಯೋಗ ಹೇಳುತ್ತದೆ. ಅದೇರೀತಿ ಇನ್ನೊಂದು, ನೀತಿ ಆಯೋಗದ ಅಡಿಯಲ್ಲಿ Yadgir and Raichur are the most backward Districts in the Nation. Priority has been given by the Central Government for these two Districts in the State. But what is the State Government doing? ಈ ಭಾಗಕ್ಕೆ ಏನು ಮಾಡಬೇಕು ಎನ್ನುವಂತಹ ಪ್ರಯತ್ನ ನಿಮ್ಮಿಂದ ಎಷ್ಟು ಆಗುತ್ತದೆ. ಮಾನ್ಯ ಸಚಿವರಾದ ಶ್ರೀ ಪ್ರಿಯಾಂಕ ಖರ್ಗೆಯವರು ಸದನದಲ್ಲಿದ್ದರು. ಆದರೆ, ಈಗ ಅವರು ಇಲ್ಲ. ಸರ್ಕಾರ ನೀತಿ ಆಯೋಗದ benefit ತೆಗೆದುಕೊಳ್ಳಲಿ. ಕೇಂದ್ರ ಸರ್ಕಾರದಿಂದ subsidy ಬರುತ್ತದೆಯೋ ಅಥವಾ ಏನು ಸಹಾಯ ಬರುತ್ತದೆಯೋ ಅದನ್ನು ತೆಗೆದುಕೊಳ್ಳಲಿ. Semiconductor and Electronic Industry ವಿಚಾರ ಮಾಡಲಿ. ಆದರೆ, don't take it to any place where it is already developed. Why not give priority to those areas which have been earmarked by the Union Government? This is my first question.

ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ಇದಕ್ಕೆ ಒಂದು ಸ್ವಲ್ಪ push ಕೊಡಬೇಕು ಎಂದು ಮಾನ್ಯ ಸಚಿವರಾದ ಶ್ರೀ ಪ್ರಿಯಾಂಕ ಖರ್ಗೆಯವರು ಈಗ ಹೇಳಿದರು. ಈ ವಿಚಾರದಲ್ಲಿ ಈಗಾಗಲೇ ಕೇಂದ್ರ ಸರ್ಕಾರ Mega Textile Park ಅನ್ನು ಇಡೀ ರಾಷ್ಟ್ರದಲ್ಲಿ 7 ಕಡೆಗಳಲ್ಲಿ ಕೊಡಬೇಕೆಂದು ತೀರ್ಮಾನಿಸಿದೆ. ಇದನ್ನು ಗುಲ್ಬರ್ಗಾ ಜಿಲ್ಲೆಯಲ್ಲಿ Farhatabad ನಲ್ಲಿ ನಮ್ಮ eleven hundred and odd acres of land acquire ಮಾಡಿದ್ದೇವೆ, ಆ ಕಾರಣಕ್ಕಾಗಿ ಕೊಡಿ ಎಂದು ಕೇಳಿದರೆ, ಇವತ್ತು ಕೇಂದ್ರ ಸರ್ಕಾರದ ಸಹಕಾರದಿಂದ ಹಾಗೂ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಸಹಕಾರದಿಂದ ನಮಗೆ ಅದು ಕೊಟ್ಟಿದ್ದಾರೆ. ಈಗಾಗಲೇ ನಮಗೆ ಅದು ಕೊಟ್ಟಿದ್ದಾರೆ. It is the contribution of 51 percent from the Central Government and 49 percent from the State Government. ಆದರೆ, ಇದು ಹೆಚ್ಚು ಕಡಿಮೆ 2023 ರಲ್ಲಿ, I don't remember the date, ಮಾರ್ಚ್ ತಿಂಗಳ 23 ಕ್ಕೆ ಅದು sanction ಆಗಿದೆ. Sri Piyush Goyal ರವರು online ನಲ್ಲಿ ಒಂದು ಕಡೆ foundation ಮಾಡಿದ್ದರು. ಆದರೆ, nothing is happening in our State. ಅದು ಏನಾಯಿತು? ಲ್ಯಾಂಡ್‌ನ್ನು ಸಹ ಸರಿಯಾಗಿ ಕೊಟ್ಟಿಲ್ಲ. ಅಲ್ಲಿ power tariff ಇತ್ಯಾದಿ ನಾವು ಕೊಡಬೇಕಾಗಿದ್ದು, ಅದಕ್ಕೂ ಸಹ ಒಪ್ಪಂದ ಮಾಡುತ್ತಿಲ್ಲ. ಅದಕ್ಕೂ ಸಹ ನಾನಾ ರೀತಿ ಅಡತಡೆಗಳನ್ನು ಹಾಕುತ್ತಿದ್ದಾರೆ. ನಾನು ಸರ್ಕಾರಕ್ಕೆ ಕೈಜೊಡಿಸಿ ವಿನಂತಿ ಮಾಡುತ್ತೇನೆ. When it comes to development, when it comes to development of our State, of our region. ಹಿಂದುಳಿದ ಭಾಗಕ್ಕೆ ಕೇಂದ್ರದ ಜೊತೆಗೆ ಕೈಜೋಡಿಸಿ. ಎಲ್ಲದಕ್ಕೂ ಏನಾದರೂ ಅಂದುಕೊಂಡು ಹೋದರೆ, ಕೇಂದ್ರದ ಸಹಕಾರ ಪಡೆಯಲಿಲ್ಲವೆಂದರೆ, ಕೈಗಾರಿಗಕೆಗಳು ಎಲ್ಲಿಂದ ಬರುತ್ತವೆ? How will the industries come? Let us take the benefit from the Central Government. Mega Textile Park ಅನ್ನು ಈಗಾಗಲೇ ಕೊಟ್ಟಿದ್ದಾರೆ. ಒಂದು ಲಕ್ಷ ಉದ್ಯೋಗ ಯುವಕರಿಗೆ ಸಿಗಬಹುದು. But nothing is being done.

**ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, ಹೈದರಾಬಾದ್ ಕರ್ನಾಟಕ ಅತ್ಯಂತ ಹಿಂದುಳಿದ ಭಾಗವೆಂದು ತಮಗೂ ಗೊತ್ತಿದೆ. 7 ಜಿಲ್ಲೆಗಳು ವಿಶೇಷವಾಗಿ, ಅವುಗಳ ಬಗ್ಗೆ ತಮಗೆ ನೆನಪು ಮಾಡಿಕೊಡಬೇಕಾಗಿಲ್ಲ. ನಮ್ಮ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ಶ್ರೀ ಧರ್ಮಸಿಂಗ್‌ರವರು ಆ ಭಾಗಕ್ಕೆ ಏನು ಆಸಾಧ್ಯ ಇತ್ತು, ಅಂದು ಉಪ ಪ್ರಧಾನ

ಮಂತ್ರಿಗಳಾಗಿದ್ದ ಹಾಗೂ ಗೃಹ ಸಚಿವರು ಆಗಿದ್ದ ಶ್ರೀ ಲಾಲ್‌ಕೃಷ್ಣ ಅಡ್ವಾನಿಯವರು ಅನುಚ್ಛೇದ 371 (ಜೆ) ಅನ್ನು ಕೊಡುವುದಕ್ಕೆ ಆಗುವುದಿಲ್ಲ ಎನ್ನುವುದನ್ನು ನಿರಾಕರಿಸಿದ್ದನ್ನು, ಅವರು ಆಸಾಧ್ಯವಾಗಿದ್ದನ್ನು ಮಾಡಿಕೊಟ್ಟು ಇವತ್ತಿನ ದಿವಸ ಆ ಭಾಗದ ಅಭಿವೃದ್ಧಿಗೆ ಒಂದು ದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ. ಎರಡನೆಯದಾಗಿ, ಮಾನ್ಯ ಸದಸ್ಯರು incentives ಬಗ್ಗೆ ಹೇಳಿದ್ದಾರೆ. ನಾನು ಈಗಾಗಲೇ ಹೇಳಿದ್ದೇನೆ. ಹಿಂದಿನ ಸರ್ಕಾರ, ಪಕ್ಷ ಎಂದಲ್ಲ, ಹಿಂದಿನ ಸರ್ಕಾರದಲ್ಲಿಯೇ industrial policy ಆಗಿದೆ. ಕೈಗಾರಿಕಾ ನೀತಿ 2020-25 ರನ್ವಯ ರಿಯಾಯಿತಿ ಮತ್ತು ಪ್ರೋತ್ಸಾಹಗಳನ್ನು ಒದಗಿಸಲಾಗುತ್ತದೆ ಇದರಲ್ಲಿ ಮುದ್ರಾಂಕ ಶುಲ್ಕ ವಿನಾಯಿತಿ ಹಾಗೂ ನೋಂದಣಿ ಶುಲ್ಕ ರಿಯಾಯಿತಿ. ಭೂ ಪರಿವರ್ತನಾ ಶುಲ್ಕ ಮರುಪಾವತಿ. ವಿದ್ಯುತ್ ಶುಲ್ಕದ ಮೇಲಿನ ತೆರಿಗೆ ವಿನಾಯಿತಿ, ವಹಿವಾಟು ಆಧರಿಸಿ ಹೂಡಿಕೆ ಉತ್ತೇಜನ ಸಹಾಯಧನ ನೀಡಲಾಗುತ್ತಿದೆ. ತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ, ಖಾಸಗಿ ಹೂಡಿಕೆದಾರರಿಂದ ಸಾಮಾನ್ಯ ತ್ಯಾಜ್ಯ ಸಂಸ್ಕರಣಾ ಘಟಕ ಕೈಗಾರಿಕೆಗಳ ಅಪಾಯಕಾರಿ ತ್ಯಾಜ್ಯ ವಿಲೇವಾರಿ ಯೋಜನೆಗಳಿಗೆ ಸಹಾಯಧನ ಹಾಗೂ ಆಂಕರ್ ಘಟಕ ಸಹಾಯಧನ ಮಾಡುತ್ತಿದ್ದೇವೆ. ಈ 7 ಜಿಲ್ಲೆಗಳಿಗೆ ವಲಯ-1 ಎಂದು ವರ್ಗೀಕರಣವಾಗಿದೆ. ಇವತ್ತಿನ ದಿವಸ ವಲಯ-1 ಕ್ಕೆ maximum benefits and incentives ಸಿಗುತ್ತದೆ. ಈಗ ವಲಯ-1 ರಲ್ಲಿ 7 ಜಿಲ್ಲೆಗಳು ಹೈದರಾಬಾದ್-ಕರ್ನಾಟಕ ಭಾಗದಲ್ಲಿವೆ.

(ಮುಂದು)

(617) 23-07-2024 (11.10) ಎಂವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ಬಿ.ಪಾಟೀಲ್ (ಮುಂದು):-**

ಮಾನ್ಯ ಸದಸ್ಯರು ಸೆಮಿಕಂಡಕ್ಟರ್ ಬಗ್ಗೆ ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ನಾನು ಈಗಾಗಲೇ ಉತ್ತರ ನೀಡಿದ್ದೇನೆ. ನಾನು ಸೆಮಿಕಂಡಕ್ಟರ್ ಬಗ್ಗೆ ಮತ್ತೆ repeat ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಸಂಬಂಧಪಟ್ಟಂತೆ ನಮಗೆ ಕೇಂದ್ರ ಸರ್ಕಾರದ ದೊಡ್ಡ ಸಹಾಯ ಬೇಕಾಗುತ್ತದೆ. ಅಂದರೆ, push ಬೇಕಾಗುತ್ತದೆ. ನಾನು ಇದನ್ನು open ಆಗಿ ಹೇಳುತ್ತಿದ್ದೇನೆ. ಕೇಂದ್ರ ಸರ್ಕಾರ ಮನಸ್ಸು ಮಾಡಿದರೆ, ನಮ್ಮ ಕಡೆಗೆ ಸೆಮಿಕಂಡಕ್ಟರ್ ಕೈಗಾರಿಕೆ ಬರುವುದಕ್ಕೆ ಸಾಧ್ಯವಿದೆ. ಏಕೆಂದರೆ, ಅದು ಬಹಳ tough ಇದೆ. ಏಕೆಂದರೆ, ಅವರು ಎಲ್ಲರೂ ಸಹ ಅಲ್ಲಿಗೆ ಹೋಗುತ್ತಾರೆ. ಅವರಿಗೆ ಕೇಂದ್ರ ಸರ್ಕಾರ 50% concession ಕೊಡುತ್ತದೆ. ಹೀಗಾಗಿ ಇವತ್ತಿನ ದಿವಸ ಸೆಮಿಕಂಡಕ್ಟರ್ ವಿಚಾರದಲ್ಲಿ ನಾವು ಅಲ್ಲಿ ಮಾಡಿ, ಇಲ್ಲಿ ಮಾಡಿ ಎಂದು ಹೇಳುವುದಕ್ಕಿಂತ, ಅದಕ್ಕೆ ನೀರು ಬೇಕಾಗುತ್ತದೆ. ಅದಕ್ಕೆ major

requirement is water. ನೀರು ಎಲ್ಲಿರುತ್ತದೆ, ಅಲ್ಲಿ ಸೆಮಿಕಂಡಕ್ಟರ್ ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕಾಗುತ್ತದೆ. ಇದು ಒಂದು ಮಹತ್ವವಾದುದು. ಹಾಗಾಗಿ, ಈಗಾಗಲೇ ನಾನು ಮಾನ್ಯ ಕೇಂದ್ರ ಸಚಿವರಿಗೆ ತಿಳಿಸಿದ್ದೇನೆ. ನಾನು ಮತ್ತೆ ಅದನ್ನು repeat ಮಾಡುತ್ತಿದ್ದೇನೆ. ನಾನು ಕೈಗಾರಿಕಾ ಸಚಿವರ ಜೊತೆಯಲ್ಲಿ ಮಾತನಾಡಿದ್ದೇನೆ. ಸೆಮಿಕಂಡಕ್ಟರ್‌ನ ಉದ್ಯಮ ಬರುವುದಕ್ಕೆ ನಾವು incentives ಕೊಡುವುದಕ್ಕೆ ಸಿದ್ಧವಿದ್ದೇವೆ ಮತ್ತು ಅದನ್ನು ಮಾಡುವುದಕ್ಕೆ ತಯಾರಿದ್ದೇವೆ. ಇದು ಒಂದು ದೊಡ್ಡ ಕೈಗಾರಿಕೆ. ಇನ್ನು ಈಗಾಗಲೇ ಟೆಕ್ಸ್‌ಟೈಲ್ ವಿಚಾರದ ಬಗ್ಗೆ ಹೇಳುವುದಾದರೆ, ಈಗ ಮೆಗಾ ಟೆಕ್ಸ್‌ಟೈಲ್ ಪಾರ್ಕ್ ಏನಿದೆ, ಇವತ್ತಿನ ದಿವಸ ನಾವು ಅಲ್ಲಿ ನೋಡಿರುವಷ್ಟು ಒಲವು ಬರುತ್ತಿಲ್ಲ. ಅದೇ ರೀತಿ ರಾಯಚೂರು ಜಿಲ್ಲೆಯಲ್ಲಿ cotton based industries ಗೆ ಹೆಚ್ಚಿನ ಒಲವು ಇದೆ. ಆದರೆ, ಇವತ್ತು ಆ ಒಲವು ಗುಲ್ಬರ್ಗ ಜಿಲ್ಲೆಯಲ್ಲಿ ಬರುತ್ತಿಲ್ಲ. ಹಾಗಾಗಿ, ನಾವು ಇದಕ್ಕೆ ಸಂಬಂಧಪಟ್ಟಂತೆ ಶ್ರೀ ಪ್ರಿಯಾಂಕ್ ಖರ್ಗೆಯವರು ಮತ್ತು ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್‌ರವರು ಮತ್ತೆ ಶ್ರೀ ಶರಣಬಸಪ್ಪ ದರ್ಶನಾಪುರ ರವರು ಚರ್ಚೆ ಮಾಡಿದ್ದೇವೆ. ಇದಕ್ಕೆ ಏನಾದರೂ ಮಾಡಿ, ಇವತ್ತಿನ ದಿವಸ ಟೆಕ್ಸ್‌ಟೈಲ್ ಕೈಗಾರಿಕೆ ಬರುವುದಕ್ಕೆ ಹೆಚ್ಚಿನ ಒತ್ತಡವನ್ನು ಹಾಕುತ್ತೇವೆ. ನಮ್ಮ ಜೊತೆ ಟೆಕ್ಸ್‌ಟೈಲ್ ಸಚಿವರು ಸಹ ಇರುತ್ತಾರೆ. ನಾವೆಲ್ಲರೂ ಸಹ ಕೂಡಿಯೇ ಆ ಪ್ರಯತ್ನವನ್ನು ಮಾಡುತ್ತೇವೆ. ಹೈದ್ರಾಬಾದ್-ಕರ್ನಾಟಕದ ಬಗ್ಗೆ ನಮಗೆ ಕಳಕಳಿ ಮತ್ತು ಕಾಳಜಿ ಹಾಗೂ ಬದ್ಧತೆ ಇದೆ. ಆ ಬದ್ಧತೆಯ ಪ್ರದರ್ಶನವನ್ನು ಹಿಂದೆಯೂ ಮಾಡಿದ್ದೇವೆ. ಮುಂದೆಯೂ ಸಹ ಮಾಡುತ್ತೇವೆ.

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ಭಾಗಕ್ಕೆ ಕೊಟ್ಟಿದ್ದಾರೆಂದರೆ, ಅದು ರಾಜ್ಯದಲ್ಲಿ ಎಲ್ಲಿರಬೇಕೆಂದು ಅದಕ್ಕೆ ಲ್ಯಾಂಡ್ ಅನ್ನು ನೀಡಿದಾಗ, ನಮ್ಮ ಕಡೆ ಹನ್ನೊಂದು ನೂರು ಎಕರೆ acquired land ಇದೆ ಎಂದು ಹೇಳಿದ್ದಾರೆ. ಇಷ್ಟೆಲ್ಲಾ ಆದ ಮೇಲೆ ಅದನ್ನು ಬೇರೆ ಕಡೆಗೆ shift ಮಾಡುವಂತಹ ಪ್ರಶ್ನೆ ಬರುವುದಿಲ್ಲ. ಅವರು ಈ ವಿಚಾರವನ್ನು ಎತ್ತಿರುವುದಕ್ಕಾಗಿ ನಾನು ಹೇಳುತ್ತಿದ್ದೇನೆ. We should try to retain it.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೆ, ಅದನ್ನು shift ಮಾಡುವಂತಹ ಪ್ರಶ್ನೆಯೇ ಇಲ್ಲ. In fact ಮಾನ್ಯ ಸಚಿವರಾದ ಶ್ರೀ ಶಿವಾನಂದ ಪಾಟೀಲ್ ಸಾಹೇಬರು ಮತ್ತು ಶ್ರೀ ಎಂ.ಬಿ.ಪಾಟೀಲ್ ಸಾಹೇಬರು ಬಂದಾಗ, ಮಾನ್ಯ ಸದಸ್ಯರು ಹೇಳಿದ ಹಾಗೆ ಆಗ ಅದನ್ನು thermal unit ಗೆ ಕೊಟ್ಟಿದ್ದೆವು. ಅದು ಪ್ರಾರಂಭವಾಗದ ಕಾರಣ ಅದು ಮತ್ತೊಮ್ಮೆ revenue ಗೆ ಹಸ್ತಾಂತರವಾಗಿ ನಂತರ ಅದು ಈ ಉದ್ದೇಶಕ್ಕೆ ಮಂಜೂರು ಆಗಬೇಕಾಗಿತ್ತು.

**ಶ್ರೀ ಶಿವಾನಂದ ಪಾಟೀಲ್ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯ, ಸಹಕಾರ ಇಲಾಖೆಯಿಂದ ಕೃಷಿ ಮಾರುಕಟ್ಟೆ):-** ಮಾನ್ಯ ಸಭಾಪತಿಯವರೆ, ಅದರ land records create ಆಯಿತು. **(ಗೊಂದಲ)** ಅದಕ್ಕೆ ಐವತ್ತು ಕೋಟಿ ರೂಪಾಯಿಗಳನ್ನು ನೀಡಿದ್ದಾರೆ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೆ, ಅದರ land records ಅನ್ನು ಸಹ clear ಮಾಡಿದ್ದೇವೆ. ಮೊನ್ನೆಯ ದಿವಸ ಮಾನ್ಯ ಸಚಿವರು ಕೆ.ಕೆ.ಆರ್.ಡಿ.ಬಿ.ಯಿಂದ development ಗೆ ದುಡ್ಡು ಕೊಟ್ಟಿದ್ದರು. ಅದಕ್ಕೂ ಕೂಡ macro ನಲ್ಲಿ ಮೀಸಲಿಟ್ಟಿದ್ದೇವೆ. ಮಾನ್ಯ ಸದಸ್ಯರು ಏನು ಹೇಳುತ್ತಿದ್ದರು ಎಂದರೆ, ಕೇಂದ್ರ ಸರ್ಕಾರ ಅಷ್ಟು ಮಾಡಿದೆ, ಇಷ್ಟು ಮಾಡಿದೆ ಎಂದು. ಟೆಕ್ಸ್‌ಟೈಲ್ ಪಾರ್ಕ್ ಆಗಲೇ ಘೋಷಣೆಯಾಗಿತ್ತು. ನಮಗೆ ಕೇಂದ್ರ ಸರ್ಕಾರದಿಂದ ಯಾವುದೇ ರೀತಿಯ ಪ್ರೋತ್ಸಾಹ ಸಿಕ್ಕಿಲ್ಲವೆಂದು ಅದು ವಾಪಸ್ಸು ಹೋಗಿತ್ತು. ಮತ್ತೊಮ್ಮೆ ಇದು ಪಿ.ಎಂ. ಮಿತ್ರ ಯೋಜನೆ ಅಡಿಯಲ್ಲಿ ಬಂದಿರುವುದು. ನಾವು ಆಗಲೇ ಸುಮಾರು 22 ಸಾವಿರ ಎಕರೆ ಜಾಗವನ್ನು ಗುರುತಿಸಿ, ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ, National Investment & Manufacturing Zones (NIMZ) ಎಂದು ಯಾವ ರೀತಿ ವಸಂತನರಸಾಪುರದಲ್ಲಿ ಇತ್ತು ಅದೇ ಮಾದರಿಯಲ್ಲಿ ಮಾಡಿದ್ದೆವು. ಈ ಎರಡೂ proposal ಗಳು ಸಹ ಜೊತೆಯಲ್ಲಿ ಹೋಗಿದ್ದವು. ಆಗ ಹತ್ತು ವರ್ಷದ ಹಿಂದೆ ಸರ್ಕಾರ ಬಂದ ಮೇಲೆ ಅದು NIMZ ಎಂಬ ಪಾಲಿಸಿ ಬಿಟ್ಟು, 'Make in India' ಎಂದು ಬಂತು. ಆಗ ಕೇವಲ ವಸಂತನರಸಾಪುರ ಮಾತ್ರ ಉಳಿಯಿತು. ಆಗ ಅದನ್ನು ಕೈಬಿಡಲಾಗಿತ್ತು. ಈಗ ಮತ್ತೊಮ್ಮೆ ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿದೆ. ನಾವು ರಾಜ್ಯದಲ್ಲಿ ಶೇಕಡಾ 100ರಷ್ಟು ಕೈಗಾರಿಕೆಗಳಿಗೆ ಮತ್ತೆ ಟೆಕ್ಸ್‌ಟೈಲ್‌ಗಳಿಗೆ ಪ್ರೋತ್ಸಾಹ ಕೊಡುತ್ತೇವೆ. ಈಗ ಯಾವ ಖಾಸಗಿ ಟೆಕ್ಸ್‌ಟೈಲ್ ಕಂಪನಿಗಳಿವೆ ಅವರ ಜೊತೆ ನಾನೇ ವೈಯಕ್ತಿಕವಾಗಿ ಮಾತನಾಡಿದ್ದೇನೆ. ಇದನ್ನು ತುರ್ತಾಗಿ ಮಾಡುವಂತಹ ಜವಾಬ್ದಾರಿ ನಮ್ಮ ಸರ್ಕಾರದ ಮೇಲೆ ಇದೆ. We will do it 100%.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನೀರಿನ ಬಗ್ಗೆ ಹೇಳಿದರು. ಈಗ ಭೀಮಾ ನದಿ ಮತ್ತು ಕೃಷ್ಣಾ ನದಿ pass through both the districts. ಹಾಗಾಗಿ ನೀರಿನ ಕೊರತೆ ಏನೂ ಇಲ್ಲ, ಅಲ್ಲಿ ಸಾಕಷ್ಟು ನೀರು ಇದೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಈ ಸೆಮಿಕಂಡಕ್ಟರ್ ಕೈಗಾರಿಕೆಗೆ ಬಹಳ ದೊಡ್ಡ ಪ್ರಮಾಣದ ನೀರು ಬೇಕಾಗುತ್ತದೆ. ಅದಕ್ಕೋಸ್ಕರ ಅದನ್ನು ಹೇಳಿದೆ. ಆದರೆ, ಈ ಪಾರ್ಕ್‌ಗೆ ನೀರು ಮತ್ತು ಉಳಿದೆಲ್ಲಾ ಸೌಲಭ್ಯಗಳನ್ನು ಕೊಡಬೇಕು. ನಾವು ಅದನ್ನು ಕೊಡುತ್ತೇವೆ.

**ಶ್ರೀ ಶಶೀಲ್ ಜಿ. ನಮೋಶಿ:–** ಮಾನ್ಯ ಸಭಾಪತಿಯವರೆ, ಈ ಎರಡೂ ನದಿಗಳು ಆ ಭಾಗದಲ್ಲಿಯೇ ಹೋಗುತ್ತಿರುವುದರಿಂದ incidentally ಅವರು ನೀತಿ ಆಯೋಗವನ್ನು ಸಹ ನೆನಪು ಮಾಡಿಕೊಳ್ಳಲಿ. ಆ ಭಾಗದ ಬಗ್ಗೆ ನೆನಪು ಸಹ ಇರಲಿ ಎಂದು ಹೇಳುತ್ತೇನೆ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೆ, ಆಯಿತು.

**ಪ್ರಶ್ನೆ ಸಂಖ್ಯೆ: 790**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಕಲುಷಿತ ನೀರಿನಿಂದ ಉಂಟಾಗಿರುವಂತಹ ಸಾವುಗಳ ಸಂಖ್ಯೆ ಕುರಿತಂತೆ ಮಾಹಿತಿ ನೀಡಿದ್ದಾರೆ. ಅಂದರೆ, ಚಿತ್ರದುರ್ಗ ಜಿಲ್ಲೆಯಲ್ಲಿ ಆರು ಸಾವುಗಳು, ವಿಜಯನಗರ ಜಿಲ್ಲೆಯಲ್ಲಿ ಒಂದು ಸಾವು, ಮೈಸೂರು ಜಿಲ್ಲೆಯಲ್ಲಿ ಒಂದು ಸಾವು ಮತ್ತೆ ರಾಯಚೂರು ಜಿಲ್ಲೆಯಲ್ಲಿ ಮೂರು ಸಾವುಗಳು ಎಂದು ಮಾಹಿತಿ ನೀಡಿದ್ದಾರೆ. ಒಟ್ಟು ಹನ್ನೊಂದು ಜನರು ಕಲುಷಿತ ನೀರು ಕುಡಿದಿರುವ ಕಾರಣದಿಂದ ತೀರಿ ಹೋಗಿದ್ದಾರೆ. ಅದಕ್ಕೆ ನಾನು ಹೇಳುವುದೇನೆಂದರೆ, ಶುದ್ಧ ಕುಡಿಯುವ ನೀರನ್ನು ಕೊಡಬೇಕು ಎಂದು ಕೇಳುವುದು ಮೂಲಭೂತವಾದಂತಹ ಹಕ್ಕು. ಇದರ ಬಗ್ಗೆ ಮಾನ್ಯ ಸುಪ್ರೀಂ ಕೋರ್ಟ್ ಹಲವಾರು ಬಾರಿ ಹೇಳಿದೆ. ಅಂದರೆ, ಶುದ್ಧ ಕುಡಿಯುವ ನೀರು ಪ್ರತಿ ಜನರಿಗೂ ಸಹ ಸಿಗಬೇಕು ಎಂಬುದಾಗಿದೆ. ಇಂತಹ ಸಂದರ್ಭದಲ್ಲಿ ಹನ್ನೊಂದು ಜನರು ಸತ್ತಿದ್ದಾರೆಂದರೆ, ಇದಕ್ಕೆ ಮಾನ್ಯ ಸಚಿವರು ಗಮನ ಹರಿಸಲೇಬೇಕು. ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಆ ಸಂತ್ರಸ್ಥರ ಮನೆಗಳಿಗೆ ಹೋದಂತಹ ಸಂದರ್ಭದಲ್ಲಿ water audit ಆಗಬೇಕೆಂದು ಹೇಳಿದ್ದರು. ಈಗ water audit ಆಗಿದೆಯೇ ಎಂದು ಮಾನ್ಯ ಸಚಿವರನ್ನು ಕೇಳುವಂಥದ್ದು. ಮತ್ತೊಂದು ಏನೆಂದರೆ, ಬಹಳ ವಿಶೇಷವಾಗಿ ಮಳೆಗಾಲದಲ್ಲಿ ಪೈಪ್‌ಲೈನ್‌ಗಳು ಕಟ್ ಆಗುತ್ತವೆ. ಇದರಿಂದ ಬೇರೆಲ್ಲಾ drainage water ಅದರ ಒಳಗಡೆ ಸೇರಿಕೊಳ್ಳುತ್ತದೆ. ಅದು ಸೇರಿಕೊಂಡಿರುವಂತಹ ಕಾರಣಕ್ಕೆ ಆ ಕಲುಷಿತ ನೀರನ್ನು ಕುಡಿದಂತಹ ಸಂದರ್ಭದಲ್ಲಿ ಅವರು ಅಸ್ವಸ್ಥರಾಗುತ್ತಾರೆ. ಅದಕ್ಕೆ ಈ ಸಂದರ್ಭದಲ್ಲಿ ಮಾನ್ಯ ಸಚಿವರು ಯಾವ ರೀತಿಯ ಕ್ರಮವನ್ನು ತೆಗೆದುಕೊಂಡಿದ್ದಾರೆ? ಇದರಲ್ಲಿ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳ ಒಂದು ರೀತಿಯ ignorance ಸಹ ಕಂಡುಬರುತ್ತಿದೆ.

ಈಗ ಎಲ್ಲಾ ಕಡೆಗಳಲ್ಲೂ ಸಹ ಕುಡಿಯುವ ನೀರಿನ ಬಾಟಲ್‌ಗಳು ಲಭ್ಯವಿದ್ದು, ಈ ಬಾಟಲ್‌ಗಳ ಮಾರಾಟ ಜಾಸ್ತಿಯಾಗುತ್ತಿರುವುದಕ್ಕೆ ಕಾರಣವೇನೆಂದರೆ, ನಮ್ಮ ಬಗ್ಗೆ ನಮಗೆ ನಂಬಿಕೆಯೇ ಇಲ್ಲ. ನಮಗೆ ಹೊರಗಡೆ ಸಿಗುತ್ತಿರುವಂತಹ ನೀರು ಏನಿದೆ, ಅದನ್ನು ಕುಡಿಯಬೇಕೆಂದು ಯಾರಿಗೂ ಸಹ ಅನಿಸುವುದೇ ಇಲ್ಲ. ಹಾಗಾಗಿ, ಇವತ್ತಿನ ದಿವಸ ಯಥೇಚ್ಛವಾಗಿ ಸಾವಿರಾರು ಕಂಪನಿಗಳು ಮುನ್ನೂರು ಎಂ.ಎಲ್ ನಿಂದ ಹಿಡಿದು ಎರಡು ಲೀಟರ್ ತನಕ ಬಾಟಲ್‌ಗಳು ಜಾಸ್ತಿಯಾಗುತ್ತಿರುವುದಕ್ಕೆ ಕಾರಣವೇನೆಂದರೆ, ಅದಕ್ಕೆ ನಮ್ಮ ನಂಬಿಕೆ ಕಡಿಮೆಯಾಗುತ್ತಿದೆ. ಈಗ ಶುದ್ಧ

ಕುಡಿಯುವ ನೀರು ಬರುತ್ತಿಲ್ಲ. ಹಾಗಾಗಿ, ದಯಮಾಡಿ ಮಾನ್ಯ ಸಚಿವರು ಇದಕ್ಕೆ ಉತ್ತರಿಸಬೇಕು. ಆ ನಂತರ ಮತ್ತೆ ಬೇರೆ ಎರಡು ಪ್ರಶ್ನೆಗಳನ್ನು ಕೇಳುವುದು ಇದೆ.

**ಶ್ರೀ ಬಿ.ಎಸ್.ಸುರೇಶ್ (ನಗರಾಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್.ಅರುಣ್‌ರವರು ಕೇಳಿರುವಂತಹ ಪ್ರಶ್ನೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ರಾಜ್ಯದ ನಾಲ್ಕು ಜಿಲ್ಲೆಗಳಾದ ಚಿತ್ರದುರ್ಗ, ರಾಯಚೂರು, ಮೈಸೂರು ಮತ್ತು ವಿಜಯನಗರ, ಈ ನಾಲ್ಕು ಕಡೆಗಳಲ್ಲಿ ಕಲುಷಿತ ನೀರನ್ನು ಕುಡಿದು ಸುಮಾರು ಹನ್ನೊಂದು ಜನರು ಮೃತಪಟ್ಟಿದ್ದಾರೆ. ಈ ರೀತಿ ಮೃತಪಟ್ಟವರ ವಿಷಯಕ್ಕೆ ಸಂಬಂಧಪಟ್ಟಂತೆ ಅಧಿಕಾರಿಗಳನ್ನು suspend ಮಾಡಲಾಗಿದೆ. ಮತ್ತೆ ನಾಲ್ಕು ಜಿಲ್ಲೆಯಲ್ಲಿ ಎಲ್ಲೆಲ್ಲಿ ಈ ರೀತಿಯ ಸಮಸ್ಯೆಗಳು ಇದ್ದವು, ಆ ಸಮಸ್ಯೆಗಳನ್ನು ಸಹ ಪರಿಹಾರ ಮಾಡಿದ್ದೇವೆ. ಕೆಲವು ಚರಂಡಿಯ ಒಳಗಡೆ ಕುಡಿಯುವ ನೀರಿನ ಪೈಪ್‌ಗಳನ್ನು ಹಾಕಿದ್ದರು. ಈಗ ಅದನ್ನೆಲ್ಲಾ ವಾಪಸ್ಸು ತೆಗೆದು, ಅದನ್ನು ರಸ್ತೆಯಲ್ಲಿ ಹೊಸದಾಗಿ ಹಾಕಿಸಿದ್ದೇವೆ. ಮತ್ತೆ ಮಾನ್ಯ ಸದಸ್ಯರು ಕುಡಿಯವ ನೀರನ್ನು test ಮಾಡಿಸುತ್ತಿದ್ದೀರಾ ಎಂದು ಮತ್ತೊಂದು ಪ್ರಶ್ನೆಯನ್ನು ಕೇಳಿದ್ದಾರೆ. ಇಡೀ ರಾಜ್ಯದ ಎಲ್ಲಾ ಭಾಗಗಳಲ್ಲಿ ಪ್ರತಿ ದಿವಸ ಕುಡಿಯುವ ನೀರನ್ನು ಸರ್ಕಾರಿ ಲ್ಯಾಬ್‌ಗಳಲ್ಲಿ test ಮಾಡಿ, ಅದರ ವರದಿ ತೆಗೆದುಕೊಂಡು, ಅದಾದ ನಂತರವೇ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಈಗ ಎಲ್ಲಿ ವರದಿ ಸರಿಯಿಲ್ಲ, ಸುಮಾರು ಕಡಿಮೆ percentage ಕೇವಲ ಎರಡು-ಮೂರು percent ಜಾಗಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇನ್ನು ಸರಿಯಾಗಿಲ್ಲ. ಅಂತಹ ಜಾಗಗಳಲ್ಲಿ RO plant ಗಳ ಮುಖಾಂತರ ಕುಡಿಯುವ ನೀರು ಕೊಡುವಂತಹ ಕೆಲಸ ಮಾಡುತ್ತಿದ್ದೇವೆ. ಮತ್ತೆ ನೀರಿನ ಟ್ಯಾಂಕರ್‌ಗಳ ಮುಖಾಂತರ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವಂತಹ ಕೆಲಸ ಮಾಡುತ್ತಿದ್ದೇವೆ. ಮತ್ತೆ SFC ಕುಡಿಯುವ ನೀರಿನ ಯೋಜನೆಯ ಮುಖಾಂತರ ರಾಜ್ಯದ ನಗರ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ 2021-22 ಮತ್ತು 2023-24ನೇ ಸಾಲಿನವರೆಗೆ ರೂ.6038.52 ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿನ ಪೂರೈಕೆಗೆ ವೆಚ್ಚ ಮಾಡಿದ್ದೇವೆ. ಸುಮಾರು 37 ಕೋಟಿ ರೂಪಾಯಿಗಳ ವೆಚ್ಚದಿಂದ ಕುಡಿಯುವ ನೀರಿನ ಪೈಪ್‌ಗಳನ್ನು ಸರಿಪಡಿಸಬೇಕು. ಎಲ್ಲಿ ನೀರು contaminate ಆಗುತ್ತಿದೆ, ಅದನ್ನು ಸರಿ ಮಾಡಿಸುವಂತಹ ಕೆಲಸವನ್ನು ಸಹ ಮಾಡಿದ್ದೇವೆ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೆ, ಈ ರೀತಿ ತುಮಕೂರು ಜಿಲ್ಲೆ, ಮಧುಗಿರಿ ತಾಲ್ಲೂಕು, ಚನ್ನೇನಹಳ್ಳಿಯಲ್ಲಿ ಆಗಿದೆ. ಅಲ್ಲಿ ಆರು ಜನರು ಬಲಿಯಾಗಿದ್ದಾರೆ. ಅದರ ಬಗ್ಗೆ ಈ ಪಟ್ಟಿಯಲ್ಲಿ ಮಾಹಿತಿ ಇಲ್ಲ. ಅದು ಮಾನ್ಯ ಸಚಿವರ ಕ್ಷೇತ್ರ.

**ಶ್ರೀ ಬಿ.ಎಸ್.ಸುರೇಶ್:-** ಮಾನ್ಯ ಸಭಾಪತಿಯವರೆ, ನಾನು ಇಲ್ಲಿಯವರೆವಿಗೂ ಹೇಳಿದ್ದು, ನಗರಗಳಿಗೆ ಸಂಬಂಧಪಟ್ಟಿದ್ದು. ಅದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಗೆ ಬರುತ್ತದೆ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೆ, ನಾನು ಆ ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡುತ್ತೇನೆ. ಈಗತಾನೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರು ಸದನದಿಂದ ಎದ್ದು ಹೋದರು. ಈಗ ಸದನದಲ್ಲಿ ಮೂರೂ ಜನ ಮಾನ್ಯ ಸಚಿವರುಗಳು ಇದ್ದಾರೆ. ಅಂದರೆ, ಪೌರಾಡಳಿತ ಮತ್ತು ನಗರಾಭಿವೃದ್ಧಿ ಇಲಾಖೆ ಮತ್ತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. ಈಗ ಜೆ.ಜೆ.ಎಂ. ಎಂಬುದು ಕೇಂದ್ರ ಸರ್ಕಾರದ ಅತ್ಯಂತ ಅದ್ಭುತವಾದಂತಹ ಕಾರ್ಯಕ್ರಮ. ಕುಡಿಯುವ ನೀರಿನ ಬಗ್ಗೆ ಮೂರೂ ಇಲಾಖೆಯವರು ಸೇರಿಕೊಂಡು ಅದನ್ನು ಜಲ ಜೀವನ ಮಿಷನ್ ಯೋಜನೆ ಅಡಿಯಲ್ಲಿ ಪ್ರತಿ ಮನೆಗೆ ನಳಗಳ ಮೂಲಕ ನೀರು ಕೊಡಬೇಕೆಂದು ಇದೆ. ಈ ಮೂರು ಇಲಾಖೆಯವರು ಮನಸ್ಸು ಮಾಡಿದರೆ, ಪ್ರತಿ ಮನೆಗೆ ಶುದ್ಧ ಕುಡಿಯುವ ನೀರನ್ನು ಕೊಡಬಹುದು.

(ಮುಂದು)

(618) 23.07.2024 11-20 LL-BNS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಎಸ್. ಅರುಣ್ (ಮುಂದು):**

ನಾನು ನಿನ್ನೆಯ ದಿವಸ ನಮ್ಮ ಬೆಂಗಳೂರಿನ ರಾಜಾಜಿನಗರಕ್ಕೆ ಹೋಗಿದ್ದೆನು. ಅಲ್ಲಿ ಕುಡಿಯುವ ನೀರು ಈ ರೀತಿ ಇದೆ. ನಾವು ಬೆಂಗಳೂರು ನಗರವನ್ನು ಗ್ರೇಟರ್ ಬೆಂಗಳೂರು ಎಂದು ಹೇಳುತ್ತಿದ್ದೇವೆ. ಆದರೆ, ಇಲ್ಲಿ ಕುಡಿಯುವ ನೀರು ಈ ರೀತಿ ಇದೆ. ಅನೇಕ ಜನರು ಈ ಬಾಟಲಿಯೊಳಗೆ ಇರುವುದು ಏನು ಎಂದು ನನ್ನನ್ನು ಕೇಳಿದರು. ಅದಕ್ಕೆ ನಾನು ಇದರಲ್ಲಿ ಆಯುರ್ವೇದಿಕ್ ಮಿನರಲ್ಸ್ ಹಾಕಿಕೊಂಡು ಬಂದಿರುತ್ತೇನೆಂದು ಹೇಳಿದೆನು. ಇದು ನಮ್ಮ ಬೆಂಗಳೂರಿನ ರಾಜಾಜಿನಗರದಲ್ಲಿ ಇರುವಂತಹ ಕುಡಿಯುವ ನೀರಿನ ಸ್ಥಿತಿಯಾಗಿದೆ. ಹಾಗಾಗಿ, ನಾವು ಕುಡಿಯುವ ನೀರಿನ ಆಡಿಟ್ ಮಾಡಿಲ್ಲವೆಂದರೆ,...

**ಸಭಾಪತಿಯವರು:-** ಮಾನ್ಯ ಅರುಣ್‌ರವರೇ, ಸಾಕು. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಬಿ.ಎಸ್. ಸುರೇಶ್:-** ಮಾನ್ಯ ಸಭಾಪತಿಯವರೇ, ನೀರು ಕಲುಷಿತವಾಗುವುದು ನಿನ್ನೆ ಅಥವಾ ಮೊನ್ನೆಯ ಸಮಸ್ಯೆಯಲ್ಲ. ಇದು ಮೊದಲಿಂದಲೂ ಸಹ ಇದೆ. ಆದಾಗ್ಯೂ, ನಾನು ಇದನ್ನು ಸಮರ್ಥನೆ ಮಾಡಿಕೊಳ್ಳುತ್ತಿಲ್ಲ. ಈ ಮೊದಲು ಈ ಸಮಸ್ಯೆ ಇದ್ದು, ಬರು ಬರುತ್ತಾ ಅದನ್ನು ಸುಧಾರಣೆ ಮಾಡುವಂತಹ ಕೆಲಸ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಕಲುಷಿತ ನೀರಿನಿಂದಾಗಿ 11 ಜನ ಸತ್ತಿದ್ದಾರೆಂದು ಉತ್ತರ ಕೊಟ್ಟಿದ್ದೇನೆ. ಅದು ಕಳೆದ 3 ವರ್ಷಗಳಲ್ಲಿ ಆಗಿರುವಂತಹದ್ದು. ಬದಲಾಗಿ, ಈ ವರ್ಷ 11 ಜನ ಸತ್ತಿರುವುದಿಲ್ಲ. ಆದರೆ, ಮಾನ್ಯ ಸದಸ್ಯರು ಈ ವರ್ಷ 11 ಜನ ಸತ್ತಿರುತ್ತಾರೆಂದು ಹೇಳಿದರು. ಇಡೀ ರಾಜ್ಯದಲ್ಲಿ 217 ಜಾಗಗಳಲ್ಲಿ ಸಾವಿರಾರು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೆ ನಾವು ಯೋಜನೆ ಕೈಗೊಂಡಿದ್ದೇವೆ ಮತ್ತು ಇಡೀ ರಾಜ್ಯಕ್ಕೆ ಶುದ್ಧ ಕುಡಿಯುವ ನೀರು ಕೊಡುವುದು ಸರ್ಕಾರದ ಧ್ಯೇಯವಾಗಿದ್ದು, ನಾವು ಅದನ್ನು ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

**ಪ್ರಶ್ನೆ ಸಂಖ್ಯೆ: 751**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಆದರೆ, ನಾನು ರಾಜ್ಯದ ಸಹಕಾರಿ ಬ್ಯಾಂಕುಗಳಲ್ಲಿ ಕೃಷಿ ಚಟುವಟಿಕೆಗಳಿಗೆ ಸಾಲ ಪಡೆಯುವ ರೈತರ ಸಂಖ್ಯೆ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದು, ಅದಕ್ಕೆ 2024-25ನೇ ಸಾಲಿನಲ್ಲಿ ಬೆಳೆಸಾಲ ಮತ್ತು ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲ ಸೇರಿ ಒಟ್ಟು 12,612 ಜನರಿಗೆ ಮಾತ್ರ ಹೊಸದಾಗಿ ಸಾಲ ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿರುವ ರೈತ ಕುಟುಂಬಗಳ ಸಂಖ್ಯೆ ಎಷ್ಟು? ಆ ರೈತ ಕುಟುಂಬಗಳ ಸಂಖ್ಯೆಯಲ್ಲಿ ಎಷ್ಟು ಕುಟುಂಬಗಳಿಗೆ ನಾವು ಸಾಲ ಕೊಡುತ್ತಿದ್ದೇವೆ?

**ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು, ರೈತರ ಸಂಖ್ಯೆ ಪ್ರತಿ ವರ್ಷ ಹೆಚ್ಚುತ್ತಿದೆಯೇ ಎಂದು ಪ್ರಶ್ನೆ ಕೇಳಿದ್ದು, ಅದಕ್ಕೆ ಹೌದು ಎಂದು ಉತ್ತರ ನೀಡಿರುತ್ತೇನೆ. ಅದಕ್ಕೆ ಕಾರಣಗಳು ಬೇರೆ ಬೇರೆ ಇರುತ್ತದೆ. ಈ ಸಾಲಿನಲ್ಲಿ ಕೊಟ್ಟಿರುವಂತಹ ಸಾಲದ ಮಾಹಿತಿಯನ್ನು ಸಹ ಕೊಟ್ಟಿದ್ದೇವೆ. ಅಂದರೆ, ಮಾರ್ಚ್ ತಿಂಗಳ ಅಂತ್ಯಕ್ಕೆ ಸುಮಾರು ಇಪ್ಪತ್ತೈದು ಸಾವಿರ ಕೋಟಿ ರೂಪಾಯಿಗಳಷ್ಟು ಸಾಲ ಹಂಚಿಕೆ ಮಾಡಬೇಕೆಂಬ ಗುರಿಯನ್ನು ಇಟ್ಟುಕೊಂಡು, ಅದರಂತೆ ನಾವು ಸಾಲವನ್ನು ಹಂಚುತ್ತಿದ್ದೇವೆ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನಾನು ಜಮೀನು ಹೊಂದಿರುವಂತಹ ರೈತ ಕುಟುಂಬಗಳ ಮಾಹಿತಿ ಇದೆಯೇ ಎಂದು ಪ್ರಶ್ನೆ ಕೇಳಿದ್ದೇನೆ.

**ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ:-** ಮಾನ್ಯ ಸಭಾಪತಿಯವರೇ, ಜಮೀನು ಹೊಂದಿದ ತಕ್ಷಣ ಅವರು ಸಾಲ ಪಡೆಯುವ ಅರ್ಹರು ಎಂದಲ್ಲ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಮಾಹಿತಿ ಇದೆಯೇ ಎಂದು ನಾನು ಕೇಳಿರುತ್ತೇನೆ.

**ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ:–** ಮಾನ್ಯ ಸಭಾಪತಿಯವರೇ, ಆ ಮಾಹಿತಿ ನನ್ನ ಬಳಿ ಇರುವುದಿಲ್ಲ. ಅದು ಕೃಷಿ ಸಚಿವರ ಬಳಿ ಮಾಹಿತಿ ಇರುತ್ತದೆ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಸುಮಾರು ೬೦ ರಿಂದ ೬೫ ಲಕ್ಷ ರೈತ ಕುಟುಂಬಗಳು ಕೃಷಿ ಜಮೀನು ಹೊಂದಿರುತ್ತವೆ.

**ಶ್ರೀ ಎನ್. ಚೆಲುವರಾಯಸ್ವಾಮಿ (ಕೃಷಿ ಸಚಿವರು):–** ಮಾನ್ಯ ಸಭಾಪತಿಯವರೇ, ಒಟ್ಟು ೬೩ ಲಕ್ಷ ಕುಟುಂಬಗಳು ಇರುತ್ತವೆ.

**ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ:–** ಮಾನ್ಯ ಸಭಾಪತಿಯವರೇ, ಅಂದರೆ ಆ ರೈತರುಗಳು ಯಾರು ಇರುತ್ತಾರೆ, ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಿದ್ದರೆ ಮಾತ್ರ ಅವರು ಸಾಲಕ್ಕೆ ಅರ್ಹತೆ ಹೊಂದಿರುತ್ತಾರೆ. ಬದಲಾಗಿ, ಎಲ್ಲಾ ರೈತರಿಗೂ ಸಹಕಾರ ಸಂಘಗಳಲ್ಲಿ ಸಾಲ ಕೊಡುವುದಕ್ಕೆ ಆಗುವುದಿಲ್ಲ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ನಾನು ಮೂಲ ವಿಷಯಕ್ಕೆ ಬರುತ್ತೇನೆ. ಅದೇನೆಂದರೆ, ಬಹುತೇಕ ಸಹಕಾರ ಸಂಘಗಳಲ್ಲಿ ಒಂದು ಬಾರಿ ಒಳಗಡೆ ಸೇರಿಕೊಂಡಿರುವವರು ಬಾಗಿಲು ಹಾಕಿ, ಕೇವಲ ಕಿಟಕಿಯಿಂದ ವ್ಯವಹಾರ ಮಾಡುತ್ತಾರೆ. ಯಾರಿಗೆ ಸಾಲ ಕೊಡಬೇಕೆಂದು ಅರ್ಜಿ ತೆಗೆದುಕೊಳ್ಳುವಾಗಲೇ ನಿರ್ಧಾರ ಆಗಿರುತ್ತದೆ. ಅಂದರೆ, ಇವರಿಗೆ ಬೇಕಾದವರ ಸಾಲದ ಅರ್ಜಿಯನ್ನು ಮಾತ್ರ ಸಹಕಾರ ಸಂಘಗಳಲ್ಲಿ ಸ್ವೀಕಾರ ಮಾಡುತ್ತಾರೆ. ಬೇರೆಯವರ ಅರ್ಜಿಯನ್ನು ಸ್ವೀಕಾರ ಮಾಡುವುದಿಲ್ಲ. ಅರ್ಜಿ ರಿಜೆಕ್ಟ್ ಮಾಡುವುದು ಬೇರೆ ಪ್ರಶ್ನೆ. ಆದರೆ, ಕೆಲವರ ಅರ್ಜಿಯನ್ನು ಸ್ವೀಕಾರವೇ ಮಾಡುವುದಿಲ್ಲ. ಈ ಬಗ್ಗೆ ಮಾನ್ಯ ಸಚಿವರಿಗೆ ಬಹಳ ಚೆನ್ನಾಗಿ ಗೊತ್ತಿದೆ. **(ಗೊಂದಲ)** ಅದನ್ನು ಅವರು ಅರೆದು ಕುಡಿದಿರುತ್ತಾರೆ. ಅದರಂತೆ, ಒಳಗಡೆ ಸೇರಿಕೊಂಡ ನಂತರ ಬಾಗಿಲು ಹಾಕಿ ಕೇವಲ ಕಿಟಕಿಯಿಂದಲೇ...

**ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ರೀತಿ ಆರೋಪ ಮಾಡಬಾರದು. ಕಿಟಕಿಯಿಂದ ವ್ಯವಹಾರ ಮಾಡುತ್ತಾರೆ, ಬೇರೆ ಮಾಡುತ್ತಾರೆ. ಅದೆಲ್ಲವೂ

ಅವರಿಗೆ ಗೊತ್ತಿರಬಹುದು. ಅದು ನಮಗೆ ಗೊತ್ತಿಲ್ಲ. ಹಾಗಾಗಿ, ಮಾನ್ಯ ಸದಸ್ಯರು ದಯಮಾಡಿ ಈ ರೀತಿಯೆಲ್ಲಾ ಆರೋಪ ಮಾಡಬಾರದು.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಸಹಕಾರ ಸಂಘಗಳಲ್ಲಿ ಆಗುವಂಥದ್ದನ್ನು ನಾನು ಹೇಳುತ್ತಿದ್ದೇನೆ. ನನಗೆ ಕೊಟ್ಟಿರುವ ಉತ್ತರದಲ್ಲಿ 1,523 ಅರ್ಜಿಗಳು ಮಾತ್ರ ಬಾಕಿ ಇದೆಯೆಂದು ಉತ್ತರ ಕೊಟ್ಟಿರುತ್ತಾರೆ. ಇದರಿಂದಾಗಿ, ನನಗೆ ಅನ್ನಿಸುವುದೇನೆಂದರೆ, ಇದು ಸತ್ಯಕ್ಕೆ ದೂರವಾಗಿರುವಂತಹ ಸಂಗತಿಯಾಗಿದೆ. ಏಕೆಂದರೆ, ಸಾಲಕ್ಕೆ ಅರ್ಜಿ ಹಾಕಲು ಆನ್‌ಲೈನ್ ವ್ಯವಸ್ಥೆ ತಂದಿದ್ದಾರೆಯೇ? ಒಂದು ವೇಳೆ ಅದನ್ನು ಜಾರಿಗೆ ತಂದರೆ, ಅರ್ಜಿದಾರರು ಸ್ವಯಂ ಪ್ರೇರಿತವಾಗಿ ಸಾಲಕ್ಕೆ ಅರ್ಜಿ ಹಾಕಬಹುದು. ಹಾಗಾಗಿ, ಆನ್‌ಲೈನ್ ವ್ಯವಸ್ಥೆ ಜಾರಿಗೆ ತರುವ ಆಲೋಚನೆ ಇದೆಯೇ?

**ಶ್ರೀ ಶಿವಾನಂದ ಎಂ. ಪಾಟೀಲ್(ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯ ಮತ್ತು ಕೃಷಿ ಮಾರುಕಟ್ಟೆ):–** ಮಾನ್ಯ ಸಭಾಪತಿಯವರೇ, 63 ಲಕ್ಷ ರೈತರಲ್ಲಿ 35 ಲಕ್ಷ ರೈತರಿಗೆ ಈಗಾಗಲೇ ಡಿಸಿಸಿ ಬ್ಯಾಂಕುಗಳು ಸಾಲ ಕೊಡುತ್ತಿವೆ. ಯಾರು ಹೊಸದಾಗಿ ಸಾಲ ಬೇಡುತ್ತಾರೆ, ಅವರಿಗೆ ಇನ್ನು ಹೆಚ್ಚಿಗೆ ಕೊಡುತ್ತೇವೆ. ಹಾಗಾಗಿ, ಯಾರನ್ನೂ ಬಾಗಿಲು ಬೋಲ್ಟ್ ಹಾಕಿ ಹೊರಗಡೆ ಹಾಕುವುದಕ್ಕೆ ಬರುವುದಿಲ್ಲ. ಸಾಲವನ್ನು ಕೊಡಲೇಬೇಕು. ಅದರಂತೆ, ಸಾಲ ಕೊಡುತ್ತಿದ್ದಾರೆ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿರುವ ಪ್ರಕಾರ ಇಲ್ಲ. ಆದರೆ, ನನಗೆ ನೀಡಿರುವ ಉತ್ತರದ ಪ್ರಕಾರ 29,26,910 ಜನ ರೈತರಿಗೆ ಸಾಲ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಹೊಸದಾಗಿ, ಸಾಲ ಕೊಟ್ಟಿರುವುದು ಕೇವಲ 12612 ಜನರಿಗೆ ಮಾತ್ರ. ಅದಕ್ಕಾಗಿ ನಾನು ಹೇಳುತ್ತಿರುವುದೇನೆಂದರೆ, ಯಾರು ಸಾಲ ಕೇಳುತ್ತಾರೆ, ಅವರೆಲ್ಲರಿಗೂ ಸಾಲ ಕೊಡುವುದಕ್ಕೆ ಏನಾದರೂ ಚಿಂತನೆ ನಡೆಸಿದ್ದಾರೆಯೇ? ಎರಡನೆಯದಾಗಿ, ಸಾಲ ಮನ್ನಾ ಮಾಡುವ ಚಿಂತನೆ ಇದೆಯೇ ಎಂದು ಕೇಳಿದ ಪ್ರಶ್ನೆಗೆ ಇಲ್ಲ ಎಂದು ಉತ್ತರ ನೀಡಿರುತ್ತಾರೆ. ಆದರೆ, ನನಗಿರುವ ಮಾಹಿತಿ ಪ್ರಕಾರ ಕಳೆದ ಒಂದು ವರ್ಷದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ರೈತರ ಆತ್ಮಹತ್ಯೆಯಲ್ಲಿ ಕರ್ನಾಟಕ ರಾಜ್ಯ... **(ಗೊಂದಲ)** ಯು.ಪಿ. ಯಲ್ಲಿ 30 ಕೋಟಿ ಜನಸಂಖ್ಯೆ ಇದೆ.

ನಮ್ಮ ರಾಜ್ಯವನ್ನು ಯು.ಪಿ. ಗೆ ಹೋಲಿಕೆ ಮಾಡುತ್ತಿಲ್ಲ. ಏಕೆಂದರೆ, ಯು.ಪಿ.ಯಲ್ಲಿ ಸುಮಾರು ೩೦ ಕೋಟಿಗೂ ಹೆಚ್ಚು ಜನಸಂಖ್ಯೆ ಇರುವಂತಹ ರಾಜ್ಯವಾಗಿದೆ. ಶೇಕಡವಾರು ಲೆಕ್ಕ ಹಾಕಿದರೆ, ಆತ್ಮಹತ್ಯೆಯಲ್ಲಿ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿರುತ್ತೇವೆ. ಇದು ನಮಗೆ ಗೌರವ ತರುವ ಸಂಗತಿಯಲ್ಲ. ರೈತರ ಆತ್ಮಹತ್ಯೆಗೆ ಕಾರಣ ಸರ್ಕಾರ ಎಂದು ನಾನು ಹೇಳುತ್ತಿಲ್ಲ. ಆದರೆ, ೨೦೨೩ರ ಭಾಷಣದಲ್ಲಿ, ನಾವು ರೈತರ ಸಾಲ ಮನ್ನಾ ಮಾಡುತ್ತೇವೆಂದು ಹೇಳಿರುತ್ತಾರೆ.

**(ಗೊಂದಲ)**

**ಶ್ರೀ ಎನ್. ಚೆಲುವರಾಯಸ್ವಾಮಿ:–** ಮಾನ್ಯ ಸಭಾಪತಿಯವರೇ, ಆ ರೀತಿ ನಾವು ಹೇಳಿರುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರೇ, ಮೊದಲು ಅವರು ಹೇಳಲಿಬಿಡಿ. ತದನಂತರ, ತಾವು ಉತ್ತರ ನೀಡಿ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ಹೇಳುತ್ತೇನೆ. ಅವರು ಭಾಷಣ ಮಾಡಿರುವಂತಹ ಪ್ರತಿ ಇದ್ದು, ಅದರಲ್ಲಿ ನಾವು ರೈತರ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ. ಅದರ ಪ್ರತಿಯನ್ನು ನಾನು ತಮಗೆ ಕೊಡುತ್ತೇನೆ. **(ಗೊಂದಲ)** ಹಾಗಾಗಿ, ಏಕಾಏಕಿಯಾಗಿ...

**(ಗೊಂದಲ)**

**ಸಭಾಪತಿಯವರು:–** ದಯವಿಟ್ಟು ತಾವು ಯಾರು ಮಾತನಾಡಬೇಡಿ. **(ಗೊಂದಲ)** ಮಾನ್ಯ ಎಸ್.ರವಿಯವರೇ, ತಾವು ಮಧ್ಯದಲ್ಲಿ ಮಾತನಾಡಬೇಡಿ.

**(ಗೊಂದಲ)**

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರು ಭಾಷಣ ಮಾಡುತ್ತಿದ್ದಾರೆ. ತಾವು ಅವರಿಗೆ ಭಾಷಣ ಮಾಡಲು ಅವಕಾಶ ಕೊಟ್ಟಿದ್ದೀರಿ.

**ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರು ಭಾಷಣ ಮಾಡುತ್ತಿದ್ದಾರೆ.

**ಸಭಾಪತಿಯವರು:–** ಆಯಿತು, ಈಗ ನಾನು ಏನು ಮಾಡಬೇಕು ಅದನ್ನು ಹೇಳಿ.

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ಅವರು ಪ್ರಶ್ನೆ ಕೇಳಲು ಪ್ರಾರಂಭ ಮಾಡಿ ಈಗಾಗಲೇ 15 ನಿಮಿಷ ಕಳೆದಿದೆ. ಅವರೊಬ್ಬರಿಗೆ ಅಷ್ಟು ಅವಕಾಶ ಕೊಟ್ಟರೆ ಹೇಗೆ? ಉಳಿದವರು ಏನು ಮಾಡಬೇಕು? ತಾವು ಎಲ್ಲಾ ಸದಸ್ಯರಿಗೂ ಒಂದೇ ರೀತಿಯ ಅವಕಾಶ ಕೊಡಬೇಕು.

**ಸಭಾಪತಿಯವರು:–** ಅವರು ಕೂಡ ನಮ್ಮ ಮಾತನ್ನು ಕೇಳಬೇಕಲ್ಲವೇ?

**ಶ್ರೀ ಕೆ. ಅಬ್ದುಲ್ ಜಬ್ಬರ್:–** ಮಾನ್ಯ ಸಭಾಪತಿಯವರೇ, ಅವರ ಪಕ್ಷದ ಭಾಷಣದಲ್ಲಿ ಎಲ್ಲರ ಬ್ಯಾಂಕ್ ಖಾತೆಗೆ 15 ಲಕ್ಷ ಹಣ ಹಾಕುತ್ತೇವೆಂದು ಹೇಳಿದ್ದರು.

**ಶ್ರೀ ಸಿ.ಟಿ. ರವಿ:–** ಮಾನ್ಯ ರವಿಯವರೇ, ನಿಮ್ಮ ಹೆಸರು ಮತ್ತು ನನ್ನ ಹೆಸರು ಒಂದೇ ಆಗಿದೆ. ಆದರೂ ನಾನು ಮಾತನಾಡಲು ಎದ್ದು ನಿಂತಾಗಲೆಲ್ಲಾ ತಾವು ಏತಕ್ಕೆ ಮೇಲೆ ಏಳುತ್ತೀರಿ?

**ಸಭಾಪತಿಯವರು:–** ಆಯಿತು, ಪ್ರಶ್ನೆ ಕೇಳಿ.

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ಇವರು ಯಾವಾಗಲೂ ಬರೀ ಸುಳ್ಳು ಹೇಳುತ್ತಾರೆ.

**(ಗೊಂದಲ)**

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಏಕಾಏಕಿ ಸಾಲ ಮನ್ನಾ ಮಾಡುವುದೇ ಇಲ್ಲ ಎಂದು ಹೇಳುವುದು ಇನ್ನಷ್ಟು ರೈತರನ್ನು ಆತ್ಮಹತ್ಯೆಗೆ ದೂಡಬಹುದು. ಆ ರೀತಿ ಮಾಡಬೇಡಿ.

ಹಾಗಾಗಿ, ಸಾಲ ಮನ್ನಾ ವಿಷಯಕ್ಕೆ ಸಂಬಂಧಿಸಿದ ವಿಷಯವನ್ನು ಮರು ಪರಿಶೀಲನೆ ಮಾಡಬೇಕೆನ್ನುವುದು ನನ್ನ ಆಗ್ರಹವಾಗಿದೆ. ಜೊತೆಗೆ, ಪ್ರಸ್ತುತ ಏನು ಸಾಲ ಕೊಡುತ್ತಿದ್ದಾರೆ, ಹೆಚ್ಚುವರಿಯಾಗಿ ಸಾಲಕ್ಕಾಗಿ ಯಾರೆಲ್ಲಾ ಅರ್ಜಿ ಹಾಕುತ್ತಾರೆ, ಅವರೆಲ್ಲರಿಗೂ ಸಾಲ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಆಗ್ರಹಿಸುತ್ತೇನೆ.

**ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಮಾತನಾಡಲಿಕ್ಕೆ ರಾಜಕಾರಣ ಬರುತ್ತದೆ.

**ಸಭಾಪತಿಯವರು:–** ಬೇಡ ಬೇಡ. ತಾವು ಪ್ರಶ್ನೆಗೆ ಸಂಬಂಧಿಸಿದಂತೆ ಮಾತ್ರ ಉತ್ತರ ನೀಡಿ.

**ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ:–** ಮಾನ್ಯ ಸಭಾಪತಿಯವರೇ, ಸಾಲ ಮನ್ನಾ ಮಾಡಿ ಎಂದು ಇವರು ನಮ್ಮನ್ನು ಕೇಳುತ್ತಿದ್ದಾರೆ. ಅದೇ ರೀತಿ, ಸಾಲ ಮನ್ನಾ ವಿಚಾರಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಮನ್ನಾ ಮಾಡಿಸಲಿ. ಅದನ್ನು ನೋಡಿಕೊಂಡು ನಾವು ಕೂಡ ಕಲಿತುಕೊಳ್ಳುತ್ತೇವೆ. ರಾಜಕಾರಣಗೋಸ್ಕರ ಸಾಲ ಮನ್ನಾ ಮಾಡುವ ಹೆಸರಿನಲ್ಲಿ ರೈತರ ಹೆಸರನ್ನು ದುರುಪಯೋಗ ಮಾಡಿಕೊಳ್ಳುವುದು ಸರಿಯಾದುದಲ್ಲ. ಈ ಹಿಂದೆ ಐವತ್ತು ಸಾವಿರ ರೂಪಾಯಿ ಸಾಲ ಮನ್ನಾ ಮಾಡಿದ್ದು ಯಾರೆಂದರೆ, ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ. ಸುಮಾರು ಎಪ್ಪತ್ತೆರಡು ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ಸಾಲ ಮನ್ನಾ ಮಾಡಿದ್ದು ಯಾರೆಂದರೆ, ಶ್ರೀ ಮನಮೋಹನ್ ಸಿಂಗ್‌ರರವರು ಮಾಡಿರುತ್ತಾರೆ. ಜೊತೆಗೆ, ಸಮ್ಮಿಶ್ರ ಸರ್ಕಾರದಲ್ಲಿ ರೈತರ 1 ಲಕ್ಷ ರೂಪಾಯಿಗಳ ಸಾಲ ಮನ್ನಾ ಮಾಡಿದ್ದು ಯಾರು? ಇವರು ಯಾವ ಸಾಲ ಮನ್ನಾ ಮಾಡಿದ್ದಾರೆ. ಇವರು ಯಾವುದೇ ಸಾಲ ಮನ್ನಾ ಮಾಡಿರುವುದಿಲ್ಲ. ಸುಮ್ಮನೆ ರೈತರ ಹೆಸರು ಹೇಳುತ್ತಾರೆ ಅಷ್ಟೇ. ಅದಕ್ಕಾಗಿ, ನಾನು ರಾಜಕಾರಣ ಮಾತನಾಡುವುದಕ್ಕೆ ನಾನು ಹೋಗುವುದಿಲ್ಲ. ಹಾಗಾಗಿ, ಸಾಲ ಮನ್ನಾ ಮಾಡುವಂತಹ ಯಾವುದೇ ಪರಿಶೀಲನೆ ಸರ್ಕಾರದ ಮುಂದೆ ಇರುವುದಿಲ್ಲ. ಯಾರೆಲ್ಲಾ ರೈತರು ಸಾಲ ಕೇಳುತ್ತಾರೆ, ಅರ್ಹತೆ ಇರುವಂತಹವರಿಗೆ ಸಂಘ ಸಂಸ್ಥೆಗಳಲ್ಲಿ ಬಂದು ಕೇಳಿದಾಗ ಅವರಿಗೆ ನಾವು ಸಾಲ ಕೊಡುವಂತಹದ್ದಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ಸದಸ್ಯರು

ಹೇಳಿರುವ ವಿಷಯಕ್ಕೆ ಸಂಬಂಧಿಸಿದಂತೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ 1200 ರೈತರ ಅರ್ಜಿ ಬಾಕಿ ಇದೆಯೆಂದು ನಾನು ಉತ್ತರದಲ್ಲಿಯೂ ಸಹ ತಿಳಿಸಿರುತ್ತೇನೆ. ಅಲ್ಲಿ ಏತಕ್ಕಾಗಿ ಸಾಲ ಕೊಟ್ಟಿರುವುದಿಲ್ಲವೆಂದರೆ, ತಮಗೆಲ್ಲಾ ಗೊತ್ತಿರುವ ಹಾಗೆ... ಬಹಳಷ್ಟು ಜನರು ತಿಳಿದುಕೊಂಡಿರುವುದೇನೆಂದರೆ, ಸಹಕಾರ ಸಂಘಗಳಲ್ಲಿ ಸಾಲ ಕೊಡುವಂಥದ್ದು ಸರ್ಕಾರದ ದುಡ್ಡು ಎಂದು ತಿಳಿದುಕೊಂಡಿರುತ್ತಾರೆ. ಆದರೆ, ಅಲ್ಲಿ ಸರ್ಕಾರದ ಒಂದು ರೂಪಾಯಿ ದುಡ್ಡು ಇರುವುದಿಲ್ಲ. ಅಲ್ಲಿ ಇರುವಂತಹ ಹಣ ಯಾವುದೆಂದರೆ, ಸಹಕಾರ ಸಂಘಗಳಲ್ಲಿ ಸದಸ್ಯರು ಇಟ್ಟಿರುವಂತಹ ಠೇವಣಿ ಹಣ **(ಗೊಂದಲ)** ಅಪೆಕ್ಸ್ ಬ್ಯಾಂಕ್‌ನವರು ಸಹ ಹಣ ಕೊಡುವುದಿಲ್ಲ. ಅವರು ಎಲ್ಲಿಂದ ಹಣ ತಂದು ಕೊಡುತ್ತಾರೆ. ಅಲ್ಲಿಗೆ ನಬಾರ್ಡ್‌ನಿಂದ ಶೇಕಡ 30 ರಷ್ಟು refinance ಬಿಟ್ಟರೆ, ಇನ್ನುಳಿದ ಶೇಕಡ 70 ರಷ್ಟು ಹಣ ಸದಸ್ಯರ ಠೇವಣಿ ಹಣ ಇರುತ್ತದೆ. ಹೀಗಾಗಿ, ಈ ರೀತಿಯ ಒಂದು ವ್ಯವಸ್ಥೆ ಸಹಕಾರ ಸಂಘಗಳಲ್ಲಿ ಇರುತ್ತದೆ. ಅದನ್ನು ಅರ್ಥ ಮಾಡಿಕೊಂಡು ಹಣಕಾಸಿನ ಲಭ್ಯತೆ ಮೇಲೆ ರೈತರಿಗೆ ಸಾಲ ಕೊಡುವಂತಹದ್ದು ಇದೆ. **(ಗೊಂದಲ**) 1984ರಲ್ಲಿ ನಬಾರ್ಡ್ ನಿಂದ ಶೇಕಡ 90 ರಷ್ಟು refinance ಇತ್ತು. ಆದರೆ, ಅದು ಈಗ ಅದು ಶೇಕಡ 30ರಷ್ಟಾಗಿರುತ್ತದೆ. ಹಾಗಾಗಿ, ಇವರೆಲ್ಲರೂ ಕೇಂದ್ರ ಸರ್ಕಾರಕ್ಕೆ ಹೇಳಿ ನಬಾರ್ಡ್‌ನಿಂದ ಹೆಚ್ಚು ಹಣಕಾಸಿನ refinance ಕೊಡಿಸಲಿ. ಅದರಿಂದಾಗಿ, ನಾವು ಇನ್ನು ಹೆಚ್ಚು ಜನ ರೈತರಿಗೆ ಸಾಲ ನೀಡಬಹುದಾಗಿದೆ. ಹಣಕಾಸಿನ ಲಭ್ಯತೆ ಇದ್ದರೆ ತಾನೇ, ಸಹಕಾರ ಸಂಸ್ಥೆಯವರು ಸಾಲ ಕೊಡುವುದಕ್ಕಾಗುವುದು. ಉದಾಹರಣೆಗೆ, ಚಿಕ್ಕಮಗಳೂರು ಜಿಲ್ಲಾ ಸಹಕಾರ ಬ್ಯಾಂಕ್‌ನವರು 1200 ಅರ್ಜಿ ಬಾಕಿ ಇಟ್ಟುಕೊಂಡಿರುತ್ತಾರೆ.

(ಮುಂದು)

(619) 23-07-2024 (11.30) ವೈಎಲ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ (ಮುಂದು):-**

ಅರ್ಜಿಗಳನ್ನು ಏಕೆ ಬಾಕಿ ಇಟ್ಟುಕೊಂಡಿರುತ್ತಾರೆ ಎಂಬುದನ್ನು ಅವರಿಗೆ ನೀವೇ ಕೇಳಿ. ಏಕೆಂದರೆ, ನಿಮ್ಮವರೇ ತಾನೇ ಅಲ್ಲಿ ಇರುವುದು. ಆ ದೃಷ್ಟಿಯಿಂದಾಗಿ ನಾವೆಲ್ಲರೂ ರೈತರ ಸಂಕಷ್ಟಕ್ಕೆ

ಹೋಗುವುದು, ಎಲ್ಲಾ ಸಹಕಾರಿ ಸಂಘಗಳ ಕರ್ತವ್ಯವಾಗಿದೆ. ಆದರೆ, ಹಣಕಾಸಿನ ಬದ್ಧತೆ ಆಧಾರದ ಮೇಲೆ ಕ್ರಮಕ್ಕೈಗೊಳ್ಳಬೇಕಾಗುತ್ತದೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:–** ತಮಗೆ ಮಾತನಾಡಲು ಅವಕಾಶ ಕೊಡಲು ಆಗುವುದಿಲ್ಲ. ಈಗಾಗಲೇ ಮಾನ್ಯ ಸಚಿವರು ತಮಗೆ ಉತ್ತರ ಕೊಟ್ಟಿದ್ದಾರೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಎಷ್ಟು ಪರ್ಸೆಂಟ್ ಕೊಡಬೇಕೆಂದು ಕೃಷಿ ಸಾಲಕ್ಕೆ ಮಿತಿ ಹಾಕಿದ್ದಾರೆ?

**ಸಭಾಪತಿಯವರು:–** ಮಾನ್ಯ ಸಚಿವರೇ, ತಾವು ಉತ್ತರ ಕೊಡಬೇಡಿ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ತಾವು ಮಾತನಾಡಬೇಡಿ ಎಂದರೂ ಮಾತನಾಡುತ್ತಿದ್ದಾರೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ತಾವೇನು ಸಭಾಪತಿಯಾಗಿಲ್ಲ ಅಲ್ಲವೇ?

**ಶ್ರೀ ಯು.ಬಿ.ವೆಂಕಟೇಶ್:–** ನಮಗೂ, ನಿಮಗೂ ಎಂದೇನಿಲ್ಲ. ಮಾನ್ಯ ಸಭಾಪತಿಯವರು ಎಲ್ಲರಿಗೂ ಸಭಾಪತಿಯಾಗಿದ್ದು, ಅವರು ಮಾತನಾಡಬೇಡಿ ಎಂದು ಹೇಳುತ್ತಿದ್ದಾರೆ.

**ಪ್ರಶ್ನೆ ಸಂಖ್ಯೆ: 770**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ, ನಾನು 4 ಪ್ರಶ್ನೆಯನ್ನು ಕೇಳಿದ್ದು, ಅದಕ್ಕೆ ಮಾನ್ಯ ಸಚಿವರು ಸರಿಯಾಗಿ ಉತ್ತರ ಕೊಟ್ಟಿಲ್ಲ. (ಆ), (ಇ) ಮತ್ತು (ಈ) ಪ್ರಶ್ನೆಗಳಿಗೆ ಸಂಬಂಧಿಸಿದಂತೆ, ಒಂದೇ ಉತ್ತರವನ್ನು ಕೊಟ್ಟಿದ್ದಾರೆ. ಅದು ಅಧಿಕಾರಿಗಳ ತಪ್ಪೇ ಅಥವಾ ಮಾನ್ಯ ಸಚಿವರ ಕಡೆಯಿಂದಲೇ ಸರಿಯಾಗಿ ಮಾಹಿತಿ ಬಂದಿಲ್ಲವೇ ಎಂಬುದು ನನಗೆ ಗೊತ್ತಿಲ್ಲ. ತಾವು ಕೂಡಾ ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿದ್ದು, ಅದರಲ್ಲಿ ನಾನು ಕೂಡಾ ಸದಸ್ಯನಾಗಿದ್ದೇನೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಸುಮಾರು ಒಂದು ವರ್ಷ, ಎರಡು ತಿಂಗಳಾಗಿದ್ದು, ಅನಧಿಕೃತ ಬಡಾವಣೆಗಳು ಸಿಕ್ಕಾಪಟ್ಟೆ ಬೆಳೆದುಕೊಂಡಿದ್ದೆ. ಇಲಾಖೆ ವತಿಯಿಂದ ಎಷ್ಟು ನೋಟೀಸ್ ಹೋಗಿದ್ದೆ ಎಂಬುದನ್ನು ನಾನು ಪರಿಶೀಲನೆ ಮಾಡುತ್ತೇನೆ. ಈಗ ಆ ಪ್ರಾಧಿಕಾರಕ್ಕೆ ಅಧ್ಯಕ್ಷರನ್ನು ನೇಮಕ ಮಾಡಿದ್ದು, ಆತ ಕೂಡಾ ತುಂಬಾ ಒಳ್ಳೆಯ ವ್ಯಕ್ತಿಯಾಗಿದ್ದಾನೆ. ಆದರೆ, ಅಧಿಕಾರಿಗಳು ಏನೆಂದು misguide ಮಾಡುತ್ತಿದ್ದಾರೆ ಎಂಬುದು ಗೊತ್ತಿಲ್ಲ. ಯಾವುದೇ ಅನಧಿಕೃತ ಬಡಾವಣೆಗಳನ್ನು ತೆರವುಗೊಳಿಸುವಂಥ ಕೆಲಸ ನಡೆಯುತ್ತಿಲ್ಲ. ಬೆಂಗಳೂರನ್ನು ಹೊರತುಪಡಿಸಿದರೆ, ದೊಡ್ಡದಾಗಿ ಬೆಳೆದಿರುವಂಥ ನಗರ ಯಾವುದೆಂದರೆ, ನಮ್ಮ ಹುಬ್ಬಳ್ಳಿ–ಧಾರವಾಡ ನಗರವಾಗಿದೆ. ಹಾಗಾಗಿ, ಇದಕ್ಕೆ ಸರಿಯಾಗಿ ಉತ್ತರ ಕೊಟ್ಟಿಲ್ಲ. ಇದರ ಬಗ್ಗೆ ಗಂಭೀರವಾಗಿ ಗಮನಹರಿಸಬೇಕಾಗಿದೆ. ಏಕೆಂದರೆ, ಮೈಸೂರಿನಲ್ಲಿ ಆಗಿರುವಂಥ ಮುಡಾ ಹಗರಣ ಕುರಿತು ನೋಡುತ್ತಿದ್ದೇವೆ. MUDA (Mysuru Urban Development Authority) ಹಗರಣ ಕುರಿತು ಮುಂದೆ ಚರ್ಚೆಗೆ ಬರುತ್ತದೆ, ಆಗ ನಾವು ಏನು ಮಾತನಾಡಬೇಕು, ಆ ವಿಚಾರವಾಗಿ ಮಾತನಾಡುತ್ತೇವೆ. ಇದೊಂದು ದೊಡ್ಡ ಪ್ರಾಧಿಕಾರವಾಗಿದ್ದು, ಆ ರೀತಿಯಾಗಿ ಹುಬ್ಬಳ್ಳಿ–ಧಾರವಾಡ ನಗರವು ಆಗಬಾರದು. ನಾನು ಕೇಳಿದಂಥ (ಆ), (ಇ) ಮತ್ತು (ಈ) ಪ್ರಶ್ನೆಗಳಿಗೆ ಸಂಬಂಧಿಸಿದಂತೆ, ತಹಶೀಲ್ದಾರ್‌ರವರು illegal ಲೇಔಟ್‌ಗಳಿಗೆ ನೋಟಿಸ್ ಕೊಟ್ಟಿದ್ದಾರೆ. ಕೇವಲ ನೋಟಿಸ್ ಕೊಟ್ಟರೆ ಆಗುವುದಿಲ್ಲ. ಆ ನೋಟಿಸ್ ಹರಿದು ಹಾಕಿ, ಅವರೇ ಗಡಿ ನಿಗದಿ ಮಾಡಿಕೊಂಡು ಲೇಔಟ್ ಮಾಡುವುದರ ಮೂಲಕ ಸರ್ಕಾರಕ್ಕೆ ದೊಡ್ಡ ಲುಕ್ಸಾನ್ ಮಾಡುತ್ತಾರೆ. ಆದ್ದರಿಂದ ದಯವಿಟ್ಟು ಮಾನ್ಯ ಸಚಿವರು ಬಹಳ ಉತ್ಸುಕರಾಗಿದ್ದು, ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮದು ಬಹಳ ದೊಡ್ಡ

ನಗರವಾಗಿದ್ದು, ಅಧಿಕಾರಿಗಳು ಏನು ಮಾಡಿದ್ದಾರೆ, ಯಾವುದು ಲೇಔಟ್ ಆಗಿದೆ, ಏನಾಗಿದೆ ಎಂಬುದರ ಕುರಿತು ಒಂದು review meeting ಅನ್ನು ಮಾಡಿ.

**ಶ್ರೀ ಬಿ.ಎಸ್.ಸುರೇಶ್ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):–** ಮಾನ್ಯ ಸಭಾಪತಿಯವರೇ, ನೀಡಿರುವ ಉತ್ತರವು ಬಹಳ ಸರಳವಾಗಿದೆ. ಮೊದಲನೆಯದಾಗಿ, ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ ಎಷ್ಟು ಬಡಾವಣೆಗೆ ನಮ್ಮ ಇಲಾಖೆಯಿಂದ ಅನುಮೋದನೆ ನೀಡಲಾಗಿದೆ ಎನ್ನುವಂಥ ಪ್ರಶ್ನೆಗೆ ಸಂಬಂಧಿಸಿದಂತೆ, 122 ಖಾಸಗಿ ಬಡಾವಣೆಗಳನ್ನು ನಿರ್ಮಾಣ ಮಾಡಲು ಅನುಮೋದನೆ ನೀಡಲಾಗಿದೆ ಎಂದು ಉತ್ತರ ಕೊಟ್ಟಿದ್ದೇನೆ. ಎರಡನೆಯದಾಗಿ, ಅನಧಿಕೃತ ಬಡಾವಣೆಗಳು ನಿರ್ಮಾಣವಾಗಿರುವುದು ನಗರಾಭಿವೃದ್ಧಿ ಪ್ರಾಧಿಕಾರದ ಗಮನಕ್ಕೆ ಬಂದಿದೆಯೇ ಎನ್ನುವಂಥ ಪ್ರಶ್ನೆಗೆ ಸಂಬಂಧಿಸಿದಂತೆ, "ಹೌದು" ಎನ್ನುವಂಥ ಉತ್ತರ ಕೊಟ್ಟಿದ್ದೇನೆ. ಮೂರನೆಯದಾಗಿ, ಅನಧಿಕೃತ ಬಡಾವಣೆಗಳಗೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ಯಾವ ರೀತಿಯ ಕ್ರಮಕೈಗೊಳ್ಳಲಾಗಿದೆ ಎನ್ನುವಂಥ ಪ್ರಶ್ನೆಗೆ ಸಂಬಂಧಿಸಿದಂತೆ, ನಾವು ಕಂದಾಯ ಇಲಾಖೆಯ ಮೂಲಕವೇ ಕ್ರಮಕೈಗೊಳ್ಳಬೇಕಾಗಿದ್ದು, ತಹಶೀಲ್ದಾರ್ ಮೂಲಕ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 32 ರನ್ವಯ ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17 (4) ರನ್ವಯ ನೋಟೀಸ್ ನೀಡಲಾಗಿದೆ. ಅದರಂತೆ ಅನಧಿಕೃತ ಬಡಾವಣೆಗಳು ಯಾವುದು ಇದೆ, ಅದನ್ನು ತೆರವುಗೊಳಸುವಂಥ ಕೆಲಸ ಮಾಡುತ್ತೇವೆ. ಮಾನ್ಯ ಸದಸ್ಯರು ಕೇಳರುವಂತೆ,...

**ಶ್ರೀ ಪ್ರದೀಪ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ಮಾನ್ಯ ಪ್ರದೀಪ್ ಶೆಟ್ಟರ್‌ರವರೇ, ಮೊದಲು ಮಾನ್ಯ ಸಚಿವರು ಸಂಪೂರ್ಣವಾಗಿ ಉತ್ತರ ನೀಡಲಿ ಕೇಳ.

**ಶ್ರೀ ಪ್ರದೀಪ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಉತ್ತರ ಮುಗಿದಿರಬೇಕೆಂದು ಭಾವಿಸಿದ್ದೇನೆ.

**ಶ್ರೀ ಬಿ.ಎಸ್.ಸುರೇಶ:–** ಮಾನ್ಯ ಸಭಾಪತಿಯವರೇ, ಮುಂದೆ ಏನೆಂಬುದನ್ನು ಹೇಳುತ್ತೇನೆ.

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, 122 ಖಾಸಗಿ ಬಡಾವಣೆಗಳನ್ನು ನಿರ್ಮಾಣ ಮಾಡಲು ಅನುಮೋದನೆ ನೀಡಲಾಗಿದೆ, ಅದರನ್ವಯ ತಾವು ಕೂಡಾ ಸದಸ್ಯರಾಗಿರುವುದರಿಂದ ನಮ್ಮ ಮುಂದೆ ಆಗಿರುತ್ತದೆ. ಆನಂತರ ಅನಧಿಕೃತ ಬಡಾವಣೆಗಳು ನಿರ್ಮಾಣವಾಗಿರುವ ಬಗ್ಗೆ ಯಾವುದೇ ಕ್ರಮಕೈಗೊಂಡಿಲ್ಲ. ಕೇವಲ ತಹಶೀಲ್ದಾರ್‌ರವರಿಂದ ನೋಟೀಸ್ ಹೋಗಿದ್ದೆ. ಮಾನ್ಯ ಸಚಿವರು ಬಂದು ನೋಡಿ, ಅಲ್ಲಿ ಗಮನಹರಿಸಿ, ಕೆಲಸ ಮಾಡಿದರೆ ಮಾತ್ರ ಗೊತ್ತಾಗುತ್ತದೆ. ಇಲ್ಲದಿದ್ದರೆ ನಾಳೆ ದಿವಸ ಸರ್ಕಾರಕ್ಕೆ ಎಲ್ಲಿಂದ ಆದಾಯ ಬರುತ್ತದೆ?

**ಶ್ರೀ ಬಿ.ಎಸ್.ಸುರೇಶ:-** ಮಾನ್ಯ ಸಭಾಪತಿಯವರೇ, ಈಗಾಗಲೇ ನೋಟೀಸ್ ನೀಡಿದ್ದು, ಅನಧಿಕೃತ ಬಡಾವಣೆಗಳನ್ನು ತೆರವುಗೊಳಸಲಿಕ್ಕೆ ಸರ್ಕಾರದಿಂದ ಏನು ಕ್ರಮಕೈಗೊಳ್ಳಬೇಕು, ಆ ಕೆಲಸ ಮಾಡುತ್ತೇವೆ. 15 ದಿವಸ ಬಳಿಕ ನಾನೇ ಅಲ್ಲಿಗೆ ಹೋಗಿ ತಪಾಸಣೆ ಮಾಡುತ್ತೇನೆ. ಜೊತೆಗೆ ಮಾನ್ಯ ಪ್ರದೀಪ್ ಶೆಟ್ಟರ್‌ರವರನ್ನು ಸಹ ಕಛೇರಿಗೆ ಕರೆಸುವಂಥ ಕೆಲಸ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ: ೮೩೫**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಅಧಿಕಾರಿಗಳು ಕೊಟ್ಟಂತಹ ಉತ್ತರವನ್ನು ನೋಡಿದಾಗ, ಬಹಳ ಜಾಣ್ಮೆಯ ಉತ್ತರ ಕೊಟ್ಟಿರುವುದನ್ನು ಈ ಸದನದಲ್ಲಿ ನೋಡಬಹುದು. ನನ್ನ ಪ್ರಶ್ನೆಯೇನೆಂದರೆ, ಶಿರಾ ನಗರಸಭೆಯಲ್ಲಿ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವಂಥ ನಗರವಾಗಿದೆ. ಮಾನ್ಯ ಸಚಿವರು ಕೊಟ್ಟಿರುವಂಥ ಉತ್ತರದಲ್ಲಿ ಶಿರಾ ನಗರಸಭೆಯ ವ್ಯಾಪ್ತಿಯಲ್ಲಿ ತೆರಿಗೆಗೆ ಒಳಪಟ್ಟ ಆಸ್ತಿಗಳ ಸಂಖ್ಯೆ: 26,540 ಆಗಿದ್ದು, ಅದರಲ್ಲಿ ಕೇವಲ ರೂ.328.54 ಲಕ್ಷಗಳ ತೆರಿಗೆ ಮಾತ್ರ ವಸೂಲಾಗುತ್ತಿದೆ ಎಂದು ಉತ್ತರ ಕೊಟ್ಟಿದ್ದಾರೆ. 26,540 ಆಸ್ತಿಗಳ ಪೈಕಿ ಕೇವಲ ರೂ.328.54 ಲಕ್ಷಗಳ ವಸೂಲಾಗಿದೆ. ನನ್ನ ಪ್ರಶ್ನೆಯೇನೆಂದರೆ, ದೊಡ್ಡ ಮಟ್ಟದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆಯುತ್ತಿದೆ. ನಾನು ಕೇಳರುವಂಥ ಪ್ರಶ್ನೆ 4 ಕ್ಕೆ ಸಂಬಂಧಿಸಿದಂತೆ "ಸಾರ್ವಜನಿಕ ಖಾತಾ ಮಾಡಿಕೊಳ್ಳಲು ವಿಳಂಬ ಮಾಡುತ್ತಿರುವುದು ಮತ್ತು ಭ್ರಷ್ಟಾಚಾರ ಮಾಡುತ್ತಿರುವ ಬಗ್ಗೆ ನಗರಸಭೆ ಅಧ್ಯಕ್ಷರೇ ಆರೋಪ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು" ಎಂಬುದಕ್ಕೆ ಸರ್ಕಾರ ನೀಡಿರುವಂಥ ಉತ್ತರವು "ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ" ಎನ್ನುವಂಥದ್ದಾಗಿದೆ. ಆದರೆ, ಪ್ರಜಾಪ್ರಗತಿ ಪತ್ರಿಕೆ ಹಾಗೂ ಬೇರೆ ಬೇರೆ ಪತ್ರಿಕೆಯಲ್ಲಿ ವರದಿಯಾಗಿರುವಂತೆ "ತುಮಕೂರಿನಲ್ಲಿ ಮೃತ ಇಂಜಿನಿಯರ್ ನಕಲಿ ಸಹಿ, ಅನುದಾನ ದುರ್ಬಳಕೆ ಆರೋಪ, ಶಿರಾ ನಗರಸಭೆ ಭ್ರಷ್ಟಾಚಾರ ಕಡಿವಾಣಕ್ಕೆ ಸದಸ್ಯರ ಆಗ್ರಹ. ಹಾಗೆಯೇ ಬ್ರಹ್ಮಾಂಡ ಭ್ರಷ್ಟಾಚಾರಕ್ಕೆ ಮುನ್ನುಡಿ ಬರೆಯುತ್ತಿರುವ ನಗರ ಸಭೆಯ ಅಧ್ಯಕ್ಷರು ಮತ್ತು ಆಯುಕ್ತರ ಬಿನ್ನಾಭಿಪ್ರಾಯ ನಡುವೆ ಬೆಂದು ಬಸವಳಿಯುತ್ತಿರುವ ಶಿರಾ ನಗರಸಭೆ"…..

**ಸಭಾಪತಿಯವರು:–** ಅದಕ್ಕೆ ಏನು ಮಾಡಬೇಕು ಅದನ್ನು ಹೇಳಿ.

**ಶ್ರೀ ಚಿದಾನಂದ್ ಎಂ.ಗೌಡ:–** ಮಾನ್ಯ ಸಭಾಪತಿಯವರೇ, ಈ ರೀತಿಯಾಗಿ 'ಪ್ರಜಾಪ್ರಗತಿ', 'ಪ್ರಜಾವಾಣಿ' ಮತ್ತು 'ಈ ಸಂಜೆ' ಒಳಗೊಂಡಂತೆ ಎಲ್ಲಾ ಪತ್ರಿಕೆಗಳಲ್ಲಿ ಕೂಡಾ ಆ ಭ್ರಷ್ಟಾಚಾರದ ಬಗ್ಗೆ ದೊಡ್ಡ ಮಟ್ಟದಲ್ಲಿ ಪುಟಗಟ್ಟಲೆ ವರದಿಯಾಗಿದೆ. ಇಷ್ಟಾದರೂ ಕೂಡಾ ಸರ್ಕಾರದ ಗಮನಕ್ಕೆ ಬಂದಿಲ್ಲ. ಈಗಾಗಲೇ ತಿಂದು ತೇಗುತ್ತಿರುವಂಥ ಅಧಿಕಾರಿಗಳಿಗೆ ಮಾನ್ಯ ಸಚಿವರ ಮತ್ತು ಸರ್ಕಾರದ ಉತ್ತರವು ಇನ್ನೂ ದೊಡ್ಡ ಮಟ್ಟಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಸುಮಾರು ಒಂದು ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿರುವಂಥ ಶಿರಾ ನಗರದಲ್ಲಿ Industrial Corridor ದೊಡ್ಡದಾಗಿ

ಅಭಿವೃದ್ಧಿಯಾಗುತ್ತಿರುವುದರ ಜೊತೆಗೆ ಕೋಟೆ ಕೊತ್ತಲಗಳ ನಾಡಾಗಿದ್ದು, ಐತಿಹಾಸಿಕ ನಗರಿಯಾಗಿದೆ. ಇಷ್ಟೆಲ್ಲಾ ಇದ್ದರೂ ಕೂಡಾ ಕೋಟೆ ಕೊತ್ತಲಗಳ ಸುತ್ತಮುತ್ತಲಿನ ಜಾಗಗಳು ಒತ್ತುವರಿಯಾಗುತ್ತಿದೆ. ಇದ್ಯಾವುದೂ ಸರ್ಕಾರದ ಗಮನಕ್ಕೆ ಬಂದಿಲ್ಲ. ಹಾಗಾಗಿ, ಮಾನ್ಯ ಸಚಿವರಿಂದ ಸ್ಪಷ್ಟವಾದ ಉತ್ತರವನ್ನು ಬಯಸುತ್ತೇನೆ.

**ಶ್ರೀ ರಹೀಂಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):–** ಮಾನ್ಯ ಸಭಾಪತಿಯವರೇ, ಶಿರಾ ನಗರಸಭೆಯಲ್ಲಿ ಒಂದು review meeting ಮಾಡುತ್ತೇನೆ. ಜೊತೆಗೆ ಅಲ್ಲಿನ Commissioner ಬಳಿ ಮಾತನಾಡಿ ಯಾವ ರೀತಿ ಅಕ್ರಮವಾಗಿದೆ, ಅದರ ಬಗ್ಗೆ ಗಂಭೀರವಾಗಿ ಕ್ರಮಕೈಗೊಳ್ಳುತ್ತೇನೆ.

**ಶ್ರೀ ಚಿದಾನಂದ ಎಂ.ಗೌಡ:–** ಮಾನ್ಯ ಸಭಾಪತಿಯವರೇ, ಒಂದು ಜನನ ಪ್ರಮಾಣ ಪತ್ರ ಕೊಡಲು ಅಲ್ಲಿನ ಅಧಿಕಾರಿ ಸುಮಾರು ರೂ.2,000 ಲಂಚ ಕೇಳುತ್ತಾರೆ. ಇಡೀ ನಗರಸಭೆಯ ಪ್ರತಿಯೊಬ್ಬ ಸದಸ್ಯರೂ ಕೂಡಾ ಪಕ್ಷಾತೀತವಾಗಿ ಆಯುಕ್ತರ ಮೇಲೆ ಆರೋಪ ಮಾಡುತ್ತಾರೆ. ಅಲ್ಲಿನ ಅಧ್ಯಕ್ಷರೇ ಇ–ಖಾತಾ ಕುರಿತು ಆರೋಪ ಮಾಡಿದ್ದಾರೆ. ಅವರು ರೂ.10,000 ಕೊಡಲಿಲ್ಲವೆಂದರೆ, ಇ–ಖಾತಾ ಆಗುವುದಿಲ್ಲವೆಂದು ಆರೋಪ ಮಾಡುತ್ತಾರೆ. ಒಂದು ಚಲನ್ ಜನರೇಟ್ ಮಾಡಲು ರೂ.500 ತೆಗೆದುಕೊಳ್ಳುತ್ತಾರೆ. ಸುಮಾರು 15–20 ವರ್ಷಗಳಿಂದ ಅಧಿಕಾರಿಗಳು ಕುಳಿತುಕೊಂಡಿದ್ದಾರೆ. ನಾನು ಕೂಡಾ ಬರುತ್ತೇನೆ. ದಯವಿಟ್ಟು ಮಾನ್ಯ ಸಚಿವರು ಕೂಡಲೇ ಒಂದು ಸಮಿತಿಯನ್ನು ಮಾಡಿ, ಇಡೀ ದಿನ ಅದರ ಬಗ್ಗೆ ವಿಚಾರಣೆ ಮಾಡಿದರೆ, ಸತ್ಯ ಮನವರಿಕೆಯಾಗುತ್ತದೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಈ ವಿಚಾರವು ತಮ್ಮ ಗಮನಕ್ಕೆ ಬಂದಿದ್ದು, ಏನು ಕ್ರಮ ತೆಗೆದುಕೊಳ್ಳುತ್ತೀರಿ ಹೇಳಿ.

**ಶ್ರೀ ರಹೀಂಖಾನ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ಹೇಳಿದಂತೆ review meeting ಮಾಡುತ್ತೇನೆ.

**ಶ್ರೀ ಚಿದಾನಂದ ಎಂ.ಗೌಡ:–** ಧನ್ಯವಾದಗಳು.

(ಮುಂದು)

(620) 23.07.2024/11.40/ಎಸ್‌ಕೆ- ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಪ್ರಶ್ನೆ ಸಂಖ್ಯೆ 849**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿರುವುದು ಪರವಾಗಿಲ್ಲ ಎನ್ನುವ ರೀತಿ ಇದೆ. ನಾನು ಇಲ್ಲಿ ಎರಡು-ಮೂರು ಮನವಿಗಳನ್ನು ಮಾಡಿಕೊಳ್ಳುವುದಾದರೆ, ರಾಜ್ಯದಲ್ಲಿ ಜೇನು ಕೃಷಿಯಲ್ಲಿ ತೊಡಗಿಸಿಕೊಂಡಿರುವವರ ಸಂಖ್ಯೆ ಎಷ್ಟು; ಹಾಗೂ ಉತ್ಪಾದನೆಯಾಗುತ್ತಿರುವ ಜೇನು ತುಪ್ಪದ ಪ್ರಮಾಣವೆಷ್ಟು ಎಂಬ ಪ್ರಶ್ನೆಯನ್ನು ಕೇಳಿದ್ದೆ. ರಾಜ್ಯದಲ್ಲಿ ಜೇನು ಕೃಷಿಯಲ್ಲಿ ತೊಡಗಿಸಿಕೊಂಡಿರುವವರ ಸಂಖ್ಯೆ ಅಂದಾಜು 40,000 ಹಾಗೂ ಉತ್ಪಾನದೆಯಾಗುತ್ತಿರುವ ಜೇನು ತುಪ್ಪದ ಪ್ರಮಾಣ ಅಂದಾಜು 800 ಟನ್‌ಗಳಷ್ಟು ಉತ್ಪಾದನೆ ಮಾಡುತ್ತಾರೆ ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಮುಂದಿನ ಪ್ರಮುಖ ಪ್ರಶ್ನೆ ಏನಿದೆ ಎಂದರೆ, ಜೇನು ಕೃಷಿಗೆ ಉತ್ತೇಜನ ನೀಡಲು ಸರ್ಕಾರ ಜೇನು ಕೃಷಿಯಲ್ಲಿ ಹೆಚ್ಚಿನ ಜ್ಞಾನವಿರುವ ಬುಡಕಟ್ಟು ಜನರಿಗೆ ವಿಶೇಷ ಒತ್ತು ನೀಡುತ್ತಿದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದೇನೆ. ಈ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟಿದ್ದಾರೆ. ನಾನು ಪ್ರಮುಖವಾಗಿ ಮೂರು-ನಾಲ್ಕು ಸಂಗತಿಗಳ ಬಗ್ಗೆ ಹೇಳುವುದಾದರೆ, ಜಮೀನು ಹೊಂದಿರುವ ರೈತರಿಗೆ ಹತ್ತು ಜೇನು ಪೆಟ್ಟಿಗೆಗಳನ್ನು ಕೊಡುತ್ತೇವೆ ಮತ್ತು ಜಮೀನು ಇಲ್ಲದವರಿಗೆ ನಾಲ್ಕು ಜೇನು ಪೆಟ್ಟಿಗೆಗಳನ್ನು ಕೊಡುತ್ತೇವೆ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ವಿಶೇಷವಾಗಿ ಬುಡಕಟ್ಟು ಸಮುದಾಯದವರಿಗೆ ಉದ್ಯೋಗದ ದೃಷ್ಟಿಯಿಂದ ನಾನು ಕೇಳಿರುವಂತಹದ್ದು. ಯಾವ ಬುಡಕಟ್ಟು ಸಮುದಾಯದವರಿಗೆ ಜಮೀನು ಇಲ್ಲವೋ ಅಥವಾ ಅವರಿಗೆ ಅರಣ್ಯ ಹಕ್ಕುಪತ್ರದಲ್ಲಿ ಅವಕಾಶ ಸಿಕ್ಕಿದೆಯೋ, ಅವರಿಗೂ ಹತ್ತು ಜೇನು ಪೆಟ್ಟಿಗೆಗಳನ್ನು ಕೊಡುವಂತಹದ್ದು ಮಾಡಬೇಕು ಅಥವಾ ಜಮೀನು ಇಲ್ಲದೇ ಇದ್ದರೆ, ಅರಣ್ಯ ಇಲಾಖೆ ಅಥವಾ ಬೇರೆ ಯಾವುದಾದರೂ ಜಮೀನನ್ನು ಲೀಸ್ ಆಧಾರದ ಮೇಲೆ ಕೊಟ್ಟು, ಅವರಿಗೂ ಸಹ ಹತ್ತು ಜೇನು ಪೆಟ್ಟಿಗೆಗಳನ್ನು ಇಡುವುದಕ್ಕೆ ಸ್ಥಳದ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

ಅದಕ್ಕೆ ಬೇಕಾಗಿರುವಂತಹ ನೀರಿನ ವ್ಯವಸ್ಥೆ, ಜೇನು ಸಾಕಾಣಿಕೆ ತರಬೇತಿ ಹಾಗೂ ತರಬೇತಿಯ ಬಗ್ಗೆ ಉತ್ತರದಲ್ಲಿ ಹೇಳಿದ್ದಾರೆ. ಇಡೀ ರಾಜ್ಯದಲ್ಲಿ ಎರಡು ಜೇನು ಸಾಕಾಣಿಕೆ ತರಬೇತಿ ಕೇಂದ್ರಗಳು ಮಾತ್ರ ಇದೆ. ಆ ಎರಡು ತರಬೇತಿ ಕೇಂದ್ರಗಳು ಸಾಕಾಗುವುದಿಲ್ಲ ಎಂಬ ಬಗ್ಗೆ ನಾನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಜೇನು ಕೃಷಿಗೆ ಬೇಕಾದ ಇನ್ನಿತರ ಔಷಧಿಗಳು, ಆಹಾರ ಸಂಸ್ಕರಣೆ, ಇತ್ಯಾದಿಗಳ ಬಗ್ಗೆ ಉತ್ತರದಲ್ಲಿ ಉಲ್ಲೇಖ ಮಾಡಿಲ್ಲ. ಉಳಿದೆಲ್ಲವನ್ನೂ ಉತ್ತರದಲ್ಲಿ ಉಲ್ಲೇಖ ಮಾಡಿದ್ದಾರೆ. ಉತ್ಪಾದನೆಯಾದಂತಹ ಜೇನಿಗೆ ಸಾಮೂಹಿಕವಾದಂತಹ ಸಂಸ್ಕರಣಾ ಘಟಕ ಇರಬೇಕು, ಇಲ್ಲವೆಂದರೆ, ಅದಕ್ಕೆ ಮಾರುಕಟ್ಟೆ ಸಿಗುವುದಿಲ್ಲ.

**ಸಭಾಪತಿಯವರು:–** ಮಾನ್ಯ ಶಾಂತಾರಾಮ್ ಬುಡ್ನ ಸಿದ್ದಿಯವರೇ, ತಾವು ಪ್ರಶ್ನೆ ಕೇಳಿ.

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ:–** ಮಾನ್ಯ ಸಭಾಪತಿಯವರೇ, ಮಾರುಕಟ್ಟೆ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್ (ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಶಾಂತಾರಾಮ್ ಬುಡ್ನ ಸಿದ್ದಿಯವರು ಒಳ್ಳೆಯ ಸೂಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಇಲಾಖೆಯಿಂದ ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಮುಖ್ಯವಾಗಿ ಹೇಳಿರುವಂತೆ, ಬಜೆಟ್‌ನಲ್ಲಿ ನಮ್ಮ ಇಲಾಖೆಗೆ ರೂ.526.5 ಲಕ್ಷಗಳ ಅನುದಾನ ಒದಗಿಸಲಾಗಿದೆ. ಆ ನಿಟ್ಟಿನಲ್ಲಿ ಜೇನು ಪೆಟ್ಟಿಗೆಗಳು ಮತ್ತು ಜೇನು ಸಾಕಾಣಿಕೆ ತರಬೇತಿ ಇವರೆಡರ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರ ಹೆಚ್ಚಿನ ಸಲಹೆಗಳೇನಿವೆಯೋ, ಅದರ ಬಗ್ಗೆ ನಾವು ಸಂಪೂರ್ಣವಾಗಿ ಪರಿಶೀಲನೆ ಮಾಡಿ, ಪ್ರೋತ್ಸಾಹವನ್ನು ಕೊಡುತ್ತೇವೆ.

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ:–** ಮಾನ್ಯ ಸಭಾಪತಿಯವರೇ, ನಾನು ಒಂದೆರಡು ವಿಷಯಗಳನ್ನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಈ ಬುಡಕಟ್ಟು ಜನಾಂಗಕ್ಕೆ ಕೊಡುತ್ತಿರುವಂತಹ ಅತ್ಯಂತ ಕಡಿಮೆ ಅನುದಾನ ಏನಿದೆಯೋ, ಅಂದರೆ ಶೇಕಡಾ 90 ರಷ್ಟು ಅನುದಾನ ಬುಡಕಟ್ಟು ಜನಾಂಗಕ್ಕೆ ಇದೆ ಎಂದು ಹೇಳಿದ್ದಾರೆ. ಅದು percentage ಲೆಕ್ಕ

ಹಾಕಿದರೆ, ತುಂಬಾ ಇದೆ ಅನಿಸುತ್ತದೆ. ಅಂದರೆ ಕೇವಲ ರೂ.3,375 ಏನಿದೆ, ಈಗ ಜೇನು ತುಪ್ಪದ ಪೆಟ್ಟಿಗೆಗಳ ದರಗಳ ಹೆಚ್ಚಾಗಿರುವಂತಹ ಕಾರಣಕ್ಕಾಗಿ ಅದನ್ನು ಐದು ಸಾವಿರ ರೂಪಾಯಿಗಳವರೆಗೆ ಏರಿಸಬೇಕು. ಹಾಗೆಯೇ, ಕಾಡಿನಲ್ಲಿ ಸಿಗುವಂತಹ ಜೇನಿನ ಪ್ರಮಾಣ ಕೂಡ ಇವತ್ತಿನ ದಿವಸ ಬಹಳ ಕಡಿಮೆಯಾಗಿದೆ. ಅಲ್ಲದೆ ಕಾಡಿಗೆ ಹೋಗಲು ಪ್ರವೇಶ ಕೂಡ ಸಿಗುತ್ತಿಲ್ಲ. ಆ ಕಾರಣಕ್ಕಾಗಿಯೇ ಹೆಚ್ಚು ಬುಡಕಟ್ಟು ಜನಾಂಗಕ್ಕೆ ಜೇನು ಪೆಟ್ಟಿಗೆಗಳು ಮತ್ತು ಅದಕ್ಕೆ ಸಂಬಂಧಪಟ್ಟ ಸಲಕರಣೆ ಹಾಗೂ ಮಾರುಕಟ್ಟೆ, ಸಂಸ್ಕರಣಾ ಘಟಕಗಳನ್ನು ಕೊಟ್ಟರೆ ತುಂಬಾ ಅನುಕೂಲವಾಗುತ್ತದೆ ಎಂಬ ಮಾತನ್ನು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ.

**ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತೆ, ಬುಡಕಟ್ಟು ಜನಾಂಗಕ್ಕೆ ಏನೇನು ಸೌಲಭ್ಯಗಳಾಗಬೇಕೋ ಅದರ ಬಗ್ಗೆ ಸಂಪೂರ್ಣವಾಗಿ ಪರಿಶೀಲನೆ ಮಾಡಿ, ಆದಷ್ಟು ಹೆಚ್ಚಿನ ರೀತಿಯಲ್ಲಿ ಸಹಕಾರ ಮಾಡುತ್ತೇನೆ ಎಂದು ಈ ಸಮಯದಲ್ಲಿ ಹೇಳುತ್ತೇನೆ. ಮುಖ್ಯವಾಗಿ ಜೇನು ಕೃಷಿಯ ಬಗ್ಗೆ ಹೇಳುವುದಾದರೆ, ಈ pollination ಗೋಸ್ಕರ ತುಂಬಾ ಜನರು ಹಿಂದಿನಿಂದಲೂ ಪ್ರತಿಯೊಂದು ತೋಟಗಳಲ್ಲಿ ಜೇನು ಕೃಷಿ ಮಾಡಿಕೊಂಡು ಬರುತ್ತಿದ್ದಾರೆ. ಈಗ ಆ ಜೇನು ಕೃಷಿ ಕಡಿಮೆಯಾಗುತ್ತಾ ಬರುತ್ತಿದೆ. ಈಗ ಅದಕ್ಕೆ ನಾವು ಹೆಚ್ಚಿನ ರೀತಿಯಿಂದ ಪ್ರೋತ್ಸಾಹ ಮಾಡುವುದರಿಂದ, ನಾಳೆ ದಿವಸ ಅಡಿಕೆ ಆಗಿರಬಹುದು, ತೆಂಗು ಆಗಿರಬಹುದು. ಇದಕ್ಕೆ ಹೆಚ್ಚು pollination ಆದಾಗ, ನಮಗೆ ಹೆಚ್ಚು recovery ಕೂಡ ಬರುತ್ತದೆ. ಆ ದೃಷ್ಟಿಕೋನದಲ್ಲಿ ನಮ್ಮ ಸರ್ಕಾರ ಸಂಪೂರ್ಣವಾಗಿ ಪರಿಶೀಲನೆ ಮಾಡುತ್ತದೆ.

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ:-** ಮಾನ್ಯ ಸಭಾಪತಿಯವರೇ, ಜಮೀನಿನ ಬಗ್ಗೆ ಗಮನಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಗೋವಿಂದರಾಜುರವರ ಪ್ರಶ್ನೆ ಸಂಖ್ಯೆ 750. ಮಾನ್ಯ ಸದಸ್ಯರು ಗೈರು ಹಾಜರಾಗಿರುತ್ತಾರೆ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

**(ಪ್ರಶ್ನೆ ಸಂಖ್ಯೆ 750)**

**(ಈ ಹಂತದಲ್ಲಿ ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)**

**ಪ್ರಶ್ನೆ ಸಂಖ್ಯೆ ೮೦೨**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೇಶವ ಪ್ರಸಾದ್.ಎಸ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಾನು ಕೇಳಿರುವಂತಹ ಎರಡನೇ ಪ್ರಶ್ನೆಗೆ ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳುತ್ತಾರೆ. ಸರ್ಕಾರದ ಗಮನಕ್ಕೆ ಬಂದಾಗ, ನನ್ನದೇನೆಂದರೆ, ಗಿಡಗಳನ್ನು ಕಿತ್ತು ಹಾಕಿರುವ ಬಗ್ಗೆ ಸಮೀಕ್ಷೆ ನಡೆಸಲಾಗುತ್ತಿದೆ ಎಂದು ಉತ್ತರದಲ್ಲಿ ಹೇಳಿರುತ್ತಾರೆ. ಸಮೀಕ್ಷೆ ಯಾವ ಹಂತದಲ್ಲಿ ಇದೆ? ಇದು ಯಾವಾಗ ಮುಗಿಯತ್ತದೆ? ಹಾಗೆಯೇ, ಗಿಡ ಕಿತ್ತು ಹಾಕಿರುವಂತಹ ಅಂಬೆ, ದಾಳಿಂಬೆ ಹಾಗೂ ದ್ರಾಕ್ಷಿ ಗಿಡಗಳನ್ನು ರೈತರು ಒಮ್ಮೆ ಕಿತ್ತು ಹಾಕಿದರೆ, ಮತ್ತೊಮ್ಮೆ ಆ ಬೆಳೆ ಬೆಳೆಸುವುದಕ್ಕೆ ಮೂರು ವರ್ಷ ಬೇಕು. ಇವರ ಬೆಂಬಲಕ್ಕೆ ಸರ್ಕಾರದ ಯೋಜನೆಗಳೇನಿವೆ? ಇವರ ಜೊತೆ ಯಾವ ಮಂತ್ರಿಗಳು ಸಮಾಲೋಚನೆ ಮಾಡಿ, ಸಭೆ ನಡೆಸಿದ್ದಾರೆ?

**ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್ (ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವಂತೆ, ಮುಖ್ಯವಾಗಿ ನೀರು ಕಡಿಮೆಯಾದಾಗ, ಗಿಡಗಳನ್ನು ಕಿತ್ತು ಹಾಕಿರುವ ಉದಾಹರಣೆಗಳಿವೆ. ಆದಾದ ಮೇಲೆ ಎನ್.ಡಿ.ಆರ್.ಎಫ್., ಮತ್ತು ಎಸ್.ಡಿ.ಆರ್.ಎಫ್. ಆಗಿರಬಹುದು. ಆ ಮಾರ್ಗದರ್ಶನದ ಪ್ರಕಾರ ನಮ್ಮ ಇಲಾಖೆ ವತಿಯಿಂದ ಸಾಕಷ್ಟು ಅನುದಾನವನ್ನು ಒದಗಿಸಿಕೊಡುತ್ತಿದ್ದೇವೆ. ನಮ್ಮ ಇಲಾಖೆಗೆ ಸಂಬಂಧಪಟ್ಟಂತೆ, ಜಿಲ್ಲಾ ಮತ್ತು ತಾಲ್ಲೂಕಿನಲ್ಲಿ ಅಧಿಕಾರಿಗಳೇನಿದ್ದಾರೆ, ಅವರ ಮುಖಾಂತರ ಬಂದಂತಹ ಅರ್ಜಿಗಳು ಯಾವುದೇ ಇದ್ದರೂ, ಅದನ್ನು ಪರಿಶೀಲನೆ ಮಾಡಿ, ಸೂಕ್ತವಾದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಕೇಶವ ಪ್ರಸಾದ್ ಎಸ್:–** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಗೆ ಸರಿಯಾದ ಉತ್ತರ ಬಂದಿಲ್ಲ. ನಾನು ಪ್ರಶ್ನೆಯನ್ನು specific ಆಗಿ ಕೇಳಿದ್ದೇನೆ. ಯಾವ ಹಂತದಲ್ಲಿ ಸಮೀಕ್ಷೆ ಇದೆ? ಇದು ಯಾವಾಗ ಮುಗಿಯುತ್ತದೆ. ಒಮ್ಮೆ ಗಿಡಗಳನ್ನು ಕಿತ್ತು ಹಾಕಿದರೆ, ಮೂರು

ವರ್ಷಗಳು ಬೇಕು ಎಂದು ಅವರ ಜೊತೆ ಸಭೆ ಮಾಡಿದ್ದೀರಿ. ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಂದ ಮತ್ತೊಮ್ಮೆ ಉತ್ತರ ಬೇಕು.

**ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸಮೀಕ್ಷೆ ನಡೆಯುತ್ತಿದೆ. ಅದರ ಸಂಪೂರ್ಣವಾದ ಮಾಹಿತಿಯನ್ನು ತರಿಸಿಕೊಂಡು, ಮಾನ್ಯ ಸದಸ್ಯರಿಗೆ ಸಂಪೂರ್ಣವಾಗಿ ವರದಿಯನ್ನು ಕಳುಹಿಸಿಕೊಡುತ್ತೇನೆ.

**ಶ್ರೀ ಕೇಶವ ಪ್ರಸಾದ್ ಎಸ್:–** ಮಾನ್ಯ ಸಭಾಪತಿಯವರೇ, ಹಾನಿಯಾದ ಬೆಳೆಗಳಿಗೆ ಪರಿಹಾರಧನವನ್ನು ಕಂದಾಯ ಇಲಾಖೆಯ ಮೂಲಕ ವಿತರಿಸಲಾಗುತ್ತದೆ ಎಂದು future tense ನಲ್ಲಿ ಹೇಳುತ್ತಾರೆ. ವಿತರಿಸಲಾಗುತ್ತದೆ ಎಂದರೆ ಅದು ಯಾವಾಗ? ಅದರ ಕಾಲಮಿತಿ ಏನು? ಈ ಅಧಿವೇಶನ ಮುಗಿದು ಹೋಗುತ್ತದೆ. ಆಗ ನಾನು ಕೇಳಿರುವ ಪ್ರಶ್ನೆ ಹೊರಟು ಹೋಗುತ್ತದೆ. ಆಮೇಲೆ ರಾಜ್ಯದ ಜನತೆಗೆ ಮತ್ತು ಮಾನ್ಯ ಸದಸ್ಯರುಗಳಿಗೆ ಉತ್ತರ ಸಿಗುವಂತಹದ್ದು ಹೇಗೆ? ಉತ್ತರದಲ್ಲಿರುವಂತೆ, ಕಂದಾಯ ಇಲಾಖೆಯ ಮೂಲಕ; ಹಾಗಾದರೆ, ಕಂದಾಯ ಇಲಾಖೆಗೂ ಮತ್ತು ತೋಟಗಾರಿಕೆ ಇಲಾಖೆಗೂ ಸಮನ್ವಯ ಇಲ್ಲವೇ? ಈ ಪ್ರಶ್ನೆಗೆ ಉತ್ತರ ಬಂದ ತಕ್ಷಣವೇ, ಕಂದಾಯ ಇಲಾಖೆಯ ಜೊತೆಯಲ್ಲಿ ಸಮಾಲೋಚನೆ ಮಾಡಿ, ಒಂದು ಸಮಗ್ರವಾದಂತಹ ಉತ್ತರವನ್ನು ಏತಕ್ಕೆ ಕೊಟ್ಟಿಲ್ಲ?

**ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್:–** ಮಾನ್ಯ ಸದಸ್ಯರೇ, ಈಗ ಕೋಡೋಣ. ಈಗ ಕಂದಾಯ ಇಲಾಖೆಯ ಬಗ್ಗೆ ಹೇಳಬೇಕೆಂದರೆ, ತಹಶೀಲ್ದಾರ್ ಆಗಿರಬಹುದು ಅಥವಾ ಗ್ರಾಮ ಲೆಕ್ಕಿಗರು ಆಗಿರಬಹುದು. ಮೊದಲು ಪರಿಶೀಲನೆ ಮಾಡಿ, ಆಮೇಲೆ ನಮ್ಮ ಇಲಾಖೆಗೆ ಕಳುಹಿಸಿಕೊಡುತ್ತಾರೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಈಗ ಕಳುಹಿಸಿಕೊಡುತ್ತೀರಲ್ಲವೇ?

**ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇದರ ಬಗ್ಗೆ ಕೇಳಿದ್ದಾರೆ, ಆ ನಿಟ್ಟಿನಲ್ಲಿ ನಮಗೆ ಸಂಪೂರ್ಣವಾದ ಅರಿವು ಇದೆ. ಇದನ್ನು ಆದಷ್ಟು ಬೇಗನೆ ಉತ್ತರವನ್ನು ಒದಗಿಸುತ್ತೇನೆ.

**ಶ್ರೀ ಕೇಶವ ಪ್ರಸಾದ್ ಎಸ್:–** ಮಾನ್ಯ ಸಭಾಪತಿಯವರೇ, ನನ್ನದು ಕೊನೆಯ ಪ್ರಶ್ನೆಯಿದೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ತಾವು ಸಾಕು ಮಾಡಿ.

**ಶ್ರೀ ಕೇಶವ ಪ್ರಸಾದ್ ಎಸ್:–** ಮಾನ್ಯ ಸಭಾಪತಿಯವರೇ, ನನ್ನ ಕೊನೆಯ ಪ್ರಶ್ನೆ ತುಂಬಾ ಮುಖ್ಯವಾದ ಪ್ರಶ್ನೆಯಾಗಿದೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ತಮ್ಮ ಪ್ರಶ್ನೆ ಎಲ್ಲವೂ ಮುಖ್ಯವಾಗಿನೇ.

**ಶ್ರೀ ಕೇಶವ ಪ್ರಸಾದ್ ಎಸ್:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಯ ಅತ್ಯಂತ ಮುಖ್ಯವಾದ ಪ್ರಶ್ನೆಯಾಗಿದೆ. ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿರುವಂತೆ, ಸಹಕಾರ ಸಂಘಗಳಲ್ಲಿ ದ್ರಾಕ್ಷಿ ಬೆಳೆಗಾರರ ಸಾಲ ಮನ್ನಾ ಮಾಡುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ ಎಂದು ಸರ್ಕಾರ ಹೇಳಿದೆ. ಅದು ಸರಿ. ಅದರೆ ಪ್ರಸ್ತಾವನೆ ಇಲ್ಲ ಎನ್ನುವ ಮಾತ್ರಕ್ಕೆ ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೆ? ಸಹಕಾರ ಸಂಘಗಳಲ್ಲಿ ಈ ರೀತಿ ಸಾಲ ಮಾಡಿರುವಂತಹ ಸಂಖ್ಯೆ ಎಷ್ಟಿದೆ? ಸಾಲ ಎಷ್ಟಿದೆ? ಸರ್ಕಾರಕ್ಕೆ ಇದರ ಬಗ್ಗೆ ಮಾಹಿತಿ ಇರಬೇಕಲ್ಲ. ಅಂದರೆ ಸಾಲದ ಹೊರೆ ಇಷ್ಟಿದೆ ಎಂದರೆ, ಬಜೆಟ್‌ನಲ್ಲಿ ಅದಕ್ಕೆ allocation ಮಾಡುವಂತಹದ್ದು, ತೀರಿಸುವಂತಹದ್ದು, ಈ ರೀತಿ ಸರ್ಕಾರ ಗಮನ ಕೊಡುವ ಸಾಧ್ಯತೆ ಇರುತ್ತದೆ. ಹಾಗಾಗಿ, ಸರ್ಕಾರದಲ್ಲಿ ಈ ರೀತಿ ಎಲ್ಲಾ ಸಹಕಾರ ಸಂಘಗಳಲ್ಲಿ ಸಾಲದ ಹೊರೆ ಎಷ್ಟಿದೆ? ಇದಕ್ಕೆ ಬಡ್ಡಿಯೂ ಸೇರಿ ಇಲ್ಲಿಯ ತನಕ ಏನಾಗಿದೆ ಮತ್ತು ಎಷ್ಟಾಗಿದೆ ಎಂಬ ಬಗ್ಗೆ ಮಾಹಿತಿ ಬೇಕು.

**ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್:–** ಮಾನ್ಯ ಸಭಾಪತಿಯವರೇ, ಈಗ ತಾನೇ ಮಾನ್ಯ ಸಹಕಾರ ಸಚಿವರು ಸೂಕ್ತವಾದಂತಹ ಮಾಹಿತಿ ಮತ್ತು ಸಲಹೆಯನ್ನು ಕೊಟ್ಟಿದ್ದಾರೆ. ಆ ವಿಚಾರ ಸಹಕಾರ ಇಲಾಖೆಗೆ ಬರುತ್ತದೆ. ಆ ವಿಚಾರಕ್ಕೆ ಸಂಬಂದಪಟ್ಟಂತೆ, ಸಹಕಾರ ಇಲಾಖೆಯಲ್ಲಿ ಏನಾಗುತ್ತದೆ ಎಂಬ ಬಗ್ಗೆ ಮಾಹಿತಿಯನ್ನು ತರಸಿಕೊಡಿಸುತ್ತೇನೆ.

**ಶ್ರೀ ಕೇಶವ ಪ್ರಸಾದ್ ಎಸ್:–** ಮಾನ್ಯ ಸಭಾಪತಿಯವರೇ, ಕಂದಾಯ ಇಲಾಖೆ ಆಗಿರಬಹುದು ಅಥವಾ ಬೇರೆ ಇಲಾಖೆ ಆಗಬಹುದು. ಇಲ್ಲಿ ಸಮನ್ವಯದ ಕೊರತೆ. ಮಾನ್ಯ ಸಚಿವರು ಸಮಗ್ರವಾದ ಉತ್ತರವನ್ನು ಕೊಡಬೇಕು.

**ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಕೇಳಿರುವುದಕ್ಕೆ ತಾವು ಉತ್ತರವನ್ನು ಕೊಡಬೇಡಿ. ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರೇ ತಮ್ಮ ಪ್ರಶ್ನೆಯನ್ನು ಕೇಳಿ.

**ಪ್ರಶ್ನೆ ಸಂಖ್ಯೆ 779**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರತಾಪ ಸಿಂಹ ನಾಯಕ್.ಕೆ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಜನರ ಸಮಸ್ಯೆಗೆ ಪರಿಹಾರವನ್ನು ಈ ಉತ್ತರದಲ್ಲಿ ಒದಗಿಸಲಿಲ್ಲ. ನಾನು ಕೇಳಿರುವ ಪ್ರಶ್ನೆ ಏನೆಂದರೆ, ರಾಜ್ಯದಲ್ಲಿ ಭೂ ಪರಿವರ್ತಿತ ವಿನ್ಯಾಸ ನಕ್ಷೆ ಅನುಮೋದನೆಯ ಅಧಿಕಾರವನ್ನು ನಗರ ಸ್ಥಳೀಯ ಸಂಸ್ಥೆಗಳಿಂದ ಕಸಿದು ಯೋಜನಾ ಪ್ರಾಧಿಕಾರಕ್ಕೆ ನೀಡಿರುವುದರಿಂದ ಸಾರ್ವಜನಿಕರಿಗೆ ಮನೆ, ಕಟ್ಟಡ ನಿರ್ಮಾಣ, ಬ್ಯಾಂಕ್ ಸಾಲ ಪಡೆಯುವ ಉದ್ದೇಶದಿಂದ ಭೂ ಪರಿವರ್ತನೆ ವಿನ್ಯಾಸ ನಕ್ಷೆ ಪಡೆಯಲು ಅನಗತ್ಯ ವಿಳಂಬವಾಗುತ್ತಿರವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೆ. ಮಾನ್ಯ ಸಚಿವರು ಉತ್ತರದಲ್ಲಿರುವಂತೆ, ಅದರಲ್ಲಿ ಬಂದಿದೆ ಎಂದು ಹೇಳಿದ್ದಾರೆ. ನನ್ನ ವಿವರಣೆ ಏನೆಂದರೆ, ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಾಖಲಾದ ರಿಟ್ ಸಂಖ್ಯೆಯ ಪ್ರಕಾರ ಮಾನ್ಯ ನ್ಯಾಯಾಲಯ ಒಂದು ಆದೇಶವನ್ನು ಕೊಟ್ಟಿದೆ.

(ಮುಂದು)

(621) 23.07.2024 11.50, ಟಿಸಿಹೆಚ್-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ಮುಂದು):**

ಯಾವ ಆಧಾರದಲ್ಲಿ ಎಂದರೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ 1961ರ ಕಲಂ 17ರಲ್ಲಿ ಕಲ್ಪಿಸಿರುವ ಅವಕಾಶಕ್ಕೆ ವ್ಯತಿರಿಕ್ತವಾಗಿರುತ್ತದೆ ಎಂದು ಹೇಳಲಾಗಿದೆ. ಸಾಮಾನ್ಯವಾಗಿ ಸರ್ಕಾರದ ವಿರುದ್ಧ ಯಾವುದೇ ರಿಟ್ ಹೋದರೂ ಕೂಡ ಆ ರಿಟ್‌ನಲ್ಲಿ. . .

**ಸಭಾಪತಿಯವರು:–** ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ ರವರೇ ತಾವು ಪ್ರಶ್ನೆ ಕೇಳಿ. ಭಾಷಣ ಮಾಡುತ್ತಿದ್ದೀರಿ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:–** ಮಾನ್ಯ ಸಭಾಪತಿಯವರೇ, ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಆದರೆ ಅದರ ವಿವರಣೆ ಗೊತ್ತಾಗಬೇಕಲ್ಲವೇ?

**ಸಭಾಪತಿಯವರು:–** ಶ್ರೀ ಪ್ರತಾಪ್ ಸಿಂಹ ನಾಯಕ್‌ರವರೇ, ಗೊತ್ತಾಗುತ್ತದೆ ಹೇಳಿ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:–** ಮಾನ್ಯ ಸಭಾಪತಿಯವರೇ, ಈ ಆದೇಶ ಆಗುವವರೆಗೆ ಗ್ರಾಮಪಂಚಾಯಿತಿ ಮತ್ತು ನಗರ ಸಂಸ್ಥೆಗಳಲ್ಲಿ ಈ ವಿನ್ಯಾಸದ ನಕ್ಷೆ ಸಿಗುತ್ತಿತ್ತು. ಗ್ರಾಮ ಪಂಚಾಯಿತಿ ೯ & 11 ಮತ್ತು ನಗರ ಪ್ರಾಧಿಕಾರಗಳಲ್ಲಿಯೂ ಕೂಡ ಈ ನಕ್ಷೆ ಸಿಗುತ್ತಿತ್ತು. ಆದರೆ ಹೈಕೋರ್ಟ್ ತೀರ್ಪು ಬಂದ ನಂತರ ಈಗ ಅದನ್ನು ಸಂಪೂರ್ಣವಾಗಿ ನಿಲ್ಲಿಸಿದ್ದಾರೆ. ನಾನು ಒಂದು ಸಣ್ಣ ಉದಾಹರಣೆ ಹೇಳಿ ನನ್ನ ಮಾತನ್ನು ನಿಲ್ಲಿಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 164 ಗ್ರಾಮ ಪಂಚಾಯಿತಿಗಳಿವೆ. ಆದರೆ ಅದರ ಆಫೀಸ್ ಮಂಗಳೂರಿನಲ್ಲಿ ಇದೆ. ಅಲ್ಲಿ ಕೇವಲ ಇಬ್ಬರು ಇದ್ದಾರೆ. ನಗರ ಸಂಸ್ಥೆಗಳಲ್ಲೂ ಕೂಡ ಇದೇ ರೀತಿಯ ಪರಿಸ್ಥಿತಿ ಇದೆ. ವಾರಕ್ಕೊಮ್ಮೆ ಬೆಳ್ತಂಗಡಿಗೆ ಬರುತ್ತಾರೆ. ಜನರಿಗೆ ಸಿಗಬೇಕಾದಂತಹ ಈ ವಿನ್ಯಾಸದ ನಕ್ಷೆ ಬೇರೆ ಬೇರೆ ಕಾರಣಗಳಿಗೆ ಅವರು ಹಾಕುವಂತಹ ಒಂದಷ್ಟು ದಾಖಲೆಗಳನ್ನು ಕೇಳುತ್ತಿದ್ದಾರೆ. ಎಲ್ಲಿಯವರೆಗೆ ಎಂದರೆ, ರೆವಿನ್ಯೂ ಸಚಿವರು ಇದ್ದಾರೆ. ಗ್ರಾಮೀಣಾಭಿವೃದ್ಧಿ ಸಚಿವರು ಇದ್ದಿದ್ದರೆ ಒಳ್ಳೆಯದಾಗುತ್ತಿತ್ತು. ಆಕಾರ್ ಬಂದ್‌ನಂತಹ ದಾಖಲೆಗಳು ಆ ತಾಲ್ಲೂಕ್ ಆಫೀಸ್‌ನಲ್ಲೇ ಇಲ್ಲ. ಇಂಥದ್ದರಲ್ಲಿ ಜನರಿಗೆ ೯ & 11 ವಿನ್ಯಾಸ ನಕ್ಷೆ ಸಿಗುವುದಕ್ಕೆ ಸಮಸ್ಯೆಯಾಗುತ್ತಿದೆ. ಇದಕ್ಕೊಂದು ಒಂದು ಪರಿಹಾರ ಹೇಳಬೇಕೆಂದು ನಾನು ಮಾನ್ಯ ಸಚಿವರಿಗೆ ಕೇಳುತ್ತಿದ್ದೇನೆ.

**ಶ್ರೀ ಬಿ.ಎಸ್.ಸುರೇಶ್ (ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು):–** ಮಾನ್ಯ ಸಭಾಪತಿಯವರೇ, ನನಗೆ ಈ ಸಮಸ್ಯೆ ಅರಿವಾಗಿದೆ ಎಂದು ಹೇಳುವುದಕ್ಕೆ ಉತ್ತರ ಹೇಳಿರುವುದು. ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ plan sanction ಮಾಡಲು ಅಧಿಕಾರ Urban Development Department ನವರಿಗೆ ಮಾತ್ರ ಇದೆ. ಗ್ರಾಮ ಪಂಚಾಯಿತಿಗಳೆಲ್ಲಾ plan sanction ಕೊಡಲು ಶುರು ಮಾಡಿದರೆ ಅರ್ಥವೇ ಇರುವುದಿಲ್ಲ. ಗ್ರಾಮ ಪಂಚಾಯಿತಿಯಲ್ಲಿ ಅವರಿಗೆ

ವಿದ್ಯಾರ್ಹತೆ ಇರಬೇಕಲ್ಲವೇ? ಅಲ್ಲಿ ಬರೀ ದ್ವಿತೀಯ ಪಿ.ಯು.ಸಿ., ಮತ್ತು ಬಿ.ಎಸ್ಸಿ., ಓದಿರತಕ್ಕಂಥ ವ್ಯಕ್ತಿಗೆ plan sanction ಗೆ ಸಂಬಂಧ ಏನಿದೆ? ಅಲ್ಲಿ technical person ಅಥವಾ ಒಬ್ಬರು ಡಿಪ್ಲೊಮೋ ಓದಿರತಕ್ಕಂಥವರು ಕೂಡ ಇರುವುದಿಲ್ಲ. ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಮಾಡತಕ್ಕಂಥ ವ್ಯಕ್ತಿ building plan sanction ಕೊಡುವುದಕ್ಕೆ ಆಗುತ್ತದೆಯೆ? Technical matters ಬಗ್ಗೆ ಆತನಿಗೆ ಏನು ಅರಿವಿರುತ್ತದೆ? ಆದ್ದರಿಂದಲೇ ಕೋರ್ಟ್ ಆದೇಶ ಮಾಡಿದೆ. ಇದು ಗ್ರಾಮ ಪಂಚಾಯಿತಿಗಳ ಮುಖಾಂತರ ಕೊಡುತ್ತಿರುವ ನಕ್ಷೆ ಸರಿಯಾದುದಲ್ಲ. ಪ್ರಾಧಿಕಾರಗಳೇ ಈ ಕೆಲಸವನ್ನು ನಗರಾಭಿವೃದ್ಧಿ ಇಲಾಖೆಯಿಂದಲೇ ಮಾಡಬೇಕೆಂದು ಹೇಳಿದ್ದಾರೆ. ಆದ್ದರಿಂದ ನಾವು ಮಾಡಿರುವುದು. ಮಾನ್ಯ ಸದಸ್ಯರು ಅಧಿಕಾರಿಗಳು ಸಿಗುತ್ತಿಲ್ಲವೆಂದು ಪ್ರಶ್ನೆ ಕೇಳಿದ್ದಾರೆ. ನಾನು ಸರ್ಕಾರದ ಜೊತೆ ಮಾತನಾಡಿದ್ದೇನೆ. ವಾರದಲ್ಲಿ ಒಂದು ದಿನ ಅಥವಾ ಎರಡು ದಿನ Urban Local Bodies and Town Planning ಹೋಗಿ ನಮ್ಮ ಅಧಿಕಾರಿಗಳು ಅಲ್ಲಿ ಕುಳಿತುಕೊಂಡು ಆಯಾ ತಾಲ್ಲೂಕು, ಆಯಾ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗಳಲ್ಲಿ ಯಾವ್ಯಾವ plan sanctions ಗೆ, ಬರುತ್ತವೋ ಆ plan sanctions ಗಳನ್ನೆಲ್ಲಾ ನಮ್ಮ ಇಲಾಖೆಯಿಂದ ಕೊಡತಕ್ಕಂಥ ಕೆಲಸ ಮಾಡುತ್ತೇವೆ. ಮತ್ತೆ ಗ್ರಾಮ ಪಂಚಾಯಿತಿಗಳಿಗೆ ಈ ಅಧಿಕಾರವನ್ನು ಬಿಟ್ಟುಕೊಡತಕ್ಕಂಥ ಪ್ರಶ್ನೆಯೇ ಇಲ್ಲ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:-** ಮಾನ್ಯ ಸಭಾಪತಿಯವರೇ, ಮಾನ್ಯ ನಗರಾಭಿವೃದ್ಧಿ ಸಚಿವರು ಅಲ್ಲಿ ಒಬ್ಬರು Technical Persons ಇಲ್ಲವೆಂದು ಹೇಳುತ್ತಾರೆ. ಗ್ರಾಮ ಪಂಚಾಯಿತಿಗಳಲ್ಲಿ Technical Persons ಗಳು ಕೊಡುವಂತಹ ಕಟ್ಟಡದ ನಕ್ಷೆಯನ್ನು ಈ ಹಿಂದೆ PDO (Panchayat Development Officer) ಗಳು ಮತ್ತು ನಗರಸಭಾ ವ್ಯಾಪ್ತಿಗಳಲ್ಲಿ ಕಾರ್ಯದರ್ಶಿಗಳು ಈ 9 &11 ಇತ್ತೀಚಿನವರೆಗೂ ವಿನ್ಯಾಸ ನಕ್ಷೆ ಕೊಡುತ್ತಿದ್ದರು. ಆದರೆ ಹೈಕೋರ್ಟ್ ನಿಂದ ಆದೇಶ ಬಂದ ನಂತರ ಅದನ್ನು ಕೊಡುತ್ತಿಲ್ಲ. ಅದಕ್ಕೆ ನಾನು ಹೇಳುವುದೇನೆಂದರೆ, ಹಾಗೇನಾದರೂ ಇದ್ದರೆ ಇದಕ್ಕೊಂದು ಸಂಶೋಧನೆ ಮಾಡಿ, ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಬದಲಾವಣೆಯನ್ನು ಮಾಡಬೇಕು. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ 1961ರ ಕಲಂ 17ನ್ನು ಇಟ್ಟುಕೊಂಡು ಜನರನ್ನು ಅಲೆದಾಡಿಸಬಾರದು ಅಲ್ಲವೇ? ಹಾಗಾಗಿ, ಜನರಿಗೆ ಪರಿಹಾರ

ಕೊಡಬೇಕು. ಜನರಿಗೆ ಪರಿಹಾರ ಕೊಡುವ ದೃಷ್ಟಿಯಲ್ಲಿ ಇದರಲ್ಲಿ ಏನಾದರು ಒಂದು ತಿದ್ದುಪಡಿಯನ್ನು ತಂದು ಸರ್ಕಾರ ಜನರಿಗೆ ಅನುಕೂಲ ಆಗುವ ರೀತಿಯಲ್ಲಿ ಗ್ರಾಮ ಪಂಚಾಯಿತಿಯಲ್ಲೇ ವಿನ್ಯಾಸ ನಕ್ಷೆ ಸಿಗುವಂತಹ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಬೇಕು. ಸರ್ಕಾರ ಇದರ ಬಗ್ಗೆ ಆಲೋಚನೆ ಮಾಡಬೇಕು.

**ಶ್ರೀ ಬಿ.ಎಸ್.ಸುರೇಶ್:-** ಮಾನ್ಯ ಸಭಾಪತಿಯವರೇ, ಇದು common sense. ಗ್ರಾಮ ಪಂಚಾಯಿತಿಗಳಲ್ಲಿ Technical Persons ಗಳು ಇರುವುದಿಲ್ಲ. ಆ Technical Persons ಗ್ರಾಮ ಪಂಚಾಯಿತಿಗಳಿಗೂ ಸಿಗಬೇಕು, Urban Local Bodies ಸಿಗಬೇಕು ಎನ್ನುವುದು ಮಾನ್ಯ ಸದಸ್ಯರ ಆಶಯವಾಗಿರುತ್ತದೆ ಮತ್ತು ನನ್ನ ಆಶಯ ಕೂಡ ಅದೇ ಇದೆ. ಅಲ್ಲಿಗೆ ಕಳುಹಿಸಿ ಕೊಡಿಸುವಂತಹ ಕೆಲಸ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ. ೩೦೭**

**(ಉತ್ತರ ಲಗತ್ತಿಸಿದೆ)**

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ ನಾನು 2 ರಿಂದ 3 clarifications ಕ್ಲಾರಿಫಿಕೇಷನ್ ಕೇಳುತ್ತೇನೆ. ಗ್ರಾಮ ಪಂಚಾಯಿತಿ ಪರ್ಟನ್‌ಗೆ ರೂ.300 ಗಳು ಮಾಡಿದ್ದಾರೆ. M/s KSMCL and M/s HGML ಗೆ ರೂ.700ಗಳು ಮಾಡಿದ್ದಾರೆ. ಮರಳು ನೀತಿಗೆ ಜಿಲ್ಲಾ ಮತ್ತು ತಾಲ್ಲೂಕು ಸಮಿತಿಗಳನ್ನು ಮಾಡಲಾಗಿದೆ ಎಂದು ಹೇಳಿದ್ದಾರೆ. ಅದು ಯಾರ್ಯಾರು ಎಂದು ಗೊತ್ತಾಗಬೇಕು. ಇದರ ಜೊತೆಗೆ ಒಂದು ಬಾರಿ ಪಾಸ್ ಇಶ್ಯೂ ಮಾಡಿದ ನಂತರ ಅದು ಬೆಳಗ್ಗೆಯಿಂದ ಸಾಯಂಕಾಲದವರೆಗೆ misuse ಆಗುತ್ತಿದೆ ಎಂದು ನ್ಯೂಸ್ ಇದೆ. ಅದರ ಬಗ್ಗೆ ಏನು ಮಾಡುತ್ತೀರಿ? District wise pass issue ಮಾಡಿದರೆ ಅದು ಜಿಲ್ಲೆ, ತಾಲ್ಲೂಕು ಮತ್ತು ರಾಜ್ಯಾವಾರು ಎಲ್ಲಾ ಕಡೆಗಳಲ್ಲಿ ಹೋಗಬಹುದೇ ಅಥವಾ ಬರೀ ಒಂದು ಏರಿಯಾಗೆ ಮಾತ್ರ ಸಂಬಂಧಪಟ್ಟಂತೆ ಹೋಗಬೇಕೇ ಎಂದು ದಯವಿಟ್ಟು ಮಾನ್ಯ ಸಚಿವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು):–** ಮಾನ್ಯ ಸಭಾಪತಿಯವರೇ, ಇದು M/s KSMCL (Karnataka State Minerals Corporation Ltd.) and M/s HGML (Hatti Gold Mines Ltd.) ಮುಖ್ಯವಾಗಿ MML (Mysore Minerals Ltd.) and Hatti Gold Mines Limited ಗೆ ಕಾಂಟ್ರಾಕ್ಟರ್ ಇವರ ಮುಖಾಂತರ ಟೆಂಡರ್‌ನ್ನು ಕರೆದು ಹರಾಜು ಪ್ರಕ್ರಿಯೆ ನಡೆಯುತ್ತಿದೆ. ಇದರ ಬಗ್ಗೆ ಜಿ.ಪಿ.ಎಸ್., ಹಾಕಿಬಿಟ್ಟು ಪ್ರತಿಯೊಂದು ವಾಹನಗಳು ಎಷ್ಟು ಗಂಟೆಗೆ ತಲುಪುತ್ತವೆ, ಏನು ಎಂಬುದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಆಯಾ ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆ. ಆಯಾ ಜಿಲ್ಲಾಧಿಕಾರಿಗಳು ಆಯಾ ಜಿಲ್ಲೆಯಲ್ಲಿ ಸಂಪೂರ್ಣವಾಗಿ ಟೆಂಡರ್ ಪ್ರಕ್ರಿಯೆ ಮಾಡಿ, ಅವರೇ ಹರಾಜು ಹಾಕುತ್ತಿದ್ದಾರೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಕೆ. ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೇ, ಈ ರೂರಲ್ ಏರಿಯಾಗಳಲ್ಲಿ ಮರಳು ತೊಳೆದು ಮನೆ ಕಟ್ಟಲು ಪ್ರಯತ್ನ ಮಾಡುತ್ತಿದ್ದಾರೆ. ಅದು ಬಹಳ ಕಷ್ಟದ ಕೆಲಸ. ಅದಕ್ಕಾಗಿ ಅಕ್ರಮ ಮರುಳುಗಾರಿಕೆಯನ್ನು ತಡೆಗಟ್ಟಲು ನೀವು lease ಎಷ್ಟು ವರ್ಷಕ್ಕೆ ಕೊಡುತ್ತೀರಿ? Crusher Plants ಗಳಿಗೆ C–Form ಗಳನ್ನು ಕೊಟ್ಟಿದ್ದೀರಿ, ಆದರೆ ಅವರಿಗೆ raw materials ಮಾತ್ರ ಕೊಟ್ಟಿಲ್ಲ. ಮತ್ತೆ ಸಬ್ ಕಮಿಟಿ ನೋಟಿಫಿಕೇಷನ್ ಮಾನ್ಯ ಸಚಿವರಾದ ಮಲ್ಲಿಕಾರ್ಜುನ್ ರವರ ಕಾಲದಲ್ಲಿ ಆಗಿದೆ. ಆದರೆ Saved and unsaved application lease ಗೆ ಕೊಡುವುದನ್ನು ಕೊಟ್ಟಿಲ್ಲ ಅನಿಸುತ್ತಿದೆ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಈ ಪ್ರಶ್ನೆಗೆ ಸಂಬಂಧಪಟ್ಟಂತೆ ನಾನು ಒಂದು ಉಪ ಪ್ರಶ್ನೆ ಕೇಳುತ್ತೇನೆ.

**ಸಭಾಪತಿಯವರು:–** ಮಾನ್ಯ ಎಸ್.ರವಿಯವರೇ, ಆಗುವುದಿಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಈಗ ಕಲ್ಲುಗಣಿಯಲ್ಲೂ ಕೂಡ ಮರಳು use ಆಗುತ್ತಿದೆ. ಮುಖ್ಯವಾಗಿ ಮರಳು ಗಣಿಗೆ ಈಗ M–sand ಕೂಡ ಬರುತ್ತಿದೆ. ಈ M–sand ವ್ಯವಸ್ಥೆ ಕೂಡ ಆಗುತ್ತಿದೆ. M–sand ಬೆಲೆ ಬಹಳ ಕಡಿಮೆ ಇದೆ. Per cubic meter M–sand ಸುಮಾರು ರೂ.50 ರಿಂದ ರೂ.60 ಗಳು ಇದೆ. ನನ್ನ ಅಂದಾಜು ಪ್ರಕಾರ ಸಾಕಷ್ಟು ಜನ ನಗರ ಪ್ರದೇಶಗಳಲ್ಲಿ M–sand ನ್ನು ಉಪಯೋಗಿಸುತ್ತಿದ್ದಾರೆ. ಅದರಲ್ಲೂ ಮುಖ್ಯವಾಗಿ ಮಾನ್ಯ ಸದಸ್ಯರಾದ ಶ್ರೀ ಕೆ. ಅಬ್ದುಲ್ ಜಬ್ಬಾರ್‌ರವರು ಕೇಳಿದಂತೆ ಹಳ್ಳಿಗಳಲ್ಲಿ private land ನಲ್ಲಿ ಪಟ್ಟಾ ಜಮೀನಿನಲ್ಲಿ ಮರಳು ತೋಡುವುದಕ್ಕೂ ಕೂಡ ಪರ್ಮಿಷನ್ ತೆಗೆದುಕೊಂಡೇ ಮರಳು ಗಣಿಗಾರಿಕೆಯನ್ನು ಮಾಡುತ್ತಿದ್ದಾರೆ. ಈ ವಿಚಾರದ ಬಗ್ಗೆ ಹೇಳುವುದಾದರೆ ಆ ಭಾಗದಲ್ಲಿ ಮರಳು ಉಪಯೋಗ ಆಗುತ್ತಿದೆ. ಆ ನಿಟ್ಟಿನಲ್ಲಿ M–sand ಈಗ ಸರ್ಕಾರಕ್ಕೆ ಸಾಕಷ್ಟು revenue ಕೂಡ

ಬರುತ್ತಿದೆ. ಇದರ ಜೊತೆಗೆ ನಮ್ಮದು natural resources ಏನಿದೆಯೋ ಅದನ್ನೂ ಕೂಡ ತಡೆಗಟ್ಟಲು ಇದು ಒಂದು ಒಳ್ಳೆಯ ಕಾರಣ ಎಂದರೆ ತಪ್ಪಾಗಲಾರದು.

**ಪ್ರಶ್ನೆ ಸಂಖ್ಯೆ.೮೩೬**

**(ಉತ್ತರ ಲಗತ್ತಿಸಿದೆ)**

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ರಾಜ್ಯದಲ್ಲಿ ಖಾಸಗಿ ಸಹಭಾಗಿತ್ವದಿಂದ ನಿರ್ಮಿಸುತ್ತಿರುವ ಬಡಾವಣೆಗಳ ಸಂಖ್ಯೆ ಎಷ್ಟಿದೆ ಅದನ್ನು ಜಿಲ್ಲಾವಾರು ಮಾಹಿತಿ ಕೊಡಬೇಕೆಂದು ಕೇಳಿದ್ದೆನು. ಮಾನ್ಯ ಸಚಿವರು ನಮ್ಮ ರಾಜ್ಯದಲ್ಲಿರುವಂತಹ ಸುಮಾರು ೩೦ ನಗರಾಭಿವೃದ್ಧಿ ಪ್ರಾಧಿಕಾರಗಳ ಪೈಕಿ, ಕೇವಲ ನಾಲ್ಕೇ ನಾಲ್ಕು ಪ್ರಾಧಿಕಾರಗಳಲ್ಲಿ ಏನಾದರೂ ಈ ರೀತಿಯಾದಂತಹ ಒಂದು ಚಟುವಟಿಕೆ ಇದೆ. ಉಳಿದವುಗಳಿಗೆ ಶೂನ್ಯ ಎಂದು ಉತ್ತರ ಕೊಟ್ಟಿದ್ದಾರೆ. ಅದೇ ರೀತಿ ನಾನು ಕಳೆದ ಒಂದು ವರ್ಷದಿಂದ ಎಷ್ಟು ನಿವೇಶನಗಳನ್ನು ಪರಿವರ್ತನೆ ಮಾಡಲಾಗಿದೆ. ಬಾಕಿ ಎಷ್ಟು ಅರ್ಜಿಗಳಿವೆ ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ನಾನು ಉದಾಹರಣೆಗೆ ಹೇಳುವುದಾದರೆ, ಹಾಸನ ಜಿಲ್ಲೆ ಒಂದರಲ್ಲೇ 27,956 ಅರ್ಜಿಗಳು ಬಾಕಿ ಇವೆ ಎಂದು ಉತ್ತರ ಕೊಟ್ಟಿದ್ದಾರೆ. ನಾನು ಮಾನ್ಯ ಸಚಿವರಿಗೆ ಕೇಳುವುದೇನೆಂದರೆ ಇವತ್ತಿನ ದಿವಸ ನಗರಾಭಿವೃದ್ಧಿ ಪ್ರಾಧಿಕಾರಗಳು ಕೇವಲ ಖಾಸಗಿ ಬಡಾವಣೆಗಳನ್ನು ಮಾಡುವುದಕ್ಕೆ ಬೇಕಾಗಿರತಕ್ಕಂಥ ಭೂ ಪರಿವರ್ತನೆ ಮಾಡುವಂತಹ ಏಜೆನ್ಸಿ ಕೇಂದ್ರಗಳಾಗಿವೆ. ಸರ್ಕಾರ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಬಡವರಿಗೆ ಅನುಕೂಲ ಮಾಡಬೇಕು ಎನ್ನತಕ್ಕಂಥ ಉದ್ದೇಶದಿಂದ ಜಾರಿಗೆ ತಂದಿತ್ತು. ಆ ಎಲ್ಲಾ ಕೆಲಸಗಳನ್ನು ಬದಿಗಿಟ್ಟು land conversion ಗೆ ಬೇಕಾಗಿರತಕ್ಕಂಥ application ಗಳನ್ನು ಸಂಬಂಧಪಟ್ಟಂತಹ ಇಲಾಖೆಗೆ ಅದನ್ನು forward ಮಾಡುವುದು, conversion ಮಾಡುವುದು ಆಗುತ್ತಿದೆ. ಈ ಕೆಲಸವನ್ನು ಬಿಟ್ಟರೆ ಬಹುಶಃ ಇನ್ನೇನೂ ಮಾಡುತ್ತಿಲ್ಲ. ಮತ್ತೆ ೩೦ ಜಿಲ್ಲೆಗಳ ಪೈಕಿ, ಬರೀ ನಾಲ್ಕು ಜಿಲ್ಲೆಗಳಲ್ಲಿ ಮಾತ್ರ ಮಾಡುತ್ತೇವೆ ಎಂದರೆ ನಗರಾಭಿವೃದ್ಧಿ ಪ್ರಾಧಿಕಾರಗಳು ಏನು ಬದುಕಿದೆಯೋ ಅಥವಾ ಸತ್ತುಹೋಗಿದ್ದಾವೋ ಎಂದು ನಾನು ಮಾನ್ಯ ಸಚಿವರಿಗೆ ಕೇಳುವುದಕ್ಕೆ ಇಚ್ಛೆಪಡುತ್ತೇನೆ.

(ಮುಂದು)

(622)23.7.2024/12.00/ಎಂ.ಎಂ-ಎಂ.ಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಎಸ್. ಸುರೇಶ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯಾದ್ಯಂತ 2009ರಲ್ಲಿ ಭೂ ಮಾಲೀಕರಿಗೆ 50:50 ರ ಅನುಪಾತದಲ್ಲಿ ನಿವೇಶನಗಳನ್ನು ಪರಿಹಾರವಾಗಿ ಕೊಟ್ಟು ಲೇಔಟ್ ಮಾಡಬೇಕೆಂದು ಇದನ್ನು ಪ್ರಾರಂಭ ಮಾಡಿದೆವು. 2015ರಿಂದ ಈ ಕಾರ್ಯಕ್ರಮ ಪ್ರಾರಂಭವಾಯಿತು. ಈಗ ರಾಜ್ಯದಲ್ಲಿ ಅವರು ಹೇಳಿರುವ ಪ್ರಕಾರ ಬೆಳಗಾವಿ, ಬಳ್ಳಾರಿ, ಚಾಮರಾಜನಗರ, ಚಿಕ್ಕಮಗಳೂರು ಮತ್ತು ಹಾಸನ ಈ ಐದು ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳುವುದರಲ್ಲಿ ಸತ್ಯವಿದೆ. ನಾನು ಸಹ ಇದನ್ನು ಒಪ್ಪಿಕೊಳ್ಳುತ್ತೇನೆ. ಸುಮಾರು 31 ಪ್ರಾಧಿಕಾರಗಳಲ್ಲಿ ಬರೀ ಖಾಸಗಿಯವರಿಗೆ ಲೇಔಟ್‌ಗೆ ಮಂಜೂರಾತಿ ಕೊಟ್ಟು, ಹಣವನ್ನು ಸಂಗ್ರಹ ಮಾಡಿಕೊಂಡು, ಸರ್ಕಾರಕ್ಕೆ ಅಲ್ಪ ಸ್ವಲ್ಪ ಕಟ್ಟಿಕೊಂಡು, ಸಂಬಳ ಕೊಟ್ಟುಕೊಂಡು ನಿರ್ವಹಣೆ ಮಾಡಿಕೊಂಡು ಹೋಗುತ್ತಿದ್ದಾರೆ. ಅದಕ್ಕೋಸ್ಕರವೇ ಹೊಸ ಹುದ್ದೆಯೊಂದನ್ನು ಕ್ರಿಯೇಟ್ ಮಾಡಿದ್ದೇವೆ. ಐ.ಎ.ಎಸ್. ಅಧಿಕಾರಿಯೊಬ್ಬರನ್ನು ಕರ್ನಾಟಕ ರಾಜ್ಯ ನಗರಾಭಿವೃದ್ಧಿ ಪ್ರಾಧಿಕಾರಗಳ Commissioner ನ್ನು ನೇಮಿಸಿ Commissionerate ಮಾಡಿದ್ದೇವೆ. ಅದನ್ನು ಮಾಡಿ ಈಗ ಮೂರು ತಿಂಗಳಾಗಿದೆ. ಅವರ ಮುಖಾಂತರ ಇಡೀ ರಾಜ್ಯದಲ್ಲಿ ಯಾವ ಯಾವ ನಗರಗಳಲ್ಲಿ ಬೇಡಿಕೆ ಇದೆ ಆ ಎಲ್ಲಾ ಪ್ರಾಧಿಕಾರಗಳ ಮುಖಾಂತರ ಸಾರ್ವಜನಿಕರಿಗೆ 50:50ರ ಅನುಪಾತದಲ್ಲಿ ಜಮೀನುಗಳನ್ನು ತೆಗೆದುಕೊಂಡು ಕೊಡುವುದೇ ಅಥವಾ ಸರ್ಕಾರವೇ ವಶಪಡಿಸಿಕೊಂಡು ಕೊಡುವುದೇ ಅಥವಾ ಸರ್ಕಾರವೇ ಪ್ರಾಧಿಕಾರದಿಂದ ಹಣ ಕೊಟ್ಟು ಜಮೀನನ್ನು ತೆಗೆದುಕೊಂಡು ಲೇಔಟ್‌ಗಳನ್ನು ಮಾಡಿ ಯಾರಿಗೆ ನಿವೇಶನಗಳು ಇರುವುದಿಲ್ಲ, ಯಾರು ಬಡವರಿರುತ್ತಾರೆ, ಮಧ್ಯಮ ವರ್ಗದವರಿರುತ್ತಾರೆ ಅವರಿಗೆ ಸೈಟುಗಳನ್ನು ಹಂಚುವ ಕೆಲಸ ಮಾಡುತ್ತೇವೆ.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೇ, ಈ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಾವುಗಳು ಶಾಸಕರು ಕೂಡ ಸದಸ್ಯರಾಗಿರುತ್ತೇವೆ. ನಾವು ಸಭೆಗಳಿಗೆ ಹೋದಂತಹ ಸಂದರ್ಭದಲ್ಲಿ ಅಲ್ಲಿ ಬಹುತೇಕ ಯಾವಾಗಲಾದರೂ ಸರ್ಕಾರದ ಪ್ರಾಯೋಜಿತ ಯೋಜನೆಗಳನ್ನು ಏನಾದರೂ

ತೆಗೆದುಕೊಂಡಿದ್ದೀರಾ ಎಂದರೆ, ಯಾವುದು ಕೂಡ ಬಂದಿಲ್ಲ ಎನ್ನುವ straight forward ಆಗಿ one line answer ನ್ನು ready ಇಟ್ಟುಕೊಂಡಿರುತ್ತಾರೆ. ಆದರೆ ಒಂದೊಂದು ಮೀಟಿಂಗ್‌ನಲ್ಲಿ 70-80 ಲೇಔಟ್‌ಗಳಿಗೆ ಬೇಕಾಗಿರುವಂತಹ ಪ್ಲ್ಯಾನ್‌ಗಳನ್ನು ಸಲ್ಲಿಸುತ್ತಾರೆ. ಹಾಗಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಇವತ್ತು ಅನೇಕ ನಗರಗಳಲ್ಲಿ ವಸತಿ ರಹಿತರು ಲಕ್ಷಾಂತರ ಜನರು ಇರುವ ಕಾರಣಕ್ಕೋಸ್ಕರ ಏನು ಕಮಿಷನರ್ ಎಂಬ ಅಧಿಕಾರಿಯನ್ನು ನೇಮಕ ಮಾಡುತ್ತೇವೆಂದು ಹೇಳಿ ಅದರ ಜೊತೆಗೇ ಸಂಗ್ರಹವಾಗಿರುವ ಕೋಟ್ಯಂತರ ರೂಪಾಯಿಗಳ ಹಣ ಎಲ್ಲಾ ಪ್ರಾಧಿಕಾರಗಳಲ್ಲಿ ಹಾಗೆಯೇ ಇದೆ. ಅದನ್ನು ಯಾವ ರೀತಿ ಬಳಕೆ ಮಾಡಬೇಕು, ಎಷ್ಟು ದಿನಗಳಲ್ಲಿ ಅದನ್ನು ಖರ್ಚು ಮಾಡಬೇಕು, ಅದನ್ನು ಯಾವ್ಯಾವುದಕ್ಕೋಸ್ಕರ ಬಳಕೆ ಮಾಡಬೇಕೆಂಬ ಕಾರ್ಯಸೂಚಿಯನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಮತ್ತು ಮಂತ್ರಿಗಳಿಗೆ ವಿನಂತಿ ಮಾಡುತ್ತೇನೆ.

**ಶ್ರೀ ಬಿ.ಎಸ್. ಸುರೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವ ಪ್ರಕಾರ ಮಾಡುವುದಕ್ಕೆ ನಾವು ತಯಾರಿದ್ದೇವೆ. ಆದರೆ 50:50ರ ಅನುಪಾತ ಕಡಿಮೆ ಎಂದು ಯಾವ ರೈತರೂ ಜಮೀನುಗಳನ್ನು ಕೊಡುವುದಕ್ಕೆ ಮುಂದೆ ಬರುವುದಿಲ್ಲ. ತಾವೇ ಸಾವಿರ ಎಕರೆ ಜಮೀನನ್ನು ಕೊಡಿಸಿದರೆ ನಾವು ಸಾವಿರ ಎಕರೆ ಮಾಡುವುದಕ್ಕೆ ready ಇದ್ದೇವೆ. ಎಲ್ಲೆಲ್ಲಿ ಉತ್ತೇಜನ ಕೊಡಬೇಕೋ ಅದಕ್ಕೆ ನಾವು ready ಇದ್ದೇವೆ, ನಮ್ಮ ಹತ್ತಿರ ಹಣ ಸಹ ಇದೆ. ಮುಂದಿನ ದಿವಸಗಳಲ್ಲಿ ಎಲ್ಲೆಲ್ಲಿ ಲೇ ಔಟ್‌ಗಳ ಅವಶ್ಯಕತೆ ಇದೆ ಅಲ್ಲಿ ಮಾಡಿಕೊಡುತ್ತೇವೆ.

**ಸಭಾಪತಿಯವರು:-** ಈಗ ತಡೆಹಿಡಿಯಲಾದ ಪ್ರಶ್ನೆ. ಮಾನ್ಯ ಪ್ರಕಾಶ್ ಬಾಬಣ್ಣ ಹುಕ್ಕೇರಿಯವರ ಪ್ರಶ್ನೆ.

**ತಡೆಹಿಡಿಯಲಾದ ಪ್ರಶ್ನೆ ಸಂಖ್ಯೆ: 149**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈಗಾಗಲೇ 'ವಂದೇ ಭಾರತ್' ಟ್ರೈನ್ ಬೆಂಗಳೂರಿನಿಂದ ಧಾರವಾಡದವರೆಗೆ ಓಡುತ್ತಿದೆ. ಬೆಳಗಾವಿ ಜಿಲ್ಲೆಯ ಎಲ್ಲಾ ಶಾಸಕರು ಸೇರಿಕೊಂಡು ಸನ್ಮಾನ್ಯ ಮುಖ್ಯಮಂತ್ರಿಗಳ ಕಡೆಯಿಂದ ಕೇಂದ್ರ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದಿದ್ದೇವೆ. ರೈಲ್ವೆ ಚೇರ್ಮನ್‌ರವರು ಅದಕ್ಕೆ ಮಂಜೂರಾತಿ ನೀಡಿ ಅದನ್ನು ಪ್ರಾರಂಭ ಮಾಡಬೇಕೆಂದು ಒಂದು ಆದೇಶವನ್ನು ಹೊರಡಿಸಿದರು. ಅದು trial ಆಯಿತು. ಒಂದು ದಿವಸ trial ಮಾಡಿದ ನಂತರ ಮತ್ತೆ ಆ ರೈಲನ್ನು ಬಂದ್ ಮಾಡಿದರು. ಇದರಲ್ಲಿ ತಾವು ಕಾರಣವನ್ನು ಏನು ಕೊಟ್ಟಿದ್ದೀರೆಂದರೆ, ಅಲ್ಲಿ ಮೂಲಭೂತ ಸೌಕರ್ಯ ಇಲ್ಲವೆಂದು ಕಾರಣ ಕೊಟ್ಟಿದ್ದೀರಿ. ನಾವು ಎಕ್ಸಿಕ್ಯೂಟಿವ್ ಇಂಜಿನಿಯರ್ ಕಡೆಯಿಂದ ಹುಬ್ಬಳ್ಳಿಯ General Manager ಗೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಿದ್ದೇವೆ, ತಾವು ರೈಲನ್ನು ಪ್ರಾರಂಭ ಮಾಡಬೇಕೆಂದು ಒಂದು ಪತ್ರವನ್ನು ಬರೆದಿದ್ದೇವೆ. ನಾನು ಮಾನ್ಯ ಸಚಿವರಿಗೆ ಇಷ್ಟೇ ಕೇಳುತ್ತೇನೆ, ಹುಬ್ಬಳ್ಳಿಯಲ್ಲಿ ಆ ಛೇರ್ಮನ್‌ರವರು ದೊಡ್ಡವರೋ ಅಥವಾ ಇಲಾಖೆಯಲ್ಲಿ General Manager ದೊಡ್ಡವರೋ? ಅವರು ಆದೇಶ ಮಾಡಿದರೆ ಪಾಲಿಸುವ ಕರ್ತವ್ಯ General Manager ರವರದ್ದು. ಆದರೆ ಇಲ್ಲದ ಯಾವುದೋ ರಾಜಕೀಯ ಉದ್ದೇಶದಿಂದ ನಾವು ಎಲ್ಲಾ ಎಂ.ಎಲ್.ಎ.ಗಳು ಸೇರಿಕೊಂಡು ಆ ರೈಲಿನ ಅವಶ್ಯಕತೆ ಇದೆಯೆಂದು ಕೇಳಿದ್ದೇವೆ. ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಆ ರೈಲನ್ನು ಕೂಡಲೇ ಪ್ರಾರಂಭ ಮಾಡಬೇಕು, ಇಲ್ಲದಿದ್ದರೆ ರೈಲ್ವೆ ಇಲಾಖೆಗೆ ಏನು ಹಣವನ್ನು ಬಿಡುಗಡೆ ಮಾಡುತ್ತೀರೋ ಅದನ್ನು ನಿಲ್ಲಿಸಬೇಕು.

**ಶ್ರೀ ಎಂ. ನಾಗರಾಜು:–** ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ. ಬೆಳಗಾವಿ ಜಿಲ್ಲೆಗೆ ಸಂಬಂಧಿಸಿದಂತೆ ಮಂತ್ರಿಗಳಿಗೆ ಮನವಿ ಮಾಡುವುದೇನೆಂದರೆ;

**ಸಭಾಪತಿಯವರು:–** ಮಾನ್ಯ ಸಚಿವರೇ, ಉತ್ತರವನ್ನು ಹೇಳಿ.

**Sri M.NAGARAJU:–** I am requesting. It is my humble request.

**ಶ್ರೀ ಎಂ.ಬಿ. ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದಂತಹ ಮಾನ್ಯ ಪ್ರಕಾಶ್ ಹುಕ್ಕೇರಿಯವರು ರೈಲ್ವೆ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಯನ್ನು ಕೇಳಿದ್ದಾರೆ. ನಾವು ಅವರಿಂದ ಉತ್ತರವನ್ನು ತರಿಸಿ ಇವರಿಗೆ ಒದಗಿಸುತ್ತಿದ್ದೇವೆ. ಇದು ರೈಲ್ವೆ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಯಾಗಿದೆ. ಅವರಿಂದ ಮಾಹಿತಿಯನ್ನು ತೆಗೆದುಕೊಂಡು ಉತ್ತರವನ್ನು ಕೊಟ್ಟಿದ್ದೇನೆ. ಇವರು ಹುಬ್ಬಳ್ಳಿ–ಧಾರವಾಡದಿಂದ ಬೆಂಗಳೂರಿಗೆ ಬರುವ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಸೇವೆಯನ್ನು ಬೆಳಗಾವಿಯವರೆಗೆ ವಿಸ್ತರಿಸಲಾಗಿದೆಯೇ ಎಂದು ಪ್ರಶ್ನೆ ಕೇಳಿದ್ದಾರೆ. ಈಗ ಅವರು ಉತ್ತರವನ್ನು ಏನು ಕೊಟ್ಟಿದ್ದಾರೆ ಎಂದರೆ, ಬೆಳಗಾವಿಯಲ್ಲಿರುವ ಮೂಲಭೂತ ಸೌಕರ್ಯಗಳು ಸಮರ್ಪಕವಾಗಿಲ್ಲ ಎಂದು ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಹಿಂದೆ ಅದು ರೈಲ್ವೆ ಇಲಾಖೆಯಿಂದ ಅನುಮೋದನೆಯಾಗಿತ್ತು ಎಂದು ಹೇಳುತ್ತಾರೆ. ದಿನಾಂಕ 14.11.2023ರಂದು ಒಂದು ಅಧಿಸೂಚನೆಯನ್ನು ಹೊರಡಿಸಿದ್ದಾರೆ. ಅದರಲ್ಲಿ ಇದನ್ನು trial run ಮಾಡುವುದಕ್ಕೆ ಹೇಳಿದ್ದಾರೆ. ಅವರು ಎರಡು ಕಡೆ trial run ಮಾಡಿದ್ದಾರೆ. Trial run ಮಾಡಿ feasibility ನೋಡಿಕೊಂಡು it is not feasible ಎಂದು ಮಾಡಿದ್ದಾರೆ. ಇದಾಗಿಯೂ ಕೂಡ ಮಾನ್ಯ ಸದಸ್ಯರು ಹೇಳಿದ ಹಾಗೆ ಇದು ಬಹಳ ಪ್ರಮುಖವಾಗಿದೆ. ಇದು ಹುಬ್ಬಳ್ಳಿಯಿಂದ ಬೆಳಗಾವಿಯವರೆಗೆ ಹಾಗೂ ವಿಜಯಪುರ ಮತ್ತು ಮಂಗಳೂರುವರೆಗೆ extension ಆಗುವುದು. ವಂದೇ ಭಾರತ್ ರೈಲು ಈಗ ಗುಲ್ಬರ್ಗ ಜಿಲ್ಲೆಗೂ ಅನುಮೋದನೆಯಾಗಿದೆ. ಇಷ್ಟು ಭರವಸೆಯನ್ನು ನಾನು ಹಿರಿಯ ಸದಸ್ಯರಿಗೆ ಕೊಡುತ್ತೇನೆ. ನಾನು ನಮ್ಮ ರಾಜ್ಯದವರೇ ಆದಂತಹ ರೈಲ್ವೆ ಸಚಿವರಾದ ಶ್ರೀ ಸೋಮಣ್ಣನವರ ಜೊತೆ ಅನೇಕ ವಿಚಾರಗಳ ಬಗ್ಗೆ ಮಾತನಾಡಿದ್ದೇನೆ, ಅವರನ್ನು ಭೇಟಿಯಾಗುತ್ತೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅಲ್ಲಿ ಮೂಲಭೂತ ಸೌಕರ್ಯಗಳನ್ನು ಸರ್ಕಾರ ಒದಗಿಸಿದೆ. ಇದನ್ನು ಬೆಳಗಾವಿಯವರೆಗೆ ವಿಸ್ತರಿಸಬೇಕೆಂದು ಅವರಿಗೆ ನಾನು ಒತ್ತಾಯ ಮಾಡಿ ಅದನ್ನು ಸಂಪೂರ್ಣವಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಬೆಳಗಾವಿ ಅಲ್ಲದೇ, ವಿಜಯಪುರ,

ಮಂಗಳೂರು ಈ ಮೂರಕ್ಕು ಕೂಡ ವಂದೇ ಭಾರತ್ ರೈಲು ವಿಸ್ತರಣೆ ಮಾಡುವುದಕ್ಕೆ ಶಕ್ತಿ ಮೀರಿ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತೇವೆ, ಅವರಿಗೆ convince ಮಾಡುವ ಕೆಲಸ ಮಾಡುತ್ತೇವೆ. ಅವಶ್ಯಕತೆ ಬಿದ್ದರೆ ಅವರನ್ನು ಕೂಡ ಆ ಸಭೆಗೆ ಕರೆಸಿಕೊಂಡು ಮೀಟಿಂಗ್ ಮಾಡಿ ಇದನ್ನು ಬಗೆಹರಿಸುವ ಪ್ರಯತ್ನವನ್ನು ಮಾಡುತ್ತೇವೆ.

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ:–** ಮಾನ್ಯ ಸಭಾಪತಿಯವರೇ, Railway Department Executive Engineer ರವರು ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಿದ್ದೇವೆ, ಅದನ್ನು ಪ್ರಾರಂಭ ಮಾಡಬೇಕೆಂದು General Manager ರವರಿಗೆ ಪತ್ರ ಕೊಟ್ಟಿದ್ದಾರೆ. ಅದರ ಪ್ರತಿ ಬೇಕಾದರೆ ನಿಮಗೆ ಕಳುಹಿಸಿಕೊಡುತ್ತೇನೆ. ಇಷ್ಟರ ಮೇಲೆಯೂ ಮತ್ತೆ ಮೂಲಭೂತ ಸೌಕರ್ಯ ಎಂದರೆ ಏನು?

**ಶ್ರೀ ಎಂ.ಬಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರು ಕೊಟ್ಟಿರುವ ಮಾಹಿತಿಯನ್ನು ಇವರಿಗೆ ಒದಗಿಸಿದ್ದೇವೆ. ಇದೆಲ್ಲಾ ಮಾಹಿತಿಯನ್ನು ಕೊಟ್ಟು ಅವರನ್ನು personally meet ಮಾಡಿ ಸಮಸ್ಯೆಯನ್ನು ಬಗೆಹರಿಸುವಂತಹ ಕೆಲಸ ಮಾಡುತ್ತೇವೆ.

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ:–** ಮಾನ್ಯ ಸಭಾಪತಿಯವರೇ, ಅಲ್ಲಿಯವರೆಗೆ ನೀವು ರೈಲ್ವೆ ಇಲಾಖೆಗೆ ಏನು ಹಣವನ್ನು ಬಿಡುಗಡೆ ಮಾಡುತ್ತೀರಿ ಅದನ್ನು ನಿಲ್ಲಿಸಿ. ಇದನ್ನು ಪ್ರಾರಂಭ ಮಾಡಿದ ಮೇಲೆ ರೈಲ್ವೆ ಇಲಾಖೆಗೆ ಹಣವನ್ನು ಬಿಡುಗಡೆ ಮಾಡಿ. ಇದನ್ನು ಸ್ಪಷ್ಟವಾಗಿ ಹೇಳಬೇಕು. ಏಕೆಂದರೆ, ಇದು ಎಲ್ಲಾ 18 ಶಾಸಕರುಗಳ ಬೇಡಿಕೆಯಾಗಿದೆ.

**ಶ್ರೀ ಎಂ.ಬಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರನ್ನು ಕರೆದುಕೊಂಡು ಹೋಗಿ ಶಕ್ತಿ ಮೀರಿ ಈ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನ ಮಾಡುತ್ತೇವೆ.

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ:–** ಅಲ್ಲಿಯವರೆಗೆ ಹಣವನ್ನು ಬಿಡುಗಡೆ ಮಾಡಬೇಡಿ. ತಡೆಹಿಡಿಯಿರಿ. ಅವರಿಗೆ ಏನಾದರೂ ಮಾಡಬೇಕಲ್ಲವೇ?

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಹಾಗೆಲ್ಲಾ ಮಾಡುವುದಕ್ಕೆ ಬರುವುದಿಲ್ಲ. ನೀವು ಈ ಪ್ರಶ್ನೆಯನ್ನು ಕೇಳಲು ವಿಧಾನ ಪರಿಷತ್ತಿಗೆ ಬರದೇ ಲೋಕಸಭೆಗೆ ಹೋಗಬೇಕಾಗಿತ್ತು.

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ:-** ಮಾನ್ಯ ಸಚಿವರೇ, ನಾನು ಒಂದು ಮಾತನ್ನು ಹೇಳುತ್ತೇನೆ. ವಂದೇ ಭಾರತ್ ರೈಲು ಪ್ರಾರಂಭವಾಯಿತೆಂದು ಜನರು ರೈಲ್ವೆ ಸ್ಟೇಷನ್‌ಗೆ ಬಂದು ಆನಂದ ವ್ಯಕ್ತಪಡಿಸಿದರು. ಮರು ದಿನವೇ ಅದು ಬಂದ್ ಆಯಿತು. ಲ

(ಮುಂದು)

(623) 23-07-2024 12-10 KH/AK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಮುಂದು):-**

ನಮ್ಮ ಪರಿಸ್ಥಿತಿ ಏನಾಗಬೇಕು? ನಮ್ಮ ಶಾಸಕರ ಪರಿಸ್ಥಿತಿ ಏನಾಗಬೇಕು?

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರನ್ನು ಕರೆದುಕೊಂಡು ಹೋಗಿ.

**ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಆಯಿತು.

**ಸಭಾಪತಿಯವರು:-** ಮಾನ್ಯ ಪ್ರಕಾಶ್ ಬಾಬಣ್ಣ ಹುಕ್ಕೇರಿಯವರೇ, ತಮ್ಮನ್ನು ಕರೆದುಕೊಂಡು ಹೋಗಿ ಮೀಟಿಂಗ್ ಮಾಡುತ್ತಾರೆ.

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅಪ್ರೂವ್ ಆಗಿರುವುದಕ್ಕೆ ಮತ್ತೇನು ಮೀಟಿಂಗ್ ಮಾಡುವುದು? ಯಾವಾಗ ಪ್ರಾರಂಭ ಮಾಡುತ್ತಾರೆ ಎಂದು ಹೇಳಬೇಕಲ್ಲವೇ?

**ಸಭಾಪತಿಯವರು:-** ಮಾನ್ಯ ಪ್ರಕಾಶ್ ಬಾಬಣ್ಣ ಹುಕ್ಕೇರಿಯವರೇ, ಆಯಿತು.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ರೈಲ್ವೆ ಛೇರ್ಮನ್‌ರವರಿಂದ ಅನುಮತಿ ಕೊಡಲಾಗಿದೆ. ಅನುಮತಿಗೆ ಅಧಿಸೂಚನೆ ಹೊರಡಿಸಿದ್ದಾರೆ. ಅಧಿಸೂಚನೆಯನ್ನು ಹೊರಡಿಸಿ, Trial Run ಮಾಡಿದ್ದಾರೆ. Trial Run ಮಾಡಿದ ಮೇಲೆ 'not feasible' ಎಂದು ಮಾಡಿದ್ದಾರೆ. ಮೂಲಭೂತ ಸೌಕರ್ಯಗಳೆಲ್ಲವೂ ಇವೆ ಎಂದು ಹೇಳಿದ್ದಾರೆ.

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ:–** ಮಾನ್ಯ ಸಭಾಪತಿಯವರೇ, 'not feasible' ಎಲ್ಲಿ ಇದೆ ಎನ್ನುವುದನ್ನು ನನಗೆ ತೋರಿಸಿ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇಂಜಿನಿಯರ್ ಕಡೆಯಿಂದ ಎಲ್ಲಾ ಮಾಹಿತಿಯನ್ನು ತೆಗೆದುಕೊಂಡು ಸಭೆ ಮಾಡಿ ಬಗೆಹರಿಸುತ್ತೇವೆ.

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ:–** ಮಾನ್ಯ ಸಭಾಪತಿಯವರೇ, ಅಲ್ಲಿ timing ಕೂಡ ಹಾಕಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಆಯಿತು.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಪಾಸಿಟಿವ್ ಆಗಿದ್ದೇವೆ. ಎಲ್ಲಾ ರೀತಿಯ ಒತ್ತಾಯಗಳನ್ನು, ಸಹಕಾರಗಳನ್ನು ತಮಗೆ ಮಾಡುತ್ತೇವೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಆಯಿತು.

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ:–** ಮಾನ್ಯ ಸಭಾಪತಿಯವರೇ, ಇದನ್ನು ಎಷ್ಟು ದಿವಸದೊಳಗೆ ಚಾಲು ಮಾಡುತ್ತೀರಿ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸಚಿವರೇ, ಕುಳಿತುಕೊಳ್ಳಿ.

**ಪ್ರಶ್ನೆಸಂಖ್ಯೆ: ೩೩೮**

**ಸಭಾಪತಿಯವರು:–** ಮಾನ್ಯ ಭಾರತಿಶೆಟ್ಟಿಯವರೇ, ಮಾನ್ಯ ಸಚಿವರು ತಮ್ಮ ತಡೆಹಿಡಿಯಲಾದ ಪ್ರಶ್ನೆಯನ್ನು ಗುರುವಾರ ತೆಗೆದುಕೊಳ್ಳುತ್ತಾರೆ.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ಗುರುವಾರ ಉತ್ತರವನ್ನು ಮಾನ್ಯ ಸಚಿವರಿಂದ ಕೊಡಿಸಿ.

**ಸಭಾಪತಿಯವರು:–** ಮಾನ್ಯ ಭಾರತಿಶೆಟ್ಟಿಯವರೇ, ೧೦೦%.

**ಪ್ರಶ್ನೆ ಸಂಖ್ಯೆ: ೩೬೮**

**(ಮಾನ್ಯ ಸದಸ್ಯರು ಗೈರುಹಾಜರಾಗಿದ್ದರು)**

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ದಿನಾಂಕ: 23ನೇ ಜುಲೈ 2024ರ ಸಮೂಹ-2ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 98 ಪ್ರಶ್ನೆಗಳ ಪೈಕಿ 36 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:–** ಈಗ ಶೂನ್ಯವೇಳೆ . . .

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನಾನು ಈಗ ಮಾತನಾಡಲೇ?

**ಸಭಾಪತಿಯವರು:–** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ಶೂನ್ಯವೇಳೆ ಪ್ರಶ್ನೆಗಳು ಮುಗಿಯಲಿ. ಮಾನ್ಯ ಡಾ॥ ಧನಂಜಯ ಸರ್ಜಿ . . .

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮುಂದಿನ ಶೂನ್ಯವೇಳೆ ಪ್ರಶ್ನೆಯನ್ನು ತೆಗೆದುಕೊಳ್ಳಿ.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಡಾ॥ ಧನಂಜಯ ಸರ್ಜಿಯವರು ಸದನದಲ್ಲಿ ಇಲ್ಲವೇ?

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಲ್ಲ.

**ಸಭಾಪತಿಯವರು:–** ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರು ಮುಂದಿನ ಶೂನ್ಯವೇಳೆ ಪ್ರಶ್ನೆಯನ್ನು ಕೇಳಬೇಕು.

**೦2. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ವಿಷಯ:- ಕೆಟಿಪಿಪಿ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿ, ಕರ್ನಾಟಕ ರಾಜ್ಯ ಹ್ಯಾಬಿಟೇಟ್ ಕೇಂದ್ರ ರೂ.4೦೦ ಕೋಟಿಗೂ ಅಧಿಕ ಮೊತ್ತದ ಕಾಮಗಾರಿಗಳನ್ನು ಕೈಗೊಂಡಿರುವ ಬಗ್ಗೆ.**

***

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿ, ಕರ್ನಾಟಕ ರಾಜ್ಯ ಹ್ಯಾಬಿಟ್ಯಾಟ್ ಕೇಂದ್ರ ರೂ.4೦೦ ಕೋಟಿಗೂ ಅಧಿಕ ಮೊತ್ತದ ಕಾಮಗಾರಿಗಳನ್ನು ಕೈಗೊಂಡಿದೆ. ಕರ್ನಾಟಕ ರಾಜ್ಯ ರಾಜೀವ್ ಗಾಂಧಿ ವಸತಿ ನಿಗಮದ ಅಧೀನದಲ್ಲಿರುವ ಹ್ಯಾಬಿಟ್ಯಾಟ್ ಕೇಂದ್ರವು ನಿಗಮದ ಕೆಲಸಗಳೂ ಸೇರಿ ವಿವಿಧ ಇಲಾಖೆಗಳ ಕೋರಿಕೆಯ ಮೇರೆಗೆ ಮನೆ, ಕಟ್ಟಡಗಳು, ರಸ್ತೆ ಸೇರಿದಂತೆ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳುತ್ತದೆ. ಕೆಕೆಆರ್‌ಡಿಬಿ ಅನುದಾನ ಬಳಸಿಕೊಂಡು ಹ್ಯಾಬಿಟ್ಯಾಟ್ ಕೇಂದ್ರ ಶಾಲೆಗಳಿಗೆ ಪೂರೈಸಿರುವ ಪ್ರತಿ ಶುದ್ಧ ಕುಡಿಯುವ ನೀರಿನ ಘಟಕದ ಬೆಲೆ ರೂ.3.43 ಲಕ್ಷ ಇದೆ. ಮಾರುಕಟ್ಟೆ ದರಕ್ಕೂ, ಖರೀದಿ ದರಕ್ಕೂ ಅಜಗಜಾಂತರವಿದೆ. ಸ್ಮಾರ್ಟ್ ತರಗತಿಗಳಿಗೆ ಅಗತ್ಯವಾದ ಸಾಮಗ್ರಿಗಳ ಪೂರೈಕೆ ಸೇರಿದಂತೆ ಎಲ್ಲದರಲ್ಲೂ ಅವ್ಯವಹಾರ ನಡೆದಿದೆ. ಕಲಂ 4(ಜಿ) ವಿನಾಯಿತಿ ದುರ್ಬಳಕೆ ಮಾಡಿಕೊಂಡು, ಟೆಂಡರ್ ಕರೆಯದೇ ನೇರವಾಗಿ ಸಾಮಗ್ರಿಗಳನ್ನು ಖರೀದಿ ಮಾಡುವುದು ಅವ್ಯವಹಾರಕ್ಕೆ ದಾರಿಯಾಗಿದೆ. ಸರ್ಕಾರ ಇದಕ್ಕೆ ಕಾರಣರಾದ ಹ್ಯಾಬಿಟ್ಯಾಟ್ ಕೇಂದ್ರದ ನಿರ್ದೇಶಕರು, ಯೋಜನಾ ನಿರ್ದೇಶಕರು ಹಾಗೂ ರಾಜೀವ್ ಗಾಂಧಿ ವಸತಿ ನಿಗಮದ ವ್ಯವಸ್ಥಾಪಕ ನಿರ್ದೇಶಕರ ವಿರುದ್ಧ ಕ್ರಮ ಕೈಗೊಳ್ಳಬೇಕು ಹಾಗೂ ತನಿಖೆಗೆ ಆದೇಶಿಸಬೇಕು. ಈ ಬಗ್ಗೆ ದಿನಾಂಕ:18-೦7-2೦24ರ 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನವನ್ನು ಲಗತ್ತಿಸಿದ್ದೇನೆ. ಈ ಸಾರ್ವಜನಿಕ ಮಹತ್ವದ ವಿಷಯವನ್ನು ಸದನದ ಮೂಲಕ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಕೃಷ್ಣಭೈರೆಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರು ಕೇಳಿದಂತಹ ಶೂನ್ಯವೇಳೆಯ ಪ್ರಶ್ನೆಗೆ ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರವನ್ನು ಪಡೆದು ಮಾನ್ಯ ಸದಸ್ಯರಿಗೆ ಒದಗಿಸಲಾಗುವುದು.

**ಆ) ವಿಷಯ:- ಸಹಕಾರ ಮಾರಾಟ ಮಹಾಮಂಡಳ ನಿಯಮಿತ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನಿವೃತ್ತ ಅಧಿಕಾರಿ ಕೆ.ಎಂ.ಆಶಾ ರವರನ್ನು ನೇಮಿಸಿರುವ ಕುರಿತು.**

***

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ದಿನಾಂಕ:19-07-2024ರ ಸಂಯುಕ್ತ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯನ್ನು ಉಲ್ಲೇಖಿಸುತ್ತಿದ್ದೇನೆ. ನಿವೃತ್ತ ಅಧಿಕಾರಿ ನೇಮಕಕ್ಕೆ ಅಸಮಾಧಾನ: ಸಹಕಾರ ಮಾರಾಟ ಮಹಾಮಂಡಳ ನಿಯಮಿತ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನಿವೃತ್ತ ಅಧಿಕಾರಿ ಶ್ರೀಮತಿ ಕೆ.ಎಂ.ಆಶಾ ಅವರನ್ನು ನೇಮಿಸಲಾಗಿದ್ದು, ಇದರಿಂದ ಸಹಕಾರ ಇಲಾಖೆಯಲ್ಲಿ ಅಸಮಾಧಾನ ಭುಗಿಲೇಳುವಂತಾಗಿದೆ. ನಿವೃತ್ತ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಕರ್ತವ್ಯದಿಂದ ಬಿಡುಗಡೆಗೊಳಿಸುವಂತೆ ಒಂದು ಕಡೆ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರೇ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಆದರೆ, ಮತ್ತೊಂದೆಡೆ ನಿವೃತ್ತರಾಗಿದ್ದ ಕೆ.ಎಂ.ಆಶಾ ಎಂಬುವವರನ್ನು ಸಹಕಾರ ಮಹಾ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ನೇಮಕ ಮಾಡಿರುವುದು ಅಸಮಾಧಾನ ಮಾತ್ರವಲ್ಲದೆ ವಿವಾದಕ್ಕೂ ಕಾರಣವಾಗಿದೆ.

ನಿವೃತ್ತರಿಗೆ ಹುದ್ದೆ ನೀಡುವುದು ಬೇಡ ಎಂಬ ಕಠಿಣ ನಿಲುವು ತಳೆದಿರುವ ಸಿದ್ದರಾಮಯ್ಯ ಅವರು, ಶ್ರೀಮತಿ ಕೆ.ಎಂ.ಆಶಾ ಅವರ ವಿಚಾರದಲ್ಲಿ ಯಾಕೆ ಮೃದು ಧೋರಣೆ ತಳೆದಿದ್ದಾರೆ ಎಂದು ಸಹಕಾರ ಇಲಾಖೆಯ ಉನ್ನತ ಅಧಿಕಾರಿಗಳು ಪ್ರಶ್ನಿಸುತ್ತಿದ್ದಾರೆ. ಇಲಾಖೆಯಲ್ಲಿ ಎಂ.ಡಿ.ಹುದ್ದೆಗೆ ಅರ್ಹತೆ ಇರುವವರು ಸಾಕಷ್ಟು ಮಂದಿ ಇದ್ದಾರೆ. ನಿವೃತ್ತರನ್ನು ಆಯಾಕಟ್ಟಿನ ಹುದ್ದೆಗಳಿಗೆ ನೇಮಿಸಿಕೊಳ್ಳಬಾರದು

ಎಂದು ತಾವೇ ನಿರ್ದೇಶನ ನೀಡಿ ಹೊರಡಿಸಿದ ಆದೇಶವನ್ನು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಉಲ್ಲಂಘಿಸಿದ್ದಾರೆ. ಹಾಲಿ ನೇಮಕವಾಗಿರುವ ಶ್ರೀಮತಿ ಕೆ.ಎಂ.ಆಶಾ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯರವರು ಪ್ರತಿನಿಧಿಸುವ ವರುಣಾ ಕ್ಷೇತ್ರದವರಾಗಿದ್ದಾರೆ. ಇದರಿಂದ ನಿವೃತ್ತರಾದವರನ್ನು ಮತ್ತೆ ನೇಮಕ ಮಾಡಿಕೊಳ್ಳಲಾಗಿದೆ ಎಂಬ ಮಾತುಗಳು ಕೇಳಬಂದಿದೆ.

ಹೋರಾಟಕ್ಕೆ ಸಂಘಟನೆಗಳ ಸಜ್ಜು: ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯಬೇಕು. ಇಲ್ಲದಿದ್ದರೆ ಅವರು ಅಧಿಕಾರ ಸ್ವೀಕರಿಸುವ ಸಂದರ್ಭದಲ್ಲಿ ಉಗ್ರ ಹೋರಾಟ ಮಾಡಲಾಗುವುದು. ಈ ವಿಚಾರವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತೇವೆ. ಎಂ.ಡಿ. ಹುದ್ದೆಯನ್ನು ನಿರ್ವಹಿಸಲು ಇಲಾಖೆಯಲ್ಲಿ ಅರ್ಹರಿಗೆ ಅವಕಾಶ ಕಲ್ಪಿಸಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ, ಸಹಕಾರ ಸಚಿವರಾದ ಶ್ರೀ ಕೆ.ಎನ್.ರಾಜಣ್ಣ ಅವರು ಈ ಬಗ್ಗೆ ಗಮನಹರಿಸಿ ಈ ಆದೇಶವನ್ನು ಹಿಂಪಡೆಯಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಕೃಷ್ಣ ಭೈರೆಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಹೇಮಲತಾ ನಾಯಕ್‌ರವರು ಕೇಳಿದಂತಹ ಶೂನ್ಯವೇಳೆಯ ಪ್ರಶ್ನೆಗೆ ಮಾನ್ಯ ಸಹಕಾರ ಸಚಿವರಿಂದ ಉತ್ತರವನ್ನು ಪಡೆದು ಮಾನ್ಯ ಸದಸ್ಯರಿಗೆ ಒದಗಿಸಲಾಗುವುದು.

**ಇ) ವಿಷಯ:- ಪತ್ರಿಕೋದ್ಯಮ ವಿಷಯದಲ್ಲಿ ರೆಗ್ಯೂಲರ್ ಆಗಿ ಸ್ನಾತಕೋತ್ತರ ಪದವಿ ಪಡೆದು ಸ್ಥಳೀಯ ಜಿಲ್ಲಾ ಮಟ್ಟದ ಕನ್ನಡ ದಿನಪತ್ರಿಕೆ ಆರಂಭಿಸಿರುವ ಸಂಪಾದಕರಿಗೆ ಪ್ರತಿ ತಿಂಗಳು ಎರಡು ಪುಟ ಜಾಹೀರಾತು ವ್ಯವಸ್ಥೆ ಮಾಡುವ ಬಗ್ಗೆ.**

***

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದನೆಗಳು. ಪತ್ರಿಕೋದ್ಯಮ ವಿಷಯದಲ್ಲಿ ರೆಗ್ಯೂಲರ್ ಆಗಿ ಸ್ನಾತಕೋತ್ತರ ಪದವಿ ಪಡೆದು ಸ್ಥಳೀಯ ಜಿಲ್ಲಾ ಮಟ್ಟದ ಕನ್ನಡ ದಿನಪತ್ರಿಕೆ ಆರಂಭಿಸಿರುವ ಸಂಪಾದಕರಿಗೆ ಪ್ರತಿ ತಿಂಗಳು

ಎರಡು ಪುಟ ಜಾಹೀರಾತು ವ್ಯವಸ್ಥೆ ಮಾಡುವ ಬಗ್ಗೆ. ರಾಜ್ಯದಲ್ಲಿ ಸ್ಥಳೀಯ ಜಿಲ್ಲಾ ಮಟ್ಟದ ಪತ್ರಿಕೆಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಅನೇಕ ಕ್ರಮಗಳನ್ನು ಹಿಂದಿನ ಸರ್ಕಾರ ಜರುಗಿಸಿತ್ತು. ಆದರೆ, ಸ್ಥಳೀಯ ಪತ್ರಿಕೆಗಳು ಮಾಧ್ಯಮ ಪಟ್ಟಿಗೆ ಸೇರಿ ಐದು ವರ್ಷ ಪೂರೈಸಿದ ಬಳಿಕ ಅವುಗಳಿಗೆ ಆರ್ಥಿಕ ಬಲ ತುಂಬಲು ಪ್ರತಿ ಎರಡು ಪುಟ ಪ್ರೋತ್ಸಾಹಕರವಾಗಿ ಎಸ್.ಸಿ., ಎಸ್.ಟಿ., ಒಬಿಸಿ ಹಾಗೂ ಬ್ರಾಹ್ಮಣ ಸಮುದಾಯದ ಪತ್ರಿಕೆಗಳಿಗೆ ಜಾಹಿರಾತು ನೀಡಲಾಗುತ್ತಿತ್ತು. ಆದರೆ, ಪ್ರಸ್ತುತ ರಾಜ್ಯ ಸರ್ಕಾರ ಎಸ್.ಸಿ., ಎಸ್.ಟಿ., ಸಂಪಾದಕತ್ವದ ಜಿಲ್ಲಾ ಮಟ್ಟದ ಪತ್ರಿಕೆಗಳು ಮಾಧ್ಯಮ ಪಟ್ಟಿಗೆ ಸೇರ್ಪಡೆ ಆಗುತ್ತಿದ್ದಂತೆ ಪ್ರತಿ ತಿಂಗಳು ಒಂದು ಪುಟ ಪ್ರೋತ್ಸಾಹಕರ ಜಾಹಿರಾತು ನೀಡಲು ಆರಂಭಿಸಲಾಗಿದೆ. ವಾಸ್ತವವಾಗಿ ಸಂಪಾದಕರಾದ ಬಹುತೇಕರು ಪತ್ರಿಕೋದ್ಯಮದಲ್ಲಿ ಪದವಿ ಪಡೆದ ಜನರು ತುಂಬಾ ಕಡಿಮೆ ಸಂಖ್ಯೆಯಲ್ಲಿರುವಂಥದ್ದು.

ಇದರಿಂದ, ಸ್ಥಳೀಯ ಮಟ್ಟದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿಕೊಂಡು ನಡೆಸುವ ಸ್ಥಳೀಯ ಜಿಲ್ಲಾ ಮಟ್ಟದ ಪತ್ರಿಕೆಗಳಿಗೆ ತುಂಬಾ ಕಷ್ಟವಾಗುತ್ತದೆ. ರಾಜ್ಯದ ಯಾವುದೇ ವಿಶ್ವ ವಿದ್ಯಾಲಯದಲ್ಲಿ ರೆಗ್ಯೂಲರ್ ಆಗಿ ಪತ್ರಿಕೋದ್ಯಮ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ಸ್ಥಳೀಯ ಮಟ್ಟದ ಪತ್ರಿಕೆ ಆರಂಭಿಸಿ ಮಾಧ್ಯಮ ಪಟ್ಟಿಗೆ ಸೇರ್ಪಡೆ ಆಗುತ್ತಿದ್ದಂತೆ, ಪ್ರತಿ ತಿಂಗಳು ಪ್ರೋತ್ಸಾಹಕರವಾಗಿ ಎರಡು ಪುಟ ಜಾಹಿರಾತು ನೀಡುವುದು ತುಂಬಾ ಅಗತ್ಯವಿದೆ. ರಾಜ್ಯ ಸರ್ಕಾರ ವಿಶೇಷ ಸೌಲಭ್ಯ ನೀಡದೇ ಹೋದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಸ್ಥಳೀಯ ಪತ್ರಿಕೆ ಆರಂಭಿಸಿ, ಮಾಧ್ಯಮ ಪಟ್ಟಿಗೆ ಸೇರಿದ ಬಳಿಕವೂ ಪ್ರೋತ್ಸಾಹಕರ ಜಾಹೀರಾತಿಗಾಗಿ ಐದು ವರ್ಷ ಕಾಯುವುದು ಬಹಳ ಕಷ್ಟವಾಗುತ್ತಿದೆ ಎಂದು ತಿಳಿದು ಬಂದಿದೆ.

ರಾಜ್ಯ ಸರ್ಕಾರ ತಕ್ಷಣವೇ ಹೊಸ ನೀತಿಯನ್ನು ರೂಪಿಸುವ ಮೂಲಕ ಪತ್ರಿಕೋದ್ಯಮ ವಿಷಯದಲ್ಲಿ ರೆಗ್ಯೂಲರ್ ಆಗಿ ಸ್ನಾತಕೋತ್ತರ ಪದವಿ ಪಡೆದು ಸ್ಥಳೀಯ ಜಿಲ್ಲಾ ಮಟ್ಟದ ಕನ್ನಡ ದಿನಪತ್ರಿಕೆ ಆರಂಭಿಸಿರುವ ಸಂಪಾದಕರ ಹಿತ ಕಾಯುವ ದೃಷ್ಟಿಯಿಂದ ಪ್ರತಿ ತಿಂಗಳು ಎರಡು ಪುಟ ಜಾಹಿರಾತು ವ್ಯವಸ್ಥೆ ಮಾಡಬೇಕಾದ ಅವಶ್ಯಕತೆ ಇದೆ ಎಂದು ತಿಳಿಸುತ್ತಾ, ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಸಚಿವರೇ, . . .

**ಶ್ರೀ ಕೃಷ್ಣಭೈರೆಗೌಡ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸಚಿವರೇ, ಹೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ೮ ಜನ ಸಚಿವರಲ್ಲಿ ಒಬ್ಬರು ಮಾತ್ರ ಕುಳಿತುಕೊಂಡಿದ್ದಾರೆ. ತಮ್ಮ ಆದೇಶ ಏನಿದೆಯೋ? ೮ ಜನ ಅಧಿಕಾರಿಗಳಲ್ಲಿ ಒಬ್ಬರೇ ಒಬ್ಬರು ಇದ್ದಾರೆ. ೮ ಜನರ ಹೆಸರನ್ನು ಹೇಳಿ.

**ಶ್ರೀ ಕೃಷ್ಣಭೈರೆಗೌಡ:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಶೂನ್ಯವೇಳೆ ಆದ ಮೇಲೆ ಹೇಳಿ. ಈಗ ಶೂನ್ಯವೇಳೆ ಮುಗಿಯಲಿ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ೩ ಜನರು ಸರ್ಕಾರ ನಡೆಸುತ್ತೀರಾ. ಇವತ್ತು ಅಜೆಂಡಾದಲ್ಲಿ ಇರುವವರು ಸದನದಲ್ಲಿ ಏಕೆ ಇಲ್ಲ ಎನ್ನುವುದು ಪ್ರಶ್ನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಕಡ್ಡಾಯ ಸಚಿವರಲ್ಲಿ ಒಬ್ಬರೇ ಇರುವುದು. ಇದನ್ನು ತಾವು ಏಕೆ ಮರೆಯುತ್ತೀರಿ. ಇನ್ನು ಮುಂದೆ ನಾವು ಕೇಳುವುದೇ ಇಲ್ಲ.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಎಲ್ಲಾ ಮಂತ್ರಿಗಳು ಮುಂದೆ ಬಂದು ಕುಳಿತುಕೊಳ್ಳಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಕಡ್ಡಾಯ ಸಚಿವರಲ್ಲಿ ಒಬ್ಬರೇ ಇರುವುದು. ೮ ಜನ ಸಚಿವರುಗಳು ಇವತ್ತು ಈ ಸದನದಲ್ಲಿ ಕಡ್ಡಾಯವಾಗಿರಬೇಕು. ನೀವು ಕೇಳಬೇಡಿ ಎಂದರೆ, ನಾವು ಕೇಳುವುದಿಲ್ಲ ಬಿಡಿ.

**ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಒಂದು ನಿಮಿಷ ಕೇಳಿ.

**ಶ್ರೀ ಸುನೀಲ್ ವಲ್ಯಾಪುರೆ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸುನೀಲ್ ವಲ್ಯಾಪುರೆರವರೇ, ಒಂದು ನಿಮಿಷ. ತಡೆಯಿರಿ. ಒಂದು ಸಾರಿ, 10 ಸಾರಿ ನಾನು ಏನು ಮಾಡಬೇಕೆಂದು ಹೇಳುತ್ತೇನೆ.

**ಶ್ರೀ ಎನ್.ಚೆಲುವರಾಯಸ್ವಾಮಿ (ಕೃಷಿ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ಇಲ್ಲಿಯೇ ಇದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಚಿವರೇ, ತಾವು ಒಬ್ಬರೇ ಇರುವುದು. ಸದನದಲ್ಲಿ ಇನ್ಯಾರೂ ಇಲ್ಲ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಅವರಿಗೆ ತಿಳಿಯಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಈಗ ಒಬ್ಬರು ಬಂದರು. ಈಗ ಇಬ್ಬರು ಸಚಿವರು ಆದರು.

**ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಈಗ ಏನು ಮಾಡಬೇಕೆಂದು ಹೇಳಿ. ನಾನು ಹೇಳುತ್ತಿದ್ದರೆ ಕೇಳಬೇಕಪ್ಪಾ.

**ಶ್ರೀ ಸುನೀಲ್ ವಲ್ಯಾಪುರೆ:–** ಮಾನ್ಯ ಸಭಾಪತಿಯವರೇ, ಅವರಿಗೆ ಒಂದು ಆದೇಶ ಮಾಡಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಸಚಿವರು ಕುಳಿತುಕೊಳ್ಳಬೇಕು. ಸಚಿವರು ಕುಳಿತುಕೊಳ್ಳದೇ ಇನ್ಯಾರು ಕುಳಿತುಕೊಳ್ಳಬೇಕು?

**ಶ್ರೀ ಕೃಷ್ಣಭೈರೆಗೌಡ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಪಿ.ಹೆಚ್.ಪೂಜಾರ್‌ರವರು ಕೇಳಿರುವಂತಹ ವಿಷಯ ಇತ್ತೀಚಿನ ವಿಷಯವೂ ಅಲ್ಲ. ತುರ್ತು ವಿಷಯವೂ ಅಲ್ಲ. ಆದರೂ, ತಾವು ಪೀಠದಿಂದ ಅವಕಾಶ ಕೊಟ್ಟಿದ್ದೀರಿ. ಇದು ಶೂನ್ಯವೇಳೆಯ ಪ್ರಶ್ನೆಗೆ ಬರುವುದಿಲ್ಲ.

ಆದರೂ, ಪೀಠಕ್ಕೆ ಗೌರವ ಕೊಟ್ಟು, ಇದು ನೀತಿ–ನಿರೂಪಣೆಯ ವಿಷಯವಾಗಿರುತ್ತದೆ. ಅವರು ಕೇಳಿರುವುದು ಸರ್ಕಾರದ ಪಾಲಿಸಿ ಮ್ಯಾಟರ್ ಆಗಿದೆ.

**ಸಭಾಪತಿಯವರು:–** ಮಾನ್ಯ ಕೃಷ್ಣಭೈರೆಗೌಡರವರೇ, ಇದು ನನಗೆ ಗೊತ್ತಿತ್ತು.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಬೈಯಬೇಡಿ. ಸರ್ಕಾರಿ . . .

**ಶ್ರೀ ಕೃಷ್ಣಭೈರೆಗೌಡ:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ನೀವು ಹೇಳಿರುವುದಕ್ಕೆ ಅಲ್ಲ.

**ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಇದ್ಯಾವುದು ನಿಮ್ಮದು. ಏನೇನೋ ಹೇಳುತ್ತೀರಾ. ಅವರು ಬೇರೆ ಮಾತನಾಡಿದರೆ, ನೀವು ಏನೋ ಮಾತನಾಡುತ್ತೀರಾ.

**ಶ್ರೀ ಕೃಷ್ಣಭೈರೆಗೌಡ:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಪಾಲಿಸಿ ಮ್ಯಾಟರ್ ಆಗಿದೆ. ಆದರೂ ಕೂಡ ಪೀಠ ಅವಕಾಶ ಕೊಟ್ಟ ಮೇಲೆ, ಅದೆಲ್ಲವನ್ನೂ ನೋಡಿ, ನಾನು ಪೀಠಕ್ಕೆ ಗೌರವ ಕೊಟ್ಟು ನಾನು ಉತ್ತರವನ್ನು ಕೊಡುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಕೃಷ್ಣಭೈರೆಗೌಡರವರೇ, ನಾನು ಇಲ್ಲಿ ಮಾರ್ಕ್ ಮಾಡಿದ್ದೆ. ಅವರು ಬಹಳ ಸಾರಿ ಕೇಳಿದ ಮೇಲೆ ನಾನು ಅವಕಾಶ ಕೊಟ್ಟಿದ್ದೇನೆ.

**ಶ್ರೀ ಕೃಷ್ಣಭೈರೆಗೌಡ:–** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟ ಮೇಲೆ ಮುಗಿಯಿತು.

**ಸಭಾಪತಿಯವರು:–** ಮಾನ್ಯ ಕೃಷ್ಣಭೈರೆಗೌಡರವರೇ, ಆಯಿತು.

(ಮುಂದು)

(624) 23.7.2024 12.20 ಪಿಕೆ:ಎಕೆ (ಸಭಾಪತಿಗಳ ಉಪಸ್ಥಿತಿ)

**(ಗೊಂದಲ)**

**ಶ್ರೀ ಪಿ.ಹೆಚ್.ಪೂಜಾರ್:-** ಸರ್ಕಾರದ ಕಡೆಯಿಂದ ಸೂಕ್ತ ಉತ್ತರಗಳು ಬರುತ್ತಿಲ್ಲ ಎಂದು ಅವರು ಈ ವಿಷಯವನ್ನು ಶೂನ್ಯವೇಳೆ ಅಡಿ ತಂದಿದ್ದಾರೆ.

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು) (ಮುಜುರಾಯಿ ಹೊರತುಪಡಿಸಿ)):-** ಮಾನ್ಯ ಸಭಾಪತಿಗಳೆ, ಅದು ಶೂನ್ಯವೇಳೆ ಅಡಿ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಿಲ್ಲ. ನೀವು ಆ ರೀತಿ ವಾದ ಮಾಡಿದರೆ ನಾನೂ ಕೂಡ ವಾದ ಮಾಡಬೇಕಾಗುತ್ತದೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಈ ದಿನ ಸದನದಲ್ಲಿ ಕಡ್ಡಾಯವಾಗಿ ಇರಬೇಕಾದ 5 ಜನ ಸಚಿವರ ಅನುಪಸ್ಥಿತಿ ಇದೆ. ಈ ವಿಷಯವನ್ನು ನಾವು ಪೀಠಕ್ಕೆ ಕೇಳದೆ ಬೇರೆ ಯಾರನ್ನು ಕೇಳಬೇಕು? ತಮ್ಮ ಆದೇಶಕ್ಕೆ ಕವಡೆ ಕಾಸಿನ ಕಿಮ್ಮತ್ತಿಲ್ಲ ಎಂದರೆ ಏನರ್ಥ?

**ಸಭಾಪತಿಯವರು:-** ಅದನ್ನು ಅವರು ತಿಳಿದುಕೊಳ್ಳಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ನಿನ್ನೆ ತಾವು ಈ ವಿಚಾರವಾಗಿಯೇ ಸದನವನ್ನು ಮುಂದೂಡಿದಿರಿ. ಆದರೂ ಸರ್ಕಾರ ಎಚ್ಚರಿಕೆ ವಹಿಸುವುದಿಲ್ಲ ಎಂದರೆ ಹೇಗೆ?

**ಸಭಾಪತಿಯವರು:-** ಆ ಕಾರಣಕ್ಕೆ ಪ್ರತಿದಿನ ಸದನವನ್ನು ಮುಂದೂಡುವುದಕ್ಕೆ ಆಗುವುದಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ತಾವು ಸದನವನ್ನು ಮುಂದೂಡಿದರೂ ಅದನ್ನು ಅರ್ಥ ಮಾಡಿಕೊಳ್ಳದೇ ಇದ್ದರೆ ಹೇಗೆ? 10 ದಿವಸ ಸದನ ನಡೆಯುತ್ತದೆ. ಈ ಅವಧಿಯಲ್ಲಾದರೂ ಅಧಿಕಾರಿಗಳು ಇಲ್ಲಿ ಬಂದು ಕುಳಿತುಕೊಳ್ಳಬೇಕು ಅಲ್ಲವೇ? ಇದು ಬಿಟ್ಟು ಬೇರೆ ಕೆಲಸ ಅವರಿಗೆ ಏನಿರುತ್ತದೆ?

**ಸಭಾಪತಿಯವರು:-** ಈಗ ಸದನದಲ್ಲಿ ಸಭಾನಾಯಕರೂ ಇಲ್ಲ. ಇವತ್ತು ಸದನದಲ್ಲಿ ಇರಬೇಕಾದ ಅಧಿಕಾರಿಗಳು ಯಾರು ಇಲ್ಲವೋ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

**ಈ) ವಿಷಯ: ಶಿವಮೊಗ್ಗದಲ್ಲಿ ಆಯುಷ್ ವಿವಿ ಸ್ಥಾಪಿಸುವ ಬಗ್ಗೆ.**

- - -

**ಶ್ರೀ ಡಿ.ಎಸ್.ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ರಾಷ್ಟ್ರದಲ್ಲಿಯೇ ಮೊದಲ ಆಯುಷ್ ವಿಶ್ವವಿದ್ಯಾಲಯವನ್ನು ಶಿವಮೊಗ್ಗದಲ್ಲಿ ಸ್ಥಾಪಿಸಬೇಕು ಎಂಬ ಮಹತ್ವಾಕಾಂಕ್ಷೆಯೊಂದಿಗೆ 2011-12ನೇ ಸಾಲಿನಲ್ಲಿ ಶಿವಮೊಗ್ಗ ವಿಮಾನ ನಿಲ್ದಾಣದ ಪಕ್ಕದ 100 ಎಕರೆ ಭೂಮಿಯನ್ನು ಕಳೆದ 11 ವರ್ಷಗಳಿಂದ ಮೀಸಲಿಟ್ಟಿದ್ದರೂ ಯಾವುದೇ ಪ್ರಗತಿ ಸಾಧಿಸಲು ಸಾಧ್ಯವಾಗದಿರುವುದಕ್ಕೆ ರಾಜ್ಯ ಸರ್ಕಾರದ ನಿರ್ಲಕ್ಷ್ಯವೇ ಕಾರಣವಾಗಿರುವ ಸಂಗತಿ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಆಯುರ್ವೇದ, ಯೋಗಕ್ಕೆ ಅತಿಯಾದ ಒಲವು ನೀಡುತ್ತಿರುವುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿರುತ್ತದೆ. ಆಯುಷ್ ವಿವಿ ಸ್ಥಾಪನೆಯಾದರೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ವ್ಯಾಪ್ತಿಗೆ ಒಳಪಡುವ ಆಯುರ್ವೇದ, ಯೋಗ, ಯುನಾನಿ, ಸಿದ್ಧ ಮತ್ತು ಹೋಮಿಯೋಪತಿ ಮಹಾ ವಿಶ್ವವಿದ್ಯಾಲಯಗಳ ಹೊರೆಯನ್ನು ಕಡಿಮೆ ಮಾಡಬಹುದಾಗಿದೆ. ಇದರ ಜೊತೆಗೆ ಆಯುಷ್ ಮಹಾ ವಿಶ್ವವಿದ್ಯಾಲಯಗಳ ಪದವಿ, ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ಇನ್ನಿತರ ವಿಚಾರಗಳಲ್ಲೂ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಹೊರೆ ಕಡಿಮೆಯಾಗಲಿದೆ. ಮುಖ್ಯವಾಗಿ ಭಾರತೀಯ ವೈದ್ಯ ಪದ್ಧತಿ ಚಿಕಿತ್ಸೆ, ಶೈಕ್ಷಣಿಕ ಮತ್ತು ಸಂಶೋಧನೆಗೆ ಹೆಚ್ಚಿನ ಒತ್ತು, ಆರೋಗ್ಯ ಸೇವಾ ವಲಯದಲ್ಲಿ ಹೆಚ್ಚಿನ ಅವಕಾಶಗಳು, ಅಳಿವಿನಂಚಿನಲ್ಲಿರುವ ಹಾಗೂ ವೈದ್ಯಕೀಯ ಗುಣಲಕ್ಷಣಗಳುಳ್ಳ

ಗಿಡಮೂಲಿಕೆಗಳ ಸಂರಕ್ಷಣೆ, ಆಹಾರ ಪದ್ಧತಿಯಲ್ಲಿ ಅಪೌಷ್ಟಿಕತೆ ನಿವಾರಣೆಯಂತಹ ಸಾಕಷ್ಟು ಅನುಕೂಲತೆಗಳು ಸಾರ್ವಜನಿಕರಿಗೆ ಲಭ್ಯವಾಗಲಿವೆ.

ಆದರೆ ಆಯುಷ್ ವಿವಿ ಸ್ಥಾಪನೆಯಾದರೆ, ಖಾಸಗಿಯವರ ನಿಯಂತ್ರಣ ಕೈತಪ್ಪಲಿದೆ ಎಂಬ ಕಾರಣಕ್ಕಾಗಿ ಕೇವಲ ಬಜೆಟ್‌ನಲ್ಲಷ್ಟೇ ಆಯುಷ್ ವಿಶ್ವವಿದ್ಯಾಲಯ ಸ್ಥಾಪನೆಗೆ ಘೋಷಣೆ ಮಾಡಿದ ಸರ್ಕಾರ, ಘೋಷಣೆಗೆ ಅವಶ್ಯವಿರುವ ಅನುದಾನವನ್ನು ಬಿಡುಗಡೆ ಮಾಡದಿರುವುದು ಸರ್ಕಾರದ ನಿರ್ಲಕ್ಷ್ಯವೇ ಸರಿ. ಆದಕಾರಣ, ಸರ್ಕಾರ ಬಜೆಟ್‌ನಲ್ಲಿ ಘೋಷಣೆ ಮಾಡಿರುವಂತೆ ಶಿವಮೊಗ್ಗದಲ್ಲಿ ಮೀಸಲಿರಿಸಿರುವ ಭೂಮಿಯಲ್ಲಿ ವಿವಿ ಸ್ಥಾಪನೆಗೆ ರೂ. 20 ಕೋಟಿಗಳನ್ನು ತಕ್ಷಣವೇ ಬಿಡುಗಡೆ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕಾಗಿ ಶೂನ್ಯವೇಳೆಯಲ್ಲಿ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಿಗೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಿ ಕೊಡಲಾಗುತ್ತದೆ.

**ಸಭಾಪತಿಯವರು:–** ಮಾನ್ಯ ಅರುಣ್‌ರವರೇ, ನೀವು ಯಾವುದನ್ನು ಶೂನ್ಯವೇಳೆ ಅಡಿ ಕೊಟ್ಟಿರುತ್ತೀರೋ ಅದನ್ನೇ ಓದಬೇಕು. ನೀವು ಕೊಟ್ಟಿರುವುದೇ ಬೇರೆ ಆದರೆ, ನೀವು ಓದಿದ್ದೇ ಬೇರೆ. ಹಾಗಾಗಬಾರದು. ಈಗ ಅದನ್ನು ಬದಲಾವಣೆ ಮಾಡಿಕೊಳ್ಳುತ್ತೇನೆ. ಮತ್ತೆ ಕೆಲವರು ಶೂನ್ಯವೇಳೆ ಅಡಿ ಕೊಟ್ಟಿರುವ ನೋಟಿಸ್‌ನಲ್ಲಿ ಸಹಿ ಮಾಡಿ ಕೂಡ ಕೊಟ್ಟಿಲ್ಲ. ಆದರೂ ಅದನ್ನು ತೆಗೆದುಕೊಂಡಿದ್ದೇವೆ. ದಯವಿಟ್ಟು ಗಮನಹರಿಸಿ.

**ಉ) ವಿಷಯ: ಶಿವಮೊಗ್ಗ ನಗರದಲ್ಲಿ ಕೆಎಸ್‌ಸಿಎ ವತಿಯಿಂದ ನಿರ್ಮಾಣಗೊಂಡಿರುವ ಕ್ರಿಕೆಟ್ ಕ್ರೀಡಾಂಗಣಕ್ಕೆ ಮಳೆಯಿಂದಾಗಿ ಪಕ್ಕದಲ್ಲಿರುವ ಕೆರೆ ಹಾಗೂ ಚರಂಡಿಗಳ ನೀರು ನುಗ್ಗಿ ಕ್ರೀಡೆಗೆ ತೊಂದರೆ ಉಂಟಾಗುತ್ತಿರುವ ಬಗ್ಗೆ.**

- - -

**ಶ್ರೀ** ಪ್ರಕಾಶ್ ಕೆ.ರಾಠೋಡ್**(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಗಳೆ, ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (KSCA) ವತಿಯಿಂದ ಶಿವಮೊಗ್ಗ ನಗರದಲ್ಲಿ ಸುಮಾರು 26 ಎಕರೆ ಜಾಗದಲ್ಲಿ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣ ಮಾಡಿದ್ದು, 2009 ರಿಂದ ಅಂಡರ್-14, ಅಂಡರ್-18 ಹಾಗೂ ಅಂಡರ್-19 ಕ್ರಿಕೆಟ್ ಪಂದ್ಯಾವಳಿಗಳನ್ನು ನಡೆಸಲಾಗುತ್ತಿದೆ. ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಗಳ 45 ಕ್ಲಬ್‌ಗಳು ಸಹ ಇವೆ. ಕಳೆದ 3 ದಿನಗಳಿಂದ ಭಾರಿ ಮಳೆಯಾಗುತ್ತಿದ್ದು, ಪಕ್ಕದಲ್ಲಿರುವ ಕೆರೆ ಹಾಗೂ ಚರಂಡಿಗಳಿಂದ ಮಳೆಯ ನೀರು ಕ್ರೀಡಾಂಗಣಕ್ಕೆ ನುಗ್ಗಿ ಕ್ರೀಡಾಂಗಣವು ಸಂಪೂರ್ಣ ಜಲಮಯವಾಗಿದೆ. ಇದರಿಂದ ಕ್ರಿಕೆಟ್ ಆಟ ಆಡಲು ತುಂಬಾ ತೊಂದರೆಯಾಗುತ್ತದೆ.

ಈ ರೀತಿ ಮಳೆಯ ನೀರು ಪಕ್ಕದ ಬಡಾವಣೆಯಿಂದ ಕ್ರೀಡಾಂಗಣದೊಳಗೆ ಬಂದಿದ್ದರಿಂದ ಯುವಕರಿಗೆ ಕ್ರಿಕೆಟ್ ತರಬೇತಿ ಮಾಡಲು ತುಂಬಾ ತೊಂದರೆಯಾಗಿದೆ. ಈ ಕ್ರೀಡಾಂಗಣದಲ್ಲಿ ಇದುವರೆಗೂ 400 ಪಂದ್ಯಗಳನ್ನು ಆಡಿಸಲಾಗಿದೆ. ಗ್ರಾಮೀಣ ಕ್ರೀಡಾಪಟುಗಳಿಗೆ ತರಬೇತಿ ಕೊಡುವುದಕ್ಕೆ ಮತ್ತು ರಾಜ್ಯ ಮಟ್ಟದ ಟೂರ್ನ್‌ಮೆಂಟ್ ಆಟಕ್ಕೆ ಅವಕಾಶ ಮಾಡಿಕೊಡಲು ಕೆಎಸ್‌ಸಿಎ ಸುಮಾರು ರೂ. 5 ಕೋಟಿ ವೆಚ್ಚದಲ್ಲಿ ಸ್ಟೇಡಿಯಂ ನಿರ್ಮಾಣ ಮಾಡಿದೆ. ಇದರಿಂದ ಸ್ಥಳೀಯ ಯುವಕರಿಗೆ ಅವಕಾಶ ದೊರೆತಿದೆ. ಮಳೆಯ ನೀರು ಕ್ರೀಡಾಂಗಣದೊಳಗೆ ಬರದಂತೆ ಹಲವಾರು ವರ್ಷಗಳಿಂದ ಮನವಿ ಮಾಡಿದರೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಹಾಗೂ ಶಾಶ್ವತ

ಪರಿಹಾರ ಕೊಡುವುದಕ್ಕೆ ಯಾವುದೇ ಪ್ರಯತ್ನ ಸರ್ಕಾರ ಮಾಡಿರುವುದಿಲ್ಲ. ಮಹತ್ವದ ಈ ವಿಷಯದ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಬಯಸುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೆ, ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**ಊ) ವಿಷಯ: ದರ್ವೇಶ್ ಗ್ರೂಪ್ ಆಫ್ ಕಂಪನಿ ಎಂಬ ಸಂಸ್ಥೆ ಹೂಡಿಕೆದಾರರಿಗೆ ಅಧಿಕ ಬಡ್ಡಿ ನೀಡುವುದಾಗಿ ಹೇಳಿ ಅವರಿಂದ ಡಿಪಾಸಿಟ್ ರೂಪದಲ್ಲಿ ಹಣ ಪಡೆದು, ವಂಚಿಸಿರುವ ಬಗ್ಗೆ.**

– – –

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ರಾಯಚೂರು ಜಿಲ್ಲೆಯ ಸಾವಿರಾರು ಜನರು ಅಧಿಕ ಬಡ್ಡಿಯ ಆಸೆಗೆ ಕೋಟ್ಯಂತರ ರೂಪಾಯಿ ಹೂಡಿಕೆ ಮಾಡಿ ವಂಚನೆಗೊಳಗಾದ ಪ್ರಕರಣ ಬೆಳಕಿಗೆ ಬಂದಿದೆ. "ದರ್ವೇಶ್ ಗ್ರೂಪ್ ಆಫ್ ಕಂಪನಿ" ಎಂಬ ಸಂಸ್ಥೆ ಹೂಡಿಕೆದಾರರಿಗೆ ಅಧಿಕ ಬಡ್ಡಿ ನೀಡುವುದಾಗಿ ಹೇಳಿ ಅವರಿಂದ ಡಿಪಾಸಿಟ್ ರೂಪದಲ್ಲಿ ಹಣ ಪಡೆದು ಆರಂಭದಲ್ಲಿ ಅಧಿಕ ಬಡ್ಡಿ ಹಣ ನೀಡಿ ನಂತರ ಬಡ್ಡಿ ಹಣ ನೀಡದೇ ಇರುವುದರಿಂದ ರಾಯಚೂರು ಜಿಲ್ಲೆಯ ಸಾವಿರಾರು ಜನ ಆತಂಕಗೊಂಡಿದ್ದಾರೆ.

ಒಂದು ಲಕ್ಷ ರೂಪಾಯಿ ಠೇವಣಿ ಇಟ್ಟರೆ ಪ್ರತಿ ತಿಂಗಳು ರೂ. 10,000 ನೀಡುವುದಾಗಿ ಹೇಳಿ ಠೇವಣಿ ಪಡೆದಿದ್ದ ದರ್ವೇಶ್ ಗ್ರೂಪ್ ಆಫ್ ಕಂಪೆನಿ ಮಾಲೀಕರು ಹಾಗೂ ಕಂಪೆನಿಯ ಏಜೆಂಟರು ಆರಂಭದ ಕೆಲ ತಿಂಗಳ ಕಾಲ ಪ್ರತಿ ತಿಂಗಳು ರೂ. 10,000 ಬಡ್ಡಿ ಹಣ ನೀಡಿದ ಕಾರಣಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಲಕ್ಷಾಂತರ ಜನರು ಹಣ ಹೂಡಿಕೆ ಮಾಡಿದ್ದು, ಈಗ ಹೆಚ್ಚಿನ ಬಡ್ಡಿ ಹಣ ನೀಡದ ಕಾರಣ ಹೂಡಿಕೆದಾರರು ಕಂಗಾಲಾಗಿದ್ದಾರೆ. ಇದು ಇನ್ನೊಂದು ರೀತಿಯ ಐಎಂಎ ಹಗರಣವಾಗಿದೆ.

ಹೆಚ್ಚಿನ ಬಡ್ಡಿ ದರ ನೀಡಿ ಆರಂಭದ ದಿನಗಳಲ್ಲಿ ಆಸೆ ತೋರಿಸಿದ ಕಾರಣ ಕೆಲ ಬಡವರು, ಕಾರ್ಮಿಕರು ಮತ್ತು ಕೆಲ ಶ್ರೀಮಂತರು ಸಹ ಹಣ ಹೂಡಿಕೆ ಮಾಡಿರುತ್ತಾರೆ. ಸಾವಿರಾರು ಕೋಟಿ ಮೌಲ್ಯದ ವಹಿವಾಟು ಜರುಗಿದ್ದು, ಹಣಕಾಸಿನ ಹೂಡಿಕೆದಾರರು ಆತಂಕಕ್ಕೆ ಒಳಗಾದ ಕಾರಣ ಅವರ ರಕ್ಷಣೆಗೆ ರಾಜ್ಯ ಸರ್ಕಾರ ಕೂಡಲೇ ಅಗತ್ಯ ಕ್ರಮ ಕೈಗೊಂಡು ರಾಜ್ಯದ ಬಡ ಜನರ ಹಿತ ರಕ್ಷಣೆ ಮಾಡುವಂತೆ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಬಯಸುತ್ತೇನೆ.

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):–** ಮಾನ್ಯ ಸಭಾಪತಿಗಳೆ, ನಾನು ಈಗಲೇ ಎಸ್.ಪಿ.ಅವರಿಗೆ ಸೂಚನೆ ಕೊಡುತ್ತೇನೆ. ಈ ರೀತಿ 2 ತಿಂಗಳ ಹಿಂದೆ ಫ್ರಾಡ್ ಆಗಿರುವುದರ ಬಗ್ಗೆ ನಮ್ಮಲ್ಲಿ ಚರ್ಚೆ ಆಗಿದೆ. ಮತ್ತೆ ಅದು ಮುಂದುವರೆದಿದೆಯೇ ಎನ್ನುವುದರ ಬಗ್ಗೆ ಎಸ್.ಪಿ.ಅವರ ಜೊತೆ ಮಾತನಾಡಿ, ತಕ್ಷಣ ತನಿಖೆ ಮಾಡುವಂತೆ ಹೇಳುತ್ತೇನೆ. Ponzi scheme ಆ ತರಹ ಏನಾದರೂ ಆಗಿದ್ದರೆ ಅದನ್ನು KPID (The Karnataka Protection of Interest of Depositors in Financial Establishments Act, 2004) ಆಕ್ಟ್ ಕೆಳಗಡೆ ತೆಗೆದುಕೊಂಡು ಅದರ ತನಿಖೆಯನ್ನು ನಾವು ಮುಂದುವರೆಸುತ್ತೇವೆ. ಏನೇ ಇದ್ದರೂ ತಕ್ಷಣ ನಾನು ಸೂಚನೆ ಕೊಡುತ್ತೇನೆ ಮತ್ತು ಉತ್ತರವನ್ನು ಒದಗಿಸಿ ಕೊಡುತ್ತೇನೆ.

**ಶ್ರೀ ಎನ್.ರವಿಕುಮಾರ್:–** ಅವರಿಗೆ ಹಣ ಹಿಂದಿರುಗುವಂತೆ ಕ್ರಮ ಕೈಗೊಳ್ಳಬೇಕು.

**ಶ್ರೀ ಕೃಷ್ಣ ಭೈರೇಗೌಡ:–** ಅದಕ್ಕೆಂತಲೇ ಒಂದು separate Act ಇದೆ, ಅದರ ಕೆಳಗಡೆ ನಾವು ಮೂವ್ ಮಾಡಬೇಕಾಗುತ್ತದೆ. ಪೋಲೀಸ್‌ರಿಂದ ಅಲ್ಲಿಗೆ ವರ್ಗಾವಣೆಯಾದರೆ ಆ Act takeover ಮಾಡುತ್ತದೆ. ಅದರಲ್ಲಿ ಪ್ರಾವಿಷನ್ ಇದೆ.

(ಮುಂದು)

(625) 23-07-2024 12.30 ಡಿಎಸ್-ವಿಕೆ (ಸಭಾಪತಿಯವರು ಉಪಸ್ಥಿತಿ)

**ಖ) ವಿಷಯ: ಉತ್ತರ ಕನ್ನಡ ಜಿಲ್ಲೆಯಲ್ಲಿ ಸರ್ಕಾರದ ವಿವಿಧ ವಸತಿ ಯೋಜನೆಯಡಿ ನಿರ್ಮಾಣ ಹಂತದಲ್ಲಿರುವ ಮನೆಗಳ ಬಿಲ್ ಪಾವತಿ ಬಾಕಿ ಇರುವ ಬಗ್ಗೆ.**

-------

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಉತ್ತರ ಕನ್ನಡ ಜಿಲ್ಲೆಯಲ್ಲಿ ಸರ್ಕಾರದ ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ ಮನೆ ಪಡೆದ ಅನೇಕ ಬಡ ಕುಟುಂಬದವರ ನಿರ್ಮಾಣ ಹಂತದಲ್ಲಿರುವ ಮನೆಯ ಬಿಲ್ ಪಾವತಿ ಬಾಕಿ ಇರುವ ಸಾರ್ವಜನಿಕ ಮಹತ್ವದ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರ ಕ್ನನಡ ಜಿಲ್ಲೆಯ ಬಡ ಕುಟುಂಬಗಳು ಸರ್ಕಾರದ ವಿವಿಧ ಯೋಜನೆ ಅಡಿಯಲ್ಲಿ ಪಡೆದ ಮನೆಗಳ ನಿರ್ಮಾಣ ಕಾರ್ಯವು ಮುಕ್ತಾಯ ಹಂತದಲ್ಲಿದ್ದು, ಅದಕ್ಕೆ ಬರಬೇಕಾದ ಬಿಲ್‌ಗಳು ಬಾಕಿ ಇರುತ್ತವೆ. ಸರ್ಕಾರದಿಂದ ಬರುವ ಹಣದ ಭರವಸೆಯ ಮೇಲೆ ಬೇರೆ ಕಡೆ ಸಾಲ ಮಾಡಿ ಮನೆ ನಿರ್ಮಾಣ ಕೈಗೊಂಡ ಇವರು ಈ ಕಡೆ ಮನೆಯು ಮುಗಿಸಲಾಗದೆ ಆ ಕಡೆ ಸಾಲವೂ ತೀರಿಸಲಾಗದೆ ಸಮಸ್ಯೆಯಲ್ಲಿ ಸಿಲುಕಿ ಹಾಕಿಕೊಂಡಿದ್ದಾರೆ. ಈ ರೀತಿ ಜಿಲ್ಲೆಯಲ್ಲಿ ಸಾವಿರಾರು ವಸತಿ ಯೋಜನೆಗಳ ಫಲಾನುಭವಿಗಳ ಪರಿಸ್ಥಿತಿಯಾಗಿದ್ದು, ಸರ್ಕಾರ ಇದರ ಬಗ್ಗೆ ಗಮನಹರಿಸಿ ನಿರ್ಮಾಣ ಹಂತದಲ್ಲಿರುವ ಮನೆಗಳ ಹಂತ ಹಂತದ ಬಿಲ್ ಮತ್ತು ಮುಕ್ತಾಯಗೊಂಡ ಮನೆಯ ಪೂರ್ಣ ಬಿಲ್ ಪಾವತಿಸಬೇಕೆಂಬ ಸಾರ್ವಜನಿಕ ಮಹತ್ವದ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಕೃಷ್ಣ ಭೈರೇಗೌಡ(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರಿಗೆ ಈ ವಿಷಯದ ಬಗ್ಗೆ ಉತ್ತರ ಒದಗಿಸಿ ಕೊಡುತ್ತೇನೆ.

**ಎ) ವಿಷಯ: ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲಿನ ಒತ್ತಡ ಕಡಿಮೆ ಮಾಡಲು ಬೆಂಗಳೂರು ಸಮೀಪವೇ ಪರ್ಯಾಯ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣ ಸಂಬಂಧ ಜರೂರಾಗಿ ಕೇಂದ್ರದಿಂದ ಅನುಮೋದನೆ ಪಡೆಯುವ ಕುರಿತು.**

---------

**ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲಿನ ಒತ್ತಡ ಕಡಿಮೆ ಮಾಡಲು ಬೆಂಗಳೂರು ಸಮೀಪವೇ ನಿರ್ಮಿಸಲು ಉದ್ದೇಶಿಸಿರುವ ಪರ್ಯಾಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಂಬಂಧ, ಕರ್ನಾಟಕದ ಜೊತೆ ತಮಿಳುನಾಡು ಸರ್ಕಾರ ಪೈಪೋಟಿಗೆ ಇಳಿದಿರುವ ವಿಚಾರ ಈಗಾಗಲೇ 'ವಿಜಯ ಕರ್ನಾಟಕ' ಪತ್ರಿಕೆಯಲ್ಲಿ ವರದಿಯಾಗಿದೆ. ಕರ್ನಾಟಕ ಸರ್ಕಾರ ಉದಾಸೀನತೆ ಮತ್ತು ನಿರ್ಲಕ್ಷ್ಯ ಮಾಡಿದರೆ ವಿಮಾನ ನಿಲ್ದಾಣ ನೆರೆಯ ರಾಜ್ಯವಾದ ತಮಿಳುನಾಡಿನ ಪಾಲಾಗುವ ಸಾಧ್ಯತೆ ಇದೆ. ಈ ಬಗ್ಗೆ ರಾಜ್ಯ ಸರ್ಕಾರ ಇದೇ ಅಧಿವೇಶನದಲ್ಲಿ ನಿರ್ಣಯ ಕೈಗೊಂಡು, ಸ್ಥಳವನ್ನು ಗುರುತಿಸಿ, ಕೇಂದ್ರ ಸರ್ಕಾರಕ್ಕೆ ಕೂಡಲೇ ಪ್ರಸ್ತಾವನೆ ಸಲ್ಲಿಸಬೇಕಾಗಿದೆ.

ಈಗಾಗಲೇ ತುಮಕೂರು, ರಾಮನಗರ ಅಥವಾ ಬೆಂಗಳೂರು ಗ್ರಾಮಾಂತರ ಭಾಗದಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕುರಿತು ರಾಜ್ಯ ಸರ್ಕಾರವು 3–4 ವರ್ಷಗಳ ಹಿಂದೆಯೇ ಚಿಂತನೆ ನಡೆಸಿ, ಈ ಬಗ್ಗೆ ಯಾವುದೇ ಮುಂದಿನ ಕ್ರಮ ತೆಗೆದುಕೊಂಡಿರುವುದಿಲ್ಲ. ಪಕ್ಕದ ತಮಿಳುನಾಡಿಗೆ ವಿಮಾನ ನಿಲ್ದಾಣದ ಭಾಗ್ಯ ಲಭ್ಯವಾದಲ್ಲಿ ಕರ್ನಾಟಕಕ್ಕೆ ಅದರಲ್ಲೂ ಬೆಂಗಳೂರಿಗೆ ಹೊಂದಿಕೊಂಡಿರುವ ಯಾವ ಜಿಲ್ಲೆಗೂ ಸದ್ಯಕ್ಕಂತೂ ವಿಮಾನ ನಿಲ್ದಾಣ ನಿರ್ಮಾಣದ ಅವಕಾಶ ಸಿಗುವುದಿಲ್ಲ.

ಆದ್ದರಿಂದ ಈಗಾಗಲೇ ತುಮಕೂರು, ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಜಾಗ ಗುರುತಿಸಲಾಗಿದೆ ಎಂದು ಮತ್ತು ಜಾಗ ಅಂತಿಮಗೊಳಿಸಲು ಹೈಡೆಕ್ ಸಂಸ್ಥೆಗೆ ರಾಜ್ಯ ಸರ್ಕಾರ ವಹಿಸಿದೆ ಎಂದು ತಿಳಿದು ಬಂದಿರುವುದರಿಂದ, ಕಾವೇರಿ ನೀರಿಗಾಗಿ ತಮಿಳುನಾಡು ಜೊತೆ ಅನಾದಿ ಕಾಲದಿಂದಲೂ ಹೋರಾಟಕ್ಕೆ ಇಳಿದಂತೆ ಪರ್ಯಾಯ ಏರ್‌ಪೋರ್ಟ್‌ಗೂ ರಾಜ್ಯವು ಸಹ

ತಮಿಳುನಾಡು ಜೊತೆ ರೇಸ್‌ಗೆ ಇಳಿಯಬೇಕಾಗಿದೆ. ಆದಕಾರಣ, ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಕೂಡಲೇ ಅನುಮೋದನೆ ಪಡೆದುಕೊಳ್ಳಲು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ** ಕೈಗಾರಿಕೆಗಳು ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರು)**:–** ಮಾನ್ಯ ಸಭಾಪತಿಯವರೇ, ಈ ಬೆಂಗಳೂರು ನಗರಕ್ಕೆ ಎರಡನೇ ವಿಮಾನ ನಿಲ್ದಾಣ ಆಗಬೇಕು. ಏಕೆಂದರೆ, ೨೦೩೦ಕ್ಕೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಏನಿದೆ BIAL (Bengaluru Internation Airport Limited) ಅದು ೨೦೩೫ ರೊಳಗೆ 110 million passengers peak ಅನ್ನು ಮುಟ್ಟುತ್ತದೆ. ಹಾಗೆಯೇ cargo ನಲ್ಲಿ ಅದು 1.10 million tonnes ಮುಟ್ಟುತ್ತದೆ. ಅಲ್ಲಿಗೆ ಅದರ ಕೆಪಾಸಿಟಿ ಮುಗಿದು ಹೋಗುತ್ತದೆ. ಹೀಗಾಗಿ ನಾವು ಎರಡನೇ ವಿಮಾನ ನಿಲ್ದಾಣವನ್ನು ಪ್ರಾರಂಭ ಮಾಡಬೇಕೆಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತಿದ್ದೇನೆ. ನಾವು initiation ತೆಗೆದುಕೊಂಡಿದ್ದೇವೆ. ನಂತರ ತಮಿಳುನಾಡಿನವರು ಹೊಸೂರಿನಲ್ಲಿ ವಿಮಾನ ನಿಲ್ದಾಣ ಮಾಡುತ್ತೇವೆಂದು ಪ್ರಕಟ ಮಾಡಿದ್ದಾರೆ. ನಾನು initiation ತೆಗೆದುಕೊಂಡು, ನಾನು iDeCK (Infrastructure Development Corporation (Karnataka) Limited) Agency ಜೊತೆಗೆ meeting ಮಾಡಿ ಅವರು ಪ್ರಾಥಮಿಕ ಸಭೆಯಲ್ಲಿ ಯಾವ ರೀತಿ ವಿಮಾನ ನಿಲ್ದಾಣ ಆಗಬೇಕು ಏನೇನು ಮಾನದಂಡಗಳಿವೆ ಎಂಬುದೆಲ್ಲಾ ಚರ್ಚೆಯಾಗಿದೆ. ಇವತ್ತು ಬೆಳಗ್ಗೆ ಕೂಡ ನಾನು ಮಾತನಾಡಿದ್ದೇನೆ. ಈಗ ಎರಡನೇ ವಿಮಾನ ನಿಲ್ದಾಣ ನಿರ್ಮಾಣ ಮಾಡುವುದಕ್ಕೆ ತಾಂತ್ರಿಕವಾಗಿ ಕೆಲವು ಕಾರಣಗಳಿವೆ. ಗುಡ್ಡ ಇರಬಾರದು ಅದು ಒಂದು ಭಾಗ. ಎರಡನೇ ವಿಮಾನ ನಿಲ್ದಾಣಕ್ಕೆ ಎಲ್ಲಿ ಆಗಬೇಕು, ೬–೭ location ಗಳನ್ನು ಅವರು ಹೇಳಿದ್ದಾರೆ. ನಾವು ಆ location ಗೆ experts' opinion ತೆಗೆದುಕೊಳ್ಳುವುದಕ್ಕೆ ಇವತ್ತು ಸಭೆಯನ್ನು

ಮಾಡಿದ್ದೇವೆ. ಮತ್ತೆ ನಾಳೆಯೂ ಕೂಡ ಎರಡು ಸಭೆಗಳಿವೆ. ಆ ಸಭೆಯಲ್ಲೂ ಕೂಡ experts' opinion ನ್ನು ತೆಗೆದುಕೊಂಡು on merit ಹೇಳುತ್ತೇನೆ. ನನ್ನದು ಯಾವುದೇ ವೈಯುಕ್ತಿಕವಾದಂತಹ ಹಿತಾಸಕ್ತಿ ಕಾಳಷ್ಟು ಇಲ್ಲ. ಕರ್ನಾಟಕಕ್ಕೆ, ಬೆಂಗಳೂರಿಗೆ ಅನುಕೂಲವಾಗಬೇಕು ಆ ರೀತಿಯಲ್ಲಿ 100 million passengers ಗೆ ವಿಮಾನ ನಿಲ್ದಾಣವಾಗಬೇಕು. ಆ ದಿಸೆಯಲ್ಲಿ ನಾವು ಬಹಳ ಗಂಭೀರವಾಗಿದ್ದೇವೆ. Continuous ಆಗಿ ಇವತ್ತಿನ ದಿವಸ ಕೆಲಸ ನಡೆದಿದೆ ಎಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. ಅದರಲ್ಲಿ ಅನೇಕ ಮಾನದಂಡಗಳಿವೆ. ಈಗಿರುವಂತಹ ವಿಮಾನ ನಿಲ್ದಾಣಕ್ಕೆ ಸಂಪರ್ಕ ಇರಬೇಕೇ ಎನ್ನುವಂಥದ್ದು ಅಥವಾ ಯಾವ ಕಡೆಯಲ್ಲಿ ನಮಗೆ traffic load ಬರುತ್ತದೆ, ಹೀಗೆ ಅನೇಕ ರೀತಿಯ ವಿಚಾರಗಳಿವೆ. ಮೊದಲು ನಮ್ಮಲ್ಲಿ ಆಗಬೇಕು, ನಿಮ್ಮಲ್ಲಿ ಆಗಬೇಕು, ಈ ರೀತಿ ಅನೇಕ ಹೇಳಿಕೆಗಳು ಅನೇಕ ಶಾಸಕರುಗಳು, ಸಚಿವರುಗಳಿಗೂ ಕೂಡ ಒತ್ತಾಯಗಳು ಬರುತ್ತಿವೆ. It is completely based on experts' opinion in the interest of the state. On merit ನಾವು ನಿರ್ಧಾರವನ್ನು ಕೈಗೊಳ್ಳುತ್ತೇವೆ.

**ಏ) ವಿಷಯ: ಕರಾವಳಿ ಮತ್ತು ಮಲೆನಾಡಿನಲ್ಲಿ ಅತಿವೃಷ್ಟಿಯಿಂದ**
**ಆಗುತ್ತಿರುವ ಗಂಭೀರ ಸಮಸ್ಯೆಗಳ ಬಗ್ಗೆ.**

------

**ಡಾ॥ ಧನಂಜಯ ಸರ್ಜಿ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಪತ್ರಿಕಾ ಮತ್ತು ದೃಶ್ಯ ಮಾಧ್ಯಮಗಳಲ್ಲಿ ನಿರಂತರ ವರದಿಯಾಗುತ್ತಿರುವ ಗಂಭೀರ ವಿಷಯ ಮಲೆನಾಡಿನಲ್ಲಿ ವರುಣಾರ್ಭಟದಿಂದ ಅವಾಂತರ ವಿವಿಧೆಡೆ ಸಾರ್ವಜನಿಕ ಆಸ್ತಿಪಾಸ್ತಿಗಳು ನಷ್ಟ ಸಂಭವಿಸಿದ್ದರೂ ಸರ್ಕಾರದ ನಿರ್ಲಕ್ಷ್ಯ ಮಾತ್ರ ಜನಸಾಮಾನ್ಯರನ್ನು ಕಂಗೆಡಿಸಿದೆ.

ಕರಾವಳಿ ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯೂ ಸೇರಿದಂತೆ ಶಿವಮೊಗ್ಗ ಮಲೆನಾಡು ಪ್ರದೇಶವು ಪ್ರಸಕ್ತ ಮುಂಗಾರಿನ ನಿರಂತರ ಮಳೆಯಿಂದಾಗಿ ಅಕ್ಷರಶಃ ಮಳೆನಾಡಾಗಿ ಪರಿವರ್ತನೆಗೊಂಡಿದೆ. ವಾರದಿಂದ ಸೂರ್ಯನ ದರ್ಶನದ ಭಾಗ್ಯವೇ ದೊರೆತಿಲ್ಲ. ಮಲೆನಾಡು ಕರಾವಳಿಯ ಭತ್ತದ ಗದ್ದೆಗಳು ಸಂಪೂರ್ಣ ಜಲಾವೃತಗೊಂಡಿವೆ. ಹಳ್ಳಗಳು ಉಕ್ಕಿ ಅಡಕೆ ತೋಟಗಳಿಗೆ ನೀರು ನುಗ್ಗಿದೆ. ಜಲಾಶಯಗಳು ತುಂಬಿದ್ದು, ಅಣೆಕಟ್ಟೆಯ ಕೆಳಭಾಗದ ಜನರು ಪ್ರವಾಹದ ಅಪಾಯಕ್ಕೊಳಗಾಗಿದ್ದಾರೆ.

ಬಾಳೇಹೊನ್ನೂರು ಕರಿಯಮ್ಮನ ಬೀದಿಯಲ್ಲಿ ಮನೆಗೋಡೆ ಕುಸಿದಿದ್ದು, ಮನೆಯಲ್ಲಿದ್ದ ವಸ್ತುಗಳೆಲ್ಲಾ ಮಣ್ಣಿನಲ್ಲಿ ಮುಚ್ಚಿ ಹೋಗಿ ನಷ್ಟ ಸಂಭವಿಸಿದೆ. ಹೀಗೆ ನೂರಾರು ಮನೆಗಳು ಹಾನಿಗೊಳಗಾಗಿರುತ್ತವೆ. ಉಡುಪಿ ಜಿಲ್ಲೆಯೊಂದರಲ್ಲೇ ೨ ಮನೆಗಳು ಸಂಪೂರ್ಣವಾಗಿ ನೆಲಕಚ್ಚಿದ್ದು, ೫೦೦ಕ್ಕೂ ಹೆಚ್ಚಿನ ಮನೆಗಳು ಭಾಗಶಃ ಬಿದ್ದಿವೆ. ಕರಾವಳಿ ಜಿಲ್ಲೆಗಳಲ್ಲಿಯೂ ದ್ವೀಪಗಳು ಸಂಪೂರ್ಣ ಜಲಾವೃತಗೊಂಡಿದ್ದು, ತೀರ ಪ್ರದೇಶಗಳಲ್ಲಿ ಅಪಾರ ಪ್ರಮಾಣದ ಕಡಲ್ಕೊರೆತ ಉಂಟಾಗಿದ್ದು, ಸಾರ್ವಜನಿಕರ ಜೀವನ ಅಸ್ತವ್ಯಸ್ತವಾಗಿದೆ. ಕೋಟ್ಯಂತರ ರೂಪಾಯಿ ಆಸ್ತಿಪಾಸ್ತಿ ಹಾನಿಗೊಂಡಿದ್ದು, ಅನೇಕ ಜನ ಮತ್ತು ಜಾನುವಾರುಗಳ ಪ್ರಾಣ ಹಾನಿ ಸಂಭವಿಸಿದೆ.

ಕಳೆದೊಂದು ತಿಂಗಳನಿಂದ ಅತಿವೃಷ್ಟಿಯಿಂದ ಹಾನಿ ಸಂಭವಿಸುತ್ತಿದ್ದರೂ ಪ್ರವಾಹದ ನಿರ್ವಹಣೆ ಮಾತ್ರ ನಿರೀಕ್ಷಿತ ಮಟ್ಟದಲ್ಲಿ ಆಗದಿರುವುದು ಸರ್ಕಾರದ ದಿವ್ಯ ನಿರ್ಲಕ್ಷ್ಯತನಕ್ಕೆ ಹಿಡಿದ ಕೈಗನ್ನಡಿ. ಸರ್ಕಾರದ ಸಚಿವರುಗಳು ಕಾಟಚಾರಕ್ಕೆ ಅಲ್ಲೊಂದು ಇಲ್ಲೊಂದು ಭೇಟಿ ನೀಡಿದ್ದು ಹೊರತುಪಡಿಸಿ ಯಾವುದೇ ರಚನಾತ್ಮಕ ಕ್ರಮ ಕೈಗೊಳ್ಳುವಲ್ಲಿ ಸರ್ಕಾರ ವಿಫಲವಾಗಿದೆ. ಆದ್ದರಿಂದ ಸರ್ಕಾರ ಈ ಕೂಡಲೇ ಉನ್ನತ ಅಧಿಕಾರಗಳ ಹಾಗೂ ತಜ್ಞರ ಟಾಸ್ಕ್‌ಫೋರ್ಸ್ ರಚಿಸುವಂತೆ ಮತ್ತು ತುರ್ತಾಗಿ ಅತಿವೃಷ್ಟಿ ಪೀಡಿತ ಪ್ರದೇಶಗಳಿಗೆ ಪರಿಹಾರಕ್ಕಾಗಿ ವಿಶೇಷ ಪ್ಯಾಕೇಜ್ ಘೋಷಣೆ ಮಾಡುವಂತೆ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ನಮ್ಮ ಇಲಾಖೆಯಿಂದ ಸುದೀರ್ಘವಾದ ಉತ್ತರ ಕೊಡುತ್ತೇವೆ. ಆದರೆ ನಾನು ಸಾಂದರ್ಭಿಕವಾಗಿ ಹೇಳುವುದಾದರೆ, ಮೊನ್ನೆ ಶನಿವಾರ, ಭಾನುವಾರ, ಬಹುತೇಕ ಜಿಲ್ಲೆಗಳಿಗೆ ಆಯಾಯ ಜಿಲ್ಲಾ ಸಚಿವರು ಭೇಟಿ ಕೊಟ್ಟು ಎಲ್ಲೆಲ್ಲಿ ಪ್ರವಾಹದಿಂದ ತೊಂದರೆಯಾಗಿದೆ ಅದನ್ನು attend ಮಾಡುವಂತಹ ಕೆಲಸ ಅವರು ಮಾಡುತ್ತಿದ್ದಾರೆ. ನಾನು ದಿನಕ್ಕೆ ಎರಡು ಬಾರಿ ಎಲ್ಲಾ ಜಿಲ್ಲಾಧಿಕಾರಿಗಳ ಜೊತೆ ಮಾತನಾಡುತ್ತಿದ್ದೇನೆ. ಪರಿಹಾರ ಕ್ರಮಗಳ ಬಗ್ಗೆ ಆದ್ಯತೆಯನ್ನು ಕೊಡುತ್ತಿದ್ದೇವೆ. ಮೂರನೆಯದಾಗಿ, ರಸ್ತೆಗಳೇನು ಹಾಳಾಗಿವೆ ತಕ್ಷಣವೇ ಈ ವಾರದಿಂದಲೇ ರಿಪೇರಿ ಕೆಲಸ ಆರಂಭವಾಗಬೇಕೆಂದು ಸೂಚನೆ ಕೊಟ್ಟಿದ್ದೇವೆ. ಕೆಲವು ಮಲೆನಾಡು ಭಾಗದಲ್ಲಿ ವಿದ್ಯುತ್ ಕಂಬಗಳು ಬಿದ್ದು ಹೋಗಿವೆ, wire ಬಿದ್ದು ಹೋಗಿದೆ, ಅದರ ಕಡೆ ಹಚ್ಚಿನ ಆದ್ಯತೆ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರು ಕೂಡ ಇಂಧನ ಇಲಾಖೆಗೆ ಸೂಚನೆಯನ್ನು ಕೊಟ್ಟಿದ್ದಾರೆ. ನಾನು ಅವರ ಜೊತೆ ಮಾತನಾಡುತಿದ್ದೇನೆ. ಹಾಗಾಗಿ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಜಿಲ್ಲಾಡಳಿತಕ್ಕೆ ರೂ.777 ಕೋಟಿಗಳನ್ನು ಒದಗಿಸಿ ಕೊಟ್ಟಿದ್ದೇವೆ. ಇನ್ನು ಎಚ್ಚೆತ್ತುಕೊಂಡು ಮಾಡಬೇಕು ಅದನ್ನು ಮಾಡುತೇವೆ. ಇನ್ನು ಉಳಿದಿರುವುದನ್ನು ನಾನು ಅವರಿಗೆ ವಿವರವಾಗಿ ಉತ್ತರ ಕೊಡುತ್ತೇನೆ.

**೩. ರಾಜ್ಯದಲ್ಲಿ ಕೊಲೆ, ಅತ್ಯಾಚಾರ, ಮಕ್ಕಳ ಮೇಲಿನ ದೌರ್ಜನ್ಯ, ಸೈಬರ್ ಅಪರಾಧ ಪ್ರಕರಣಗಳನ್ನು ತಡೆಯುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿರುವ ಬಗ್ಗೆ ನಿಯಮ 59ರ ನಿಲುವಳಿ ಸೂಚನೆಯಡಿ ವಿಷಯ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

– – –

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ನಾನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ.

**ಸಭಾಪತಿಯವರು:–** ಬಹಳಷ್ಟು ಜನರು ಸಹಿ ಮಾಡಿ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೀರಿ. ಇವು ದಿನನಿತ್ಯ ನಡೆಯುವಂತಹ ಕಾರ್ಯಕ್ರಮಗಳು. ನೀವು ಕೊಟ್ಟಿರುವ ನಿಲುವಳಿ ಸೂಚನೆಯನ್ನು ನಿಯಮ ೩೩೦ಕ್ಕೆ ಪರಿವರ್ತನೆ ಮಾಡಿದ್ದೇನೆ. ಈ ವಿಷಯವನ್ನು ಗುರುವಾರ ನಿಯಮ ೩೩೦ ರಲ್ಲಿ ತೆಗೆದುಕೊಳ್ಳುತ್ತೇನೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ನಾನು ಈಗ ಆ ವಿಷಯದ ಬಗ್ಗೆ ಪ್ರಸ್ತಾವನೆ ಮಾಡುತ್ತೇನೆ.

**ಸಭಾಪತಿಯವರು:–** ಈಗ ಪ್ರಸ್ತಾವನೆ ಮಾಡುವುದು ಬೇಡ. ತಾವು ಆ ಪ್ರಸ್ತಾವನೆಯನ್ನು ಕೊಟ್ಟಿದ್ದೀರಿ, ಅದನ್ನು ನಾನು ಓದಿದ್ದೇನೆ. ನಿಯಮ ೩೩೦ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಗುರುವಾರ ದಿವಸ ತೆಗೆದುಕೊಳ್ಳುತ್ತೇವೆ.

**ಶ್ರೀ ಕೃಷ್ಣಭೈರೇಗೌಡ(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ತಮ್ಮ ತೀರ್ಮಾನಕ್ಕೆ ನಾವು ಸಂಪೂರ್ಣ ಗೌರವ ಕೊಡುತ್ತೇವೆ. ಅವರು ಪ್ರಸ್ತಾಪ ಮಾಡುವುದಕ್ಕೆ ಹೋದರೆ ನಾವು ಟೆಕ್ನಿಕಲ್ ಆಗಿ ಕೆಲವು ಆಕ್ಷೇಪಣೆಗಳನ್ನು ವ್ಯಕ್ತಪಡಿಸಬೇಕಾಗುತ್ತದೆ. ಅದಕ್ಕೆ ತಮ್ಮ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ನಾವೇನು ಕೊಟ್ಟಿದ್ದೇವೆ ಎಂಬುದನ್ನು ಸದನದ ಗಮನಕ್ಕೆ ತರುತ್ತೇನೆ.

**ಸಭಾಪತಿಯವರು:–** ಈ ವಿಷಯ ಸದನದ ಮುಂದೆ ಬರುತ್ತಿದೆ. ಈ ವಿಷಯವನ್ನು ನಾನು ಓದಿದ್ದೇನೆ. ಇದು ನಿಯಮದ ಪ್ರಕಾರ ಬರುವುದಿಲ್ಲ. ಅದಕ್ಕಾಗಿ ಈ ವಿಷಯವನ್ನು ನಿಯಮ ೩೩೦ ರಲ್ಲಿ ಚರ್ಚೆಗೆ ತೆಗೆದುಕೊಳ್ಳುತಿದ್ದೇನೆ. ಗುರುವಾರ ದಿವಸ ತೆಗೆದುಕೊಳ್ಳಿ ಎಂದು ಈ ನೋಟಿಸ್ ಮೇಲೆ ಬರೆದುಬಿಟ್ಟಿದ್ದೇನೆ.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, ಈ ವಿಷಯ ನಿಲುವಳಿ ಸೂಚನೆಗೆ ಬರುವುದಿಲ್ಲ. ತಾವು ತೀರ್ಮಾನ ತೆಗೆದುಕೊಂಡಿರುವುದು ಸರಿಯಾಗಿದೆ, ಅದಕ್ಕೆ ನಾವು ಸಹಕಾರ ಕೊಡುತ್ತೇವೆ.

**ಸಭಾಪತಿಯವರು:–** ಮಾನ್ಯ ಸಿ.ಟಿ.ರವಿಯವರೇ, ನಿಯಮ ೩೩೦ ರಲ್ಲಿ ನಿಮ್ಮ ವಿಷಯವೇ ಮೊದಲು ಇದೆ. (ಮುಂದು)

(626) 32/07/2024 12:40/ಎಸ್‌ಪಿಆರ್/ವಿಕೆ(ಎಂಡಿ) (ಸಭಾಪತಿಯವರ ಉಪಸ್ಥಿತಿ)

**4. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅಕ್ರಮದ ಬಗ್ಗೆ ಕೇಂದ್ರ ಸರ್ಕಾರದ ಇ.ಡಿ. ಅಧಿಕಾರಿಗಳು ತನಿಖೆ ನೆಪದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಉದ್ದೇಶಪೂರ್ವಕವಾಗಿ ಕಿರುಕುಳ ನೀಡುತ್ತಿರುವ ಬಗ್ಗೆ ನಿಯಮ 68ರ ಅಡಿಯಲ್ಲಿ ನೀಡಲಾದ ನೋಟೀಸಿನ ಮೇಲೆ ಚರ್ಚಿಸಲು ಅನುಮತಿ ಕೋರಿ ಪ್ರಸ್ತಾವ.**

---

**ಸಭಾಪತಿಯವರು(ಮುಂದು):-** ಶ್ರೀ ಯು.ಬಿ.ವೆಂಕಟೇಶ್‌ರವರೇ ನೀವು ನೀಡಿರುವ ಪ್ರಸ್ತಾವನೆಯ ಕುರಿತಾದ ವಿಷಯವು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ. ಹೀಗೆ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವ ವಿಷಯದ ಮೇಲೆ ಚರ್ಚೆ ನಡೆಸುವುದು ಸಮ್ಮತವಲ್ಲ.

**ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ನ್ಯಾಯಾಲಯದಲ್ಲಿರುವ ವಿಷಯದ ಬಗ್ಗೆ ನಾವು ಚರ್ಚೆ ಮಾಡುವುದಿಲ್ಲ.

**ಸಭಾಪತಿಯವರು:-** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ನ್ಯಾಯಾಲಯದಲ್ಲಿರುವ ವಿಷಯದ ಬಗ್ಗೆ ಚರ್ಚೆ ಮಾಡುವುದಿಲ್ಲ; ಆ ವಿಷಯವೇ ಬರುವುದಿಲ್ಲ.

**ಸಭಾಪತಿಯವರು:-** ನೀವು ನೀಡಿರುವ ಪ್ರಸ್ತಾವನೆಯನ್ನು ನೋಡಿದಾಗ, ಅಲ್ಲಿ ಜಾರಿ ನಿರ್ದೇಶನಾಲಯದ ಬಗ್ಗೆ ಪ್ರಸ್ತಾಪಿಸಲಾಗಿದೆ. ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಅಲ್ಲಿ ಜಾರಿ ನಿರ್ದೇಶನಾಲಯದ ಬಗ್ಗೆ ಹೇಳಲ್ಲ. ಒಬ್ಬ ಅಧಿಕಾರಿಯ ಮೇಲೆ ಯಾವ ರೀತಿಯಾಗಿ ಮಾಡುತ್ತಾರೆ ...

**ಸಭಾಪತಿಯವರು:-** ಇದನ್ನು ಬೇರೆ ರೂಪದಲ್ಲಿ ನೀಡಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ನೀವು ಯಾವುದಕ್ಕೆ ಬೇಕಾದರೂ ಬದಲಾಯಿಸಿ; ಆದರೆ, ಪ್ರಸ್ತಾವನೆ ಮಾಡುವುದಕ್ಕೆ ಅವಕಾಶವನ್ನು ನೀಡಿ. ನೀವು ಯಾವುದೇ ನಿಯಮದಡಿ ಅದನ್ನು ತೆಗೆದುಕೊಳ್ಳಿ.

**ಸಭಾಪತಿಯವರು:-** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ಯಾವುದೇ ನಿಯಮಗಳಡಿ ಇದು ಬರುವುದಿಲ್ಲ; ನಾನು ನೋಡಿದ್ದೇನೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 286 ರಡಿ ಬರುತ್ತದೆ. ಹಾಗೆಯೇ ಇದು M.N.Kaul and S.L.Shakdher – Practice and Procedure of Parliament ನಲ್ಲಿ ಈ ರೀತಿ ಹೇಳಲಾಗಿದೆ, ಅದನ್ನು ಓದುತ್ತೇನೆ.

> *"...there is a provision that those aspects whose discussion might not prejudice the inquiry can be allowed by the Speaker. Discussion on a matter of public importance, or of great importance may be allowed but one shall have to confine oneself within limits..."*

ಇದನ್ನು ನಾನು ಇಲ್ಲಿ ಉಲ್ಲೇಖಿಸುತ್ತೇನೆ.

**Mr.CHAIRMAN:-** It is not in public interest.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ...

**ಸಭಾಪತಿಯವರು:-** ನಾನು ಹೇಳುವುದನ್ನು ಕೇಳಿ. ನೀವು ಪ್ರಸ್ತಾವನೆಯನ್ನು ನೀಡಿದ್ದೀರಿ. ನಾನು ನಿಯಮಗಳನ್ನು ನೋಡಿದ್ದೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೆ, ನಾಲ್ಕು ಅಧಿಕಾರಿಗಳ ಮೇಲೆ ಒತ್ತಡ ತಂದು ...

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 286 ರಡಿ ನಾವು ಮಾತನಾಡಬಹುದು.

**ಸಭಾಪತಿಯವರು:-** ನೀವು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ "ಇ.ಡಿ. ಅಧಿಕಾರಿಗಳು ತಮ್ಮ ಸಂವಿಧಾನ ಬದ್ಧ ಕರ್ತವ್ಯವನ್ನು ನಿರ್ವಹಿಸುವುದನ್ನು ಬಿಟ್ಟು ಚುನಾಯಿತ ಸರ್ಕಾರವನ್ನು ಬುಡಮೇಲು ಮಾಡುವ ದುಷ್ಕೃತ್ಯದ ಕುರಿತು" ಎಂದು ತಿಳಿಸಲಾಗಿದೆ. ಸರ್ಕಾರಕ್ಕೂ ಹಾಗೂ ಆ ಸಂಸ್ಥೆಗೂ ಏನು ಸಂಬಂಧವಿದೆ?

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಇದು ಕೇಂದ್ರ ಸರ್ಕಾರದ ...

**ಶ್ರೀ ಸಲೀಂ ಅಹಮದ್(ಸರ್ಕಾರಿ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಬಹಳ ಮಹತ್ವವಾದ ವಿಚಾರವಾಗಿದ್ದು, ಇಲ್ಲಿ ದೊಡ್ಡ ಷಡ್ಯಂತ್ರ ನಡೆಯುತ್ತಿದೆ. ಇಲ್ಲಿ ಬೇಕಂತಲೇ ರಾಜ್ಯದ ಮುಖ್ಯಮಂತ್ರಿಗಳ ಹೆಸರನ್ನು ತೆಗೆದುಕೊಳ್ಳುತ್ತಿದ್ದಾರೆ. ಅಧಿಕಾರಿಗಳ ಮೂಲಕ ಜಾರಿ ನಿರ್ದೇಶನಾಲಯದವರು ದೂರು ಸಲ್ಲಿಸುವಂತೆ ಮಾಡುತ್ತಿದ್ದಾರೆ. ಹೀಗಾಗಿ ಚರ್ಚೆಗೆ ಅವಕಾಶವನ್ನು ನೀಡಬೇಕೆಂದು ಕೋರುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ಮೊದಲು ವಿಷಯವನ್ನು ಪ್ರಸ್ತಾಪಿಸುವುದಕ್ಕೆ ಅವಕಾಶವನ್ನು ನೀಡಿ. ನಂತರದಲ್ಲಿ ಚರ್ಚೆಗೆ ಯಾವಾಗಲಾದರೂ ಅವಕಾಶವನ್ನು ನೀಡಿ.

**ಸಭಾಪತಿಯವರು:–** ಒಂದು ಪ್ರಕರಣವು ಸಿ.ಬಿ.ಐ. ಕಡೆ ಇದೆ. ಒಂದು ಪ್ರಕರಣವು ಇ.ಡಿ. ರವರ ಕಡೆ ಇದೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ಈ ಪ್ರಸ್ತಾವನೆಯಲ್ಲಿ ಸಿ.ಬಿ.ಐ. ಅನ್ನು ಪ್ರಸ್ತಾಪಿಸಿಲ್ಲ. ಕೇವಲ ಇ.ಡಿ. ಬಗ್ಗೆಯ ಮಾತ್ರವೇ ಪ್ರಸ್ತಾಪಿಸಿದ್ದೇವೆ. ಇ.ಡಿ. ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎನ್ನುವುದು ರಾಜ್ಯದ ಜನತೆಗೆ ಗೊತ್ತಾಗಬೇಕು.

**(ಗೊಂದಲ)**

**ಸಭಾಪತಿಯವರು:–** ಯಾರಾದೂ ಒಬ್ಬರು ಮಾತನಾಡಿ; ನಾನು ಹೇಳುವುದನ್ನು ಕೇಳಿ. "ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅಕ್ರಮದ ಬಗ್ಗೆ ಕೇಂದ್ರ ಸರ್ಕಾರದ ಇ.ಡಿ. ಅಧಿಕಾರಿಗಳು ತನಿಖೆಯ ನೆಪದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳನ್ನು ಉದ್ದೇಶ ಪೂರ್ವಕವಾಗಿ ಕಿರುಕುಳವನ್ನು ನೀಡುತ್ತಿದ್ದು, ಈ ಅಕ್ರಮಕ್ಕೆ ಈಗಿನ ಸರ್ಕಾರವೇ ನೇರ ಹೊಣೆ ಎನ್ನುವಂತಹ ಆರೋಪವನ್ನು ಒಪ್ಪಿಕೊಳ್ಳುವಂತೆ ಬೆದರಿಕೆಯನ್ನು ಹಾಕುತ್ತಿರುವುದು ಎಂಬುದಾಗಿ ದೂರು ನೀಡಿರುತ್ತದೆ" ಎಂಬುದಾಗಿ ನೀವು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ತಿಳಿಸಲಾಗಿದೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ಅಧಿಕಾರಿಯ ಮೇಲೆ ಅಧಿಕೃತವಾಗಿ ದೂರನ್ನು ನೀಡಿದ್ದಾರೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೆ, ಯಾರು ಯಾರ ಮೇಲೆ ದೂರನ್ನು ನೀಡಿದ್ದಾರೆ ಎನ್ನುವ ಸತ್ಯಾಸತ್ಯತೆಯನ್ನು **(ಗೊಂದಲ)** ಇಡೀ ಹಗರಣವನ್ನು ಮುಚ್ಚಿ ಹಾಕುವುದಕ್ಕೆ ಇದು ಸಂಚು ಆಗಿದೆ. **(ಗೊಂದಲ)** ಇದು ರಾಜಕೀಯದ ಟೂಲ್ ಕಿಟ್ ಆಗಿದೆ.

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ. ಈಗ ಸದಸ್ಯರುಗಳು ಮಾತನಾಡಿರುವುದು ಯಾವುದೂ ಸಹ ಕಡತಕ್ಕೆ ಹೋಗುವುದಿಲ್ಲ.

**(ಸಭಾಪತಿಯವರ ಆದೇಶಾನುಸಾರ ಸದನದ ಈ ಹಂತದಲ್ಲಿನ ನಡವಳಿಗಳನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಸಭಾಪತಿಯವರು:–** ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡಲಾಗಿದೆ.

**(ಸದನವು ಅಪರಾಹ್ನ 12 ಗಂಟೆ 45 ನಿಮಿಷಕ್ಕೆ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)**

(627) 23-07-2024 (1.10) ಕೆಜಿ:ಕೆಎಸ್ (ಸಭಾಪತಿಯವರ ಉಪಸ್ಥಿತಿ)

**(ಮಧ್ಯಾಹ್ನ 12 ಗಂಟೆ 45 ನಿಮಿಷಕ್ಕೆ 10 ನಿಮಿಷ ಕಾಲ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 01 ಗಂಟೆ 10 ನಿಮಿಷಗಳಿಗೆ ಸಮಾವೇಶಗೊಂಡಿತು)**

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ತಾವು ಎರಡು ನಿಮಿಷಗಳಲ್ಲಿ ಮಾತನಾಡಿ ಮುಗಿಸಿ.

**5. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅಕ್ರಮದ ಬಗ್ಗೆ ಕೇಂದ್ರ ಸರ್ಕಾರದ ಇ.ಡಿ. ಅಧಿಕಾರಿಗಳು ತನಿಖೆ ನೆಪದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಉದ್ದೇಶಪೂರ್ವಕವಾಗಿ ಕಿರುಕುಳ ನೀಡುತ್ತಿರುವ ಬಗ್ಗೆ ನಿಯಮ 68ರ ಅಡಿಯಲ್ಲಿ ನೀಡಲಾದ ನೋಟೀಸಿನ ಮೇಲೆ ಚರ್ಚಿಸಲು ಅನುಮತಿ ನಿರಾಕರಿಸಿರುವುದನ್ನು ಪುನರ್ ಪರಿಶೀಲಿಸಲು ಆಡಳಿತ ಪಕ್ಷದ ಸದಸ್ಯರಿಂದ ಒತ್ತಾಯ**

- - -

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಆಯಿತು. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅಕ್ರಮದ ಬಗ್ಗೆ ಕೇಂದ್ರ ಸರ್ಕಾರದ ಇ,ಡಿ. ಅಧಿಕಾರಿಗಳು ತನಿಖೆ ನೆಪದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಉದ್ದೇಶ ಪೂರ್ವಕವಾಗಿ ಕಿರುಕುಳ ನೀಡುತ್ತಿದ್ದು, ಈ ಕ್ರಮಕ್ಕೆ ಈಗಿನ ಸರ್ಕಾರವೇ ನೇರ ಹೊಣೆ ಎನ್ನುವಂತಹ ಆರೋಪಗಳನ್ನು ಒಪ್ಪಿಕೊಳ್ಳುವಂತೆ ಬೆದರಿಕೆ ಹಾಕುತ್ತಿರುವುದಾಗಿ ದೂರು ನೀಡಿರುತ್ತಾರೆ.

ಮಾನ್ಯ ಸಭಾಪತಿಯವರೇ, ದಿನಾಂಕ 22-07-2024 ರಂದು ಶ್ರೀ ಕಲ್ಲೇಶ್.ಬಿ, ಹೆಚ್ಚುವರಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, Gazetted ಅಧಿಕಾರಿ, 54 ವರ್ಷ, ಇವರು ರಾಜ್ಯದ ಇತಿಹಾಸದಲ್ಲಿ ಕಂಡುಹರಿಯದ ರೀತಿಯಲ್ಲಿ ವಿಲ್ಸನ್ ಗಾರ್ಡನ್ ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದಾರೆ. ಸದರಿ ದೂರಿನಲ್ಲಿ ಜಾರಿ ನಿರ್ದೇಶನಾಲಯ ಇ.ಡಿ ಅಧಿಕಾರಿಗಳಾದ ಶ್ರೀ ಮಿಥಲ್ ಮತ್ತು ಶ್ರೀ ಮುರಳಿ ಕಣ್ಣನ್ ಎಂಬ ಇ.ಡಿ ಅಧಿಕಾರಿಗಳು ಸೇರಿ ಕರ್ನಾಟಕ ವಾಲ್ಮೀಕಿ ಮಹರ್ಷಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಆಕ್ರಮದ ಬಗ್ಗೆ ತನಿಖೆ ನಡೆಸುವಾಗ ನೀನೊಬ್ಬ ಅಪರಾಧಿ, ನಿನ್ನನ್ನು ಈಗಲೇ arrest ಮಾಡುತ್ತೇವೆ. ನಿನಗೆ ಇ.ಡಿ ಬಗ್ಗೆ ಗೊತ್ತಿಲ್ಲ. ನಿನಗೆ 2-3 ವರ್ಷಗಳು bail ಸಿಗುವುದಿಲ್ಲ. ನಿನ್ನ ಹೇಳಿಕೆಯನ್ನು ನಾನು ಓದಿದ್ದೇನೆ. ಇದು ಪ್ರಯೋಜನಕ್ಕೆ ಬರುವುದಿಲ್ಲ. ನಿನಗೆ ಇ.ಡಿ. ಸಹಾಯ ಮಾಡಬೇಕೆಂದರೆ, ನೀನು

ಬರೆದುಕೊಡಬೇಕು. M.G. Road ಖಾತೆಗೆ ಹಣವನ್ನು, ಮಾನ್ಯ C.M. (Chief Minister) ರವರು, Sri B. Nagendra ರವರು ಮತ್ತು F.D. (Finance Department) ರವರ ನಿರ್ದೇಶನದಂತೆ ಮಾಡಿರುತ್ತೇನೆ. ಅದಕ್ಕೆ ಅವರ ಒತ್ತಡ ಇತ್ತು ಎಂದು ಬರೆದುಕೊಡಲು ತಿಳಿಸಿರುತ್ತಾರೆ. ಅವರಿಗೆ ಪದೇ ಪದೇ ಪ್ರಶ್ನೆ ಕೇಳಿ ನಿನಗೆ ಏಳು ವರ್ಷ ಜೈಲು ಶಿಕ್ಷೆ ಮಾಡಿಸುವವರೆಗೆ ಬಿಡುವುದಿಲ್ಲವೆಂದು ನನ್ನನ್ನು ಭಯಭೀತನನ್ನಾಗಿ ಮಾಡಿರುತ್ತಾರೆ. ನಂತರ ಶ್ರೀ ಮಿಥಲ್‌ರವರು ಶ್ರೀ ಮುರಳಿ ಕಣ್ಣನ್‌ರವರಿಗೆ ದೂರವಾಣಿ ಕರೆ ಮಾಡಿ ತಮ್ಮ chamber ಗೆ ಕರೆಸಿಕೊಂಡು ಪುನಃ ಇಬ್ಬರು ಸೇರಿ ಅದೇ ಪ್ರಶ್ನೆಯನ್ನು ಕೇಳಿದರು. ಮಾನ್ಯ C.M. ರವರು, Sri B. Nagendra ರವರು ಮತ್ತು F.D. ರವರ ಸೂಚನೆ ಇತ್ತು ಎಂದು ಒಪ್ಪಿಕೋ, ಇಲ್ಲದಿದ್ದರೆ, ಈಗಲೇ ನಿನ್ನನ್ನು arrest ಮಾಡುತ್ತೇವೆಂದು ಭಯ ಬರುವಂತೆ ವಾತವರಣವನ್ನು ಸೃಷ್ಟಿಸಿರುತ್ತಾರೆಂದು ದೂರಿನಲ್ಲಿ ತಿಳಿಸಿರುತ್ತಾರೆ. ಇ.ಡಿ.ಅಧಿಕಾರಿಗಳು ತಮ್ಮ ಸಂವಿಧಾನ ಬದ್ಧವಾದ ಕರ್ತವ್ಯಗಳನ್ನು ನಿರ್ವಹಿಸುವುದನ್ನು ಬಿಟ್ಟು ಚುನಾಯಿತ ಸರ್ಕಾರವನ್ನು ಬುಡಮೇಲು ಮಾಡುವಂತಹ ದುಷ್ಕೃತ್ಯಕ್ಕೆ ಇಳಿದಿರುವ ಕುರಿತು ಹಾಗೂ ಸಾರ್ವಜನಿಕವಾಗಿ ಅತ್ಯಂತ ಮಹತ್ವವುಳ್ಳ ಈ ವಿಷಯವನ್ನು ಕುರಿತು ಪ್ರಸ್ತಾಪಿಸುತ್ತಿದ್ದೇನೆ. ಈ ಸದನ ಒಂದು ನಿರ್ಣಯವನ್ನು ಮಾಡಿ ಈ ಇ.ಡಿ ಯನ್ನು ಬಹಿಷ್ಕರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅದೇ ತರಹ ತಾವು ಮುಂದೆ ಚರ್ಚೆಗೆ ಅವಕಾಶ ಕೊಡಬೇಕು.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಅವರು ಸಂವಿಧಾನ ಬದ್ಧವಾದ ಸಂಸ್ಥೆಯನ್ನು ಬಹಿಷ್ಕರಿಸಬೇಕೆಂದು ಹೇಳಿದ್ದಾರೆ.,

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ.,

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷ ಮತ್ತು ವಿರೋಧಪಕ್ಷಗಳ ಸದಸ್ಯರು ಒಟ್ಟಿಗೆ ಎದ್ದುನಿಂತು ಚರ್ಚೆಯಲ್ಲಿ ತೊಡಗಿದರು)**

**ಸಭಾಪತಿಯವರು:–** ಮಾನ್ಯ ಸದಸ್ಯರೇ, ತಾವೆಲ್ಲರೂ ಕುಳಿತುಕೊಳ್ಳಿ. ನಾನು ಯು.ಬಿ.ವೆಂಕಟೇಶ್‌ರವರಿಗೆ 2 ನಿಮಿಷಗಳ ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡಲಿ ಬಿಡಿ. ಒಂದು ನಿಮಿಷ ತಾವೆಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಒಂದು wrong practice ಅನ್ನು ಹಾಕಿಕೊಡುತ್ತಿದೆ. ಈ ಸದನ.,

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ,

**(ಗೊಂದಲ)**

**ಸಭಾಪತಿಯವರು:–** ಶ್ರೀ ವೆಂಕಟೇಶ್‌ರವರೇ, ಸಾಕು ಬಿಡಿ.

**(ಗೊಂದಲ)**

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಡಿಯವರನ್ನು ಬಹಿಷ್ಕಾರ ಮಾಡುವುದಕ್ಕೆ ಇವರು ಯಾರು? ಇವರು ಸಂವಿಧಾನ ಬದ್ಧವಾದ ಒಂದು ಸಂಸ್ಥೆಯನ್ನು ಬಹಿಷ್ಕರಿಸಬೇಕೆಂದು ಹೇಳಿದ್ದಾರೆ. **(ಗೊಂದಲ)** ಮಾನ್ಯ ಮುಖ್ಯಮಂತ್ರಿಯವರು ನಿನ್ನೆ ದಿವಸ ಇದರ ಬಗ್ಗೆ ತಪ್ಪಾಗಿದೆ ಎಂದು ಒಪ್ಪಿಕೊಂಡಿದ್ದಾರೆ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, **(ಗೊಂದಲ)** ಲೋಕಾಸಭಾ ಚುನಾವಣೆಯಲ್ಲಿ ಬಯಲಾಗಿದೆ.,

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಯು.ಬಿ. ವೆಂಕಟೇಶ್‌ರವರೇ, **(ಗೊಂದಲ)** ಆಯಿತು ಬಿಡಿ.

**(ಗೊಂದಲ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಇದೆಯೇ? ಅವರು ನಾಟಕ ಮಾಡುತ್ತಿದ್ದಾರೆ. ಅವರು ತನಿಖೆಯಿಂದ ಪಾರಾಗುವುದಕ್ಕೆ ಡ್ರಾಮ ಮಾಡುತ್ತಿದ್ದಾರೆ. ಇ.ಡಿ.ಯವರ ತನಿಖೆಯನ್ನು ಎದುರುರಿಸುವುದಕ್ಕೆ ತಾಕತ್ತು ಇರುವವರು, ಸಂಸ್ಥೆಯನ್ನು ಬಹಿಷ್ಕಾರ ಮಾಡುವುದಕ್ಕೆ ಹೇಳುತ್ತಾರೆಯೇ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರುಗಳೇ, ಸಾಕು ಬಿಡಿ. ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್‌ರವರೇ, ಸಾಕು ಬಿಡಿ, close ಮಾಡಿ. ಒಂದು ನಿಮಿಷ ನಾನು ಮಾತನಾಡಿದ ನಂತರ ತಾವು ಮಾತನಾಡಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, "ಚೋರ್ ಕೋತ್ವಾಲ್ ಕೋ ಡಾಂಟೇ" ಎಂಬ ನಾನ್ನುಡಿ ಇದ್ದಂತೆ ಇದೆ, ಮಾನ್ಯ ಸದಸ್ಯರು ಹೇಳುವುದು.,

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಒಬ್ಬ ರಾಜ್ಯದ ಅಧಿಕಾರಿ.,

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಮತ್ತು ವಿರೋಧ ಪಕ್ಷದ ಎರಡೂ ಕಡೆಯ ಸದಸ್ಯರು ಒಟ್ಟಿಗೆ ಎದ್ದುನಿಂತು ಚರ್ಚೆಯಲ್ಲಿ ತೊಡಗಿದರು)**

**ಸಭಾಪತಿಯವರು:–** ಶ್ರೀ ಯು.ಬಿ.ವೆಂಕಟೇಶ್‌ರವರೇ, ತಾವು ಭಾಷಣ ಮಾಡಬೇಡಿ. ದಯವಿಟ್ಟು ಕುಳಿತುಕೊಳ್ಳಿ. ಸಾಕು ಬಿಡಿ. ನಾನು ಮಾತನಾಡಿದ ನಂತರ ತಾವು ಮಾತನಾಡಿ. ನನ್ನ ತೀರ್ಮಾನವನ್ನು ಕೇಳಿ. ತಾವು ಭಾಷಣ ಮಾಡುವಂತಿಲ್ಲ. ಇದು ಯಾವುದು ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಸಭಾಪತಿಯವರು ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್‌ರವರು ಮಾತನಾಡಿದ್ದು ಯಾವುದು ಕಡತಕ್ಕೆ ಹೋಗಬಾರದು ಎಂದು ಸೂಚಿಸಿದ್ದರಿಂದ ಮಾನ್ಯ ಸದಸ್ಯರು ಮಾತನಾಡಿದ್ದನ್ನು ನಡವಳಿಯಲ್ಲಿ ದಾಖಲಿಸಿರುವುದಿಲ್ಲ)**

**(ಗೊಂದಲ)**

**Sri C.T. RAVI:–** Hon'ble Chairman sir, Who is Mr. Kallesh? He is one of the accused.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ಯಾವುದು ಕಡತಕ್ಕೆ ಹೋಗುವುದಿಲ್ಲವೆಂದು ಹೇಳಿದ್ದೇನೆ. ತಾವು ಕುಳಿತುಕೊಳ್ಳಬೇಕೆಂದರೆ, ಕುಳಿತುಕೊಳ್ಳಬೇಕು, ಏಕೆ ಮಾತನಾಡುತ್ತೀರಿ?

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಆಯಿತು ಕುಳಿತುಕೊಳ್ಳುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ನಿಯಮ 58 ರಡಿಯ ಸೂಚನೆಯಲ್ಲಿರುವ ವಿಷಯದ ಕುರಿತು ರಾಜ್ಯ ಸರ್ಕಾರ ತನಿಖೆಗೆ ವಿಶೇಷ ತನಿಖಾ ತಂಡಕ್ಕೆ ವಹಿಸಿರುತ್ತದೆ. ಜಾರಿ ನಿರ್ದೇಶನಾಲಯ ಪ್ರಕರಣದ ತನಿಖೆಯನ್ನು ನಡೆಸುತ್ತಿದೆ. ಅಲ್ಲದೇ, CBI (Central Bureau of Investigation) ತನಿಖೆ ನಡೆಸುತ್ತಿದೆ. E.D. (Enforcement Directorate) ಎಂಬುದು ಸ್ವತಂತ್ರವಾದ ಸಂಸ್ಥೆಯಾಗಿದೆ. ಈಗ ಪ್ರಕರಣದ ತನಿಖೆ ನಡೆಯುತ್ತಿದೆ. ನ್ಯಾಯಾಲಯಲ್ಲಿರುವ ವಿಚಾರದ ವಿಷಯದ ಮೇಲೆ ಸಂಸದೀಯ ವ್ಯವಹಾರದಲ್ಲಿ ಚರ್ಚೆ ನಡೆಸುವುದು ಕ್ರಮಬದ್ಧವಲ್ಲ ಎನ್ನುವುದು ನಿಯಮ. ನಿಯಮ 68 ರಡಿಯಲ್ಲಿ ನೀಡಿರುವ ಸೂಚನೆಯನ್ನು ನ್ಯಾಯಾಧೀಕರಣದ ಮುಂದೆ ಇರುವುದರಿಂದ ಚರ್ಚೆಗೆ ಅವಕಾಶ ನಿರಾಕರಿಸಲಾಗಿದ್ದು, ಇನ್ನೂ ಯಾವುದನ್ನು ಚರ್ಚೆ ಮಾಡಲು ನಿರಾಕರಿಸಲಾಗಿದೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಇಲ್ಲ

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಯು,ಬಿ.ವೆಂಕಟೇಶ್‌ರವರೇ, ಇಲ್ಲ. Rejected. ಪೀಠ ಒಂದು ಬಾರಿ ಹೇಳಿದ ಮೇಲೆ ಮುಗಿಯಿತು. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**(ಮಾನ್ಯ ಸಭಾಪತಿಯವರು ಚರ್ಚೆಗೆ ಅನುಮತಿ ನಿರಾಕರಿಸಿದರು)**

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ಹರ್ಷ ವ್ಯಕ್ತ ಪಡಿಸಿದರು)**

**(ಗೊಂದಲ)**

**ಡಾ॥ ಯತೀಂದ್ರ ಎಸ್:–** ಮಾನ್ಯ ಸಭಾಪತಿಯವರೇ, ರಾಜ್ಯಗಳಲ್ಲಿ ಪ್ರಜಾಪ್ರಭುತ್ವವಾಗಿ ಆಯ್ಕೆಯಾದ ಸರ್ಕಾರಗಳನ್ನು ಕಿತ್ತುಹಾಕುವಂತಹ ಕೆಲಸ ಮಾಡುತ್ತಿದೆ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, Practice and Procedure of Parliament by M.N. Kaul and S.L. Shakdher ನ ಪ್ರಕಾರ.......

**(ಗೊಂದಲ)**

**ಸಭಾಪತಿಯವರು:–** ಶ್ರೀ ಯು.ಬಿ.ವೆಂಕಟೇಶ್‌ರವರೇ, ಪೀಠದಿಂದ ಒಂದು ಬಾರಿ ಹೇಳಿದ ಮೇಲೆ ಮುಗಿಯಿತು. ತಾವು ಬೇರೆ ನಿಯಮದಲ್ಲಿ ಕೊಡಿ. ಈಗ ಸದನವನ್ನು 2 ಗಂಟೆ 30 ನಿಮಿಷಗಳವರೆಗೆ ಭೋಜನ ವಿರಾಮಕ್ಕಾಗಿ ಮುಂದೂಡುತ್ತಿದ್ದೇನೆ.

**(ಸದನವು ಮಧ್ಯಾಹ್ನ 1 ಗಂಟೆ 07 ನಿಮಿಷಕ್ಕೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟು, ಪುನಃ ಮಧ್ಯಾಹ್ನ 2 ಗಂಟೆ 30 ನಿಮಿಷಗಳಿಗೆ ಸೇರಲು ನಿಶ್ಚಯಿಸಿತು)**

(628) 23.07.2024/3.00/ಎಸ್‌ಕೆ–ಎಕೆ

**(ಮಧ್ಯಾಹ್ನ 01 ಗಂಟೆ 07 ನಿಮಿಷಕ್ಕೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟ ಸದನವು, ಪುನಃ ಮಧ್ಯಾಹ್ನ 03 ಗಂಟೆ 02 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದ್ದರು)**

**5. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅಕ್ರಮದ ಬಗ್ಗೆ ಕೇಂದ್ರ ಸರ್ಕಾರದ ಇ.ಡಿ. ಅಧಿಕಾರಿಗಳು ತನಿಖೆ ನೆಪದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಉದ್ದೇಶಪೂರ್ವಕವಾಗಿ ಕಿರುಕುಳ ನೀಡುತ್ತಿರುವ ಬಗ್ಗೆ ನಿಯಮ 68ರ ಅಡಿಯಲ್ಲಿ ನೀಡಲಾದ ನೋಟೀಸಿನ ಮೇಲೆ ಚರ್ಚಿಸಲು ಅನುಮತಿ ನಿರಾಕರಿಸಿರುವುದನ್ನು ಪುನರ್ ಪರಿಶೀಲಿಸಲು ಆಡಳಿತ ಪಕ್ಷದ ಸದಸ್ಯರಿಂದ ಒತ್ತಾಯ.**

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನಾನು ಒಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ ಇನ್ನೂ ಸಮಂಜಸವಾದ ಉತ್ತರ ಕೊಡಲಿಲ್ಲ. ನಮ್ಮ ರಾಜ್ಯ ಸರ್ಕಾರಿ ಅಧಿಕಾರಿಯನ್ನು ಬೇರೆಯವರು ಬೆದರಿಸುತ್ತಿದ್ದರೆ, ....

**ಸಭಾಪತಿಯವರು:–** ನಾನು ಒಂದು ruling ಕೊಟ್ಟಿದ್ದೇನೆ.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):–** ಆ ಅಧಿಕಾರಿಯ ಇತಿಹಾಸ ಗೊತ್ತಾ?

**ಶ್ರೀ ಯು.ಬಿ. ವೆಂಕಟೇಶ್:–** ರಾಜ್ಯ ಸರ್ಕಾರ ..

**ಶ್ರೀ ಸಿ.ಟಿ. ರವಿ:–** ಆ ಅಧಿಕಾರಿಯ history ಗೊತ್ತಾ? ಆತ ಎಸ್.ಸಿ., ಎಸ್.ಟಿ. ಅನುದಾನ ತಿಂದು ತಿಂದು... suspend ಆಗಿದ್ದವರು...

**(ಗೊಂದಲ)**

**ಸಭಾಪತಿಯವರು:–** ಯಾರು ಮಾತನಾಡಬೇಡಿ. **(ಗೊಂದಲ)** ನೀವೆಲ್ಲರೂ ಏತಕ್ಕೆ ಮಾತನಾಡುತ್ತಿದ್ದೀರಿ? **(ಗೊಂದಲ)** ನನಗೆ ಹೇಳುವುದಕ್ಕಾದರೂ ಬಿಡಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):–** ಈಗ...

**(ಗೊಂದಲ)**

**ಶ್ರೀ ಸಿ.ಟಿ. ರವಿ:–** ಈಗ ಅವರು ಚಿನ್ನ, ಮುದ್ದು, ಎಲ್ಲಿಟ್ಟಿದ್ದೀಯಪ್ಪ.

**(ಗೊಂದಲ)**

**ಸಭಾಪತಿಯವರು:–** ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:–** ಚಿನ್ನ, ರನ್ನ, ಮುದ್ದು ಅಂತಾ ಹೇಳಿ...

**(ಗೊಂದಲ)**

**ಸಭಾಪತಿಯವರು:–** ನಾನು ಮಾತನಾಡುವುದನ್ನು ಕೇಳಿ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:–** ಮೂರು ಗಂಟೆಗಳ ಕಾಲ ಚಿನ್ನ ರನ್ನ ಅಂತಾ...

**(ಗೊಂದಲ)**

**ಸಭಾಪತಿಯವರು:–** ನೀವೆಲ್ಲರೂ ಏತಕ್ಕೆ ಮಾತನಾಡುತ್ತಿದ್ದೀರಾ?

**(ಗೊಂದಲ)**

**ಶ್ರೀ ಸಿ.ಟಿ. ರವಿ:–** ವಾಲ್ಮೀಕಿ ನಿಗಮದಿಂದ ಕಳ್ಳತನ ಮಾಡಿಸಿ, ಈಗ ಅವರ ರಕ್ಷಣೆಗೆ ದೊಡ್ಡ gang ಇದೆ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಭ್ರಷ್ಟಾಚಾರರನ್ನು ರಕ್ಷಣೆ ಮಾಡುವುದು ಸರಿಯಲ್ಲ.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷವಿರಿ. ನನ್ನ ಮಾತನ್ನು ನೀವು ಕೇಳುವುದಿಲ್ಲ. ನಿನ್ನೆ ಕೂಡ ಇದೇ ತರ ಮಾಡಿದಿರಿ. ನನ್ನ ತೀರ್ಮಾನ ಹೇಳುವವರೆಗೂ ತಾವೆಲ್ಲರೂ ಸಮಾಧಾನವಾಗಿ ಕುಳಿತುಕೊಂಡರೆ ಆಗುತ್ತದೆ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ತಮ್ಮ ತೀರ್ಮಾನ ಹೇಳದ್ದಾಗಿದೆ.

**ಸಭಾಪತಿಯವರು:–** ಮಾನ್ಯ ಸಿ.ಟಿ. ರವಿಯವರೇ, ನನ್ನ ತೀರ್ಮಾನ ಹೇಳುವುದಕ್ಕಾದರೂ ಬಿಡಬೇಕಲ್ಲ. ತಾವೇ ಪೀಠದಲ್ಲಿ ಕುಳಿತುಕೊಳ್ಳಿ ಬನ್ನಿ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ತಾವು ಹೇಳಿದ್ದೀರಿ.

**ಸಭಾಪತಿಯವರು:–** ಆಯಿತು.

**ಶ್ರೀ ಸಿ.ಟಿ. ರವಿ:–** ತಾವು ಪೀಠದಿಂದ ಆದೇಶ ಕೊಟ್ಟಿದ್ದೀರಿ.

**ಸಭಾಪತಿಯವರು:–** ಮಾನ್ಯ ಸಿ.ಟಿ. ರವಿಯವರೇ, ಆಗಲೇ ಹೇಳಿಯೂ ಆಗಿದೆ. ಈಗಲೂ ನಾನು ಹೇಳುತ್ತೇನೆ. ನಾನು ಹೇಳುವುದನ್ನು ನೀವು ಕೇಳುವುದಿಲ್ಲವಲ್ಲ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಈಗಲಾದರೂ .....

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರು ಏನು ಹೇಳುತ್ತೀರಾ? ಅದನ್ನು ಕೇಳುವುದಕ್ಕೆ ಅವರು ತಯಾರಿಲ್ಲ.

**(ಗೊಂದಲ)**

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾನಾಯಕರೇ, ಸಂವಿಧಾನ ವಿರೋಧಿಯಾಗಿ,...

**(ಗೊಂದಲ)**

**ಸಭಾಪತಿಯವರು:–** ನಾನು ಹೇಳುತ್ತೇನೆ.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ತಾವು ಸತ್ಯವನ್ನು ಪರಿಶೀಲನೆ ಮಾಡಿ; ನಮ್ಮ ರಾಜ್ಯದ ಅಧಿಕಾರಿಗಳಿಗೆ threat ಮಾಡಿ, ಹೆದರಿಸಿದ್ದಾರೆ. ಅವರಿಗೆ ಜೀವ ಬೆದರಿಕೆ ಹಾಕಿದ್ದಾರೆ. ಅದರ ಬಗ್ಗೆ ಮಾತನಾಡುವುದಕ್ಕೆ ತಾವು ನಮಗೆ ಅವಕಾಶ ಮಾಡಿಕೊಡಿ.

**(ಗೊಂದಲ)**

**ಸಭಾಪತಿಯವರು:–** ನಾನು ಹೇಳುತ್ತೇನೆ. ತಾವೆಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಿ.ಟಿ. ರವಿ:–** ಭ್ರಷ್ಟಾಚಾರಿ ಅಧಿಕಾರಿಗಳನ್ನು ರಕ್ಷಣೆ ಮಾಡುತ್ತೀರಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:– (ಗೊಂದಲ)** ಅಧಿಕಾರಿಗಳ ಮೇಲೆ ಕಾಳಜಿಯಿಲ್ಲವೇ?

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ ಕೇಳಿ. ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. ರೂಲಿಂಗ್ ಕೊಟ್ಟ ನಂತರ ಅದನ್ನು ತಾವು ಪುನರ್ ಪರಿಶೀಲಿಸಿ ಎಂದು ಕೇಳಿಕೊಳ್ಳುತ್ತೀರಿ. ಅದರ ಬಗ್ಗೆ ವಿಚಾರ ಮಾಡುತ್ತೇನೆ. ಬೇರೆ ಯಾವುದಾದರೂ ವಿಷಯವನ್ನು ಕೊಟ್ಟರೆ, ನಾನು ವಿಚಾರ ಮಾಡುತ್ತೇನೆ. **(ಗೊಂದಲ)** ಈ ವಿಷಯದ ಬಗ್ಗೆ ಮಾತನಾಡಬೇಡಿ.

**ಶ್ರೀ ಸಲೀಂ ಅಹಮದ್:–** ರಾಜ್ಯದ ಅಧಿಕಾರಿಗಳನ್ನು ಹೆದರಿಸಿ, threat ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ರಾಜ್ಯದ ಅಧಿಕಾರಿಗಳಿಗೆ threat ಮಾಡಿದಾಗ, ಅವರಿಗೆ ರಕ್ಷಣೆ ಕೊಡುವವರು ಯಾರು ಹೇಳಿ. **(ಗೊಂದಲ)** ಮಾನ್ಯ ಸಭಾಪತಿಯವರು ಏನು ಹೇಳುತ್ತಾರೆ. ಕೇಳಿ.

**(ಗೊಂದಲ)**

**ಶ್ರೀ ಸಿ.ಟಿ. ರವಿ:–** ನೀವು ಏಕೆ...

**(ಗೊಂದಲ)**

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಆದೇಶ ಮಾಡಿದ ಮೇಲೆ ಚರ್ಚೆ ಮಾಡುವ ಅವಶ್ಯಕತೆ ಏನಿದೆ?

**(ಗೊಂದಲ)**

**ಸಭಾಪತಿಯವರು:–** ನಾನು ಈಗ ಹೇಳಿದ್ದೇನೆ.

**(ಗೊಂದಲ)**

**ಶ್ರೀ ಟಿ.ಎ. ಶರವಣ:–** ಭ್ರಷ್ಟರನ್ನು ರಕ್ಷಣೆ ಮಾಡಬೇಕಾ? ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ದೀರ್ಘವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಹೌದು, ನಮ್ಮಿಂದ ತಪ್ಪಾಗಿದೆ ಎಂದು ಅವರೇ ಒಪ್ಪಿಕೊಂಡಿದ್ದಾರೆ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:–** ರಾಜ್ಯ ಸರ್ಕಾರದ ಒಬ್ಬ ಅಧಿಕಾರಿ ನನಗೆ life threat ಇದೆ ಎಂದು ಹೇಳಿದಾಗ, ಅವರಿಗೆ ರಕ್ಷಣೆ ಕೊಡಬೇಕಲ್ಲವೆ?

**(ಗೊಂದಲ)**

**ಶ್ರೀ ಟಿ.ಎ. ಶರವಣ:–** ಭ್ರಷ್ಟ ಅಧಿಕಾರಿಗಳಿಗೆ ರಕ್ಷಣೆ ಕೊಡಬೇಕೆಂಬ ಕಾನೂನು ಇದೆಯಾ?

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:–** ಇದಕ್ಕೆ ಸಂಬಂಧಪಟ್ಟವರಿಗೆ ರಕ್ಷಣೆ ಕೊಡಬೇಕಲ್ಲ...

**(ಗೊಂದಲ)**

**ಶ್ರೀ ಟಿ.ಎ. ಶರವಣ:–** ಅವರಿಗೆ ರಕ್ಷಣೆ ಕೊಡಬೇಕೆಂಬ ಕಾನೂನು ಇದೆಯಾ?

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:–** ಯಾರಿಗೆ ಪ್ರಾಣ ಅಪಾಯವಿದೆಯೋ, ಅವರಿಗೆ ರಕ್ಷಣೆ ಕೊಡಬೇಕು.

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:–** ಅವರನ್ನು ರಕ್ಷಣೆ ಮಾಡಿ. ಸಭಾಪತಿಯವರೇ, ಅದರ ಬಗ್ಗೆ ಸ್ವಲ್ಪ ಚರ್ಚೆ ಮಾಡಲು ತಾವು ಅವಕಾಶ ಕೊಡಬೇಕು.

**(ಗೊಂದಲ)**

**ಸಭಾಪತಿಯವರು:–** ನೀವು ಏನೂ ಬೇಕಾದರೂ ಮಾತನಾಡಿ. ನಿಮ್ಮೆಲ್ಲರ ಮಾತು ಮುಗಿದ ನಂತರ ನಾನು ಮಾತನಾಡುತ್ತೇನೆ.

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಶ್ರೀ ಟಿ.ಎ.ಶರವಣ ರವರು ಮಾತನಾಡುವಾಗ ಸನ್ಮಾನ್ಯ ಮುಖ್ಯಮಂತ್ರಿಗಳು ತಪ್ಪಾಗಿದೆ ಎಂದು ಒಪ್ಪಿಕೊಂಡಿದ್ದಾರೆಂದು ಹೇಳುತ್ತಾರೆ.

**(ಗೊಂದಲ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಹೌದು. ಬೇಕಾದರೆ ನಡವಳಿಯನ್ನು ತೆಗೆದುಕೊಂಡು ನೋಡಿಕೊಳ್ಳಿ. ವಾಲ್ಮೀಕಿ ನಿಗಮದಲ್ಲಿ ಹಗರಣ ಆಗಿದೆ ಎಂದು ಅವರು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಶ್ರೀ ಐವನ್ ಡಿ' ಸೋಜಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅಧಿಕಾರಿಗಳನ್ನು ಬೆದರಿಸುವಂಥ ಕೆಲಸ ಮಾಡುತ್ತಿದ್ದಾರೆ.

**(ಗೊಂದಲ)**

**ಡಾ: ಯತೀಂದ್ರ.ಎಸ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವರೆಲ್ಲಾ ರಾಜಕೀಯ ನಿಪುಣರು . . . **(ಗೊಂದಲ)** ಕೇಂದ್ರ ಸರ್ಕಾರ ಇದೇ ಕೆಲಸ ಮಾಡುತ್ತಿದೆ. ಕರ್ನಾಟಕ ರಾಜ್ಯದಲ್ಲೂ ಕೂಡ ಇದೇ ರೀತಿ ಮಾಡುತ್ತಿದ್ದಾರೆ. . . .**(ಗೊಂದಲ)**

**ಸಭಾಪತಿಯವರು:–** ಮಾನ್ಯ ಯತೀಂದ್ರ ಸಿದ್ದರಾಮಯ್ಯನವರೇ, ತಾವು ಕುಳಿತುಕೊಳ್ಳಿ ಎಲ್ಲರು ದಯವಿಟ್ಟು ಕುಳಿತುಕೊಳ್ಳಿ. ನನ್ನ ಮಾತು ಕೇಳಿ.

**(ಗೊಂದಲ)**

**ಶ್ರೀ ಸಿ.ಟಿ. ರವಿ:–** ಪ್ರಜಾಪ್ರಭುತ್ವವನ್ನು ಕೊಲೆ ಮಾಡುವುದಕ್ಕೆ ಹೊರಟಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ರವಿಯವರೇ, ಒಂದು ನಿಮಿಷ ನನ್ನ ಮಾತನ್ನು ಕೇಳಿ.

**(ಗೊಂದಲ)**

**ಶ್ರೀ ಸಿ.ಟಿ. ರವಿ:–** ಇದು ಕರ್ನಾಟಕಕ್ಕೆ ಒಂದು ಪಾಠ. ನಿಮ್ಮ ಪಕ್ಷದವರನ್ನು ಕೈ ಎತ್ತಿ ಮುಗಿಯಬೇಕು. ಕರ್ನಾಟಕ ರಾಜ್ಯದಲ್ಲಿ ಈ ರೀತಿ ಜೀವಂತ ಸಮಾಧಿಯಾದರೆ, ಅದು ಪ್ರಜಾಪ್ರಭುತ್ವದ ಕಗ್ಗೊಲೆ. **(ಗೊಂದಲ)**

(ಮುಂದು)

(629) 23.07.2024 3.10, ಟಿಸಿಹೆಚ್–ಎಕೆ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:–** ಶ್ರೀ ಯು.ಬಿ.ವೆಂಕಟೇಶ್‌ರವರೇ, ತಾವು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ನಾನು Practice and Procedure of Parliament by M.N.Kaul and S.L.Shakdher ಮತ್ತು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ

ನಿಯಮಗಳನ್ನೆಲ್ಲಾ ನೋಡಿ ಒಂದು ರೂಲಿಂಗ್ ಕೊಟ್ಟು, ಅದನ್ನು ನಾನು ತಿರಸ್ಕಾರ ಮಾಡಿದ್ದೇನೆ. ಮತ್ತೆ ಅದನ್ನು modify ಮಾಡಿ ಮಾತನಾಡುವುದಕ್ಕೆ ಅವಕಾಶ ಇರುವುದಿಲ್ಲ. ಈಗ ತಾವು ಬೇರೆ ಯಾವುದಾದರೊಂದು ನಿಯಮದಡಿಯಲ್ಲಿ ಕೊಡಿ, ಆಗ ನಾನು ಪರಿಶೀಲಿಸುತ್ತೇನೆ. ಗಮನ ಸೆಳೆಯುವ ಸೂಚನೆ ಅಥವಾ ನಿಯಮ ೩೩೦ರಲ್ಲಿ ಕೊಡಿ ನಾನು ನಾಳೆ ತೆಗೆದುಕೊಳ್ಳುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):–** ಶ್ರೀ ಕಲ್ಲೇಶ್.ಬಿ., ಹೆಚ್ಚುವರಿ ನಿರ್ದೇಶಕರು . . . .

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರು ಒಟ್ಟಿಗೆ ಎದ್ದು ನಿಂತು ಮಾತನಾಡಿದರು)**

**ಸಭಾಪತಿಯವರು:–** ನೀವು ಯಾವುದಾದರೊಂದು ನಿಯಮದಡಿ ಕೊಡಿ. **(ಗೊಂದಲ)** ಮಾನ್ಯ ಸಭಾನಾಯಕರೇ, ನೀವು ಬೇರೊಂದು ನಿಯಮದ ಅಡಿಯಲ್ಲಿ ಕೊಡಿ, ಚರ್ಚೆಗೆ ಅವಕಾಶ ನೀಡಲಾಗುವುದು. **(ಗೊಂದಲ)** ಈಗ ಶ್ರೀ ಎನ್.ರವಿಕುಮಾರ್, ಶ್ರೀ ಸಿ.ಟಿ.ರವಿ, ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ ಮತ್ತು ಶ್ರೀ ಯು.ಬಿ.ವೆಂಕಟೇಶ್ ಹಾಗೂ ಇತರರು ಮಾತನಾಡಿದ್ದು ಯಾವುದೂ ಕಡತಕ್ಕೆ ಹೋಗಬಾರದು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, . . . .

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, . . . .

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳು ಕನ್ನಡ ಮತ್ತು ಸಂಸ್ಕೃತಿ ಸಚಿವರು):–** ಮಾನ್ಯ ಸಭಾಪತಿಯವರೇ. . .

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ. . .

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶದಂತೆ ಶ್ರೀ ಎನ್.ರವಿಕುಮಾರ್, ಶ್ರೀ ಸಿ.ಟಿ.ರವಿ, ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ, ಶ್ರೀ ಯು.ಬಿ.ವೆಂಕಟೇಶ್ ಮತ್ತು ಇತರರು ಮಾತನಾಡಿರುವುದನ್ನು ನಡವಳಿಯಲ್ಲಿ ದಾಖಲಿಸಿರುವುದಿಲ್ಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರೂ ಒಟ್ಟಿಗೆ ಎದ್ದು ನಿಂತು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ತಾವು ಏನು ಹೇಳಿದರು ಅದನ್ನು ನಾವು ಕೇಳುತ್ತೇವೆ. ನಮ್ಮದು ಇಷ್ಟೇ. . . .

**ಸಭಾಪತಿಯವರು:–** ಶ್ರೀ ಎನ್.ಎಸ್.ಬೋಸರಾಜುರವರೇ, ತಾವು ಒಂದು ನಿಮಿಷ ಕುಳಿತುಕೊಳ್ಳಿ, ನಾನು ಹೇಳುತ್ತೇನೆ. ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ರಕ್ಷಣೆ ಕೊಡುವುದು ಬೇಡವೇ?

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಒಬ್ಬ ರಾಜ್ಯ ಸರ್ಕಾರಿ ನೌಕರರಿಗೆ life threat ಇದೆ ಎಂದು complaint ಆಗಿದೆ. ಮತ್ತೆ ಅವರಿಗೆ ರಕ್ಷಣೆ ಕೊಡುವುದು ಯಾರು?

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ತಾವು ಬೇರೊಂದು ನಿಯಮದಲ್ಲಿ ಕೊಡಿ. ನಾನು ಈಗಾಗಲೇ ರೂಲಿಂಗ್ ನೀಡಿದ್ದೇನೆ. ಈಗ ತಾವು ಪುನಃ ಚರ್ಚೆ ಇಟ್ಟುಕೊಂಡು ರೂಲಿಂಗ್‌ಗೆ ವಿರುದ್ಧವಾಗಿ ಮಾತನಾಡಿದರೆ contempt of the Chair ಆಗುತ್ತದೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ಅದಕ್ಕಾಗಿ ನಾವು ತಮ್ಮ ಹತ್ತಿರ ಪ್ರಾರ್ಥಿಸುತ್ತಿದ್ದೇನೆ. Life threat ಇದೆ. ಇದು very serious ಇದೆ. ಅವರಿಗೆ ರಕ್ಷಣೆ

ಕೊಡುವುದಕ್ಕೆ ನಾವು ಸಲಹೆಯನ್ನು ಕೊಡುತ್ತೇವೆ. ಅವರಿಗೆ ಈಗ ರಕ್ಷಣೆ ಸಿಗಬೇಕಿದೆ. ಅದಕ್ಕಾಗಿ ತಾವು ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ತಮ್ಮ ಹತ್ತಿರ ಪ್ರಾರ್ಥನೆ ಮಾಡುತ್ತಿದ್ದೇವೆ. **(ಗೊಂದಲ)** ಮೊದಲ ಬಾರಿಗೆ ಕರ್ನಾಟಕದಲ್ಲಿ ಈ ರೀತಿಯಾದ ಪರಿಸ್ಥಿತಿ ನಿರ್ಮಾಣವಾಗಿದೆ. ಅವರನ್ನು ರಕ್ಷಣೆ ಮಾಡುವವರು ಯಾರು?

**(ಗೊಂದಲ)**

**ಸಭಾಪತಿಯವರು:–** ವಿರೋಧ ಪಕ್ಷದ ಸದಸ್ಯರು ಹಾಗೂ ಆಡಳಿತ ಪಕ್ಷದ ಸದಸ್ಯರೆಲ್ಲರೂ ಕೂಡ ನನ್ನ ಮಾತು ಕೇಳಿ. ಈಗಾಗಲೇ ಈ ವಿಷಯ ಮುಗಿದಿದೆ. ನಿಯಮ 72, ನಿಯಮ 330 ಅಥವಾ ಬೇರೆ ಯಾವುದಾದರೂ ನಿಯಮದಡಿ ಕೊಟ್ಟರೆ ನಾನು ಅದ್ಯಾವುದಕ್ಕೂ ಕೂಡ ಅಡ್ಡಿಪಡಿಸುವುದಿಲ್ಲ. ನಾನು ಈ ವಿಷಯವನ್ನು ಈಗಾಗಲೇ ಮುಗಿಸಿದ್ದೇನೆ. ಇದರ ಬಗ್ಗೆ ಮತ್ತೆ ಚರ್ಚೆ ಮಾಡುವುದು ಬೇಡ. ಬೇರೆ ಯಾವುದಾದರೊಂದು ನಿಯಮದ ಅಡಿಯಲ್ಲಿ ಕೊಡಿ ನಾನು ತೀರ್ಮಾನ ಮಾಡುತ್ತೇನೆ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ನಾವು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇವೆ. ತಾವು ಪುನರ್ ಪರಿಶೀಲನೆ ಮಾಡಿ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಸಭಾಪತಿಯವರು:–** ನಾನೇನು ಈಗ reject ಮಾಡಿದ್ದೇನೆಯೇ? ಪುನರ್ ಪರಿಶೀಲನೆಗೆ ತೆಗೆದುಕೊಳ್ಳುತ್ತೇನಲ್ಲಾ ಆಗ ವಿಚಾರ ಮಾಡಿ ಹೇಳುತ್ತೇನೆ.

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವೇ ವಾಪಸ್ಸು ತೆಗೆದುಕೊಳ್ಳಬಹುದಲ್ಲವೇ?

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ ಅಧಿಕಾರಿಗಳಿಂದ ರಾಜ್ಯ ಸರ್ಕಾರದ ಅಧಿಕಾರಿಗಳಿಗೆ ಜೀವ ಭಯ ಇದೆ. ನಿಯಮಾವಳಿಗಳ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು.

**ಸಭಾಪತಿಯವರು:–** ಶ್ರೀ ಯು.ಬಿ.ವೆಂಕಟೇಶ್‌ರವರೇ, ಈಗ ಅವಕಾಶ ಕೊಡುವುದಿಲ್ಲ. ನೀವು ಬೇರೊಂದು ನಿಯಮದ ಅಡಿಯಲ್ಲಿ ಕೊಡಿ, ನಾನು ಅವಕಾಶ ನೀಡುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಸೂಚನೆ ರೆಡಿ ಇದೆ, ಈಗಲೇ ಕೊಡುತ್ತೇನೆ.

**(ಗೊಂದಲ)**

**ಶ್ರೀ ಕೆ. ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೇ, ಅವರು ಧಮಕಿ ಹಾಕಿರುವುದು ತಪ್ಪು ಅಲ್ಲವೇ?

**(ಗೊಂದಲ)**

**ಸಭಾಪತಿಯವರು:–** ಶ್ರೀ ಅಬ್ದುಲ್ ಜಬ್ಬಾರ್ ರವರೇ, ಅದನ್ನು ನಾನು ಹೇಳುವುದಕ್ಕೆ ಬರುವುದಿಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅದಕ್ಕೆ ಈಗಾಗಲೇ ತಾವು ರೂಲಿಂಗ್ ಕೊಟ್ಟಿದ್ದೀರಿ. ಆದರೆ ಆಡಳಿತ ಪಕ್ಷದವರು ಮತ್ತೆ ಏಕೆ ಮಾತನಾಡುತ್ತಿದ್ದಾರೆ?

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹಾಗಾದರೆ ಜಾರಿ ನಿರ್ದೇಶನಾಲಯದವರು ಬಿ.ಜೆ.ಪಿ.,ಯವರ ಏಜೆಂಟಾ?

**(ಗೊಂದಲ)**

**ಸಭಾಪತಿಯವರು:–** ಶ್ರೀ ಐವನ್ ಡಿ'ಸೋಜಾ ರವರೇ ತಾವು ಮಾತನಾಡಲು ಯಾರು ಅನುಮತಿ ಕೊಟ್ಟಿದ್ದಾರೆ? ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀಮತಿ ಉಮಾಶ್ರೀ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ . . .

**(ಗೊಂದಲ)**

**ಸಭಾಪತಿಯವರು:–** ಶ್ರೀಮತಿ ಉಮಾಶ್ರೀಯವರೇ, ಬೇರೆ ಬೇರೆ ನಿಯಮಗಳಿವೆ, ಬೇರೆ ಬೇರೆ subjects ಇವೆ. ಈಗಾಗಲೇ ನಾನು ಒಂದು ಬಾರಿ ರೂಲಿಂಗ್ ಕೊಟ್ಟಿದ್ದೇನೆ. ಈಗ ನಿಯಮದ ಪ್ರಕಾರ ನೀವು ಏನು ಕೊಡಬೇಕೋ ಕೊಡಿ. ಅದರ ಬಗ್ಗೆ ನಾನು ವಿಚಾರ ಮಾಡುತ್ತೇನೆ. ಈಗ ನಾನು ಒಂದು ಬಾರಿ ತೀರ್ಮಾನ ಕೊಟ್ಟ ನಂತರ ಮತ್ತೆ ಚರ್ಚೆ ಮಾಡುವುದಕ್ಕೆ ಅವಕಾಶ ಇರುವುದಿಲ್ಲ. ನೀವು ಬೇರೆ ಯಾವುದಾದರೊಂದು ನಿಯಮದ ಅಡಿಯಲ್ಲಿ ಕೊಡಿ. ಶೂನ್ಯವೇಳೆಯಲ್ಲಿ ಕೊಡಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಅವರಿಗೆ ರಕ್ಷಣೆ ಕೊಡಬೇಕೋ ಬೇಡವೋ?

**(ಗೊಂದಲ)**

**ಸಭಾಪತಿಯವರು:–** ನೋಡಿ, ರಕ್ಷಣೆ ಕೊಡಬೇಕೋ ಬಿಡಬೇಕೋ ಎನ್ನುವುದು ಚರ್ಚೆಗೆ ಬಂದಾಗ ನೋಡೋಣ. ಸರ್ಕಾರದ ಜವಾಬ್ದಾರಿ ಇದೆಯೋ, ಇಲ್ಲವೋ ಎಂದು ಚರ್ಚೆಗೆ ಬಂದಾಗ ನೋಡಬೇಕಾಗುತ್ತದೆ. ಅದಕ್ಕೆ ನಾನು ಈಗಾಗಲೇ ಒಂದು ತೀರ್ಮಾನ ಮಾಡಿ ಹೇಳಿದ್ದೇನೆ. ಕರ್ನಾಟಕ ವಿಧಾನ ಪರಿಷತ್‌ನಲ್ಲಿ ಸಾಕಷ್ಟು ನಿಯಮಾವಳಿಗಳಿವೆ. ಆ ನಿಯಮಾವಳಿಗಳ ಪ್ರಕಾರ ನೀವು ಏನು

ಮಾಡುತ್ತೀರೋ ಮಾಡಿ. ನಾನು ಅದನ್ನು consider ಮಾಡುತ್ತೇನೆ. ಹಾಗಾಗಿ, ಬೇರೆ ನಿಯಮದಡಿ ಕೊಡಿ.

**(ಗೊಂದಲ)**

**ಶ್ರೀ ಕೆ.ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೇ, ನಡೆದಿರತಕ್ಕಂಥ ವಿಚಾರವನ್ನು ಖಂಡಿಸಬೇಕೆಂದು ನಾವು ಕೇಳುತ್ತಿದ್ದೇವೆ.

**(ಗೊಂದಲ)**

**ಸಭಾಪತಿಯವರು:-** ಶ್ರೀ ಅಬ್ದುಲ್ ಜಬ್ಬಾರ್ ರವರೇ, ಅದು ಸಂಬಂಧವಿಲ್ಲ, subject ಮೇಲೆ ವಿಷಯ ಬಂದಾಗ ಮಾತನಾಡಿ. ಸುಮ್ಮನೆ ಮಾತನಾಡಿದರೆ ಹೇಗೆ?

**(ಗೊಂದಲ)**

**ಶ್ರೀ ಕೆ.ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೇ, ಆಗಿರುವಂತಹ ತಪ್ಪನ್ನು ಹೇಳಬೇಕೋ ಬೇಡವೋ?

**6. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

ಅ) ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿ (2024ರ ವರದಿ ಸಂಖ್ಯೆ-1) ಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಆ) ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016ರ ಅನುಷ್ಠಾನದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಭಾರತದ ಲೆಕ್ಕ ನಿಯಂತ್ರಕರು ಮತ್ತು

ಮಹಾಲೆಕ್ಕಪರಿಶೋಧಕರ ವರದಿ (2024ರ ವರದಿ ಸಂಖ್ಯೆ-2) ಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**7. ವಿತ್ತೀಯ ಕಾರ್ಯಕಲಾಪ**

**2024-25ನೇ ಸಾಲಿನ ಪೂರಕ ಅಂದಾಜು (ಮೊದಲನೆ ಕಂತು) ಗಳನ್ನೊಪ್ಪಿಸುವುದು**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು, ಶ್ರೀ ಸಿದ್ದರಾಮಯ್ಯ, ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

2024-25ನೇ ಸಾಲಿನ ಪೂರಕ ಅಂದಾಜು (ಮೊದಲನೆ ಕಂತು) ಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**8. ವರದಿಯನ್ನೊಪ್ಪಿಸುವುದು**

**2023-24ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 39ನೇ ವರದಿ**

**ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 2023-24ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 39ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಯನ್ನೊಪ್ಪಿಸಲಾಯಿತು.

ಶ್ರೀ ಸಿ.ಟಿ. ರವಿ, ಶ್ರೀ ಎನ್, ರವಿಕುಮಾರ್, ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ, ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ, ಶ್ರೀಮತಿ ಭಾರತಿ ಶೆಟ್ಟಿ, ಶ್ರೀ ಕೇಶವ ಪ್ರಸಾದ್.ಎಸ್ ಹಾಗೂ ಶ್ರೀ ಪಿ.ಹೆಚ್.ಪೂಜಾರ್ ರವರುಗಳು ಗಮನ ಸೆಳೆಯುವ ಸೂಚನೆಯಲ್ಲಿ ಪ್ರಸ್ತಾಪಿಸಲು ಕೊಟ್ಟಿದ್ದಾರೆ. ಹಾಗಾಗಿ, ತಾವೆಲ್ಲರೂ ಓದಿಕೊಳ್ಳಬೇಕು. ನೀವು ಗಮನ ಸೆಳೆಯುತ್ತೀರಿ. ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆ. ಇಲ್ಲಿ ನಾವು ಎಲ್ಲವನ್ನೂ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ರೂಲ್ಸ್ ಪ್ರಕಾರ ಮಾತನಾಡಿ. ಶ್ರೀ ಸಿ.ಟಿ.ರವಿಯವರೇ, ಸನ್ಮಾನ್ಯ ಮುಖ್ಯಮಂತ್ರಿಯವರು ನಾಳೆ ಇದಕ್ಕೆ ಉತ್ತರವನ್ನು ಕೊಡುತ್ತಾರಂತೆ. ಹಾಗಾಗಿ, ಇದನ್ನು ನಾಳೆಗೆ ತೆಗೆದುಕೊಳ್ಳಲಾಗುವುದು.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀ ಸಿ.ಟಿ.ರವಿಯವರ ಗಮನ ಸೆಳೆಯುವ ಸೂಚನೆಗೆ ಮಾನ್ಯ ಮುಖ್ಯಮಂತ್ರಿಗಳೇ ನಾಳೆ ಬಂದು ಉತ್ತರ ಕೊಡುತ್ತೇನೆಂದು ಹೇಳಿರುವುದರಿಂದ ನಾಳೆ ತೆಗೆದುಕೊಳ್ಳುತ್ತೇನೆ.

(ಮುಂದು)

(630)23.7.2024/3.20/ಎಂ.ಎಂ-ವಿ.ಕೆ (ಸಭಾಪತಿಯವರ ಉಪಸ್ಥಿತಿ)

**೯. ಗಮನ ಸೆಳೆಯುವ ಸೂಚನೆಗಳು**

**ಅ) ವಿಷಯ:-ಕರಾವಳಿ ಹಾಗೂ ಮಲೆನಾಡಿನ ಸಾಂಸ್ಕೃತಿಕ ಕಲೆಯಾಗಿರುವ ಯಕ್ಷಗಾನವನ್ನು ಪ್ರೋತ್ಸಾಹಿಸಲು ಯಕ್ಷಗಾನ ಅಕಾಡೆಮಿಯನ್ನು ಮೇಲ್ದರ್ಜೆಗೇರಿಸಿ ಯಕ್ಷಗಾನ ಅಭಿವೃದ್ಧಿ ಪ್ರಾಧಿಕಾರ ರಚಿಸಲು ಅನುದಾನವನ್ನು ಒದಗಿಸುವ ಕುರಿತು.**

- - - -

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕರಾವಳಿ ಮತ್ತು ಮಲೆನಾಡಿನ ಸಾಂಸ್ಕೃತಿಕ ಕಲೆಯಾಗಿರುವ ಯಕ್ಷಗಾನವನ್ನು ಪ್ರೋತ್ಸಾಹಿಸಲು ಯಕ್ಷಗಾನ ಅಕಾಡೆಮಿಯನ್ನು ಮೇಲ್ದರ್ಜೆಗೇರಿಸಿ ಯಕ್ಷಗಾನ ಅಭಿವೃದ್ಧಿ ಪ್ರಾಧಿಕಾರ ರಚಿಸಲು ಅನುದಾನವನ್ನು ಒದಗಿಸುವ ಕುರಿತು ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

**ಶ್ರೀ ಶಿವರಾಜ ಎಸ್. ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ,

**(ಉತ್ತರವನ್ನು ಲಗತ್ತಿಸಿದೆ)**

ಕರ್ನಾಟಕ ಜಾನಪದ ಅಕಾಡೆಮಿ ಹಾಗೂ ಯಕ್ಷಗಾನ ಅಕಾಡೆಮಿಯನ್ನು ಬೇರ್ಪಡಿಸಿ ಪ್ರತ್ಯೇಕವಾಗಿ ಕರ್ನಾಟಕ ಯಕ್ಷಗಾನ ಮತ್ತು ಬಯಲಾಟ ಅಕಾಡೆಮಿಯನ್ನು ರಚಿಸಲಾಗಿರುತ್ತದೆ. ಮುಂದುವರೆದು ಕರ್ನಾಟಕ ಯಕ್ಷಗಾನ ಅಕಾಡೆಮಿಯು ಯಕ್ಷಗಾನ ಕಲೆಯಲ್ಲಿ ಪಡುವಲಪಾಯ ಮತ್ತು ಮೂಡಲಪಾಯ ಎಂಬ ಎರಡು ಮುಖ್ಯ ಪ್ರಕಾರಗಳಿದ್ದು, ಒಂದು ಕರಾವಳಿಯ ಪಡುವಲಪಾಯ ಯಕ್ಷಗಾನವು ತೆಂಕು, ಬಡಗು, ಬಡಾಬಡಗು ಯಕ್ಷಗಾನ ಗೊಂಬೆಯಾಟ, ತಾಳಮದ್ದಲೆಯನ್ನು ಒಳಗೊಂಡಿರುತ್ತದೆ. ಮೂಡಲಪಾಯದಲ್ಲಿ ಮೂಡಲಪಾಯ ಯಕ್ಷಗಾನ, ಘಟ್ಟದಕೋರೆ, ಕೇಳಿಕೆ ಪ್ರಕಾರಗಳು ಇರುತ್ತವೆ. ಈಗಾಗಲೇ ಯಾವ ರೀತಿ ಯಕ್ಷಗಾನ ಅಕಾಡೆಮಿಯನ್ನು ಮಾಡಿದ್ದೇವೆ, ಅದರಲ್ಲಿ ಪ್ರಶಸ್ತಿಯನ್ನು ಕೊಡುತ್ತಿದ್ದೇವೆ. ಪ್ರಾಧಿಕಾರಕ್ಕಿಂತಲೂ ಚೆನ್ನಾಗಿ ಅಕಾಡೆಮಿಯಲ್ಲಿ ಮಾಡುತ್ತಿದ್ದೇವೆ. ಅದಕ್ಕೆ ಅಧ್ಯಕ್ಷರನ್ನು ಮತ್ತು ಸದಸ್ಯರನ್ನು ನೇಮಕ ಮಾಡಿದ್ದೇವೆ ಮತ್ತು ಪ್ರಶಸ್ತಿಗಳನ್ನು ಸಹ ಕೊಡುತ್ತಿದ್ದೇವೆ. ಅದರ ಜೊತೆಗೆ ಯಕ್ಷಗಾನ ಅಕಾಡೆಮಿಯನ್ನು ಯಕ್ಷಗಾನ ಅಭಿವೃದ್ಧಿ ಪ್ರಾಧಿಕಾರವನ್ನಾಗಿ ಮಾಡಬೇಕೆಂದು ನಮ್ಮ ಶ್ರೀ ಮಂಜುನಾಥ್ ಭಂಡಾರಿಯವರು ಏನು ಕೇಳುತ್ತಿದ್ದಾರೆ ಈಗಾಗಲೇ ಅವರಿಗೆ ಎಲ್ಲವನ್ನೂ ಕೊಟ್ಟಿದ್ದೇವೆ. ಅದರ ಜೊತೆಗೆ ಯಕ್ಷಗಾನವನ್ನು ಪ್ರೋತ್ಸಾಹ ಮಾಡುವುದಕ್ಕೆ ನಾವು ಅಕಾಡೆಮಿಗೆ ಹಣವನ್ನೂ ಕೊಡುತ್ತಿದ್ದೇವೆ, ಸದಸ್ಯರನ್ನೂ, ಅಧ್ಯಕ್ಷರನ್ನೂ ನೇಮಕ ಮಾಡಿದ್ದೇವೆ. ಪ್ರತಿ ವರ್ಷವೂ ಅಕಾಡೆಮಿ ವತಿಯಿಂದ 10 ಯಕ್ಷಗಿರಿ ಪ್ರಶಸ್ತಿ, 03 ಪುಸ್ತಕ ಬಹುಮಾನ ಮತ್ತು ದಿ॥ ಕರ್ಕಿ ಹಿರಿಯ ಶ್ರೀ ಪರಮಯ್ಯ ಹಾಸ್ಯಗಾರ ಇವರ ಹೆಸರಿನಲ್ಲಿ ಒಂದು ದತ್ತಿನಿಧಿ ನೀಡಲಾಗುತ್ತಿದೆ. ಈಗಾಗಲೇ ಪ್ರಾಧಿಕಾರಕ್ಕೆ ಏನು ಕೊಡಬೇಕಾಗಿದೆ ಅದೆಲ್ಲವನ್ನೂ ಅಕಾಡೆಮಿಯಲ್ಲಿಯೇ ನಾವು ಕೊಡುತ್ತಿದ್ದೇವೆ. ಒಂದು ವರ್ಷಕ್ಕೆ ಕನಿಷ್ಠ 40 ಲಕ್ಷ ಹಣವನ್ನು ಕೊಡುವಂತಹ ಕೆಲಸ ಮಾಡುತ್ತಿದ್ದೇವೆ. ಬೇರೆ ಬೇರೆ ಅಕಾಡೆಮಿಗಳಿಗೆ ನೋಡಿಕೊಂಡು ಅನುದಾನವನ್ನು ಕೊಡುವ ಕೆಲಸ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿಯವರು ಅದನ್ನು ಪ್ರಾಧಿಕಾರ ಮಾಡಬೇಕೆಂದು ಕೇಳುತ್ತಿದ್ದಾರೆ. ಅಧಿಕಾರಿಗಳ ಜೊತೆ ಕುಳಿತು ಚರ್ಚೆ ಮಾಡಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವಂತಹ ಕೆಲಸ ಮಾಡುತ್ತೇನೆ. ಏಕೆಂದರೆ, ಪ್ರಾಧಿಕಾರವನ್ನಾಗಿ ರಚನೆ ಮಾಡಿದರೆ ಅದಕ್ಕೆ ಕ್ಯಾಬಿನೆಟ್ ಸ್ಥಾನಮಾನವನ್ನು ಕೊಡುವಂತಹ ಪರಿಸ್ಥಿತಿ

ಬರುತ್ತದೆ. ಆದ್ದರಿಂದ ಅದೆಲ್ಲವನ್ನೂ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿಯವರನ್ನು ಸಹ ಕರೆದು ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಚರ್ಚೆಯನ್ನು ಮಾಡಿದಾಗ ನೋಡುತ್ತೇವೆ, ಮುಖ್ಯಮಂತ್ರಿಗಳ ಜೊತೆ ಮಾತನಾಡುತ್ತೇವೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಸ್ವಲ್ಪ ಬೆಳಕನ್ನು ಚೆಲ್ಲುವ ಪ್ರಯತ್ನ ಮಾಡುತ್ತೇನೆ. ಯಕ್ಷಗಾನವು ಬಾಕಿ ಕಲೆಗಳ ತರಹ ಅಲ್ಲ. ಅದು ತನ್ನದೇ ಆದ ವಿಶಿಷ್ಟ ಗುಣವನ್ನು ಹೊಂದಿರುವುದಾಗಿದೆ. ಅದರಲ್ಲಿ ನೃತ್ಯ, ಗೀತ, ವಾದನ, ಸಾಹಿತ್ಯ ಶಿಲ್ಪರಂಗ ಇದೆಲ್ಲಾ ಸೇರಿ ನಡೆಯುವುದೇ ಯಕ್ಷಗಾನವಾಗಿದೆ. ಇದಕ್ಕೆ 2,500 ವರ್ಷಗಳ ಪಾರಂಪರ್ಯವಾದ ಇತಿಹಾಸವಿದೆ. ಇದರಲ್ಲಿ ಮುಖ್ಯವಾಗಿ ಗಮನ ಸೆಳೆದವರು ಡಾ: ಶಿವರಾಮ ಕಾರಂತರು ಮತ್ತು ಶ್ರೀ ಕುಂ.ಶಿ. ಹರಿದಾಸಭಟ್ಟರು ಇದಕ್ಕೆ ಹಲವಾರು ಪ್ರಯತ್ನಗಳನ್ನು ತಂದು ವಿಶ್ವದಲ್ಲಿಯೇ ಇದಕ್ಕೆ ತನ್ನದೇ ಆದ ಒಂದು ಸ್ಥಾನವನ್ನು ಕೊಡಿಸಿದ್ದಾರೆ. ಇದರ ವೈಶಿಷ್ಟ್ಯತೆ ಏನೆಂದರೆ, ಇದರಲ್ಲಿ 2-3 ಪ್ರಕಾರಗಳು ಇರುತ್ತವೆ. ತಾಳಮದ್ದಲೆ ಎಂದು ಬರುತ್ತದೆ. ಅಂದರೆ ಇದರಲ್ಲಿ ವೇಷವಿಲ್ಲದೇ ಅವರು ಹಾಡನ್ನು ಹೇಳುವುದು. ಅವರ ಮಾತುಗಳು, ಅದೇ ರೀತಿ ಸಂಗೀತ. ಯಕ್ಷಗಾನ ಸಂಗೀತವು ಭಾರತೀಯ ಗಾಂಧರ್ವ ವಿದ್ಯೆ, ಅಮೂಲ್ಯವಾದ ಒಂದು ನಿಧಿಯಾಗಿದೆ. ಇನ್ನೊಂದು ಸಾಹಿತ್ಯ, ಇದರಲ್ಲಿ ತನ್ನದೇ ಆದ ಒಂದು ಸಾಹಿತ್ಯವನ್ನು ಹೊಂದಿದೆ. ಇದರಲ್ಲಿ 3 ಪ್ರಸಂಗಗಳು ಬರುತ್ತವೆ. ಒಂದು ಅರ್ಥಗಾರಿಕೆ, ಸಂಭಾಷಣೆ ಮತ್ತು ನಟನೆ ಬರುತ್ತದೆ. ಇದೆಲ್ಲಾ ಕಲೆಗಳನ್ನು ಮಾಡುತ್ತಿರುವುದು ಯಕ್ಷಗಾನವಾಗಿದೆ. ದಕ್ಷಿಣ ಕನ್ನಡದಲ್ಲಿ ಮಂಗಳೂರಿನಲ್ಲಿ ಯಕ್ಷಧ್ರುವ, ಪಟ್ಲ ಇದು ಶ್ರೀ ಪಟ್ಲ ಸತೀಶ್ ಶೆಟ್ಟಿಯವರ ನೇತೃತ್ವದಲ್ಲಿ ಸುಮಾರು 8,000 ಮಕ್ಕಳಿಗೆ ಯಕ್ಷಗಾನದ ತರಬೇತಿಯನ್ನು ಕೊಡುತ್ತಿದ್ದಾರೆ. ಏತಕ್ಕೆ ಪ್ರಾಧಿಕಾರ ಆಗಬೇಕೆಂದು ನಾನು ಮಾನ್ಯ ಮಂತ್ರಿಗಳ ಹತ್ತಿರ ಕೇಳುತ್ತಿದ್ದೇನೆಂದರೆ, ಈಗ ಅಕಾಡೆಮಿಗೆ ಅನುದಾನ ಕೊಡುತ್ತಿರುವುದು ಕೇವಲ ರೂ. 40,00,000/-. ಈ 40,00,000/- ರೂಪಾಯಿಗಳು ಯಾವುದಕ್ಕೂ ಸಾಲುವುದಿಲ್ಲ. ಅದಕ್ಕಿಂತಲೂ ಮುಖ್ಯವಾಗಿ ಯಕ್ಷಗಾನದ ಪರಂಪರೆಯನ್ನು ಮುಂದಿನ ಪೀಳಿಗೆಗೆ ತೆಗೆದುಕೊಂಡು ಹೋಗಬೇಕೆಂದರೆ, ಅದಕ್ಕೆ ತನ್ನದೇ ಆದ structure ಮಾಡಬೇಕು. ಪಠ್ಯ ಪುಸ್ತಕಗಳನ್ನು ಮಾಡಬೇಕು, ಅದಕ್ಕೆ ಶಿಕ್ಷಕರನ್ನು

ನೇಮಿಸಬೇಕು. ಇಂತಹ ಹಲವಾರು ಕೆಲಸಗಳು ಇರುವುದರಿಂದ ಅಕಾಡೆಮಿಯಿಂದ ಇದನ್ನು ಪ್ರಾಧಿಕಾರ ಮಾಡಿ ಎಂದು ಕೇಳುತ್ತಿದ್ದೇವೆ. ಇದರಲ್ಲಿ ಏನಾಗಿದೆ ಎಂದರೆ, ಯಕ್ಷಗಾನಕ್ಕೆ ಸಂಗೀತ ಮತ್ತು ನಾಟಕ ಅಕಾಡೆಮಿ ಮತ್ತು ‘ಯುನೆಸ್ಕೋ’ದ ಮನ್ನಣೆಗೆ ಈಗಾಗಲೇ ಪ್ರಯತ್ನವನ್ನು ಮಾಡಿದ್ದಾರೆ. ಆ ಮನ್ನಣೆಯನ್ನು ದೊರಕಿಸಿಕೊಡಬೇಕು. ಅದೇ ರೀತಿ Indian Council for Cultural Relations, ಅವರ ಮೂಲಕ ಯಕ್ಷಗಾನವನ್ನು ಅಂತರ್ರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕು ಮತ್ತು exchange program ಗಳಲ್ಲಿ ವಿಶ್ವವಿದ್ಯಾಲಯಗಳಲ್ಲಿ ಭಾಗವಹಿಸಬೇಕೆಂದು ಕೇಳುತ್ತಿದ್ದೇನೆ. ಬೊಂಬೆಯಾಟ, ಮಕ್ಕಳ ರಂಗಭೂಮಿಕೆ ಈ ರೀತಿಯ ಹಲವಾರು ಕಾರ್ಯಕ್ರಮಗಳು ಇರುವುದರಿಂದ ಇದನ್ನು ಅಂತರ್ರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕೆಂದು ಹೇಳಿದರೆ, ಇದಕ್ಕೆ ಪ್ರಾಧಿಕಾರದ ಅವಶ್ಯಕತೆ ಇದೆ. ಜಗತ್ತಿನ ಮ್ಯೂಸಿಯಂಗಳಲ್ಲಿ ಯಕ್ಷಗಾನದ ಕನಿಷ್ಟ electronic ದಾಖಲೀಕೃತ ಮಾಡಬೇಕೆಂದು ನಮ್ಮ ಕಳಕಳಿ ಇದೆ. ಯಕ್ಷಗಾನ ಮಾಡಿದ ಹಿರಿಯ ಕಲಾವಿದರುಗಳಿಗೆ ಯಾವುದೇ ರೀತಿಯ ವೇತನವಾಗಲೀ ಅಥವಾ ಗುರು ಕಾಣಿಕೆಯನ್ನು ನಾವು ಕೊಡುತ್ತಿಲ್ಲ. ಅವರಿಗೆ ಸಂಭಾವನೆಗಳನ್ನು ಕೊಡುವಂತಹದ್ದು ಮತ್ತು ಅವರ ಮಕ್ಕಳಿಗೆ; ಯಕ್ಷಗಾನವನ್ನು ಮುಂದಿನ ಪರಂಪರೆಗೆ ತೆಗೆದುಕೊಂಡು ಹೋಗಬೇಕೆನ್ನುವ ಬಹಳಷ್ಟು ಜನರು ಇದ್ದಾರೆ. ಉದಾಹರಣೆಗೆ ಹೇಳುವುದಾದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀಮತಿ ಧರಣಿ ದೇವಿಯವರು ಇಲ್ಲಿದ್ದಾರೆ. ಅವರ ತಂದೆ ಇರಬಹುದು, ಅವರ ಪರಂಪರೆ ಇಂತಹ ಕುಟುಂಬಗಳು ಇದರಲ್ಲಿ ತೊಡಗಿಸಿಕೊಂಡಿವೆ. ಇದೆಲ್ಲವನ್ನೂ ನಾವು ತೆಗೆದುಕೊಂಡು ಹೋಗಬೇಕು, ಯಕ್ಷಗಾನವನ್ನು ಮಾಡಬೇಕೆಂದರೆ ಇದನ್ನು ಮಾಡಬೇಕು. ಕೊನೆಯದಾಗಿ ಕೇಳಿಕೊಳ್ಳುವುದೇನೆಂದರೆ, ನಮ್ಮ ಕರಾವಳಿ ಯಕ್ಷಗಾನ ಪ್ರಾಧಿಕಾರವು ಯಾವ ರೀತಿ ಇರಬೇಕು, ಅದರ ಸ್ವರೂಪ, ಸಂಪನ್ಮೂಲ, ಅಧಿಕಾರಿಗಳ ಸಂಖ್ಯೆ ಬಹಳಷ್ಟು ಬೇಕಾಗಿರುವುದರಿಂದ ವರ್ಷ ವರ್ಷಕ್ಕೆ ಕನಿಷ್ಟ ರೂ. 50 ಕೋಟಿಗಳ ಅನುದಾನವನ್ನು ಇದಕ್ಕೆ ಇಡಬೇಕು ಅಲ್ಲದೇ ನಮ್ಮಲ್ಲಿರುವ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಇಡೀ ವಿಶ್ವಕ್ಕೆ ಕರಾವಳಿಯ ಈ ಗಂಡು ಕಲೆಯಾದ ಯಕ್ಷಗಾನಕ್ಕೆ ಮೆರುಗು ನೀಡಬೇಕೆಂದು ಹೇಳಿ ಕೊನೆಯದಾಗಿ, ‘‘ಯಕ್ಷಗಾನಂ ಗೆಲ್ಗೆ, ಯಕ್ಷಗಾನಂ ಬಾಳ್ಗೆ’’ ಎನ್ನುವ ಮಾತುಗಳಿಂದ ಇದನ್ನು ಮುಕ್ತಾಯ ಮಾಡುತ್ತಾ ಮತ್ತೊಮ್ಮೆ ನಮ್ಮ

ಕನ್ನಡ ಮತ್ತು ಸಂಸ್ಕೃತಿ ಸಚಿವರಲ್ಲಿ; ಮಾನ್ಯ ಸಚಿವರ ಕೈಬರಹ ನೋಡಬೇಕು ಬಹಳ ಚೆನ್ನಾಗಿ ಬರೆಯುತ್ತಾರೆ. ಹಲವಾರು ಕಲೆಗಳನ್ನು ಕಲಿತಂತಹವರು ಇವರು. ಇವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ದಯವಿಟ್ಟು ಪ್ರಾಧಿಕಾರವನ್ನು ಮಾಡಿಕೊಡಬೇಕು, ಇದರಿಂದ ತಮ್ಮ ಹೆಸರು ಯಾವಾಗಲೂ ಇರುತ್ತದೆ ಎಂದು ಎಲ್ಲರ ಪರವಾಗಿ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ಇದಕ್ಕೆ ಬಹಳಷ್ಟು ಜನರು ನಮ್ಮ ದಕ್ಷಿಣ ಕನ್ನಡದ ಕರಾವಳಿಯ ಶಾಸಕರೆಲ್ಲರೂ ಇದಕ್ಕೆ ಒಕ್ಕೊರಲಿನಿಂದ ನಮಗೆ ಸಹಕಾರ ಕೊಡುತ್ತಾರೆ ಎಂಬ ಮಾತನ್ನು ಹೇಳಿ ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಶಿವರಾಜ ಎಸ್. ತಂಗಡಗಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಮಂಜುನಾಥ್ ಭಂಡಾರಿಯವರು ಯಕ್ಷಗಾನದ ಬಗ್ಗೆ ಮತ್ತು;

**ಸಭಾಪತಿಯವರು:–** ಮಾನ್ಯ ಸಚಿವರೇ, ಒಂದು ನಿಮಿಷ ಇರಿ, ಮಾನ್ಯ ಸದಸ್ಯರಾದ ಹರಿಪ್ರಸಾದ್‌ರವರು ಮಾತನಾಡಲಿದ್ದಾರೆ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ)**:– ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ಶ್ರೀಮಾನ್ ಮಂಜುನಾಥ್ ಭಂಡಾರಿಯವರು ದಕ್ಷಿಣ ಕನ್ನಡ ಜಿಲ್ಲೆಯ ಅದರಲ್ಲಿಯೂ ಸಹ ಸಾಹಿತ್ಯ ಮತ್ತು ಕಲೆಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವ ಪ್ರಯತ್ನ ಮಾಡಿದ್ದಾರೆ. ನಾನಾದರೂ ಹೇಳುವುದು ಇಷ್ಟೇ. ಯಕ್ಷಗಾನ ಕಲೆ ಎನ್ನುವುದು ಎರಡೂವರೆ ಸಾವಿರ ವರ್ಷ ಎಂದು ಹೇಳಿದರು, 11–12ನೇ ಶತಮಾನದಿಂದ ಬಂದಿರುವ ಈ ಕಲೆಯಾಗಿದ್ದು, ಪ್ರಮುಖವಾಗಿ ಇದರಲ್ಲಿ ಇದ್ದವರು ಶ್ರೀ ಪಾರ್ತಿಸುಬ್ಬ ಎಂಬುವವರು 16ನೇ ಶತಮಾನದಲ್ಲಿ ಇದಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿರುವುದನ್ನು ನಾವು ಇತಿಹಾಸದಲ್ಲಿ ನೋಡಬಹುದು. ಶ್ರೀ ಕೃಷ್ಣದೇವರಾಯರ ಕಾಲದಲ್ಲಿ ಇದಕ್ಕೆ ನೃತ್ಯ ಮತ್ತು ಸಾಹಿತ್ಯದ ಮೆರುಗನ್ನು ಕೊಟ್ಟು ಈ ಯಕ್ಷಗಾನ ಕಲೆಯನ್ನು ಉಳಿಸಿಕೊಂಡು ಬಂದಿರುವುದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. ಇದಕ್ಕೇ ಆದಂತಹ ಇತಿಹಾಸವಿರುವ ಈ ಕಲೆಗೆ ಕರ್ನಾಟಕ ರಾಜ್ಯದ ವೈಶಿಷ್ಟ್ಯವೇನೆಂದು ಹೇಳಿದರೆ, ತುಳು, ಕೊಡವ, ಕೊಂಕಣಿ ಭಾಷೆಯಲ್ಲಿ ಮತ್ತು ಉರ್ದು ಬ್ಯಾರಿ ಭಾಷೆಯಲ್ಲಿರುವಂತಹ

ಹಲವಾರು ಸಾಹಿತ್ಯಗಳಿರುವಂತಹ ಈ ಕರಾವಳಿ ಪ್ರದೇಶದಲ್ಲಿ ಅದರ ಸಾಹಿತ್ಯ ಮತ್ತು ಕಲೆ; ಈಗಾಗಲೇ ಮಾನ್ಯ ಮಂಜುನಾಥ್ ಭಂಡಾರಿಯವರು ಹೇಳಿದ ಹಾಗೆ ವಿಶ್ವವಿಖ್ಯಾತ ಎಂದು ಹೇಳಿದಾಗ ಅದು ಕೇವಲ ಕರಾವಳಿಗೆ ಮಾತ್ರ ಸೀಮಿತವಾಗಿಲ್ಲ, ಕರಾವಳಿಯವರು ಬೆಂಗಳೂರಿಗೆ ಬಂದು ಯಕ್ಷಗಾನವನ್ನು ಮಾಡದಿದ್ದರೂ ಸಹ ಮುಂಬೈ ಮತ್ತು ಗಲ್ಫ್ ರಾಷ್ಟ್ರಗಳಲ್ಲಿ ಹೋಗಿ ಹಲವಾರು ಪ್ರದರ್ಶನಗಳನ್ನು ಮಾಡಿ ಬಂದಿದ್ದಾರೆ. ಕಳೆದ ವರ್ಷ ನ್ಯೂ ಯಾರ್ಕ್‌ನಲ್ಲಿಯೂ ಸಹ ಈ ಪ್ರದರ್ಶನ ನಡೆದಿದೆ. ಆದ್ದರಿಂದ ಸರ್ಕಾರ ರೂ. 40,00,000/- ಕೊಟ್ಟರೆ ಕಾರು, ಡ್ರೈವರ್, ಟೆಲಿಫೋನ್, ಟಿ.ಎ., ಡಿ.ಎ. ಗೆ ಹೊರಟು ಹೋಗುತ್ತದೆ. ಕಲೆಗೆ ನಿಜವಾದ ಪ್ರೋತ್ಸಾಹ ಏನಾದರೂ ಕೊಡಬೇಕಾದರೆ; ಇದೊಂದು ರೀತಿಯ ಕಲೆಗೆ ಭಾರತೀಯ ಜನತಾ ಪಾರ್ಟಿಯವರು ಮೊದಲೇ ಎತ್ತಬೇಕಾಗಿತ್ತು. ಇದು ಅವರಿಗೆ ಬಹಳ ಪ್ರಿಯವಾದಂತಹ ಕಲೆ. ಇದರಲ್ಲಿ ದೇಶದ ಸಾಹಿತ್ಯ, ಕಲೆ ಎಲ್ಲವೂ ಸಹ ಸೇರಿರುವುದು.

(ಮುಂದು)

(631) 23-07-2024 3-30 KH/VK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಹೇಳಿದ್ದೀರಿ. ನಾವು ಯಾವ ಕಲೆ ಎಂದು ತಿಳಿದುಕೊಳ್ಳಬೇಕು?

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಲವಾರು ಕಲೆ. ಮಾನ್ಯ ಎಸ್.ಎಲ್.ಭೋಜೇಗೌಡರಂತಹ . . .

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇಂತಹ ಹಿರಿಯರಾದಂತಹವರು ಮಾತನಾಡುವಾಗ ಒಳಗಡೆ ಏನಾದರೂ ಸ್ವಲ್ಪ ಇಟ್ಟಿರುತ್ತಾರೆ. ಹಾಗಾಗಿ . . .

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಇಲ್ಲ. ನಿಮ್ಮ ಪ್ರೇರಣೆ ಅಷ್ಟೇ. ನಾನು ಏನು ಮಾತನಾಡುತ್ತಿಲ್ಲ ಎಂದು ಹೇಳಿದರಲ್ಲವೇ? ಅದಕ್ಕೆ ಮಾತನಾಡುತ್ತಿದ್ದೇನೆ.

**ಶ್ರೀ ಸಲೀಂ ಅಹ್ಮದ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಎಲ್.ಭೋಜೇಗೌಡರವರು ಸಕಲ ಕಲಾ ವಲ್ಲಭರು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಆ ಎರಡೇ ಇವರಿಗೆ ಗೊತ್ತಿಲ್ಲ ಅಷ್ಟೇ. ಆದ್ದರಿಂದ, ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಇಷ್ಟೇ. ಸರ್ಕಾರದಲ್ಲಿ ತಾವು ಇದ್ದೀರಿ. ಈ ರಾಜ್ಯದ ಒಂದು ಭಾಗ ದಕ್ಷಿಣ ಕನ್ನಡ. ಅಲ್ಲಿನ ಒಂದು ಸಾಹಿತ್ಯ, ಕಲೆ ಈ ರಾಜ್ಯದ ಅವಿಭಾಜ್ಯ ಅಂಗ. ಅದಕ್ಕೆ ಎಲ್ಲಾ ರೀತಿ ಸೌಕರ್ಯಗಳನ್ನು ಕೊಡಬೇಕು. ಮಾನ್ಯ ಮಂಜುನಾಥ್ ಭಂಡಾರಿಯವರು ಐವತ್ತು ಕೋಟಿ ರೂಪಾಯಿಗಳನ್ನು ಇಡಬೇಕೆಂದು ಹೇಳಿದ್ದಾರೆಯಲ್ಲವೇ? ದಯವಿಟ್ಟು ಐವತ್ತು ಕೋಟಿ ರೂಪಾಯಿಗಳನ್ನು ಇಡಬೇಕೆಂದು ತಮ್ಮನ್ನು ಒತ್ತಾಯ ಮಾಡುತ್ತೇನೆ.

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಏನು ಹೇಳಿದರು ಎಂದರೆ, . . .

**ಸಭಾಪತಿಯವರು:–** ಮಾನ್ಯ ಮಂಜುನಾಥ್ ಭಂಡಾರಿಯವರೇ, ಒಂದು ನಿಮಿಷ. ಮಾನ್ಯ ಐವನ್ ಡಿ'ಸೋಜಾರವರು ಮಾತನಾಡುತ್ತಾರೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಮಂಜುನಾಥ್ ಭಂಡಾರಿಯವರು ಮಂಡಿಸಿರುವಂತಹ ಗಮನ ಸೆಳೆಯುವ ಸೂಚನೆಯನ್ನು ನಾನು ಬೆಂಬಲಿಸುತ್ತೇನೆ. ಯಕ್ಷಗಾನ ಅಭಿವೃದ್ಧಿ ಪ್ರಾಧಿಕಾರವನ್ನು ಮೇಲ್ದರ್ಜೆಗೇರಿಸಿ ಹೆಚ್ಚು ಅನುದಾನ ಕೊಡಬೇಕೆಂದು ಹೇಳಿದ್ದಾರೆ. ಉದಾಹರಣೆಗೆ, ಯಕ್ಷಗಾನ ಹಿಂದೆ ಇರುವಂತಹ ಪದ್ಧತಿಗೂ, ಈಗ ಇರುವಂತಹ ಪದ್ಧತಿಗೂ ತುಂಬಾ ಸುಧಾರಣೆಯಾಗಿದೆ. ಈಗ ಶಾಲೆಗಳಲ್ಲಿಯೂ ಕೂಡ ಯಕ್ಷಗಾನದ ಬಗ್ಗೆ ತರಬೇತಿ ನೀಡುವಂತಹ ಕಾರ್ಯಕ್ರಮ ಪ್ರಾರಂಭ ಮಾಡಿದ್ದಾರೆ. ಈಗ ಕೆಲವು ಯಕ್ಷಗಾನ ಮೇಳದವರೇ ತರಬೇತಿ ನೀಡುವುದನ್ನು ಪ್ರಾರಂಭ ಮಾಡಿದ್ದಾರೆ. ಇದು ಮಾತ್ರವಲ್ಲದೇ ಯಕ್ಷಗಾನವನ್ನು ಇಂಗ್ಲೀಷ್ ಭಾಷೆಯಲ್ಲಿ ಕೂಡ ಮಾಡಿ ವಿದೇಶಿಗಳಿಗೆ ಹೋಗಿ, ಅಮೇರಿಕಾದಂತಹ ದೇಶದಲ್ಲಿಯೂ

ಕೂಡ ಯಕ್ಷಗಾನ ಪ್ರದರ್ಶನ ಮಾಡುವಂತಹ ಒಂದು ಕಾಲ ಈಗ ಬಂದಿದೆ. ಹಾಗಾಗಿ, ಇದೆಲ್ಲಾವನ್ನೂ ಪ್ರೋತ್ಸಾಹಿಸಬೇಕಾದರೆ, ಎಲ್ಲಿಯೋ ಒಂದು ಕಡೆ systematic development ಗೆ ಅವಕಾಶವಾಗುತ್ತದೆ. ಹಾಗೆಯೇ ಪ್ರಾಧಿಕಾರವನ್ನು ಮಾಡಿದರೆ, ಇದರಲ್ಲಿ ಹೆಚ್ಚು ತರಬೇತಿ ನೀಡುವುದಕ್ಕೆ ಪರಿಣತರಿಗೆ ಅವಕಾಶವಾಗುತ್ತದೆ. ಕಲೆಗೆ ಹೆಚ್ಚು ಪ್ರೋತ್ಸಾಹ ಸಿಗುತ್ತದೆ. ಅದಕ್ಕೋಸ್ಕರ ಯಕ್ಷಗಾನ ಅಭಿವೃದ್ಧಿ ಪ್ರಾಧಿಕಾರವನ್ನು ಮೇಲ್ದರ್ಜೆಗೇರಿಸಿ ಐವತ್ತು ಕೋಟಿ ರೂಪಾಯಿಗಳ ಅನುದಾನವನ್ನು ಏನು ಕೊಡಬೇಕೆಂದು ಹೇಳಿದ್ದಾರೆ. ಆ ಅನುದಾನವನ್ನು ಇಟ್ಟು ಕಲೆಗೆ ಪ್ರೋತ್ಸಾಹ ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಿಗೆ ಒತ್ತಾಯಿಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನೋಡಿ. ತಾವು ಪೀಠದಿಂದ ಎಲ್ಲೆಲ್ಲಿಯೋ ಹೋಗಬೇಡಿ ಎಂದು ಚೀಟಿ ಕಳುಹಿಸಿರುತ್ತೀರಿ.

ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಇದರಲ್ಲಿ ಕಲೆ, ಸಾಹಿತ್ಯದ ಬಗ್ಗೆ, ಸಂಗೀತದ ಬಗ್ಗೆ, ನಾಟಕದ ಬಗ್ಗೆ, ಯಕ್ಷಗಾನದ ಬಗ್ಗೆ ಮಾತನಾಡಬೇಕಾದರೆ, ಅದು . . .

**ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ನಾನು ತಮಗೆ ಚೀಟಿ ಕಳುಹಿಸಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಆ ಚೀಟಿಯನ್ನು ಬಹಳ ಕಷ್ಟಪಟ್ಟು ಓದಿದೆ. ನನಗೆ ಕೊನೆಯ ಸಾಲು ಅರ್ಥವಾಗಲಿಲ್ಲ. ಕೊನೆಯ ಸಾಲು ಅರ್ಥವಾಗದೇ ಇರುವ ಹಾಗೆ ಬರೆದಿರುವುದು ತಮ್ಮದೊಂದು ದೊಡ್ಡ ಕಲೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕೆ ಧನ್ಯವಾದಗಳು

**ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಮನೆಗೆ ಹೋಗಿ ಓದಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದ ಮುಖ್ಯ ಸಚೇತಕರು ಸಕಲ ಕಲಾವಲ್ಲಭರು ಎಂದು ಮಾನ್ಯ ಎಸ್.ಎಲ್.ಭೋಜೇಗೌಡರವರಿಗೆ ಹೇಳಿದರು. ಆ ಸಕಲ ಕಲಾವಲ್ಲಭ ಆಗಬೇಕಾದರೆ ಯಾವ ಯಾವ ಕಲೆಯನ್ನು ಕಲಿತಿರಬೇಕು?

**ಶ್ರೀ ಸಲೀಂ ಅಹ್ಮದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಎಲ್.ಭೋಜೇಗೌಡರವರು ಎಲ್ಲಾ ಕಲೆಗಳನ್ನು ಕಲಿತಿದ್ದಾರೆ. ಅವರು ಎಲ್ಲಾ ಕಲೆಗಳಲ್ಲಿ ನಿಪುಣರು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಒಂದು ಮಾತನ್ನು ಹೇಳುತ್ತೇನೆ. ಈ ಸದನದಲ್ಲಿ ಯಾರು ಬೇಕಾದರೂ trespass ಮಾಡಬಹುದು. ನಾನು ಅದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಎಲ್ಲವನ್ನೂ ಬಹಳ sportive ಆಗಿ ತೆಗೆದುಕೊಳ್ಳುತ್ತೇನೆ. ಅದರಲ್ಲಿ ಎರಡನೇ ಮಾತಿಲ್ಲ. ನೋಡಿ, ಮಾನ್ಯ ಮಂಜುನಾಥ್ ಭಂಡಾರಿಯವರು ಕೇಳಿರುವಂತಹದ್ದು, ಯಕ್ಷಗಾನ ಕಲೆಯನ್ನು ಇನ್ನು ಪೋಷಿಸಿ, ಮುಗಿಲೆತ್ತರಕ್ಕೆ ಬೆಳೆಸಬೇಕೆನ್ನುವ ವಿಚಾರದಲ್ಲಿ ಬಹಳ ಅತ್ಯಂತ ಸಮಯೋಚಿತವಾಗಿ ಇದನ್ನು move ಮಾಡಿದ್ದಾರೆ. ಹಾಗಾಗಿ, ನಾವೆಲ್ಲರೂ ಇದಕ್ಕೆ ಬೆಂಬಲವನ್ನು ಕೊಡಬೇಕಾಗುತ್ತದೆ. ಯಕ್ಷಗಾನ ಬೇರೆ ಅಲ್ಲ. ಯಕ್ಷಗಾನದಲ್ಲಿ ಬರುವಂತಹ ಸಾಹಿತ್ಯ ಇರಬಹುದು, ನಾಟಕ, ಕಲೆಗಳು ಇರಬಹುದು. ಬೇರೆ ಬೇರೆ ದೃಷ್ಟಿಕೋನದಲ್ಲಿ ಮಾಡಿರುವಂತಹದ್ದು, ಜಾನಪದದ ಇನ್ನೊಂದು ಭಾಗ. ಇವತ್ತು ನಾನು ಯಾವಾಗಲೂ ಮಾತನಾಡುವಾಗ ಹೇಳುತ್ತೇನೆ. ಈ ನಾಡನ್ನು ಕಟ್ಟಿರುವಂತಹದ್ದು, ವಚನ ಸಾಹಿತ್ಯದ ಅಡಿಯಲ್ಲಿ, ದಾಸ ಸಾಹಿತ್ಯದ ಅಡಿಯಲ್ಲಿ, ಜಾನಪದ ಸಾಹಿತ್ಯದ ಅಡಿಯಲ್ಲಿ, ತತ್ವಪದಗಳ ಆಧಾರದಲ್ಲಿ ಈ ನಾಡನ್ನು ಕಟ್ಟಿರುವಂತಹದ್ದು. ಈ ಯಕ್ಷಗಾನದಲ್ಲಿ ಇತ್ತೀಚೆಗೆ ಬಂದಂತಹ ಶ್ರೀ ಸುಬ್ರಾಯ ಚೊಕ್ಕಾಡಿರವರನ್ನು ನಾನು ಯಾವಾಗಲೂ ನೆನಪಿಸಿಕೊಳ್ಳುತ್ತೇನೆ. ಶ್ರೀ ಸುಬ್ರಾಯ ಚೊಕ್ಕಾಡಿಯವರು ಕೊಟ್ಟಿರುವಂತಹ *"ಮುನಿಸು ತರವೇ ಮುಗದೆ ಹಿತವಾಗಿ ನಗಲು ಬಾರದೆ"* ಎನ್ನುವಂತಹ ವಿಚಾರ ಇದೆಯಲ್ಲವೇ? ಅದನ್ನು ಯಕ್ಷಗಾನ ಕಲಾವಿದರು ಇದನ್ನು 10 ರೀತಿಯಲ್ಲಿ ಹಾಡುತ್ತಾರೆ. ಇದು ಸುಮಾರು 10 ಲಕ್ಷಕ್ಕೂ ಮಿಗಿಲಾಗಿ likes ಬಂದಿದೆ. ಅದು ಬಹುದೊಡ್ಡದಾಗಿ ಇರುವಂತಹದ್ದು. ಶ್ರೀ ಕಯ್ಯಾರ ಕಿಞ್ಞಣ್ಣ ರೈ ಇರಬಹುದು, ಶ್ರೀ ಗೋಪಾಲಕೃಷ್ಣ ಅಡಿಗರು ಇರಬಹುದು, ಶ್ರೀ ಮುದ್ದಣ್ಣ ಇರಬಹುದು, ಡಾ॥ ಶಿವರಾಮ ಕಾರಂತರು

ಇರಬಹುದು, ಇವರೆಲ್ಲಾ ಅವಿಭಾಜ್ಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂದಂತಹ ಮಹಾನ್ ಕವಿಗಳು. ಅವರು ಕೊಟ್ಟಿರುವಂತಹ ಸಾಹಿತ್ಯ ಶ್ರೀಮಂತಿಕೆ ಇದೆಯಲ್ಲವೇ? ಆ ಶ್ರೀಮಂತಿಕೆಯನ್ನು ಹೇಳಬೇಕಾದರೆ we cannot explain in words. ಇದಕ್ಕೆ ಪದಗಳೇ ಇಲ್ಲ. ಹೀಗಾಗಿ ಉತ್ತರ ಕನ್ನಡದಲ್ಲಿ ಬರುವಂತಹದ್ದು ಕೂಡ ಯಕ್ಷಗಾನದಲ್ಲಿ ಬಂದಿದೆ.

*ಕಲಿತ ಹುಡುಗಿ ಕುದುರಿ ನಡಗಿ*
*ನಡೆದು ಬರುತಿತ್ತಾ॥*

*ಕಲಿತ ಹುಡುಗಿ ಕುದುರಿ ನಡಗಿ*
*ನಡೆದು ಬರುತಿತ್ತಾ॥*
*ಅದನ್ನು ಕಂಡ ನಮ್ಮ ಹಳ್ಳಿಮಂದಿಗೆ*
*ದಿಕ್ಕ ತಪ್ಪಿಹೋತ*

*ಕಲಿತ ಹುಡುಗಿ ಕುದುರಿ ನಡಗಿ*
*ನಡೆದು ಬರುತಿತ್ತಾ॥*

*ಕಮ್ಮಾರ ಹುಡುಗ ಕಬ್ಬಿಣಾ ಕಾಸಿ ಬಡಕೊಂಡ ಕುಂತಿತ್ತಾ*
*ಹಾದು ಹೋಗುವ ಹುಡುಗಿಮ್ಯಾಗ ಅವನ ನೆದರ ಬಿತ್ತ*
*ಎತ್ತಿದ ಕಬ್ಬಿಣ ಸುತ್ತಿಗೆ ಪಟ್ಟಂತ ಕೆಳಗ ಬಿತ್ತ*
*ಕಬ್ಬಿಣ ಮ್ಯಾಗ ಕುಂದ್ರೋ ಹೊಡತಾ ಕೈಯಮ್ಯಾಲ ಬಿತ್ತ*

ಇದನ್ನು ಏಕೆ ಆವತ್ತು ಹೇಳಿದ್ದಾರೆ. ಅದನ್ನು ಬಣ್ಣನೆ ಮಾಡುತ್ತಾರೆ. ಒಬ್ಬ ನರ್ಸ್ ಮೊದಲೇ ಬಾರಿಗೆ ಬರುವಾಗ ಆ ಹುಡುಗಿಯನ್ನು ವರ್ಣನೆ ಮಾಡುವಂತಹ ವಿಚಾರ ಇದು. ಇದನ್ನು ಗುರುರಾಜ್ ಹೊಸಕೋಟೆರವರು ಹಾಡಿರುವಂತಹದ್ದು. ಇದು ಸಾಹಿತ್ಯ. ಅದಕ್ಕೆ ನಾನು ಹೇಳಿದೆ. ಇದಕ್ಕೆ ನಾವು ಬೆಲೆ ಕಟ್ಟುವುದಕ್ಕೆ ಆಗುವುದಿಲ್ಲ.

*"ಎಷ್ಟೊಂದು ಕಾಲದಿಂದ ಹಂಬಲಿಸಿದೆ*

*ನೀ ಬಂದು ಸೇರಿ ನನ್ನ ಮುದಗೊಳಿಸಿದೆ*

*ಜೀವನದ ನೂರು ಕನಸು ನನಸಾಗಿದೆ॥*

*ಜೊತೆ ಸೇರಲು ಜೀವನ ಪಾವನ,*

*ಮುನಿಸು ತರವೇ ಮುಗುದೆ*

*ಹಿತವಾಗಿ ನಗಲೂ ಬಾರದೆ"*

ನಾವು ಇರುವಂತಹ ಸಭೆಯಲ್ಲಿ ಹಿತವಾಗಿ ನಗಬೇಕು.

**ಶ್ರೀ ಮಂಜುನಾಥ್ ಭಂಡಾರಿ:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಯಾರಿಗೆ ಹೇಳುತ್ತಿದ್ದೀರಿ ಎಂದು ಹೇಳಿಬಿಡಿ. ಎಲ್ಲರಿಗೂ ಗೊತ್ತಾಗಲಿ.

**ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡರವರು, ಯಾವಾಗಲೂ ಈ ಕಡೆ ಮುಖ ಮಾಡಿ ಮಾತನಾಡುವುದು. ಈಗ ಆ ಕಡೆ ಮುಖ ಮಾಡಿ ಮಾತನಾಡುತ್ತಾರೆ.

**ಶ್ರೀ ಮಂಜುನಾಥ್ ಭಂಡಾರಿ:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಇದು ಯಕ್ಷಗಾನದ ಸಬ್ಜೆಕ್ಟ್. ನೀವು ಯಕ್ಷಗಾನದಿಂದ ಬೇರೆ ಸಬ್ಜೆಕ್ಟ್‌ಗೆ ಹೋಗಿ ಬಿಟ್ಟಿದ್ದೀರಾ. ಇದು ಜಾನಪದ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಮಂಜುನಾಥ್ ಭಂಡಾರಿಯವರೇ, ಇದು ಯಕ್ಷಗಾನದಲ್ಲಿಯೇ ಬರುತ್ತದೆ. ಒಂದು ನಿಮಿಷ ಕೇಳಿ.

**ಸಭಾಪತಿಯವರು:–** ಮಾನ್ಯ ಮಂಜುನಾಥ್ ಭಂಡಾರಿಯವರೇ, ಕುಳಿತುಕೊಳ್ಳಿ. ಯಾಕೆ ತಮಗೆ ಏನಾಯಿತು?

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಮಂಜುನಾಥ್ ಭಂಡಾರಿಯವರೇ, ಯಕ್ಷಗಾನದಲ್ಲಿ ಈ "ಮುನಿಸು ತರವೇ" ಯನ್ನು ನಿಮ್ಮ ಎಲ್ಲಾ ಯಕ್ಷಗಾನ ಕಲಾವಿದರು, ಪ್ರತಿಯೊಂದು ಯಕ್ಷಗಾನದಲ್ಲಿಯೂ ಕೂಡ ಹಾಡುವಂತಹದ್ದು ಇದೆ. ಯೂಟ್ಯೂಬ್ ತೆಗೆದು ನೋಡಿ. ಶ್ರೀಮತಿ ಭಾರತಿಶೆಟ್ಟಿಯವರೇ, ಹೌದಲ್ಲವೇ? ನಾನು ಯಕ್ಷಗಾನ ಬಿಟ್ಟು ಎಲ್ಲಿಗೆ ಹೋಗಿದ್ದೀನಿ?

**ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಸಾಕು.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಈಗ ಮುಗಿಸಲೇ, ಸರಿಯಿದೆಯೇ, ತಾವು ಕುಳಿತುಕೊಳ್ಳಿ ಎಂದರೆ ನಾನು ಕುಳಿತುಕೊಳ್ಳುತ್ತೇನೆ. ಈಗ ಕುಳಿತುಕೊಳ್ಳಲೇ?

**ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಬೇಡ. ಕುಳಿತುಕೊಳ್ಳಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ,

*"ಕುದುರೇನ ತಂದೀನಿ ಜೀನಾವ ಬಿಗಿದೀನಿ*
*ಬರಬೇಕು ತಂಗಿ ಮದುವೇಗೆ॥*
*ಅಂಗ್ಳ ಗುಡಿಸೋರಿಲ್ಲ ಗಂಗ್ಳ ತೊಳೆಯೋರಿಲ್ಲ*
*ಹೆಂಗೆ ಬರಲಣ್ಣ ಮದುವೇಗೆ॥*
*ಅಂಗ್ಳಾಕೆ ಆಳಿಡುವೆ ಗಂಗ್ಳಾಕೆ ತೊತ್ತಿಡುವೆ*
*ಬರಬೇಕು ತಂಗಿ ಮದುವೇಗೆ॥*

ಇನ್ನು ಮುಂದುವರೆದು ಹೇಳುತ್ತಾರೆ.

*ಮಳೆಯಾರ ಬಂದೀತು ಹೊಳೆಯಾರ ತುಂಬಿತು*
*ಹ್ಯಾಂಗ ಬರಲಣ್ಣ ಮದುವೇಗೆ?*
*ಚಿನ್ನಾದ ಹರಿಗೋಲ್ಗೆ ರನ್ನಾದ ಹುಟ್ಟಾಕಿ*
*ಜೋಕೇಲಿ ನಿನ್ನ ಕರೆದೊಯ್ವೆ॥*

ಆದ್ದರಿಂದ, ಮಾನ್ಯ ಮಂಜುನಾಥ್ ಭಂಡಾರಿಯವರು ಮೂವ್ ಮಾಡಿರುವಂತಹ ಈ ವಿಚಾರದಲ್ಲಿ ದಯಮಾಡಿ ಸರ್ಕಾರ ಇವತ್ತು ಯಕ್ಷಗಾನವನ್ನು ಪ್ರೋತ್ಸಾಹಿಸಬೇಕು. ಜಾನಪದವನ್ನು ಪ್ರೋತ್ಸಾಹಿಸಬೇಕು. ಸಾಹಿತ್ಯವನ್ನು ಪ್ರೋತ್ಸಾಹಿಸಬೇಕು. ಇವತ್ತು ಸಾಹಿತ್ಯದ ಪ್ರಪಂಚ ಬಹಳ ಶ್ರೀಮಂತಿಕೆಯಿಂದ ಕೂಡಿದೆ. ಆ ಶ್ರೀಮಂತಿಕೆಯನ್ನು ಇನ್ನು ಹೆಚ್ಚು ಶ್ರೀಮಂತಿಕೆ ಮಾಡುವಂತಹ ದಿಸೆಯಲ್ಲಿ ಇದಕ್ಕೆ ಐವತ್ತು ಕೋಟಿ ರೂಪಾಯಿಗಳು ಅಲ್ಲ. ನೂರು ಕೋಟಿ ರೂಪಾಯಿಗಳನ್ನು ಕೊಟ್ಟರೂ ಕೂಡ ಕಡಿಮೆಯೇ, . . . ನಮ್ಮ ಬಜೆಟ್ ಮೂರು ಲಕ್ಷ ಇಪ್ಪತ್ತೇಳು ಸಾವಿರ ಕೋಟಿ ರೂಪಾಯಿಗಳಷ್ಟು ಇದೆ. ಈ ಮೂರು ಲಕ್ಷ ಇಪ್ಪತ್ತೇಳು ಸಾವಿರ ಕೋಟಿ ರೂಪಾಯಿಗಳಲ್ಲಿ ನೂರು ಕೋಟಿ ರೂಪಾಯಿಗಳನ್ನು ಕೊಟ್ಟುಬಿಡಿ. ನಿಜವಾಗಿಯೂ ಯಕ್ಷಗಾನ ಕಲಾವಿದರನ್ನು ಮತ್ತೆ ಮತ್ತೆ ಹುರಿದುಂಬಿಸಿ ಪ್ರತಿಯೊಂದು ಮನೆಯಲ್ಲಿಯೂ ಕೂಡ ಯಕ್ಷಗಾನ ಕಲಾವಿದರು ಬರುವಂತಹ

ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇವತ್ತು ಒಂದು ಕಾಲದಲ್ಲಿ ನೋಡಿದರೆ ಪಿಚ್ಚರ್ ಬಿಟ್ಟರೆ ಬೇರೆ ಏನು ಇರಲಿಲ್ಲ. ಇವತ್ತು ಸೀರಿಯಲ್‌ಗಳಲ್ಲಿ ಅವಕಾಶ ಸಿಕ್ಕಿರುವುದರಿಂದ, ಸಾವಿರಾರು ಸೀರಿಯಲ್‌ಗಳಿಂದ ಇವತ್ತು ಆಚೆಗೆ ಬಂದಿದ್ದಾರೆ. ಹಾಗಾಗಿ ಈ ರೀತಿಯಲ್ಲಿ ಯಕ್ಷಗಾನವು ಆಗುತ್ತದೆ. ದಯಮಾಡಿ ಅವಕಾಶ ಮಾಡಿಕೊಡಬೇಕೆಂದು ಸರ್ಕಾರವನ್ನು ಕೇಳಿಕೊಂಡು, ಅತ್ಯಂತ ಕಳಕಳಿಯಿಂದ ವಿನಂತಿ ಮಾಡುತ್ತೇನೆ.

(ಮುಂದು)

(632) 23.7.2024 3.40 ಪಿಕೆ:ಬಿಎನ್‌ಎಸ್

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಗಳೆ, ಮಾನ್ಯ ಮಂಜುನಾಥ್ ಭಂಡಾರಿಯವರು ಬಹಳ ಒಳ್ಳೆಯ ವಿಷಯದ ಬಗ್ಗೆ ಗಮನವನ್ನು ಸೆಳೆದಿದ್ದಾರೆ. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೂ ಕೂಡ ಈ ಕುರಿತು 16ನೇ ಶತಮಾನದ ವಿಚಾರಗಳ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದರು. ಹಿಂದೆ ಸಿನಿಮಾ-ನಾಟಕ ಏನೂ ಇರಲಿಲ್ಲ. ಮನೋರಂಜನೆ ಎಂದರೆ ಯಕ್ಷಗಾನದಂತಹ ಕಲೆಗಳೇ ಆಗಿರುತ್ತಿತ್ತು. ಯಕ್ಷಗಾನ ಎಂದರೆ ಅದು ಕೇವಲ ಮನೋರಂಜನೆ ಅಲ್ಲ, ನಾವು ಹರಕೆ ಹೊತ್ತು ಯಕ್ಷಗಾನವನ್ನು ಮಾಡಿಸುತ್ತೇವೆ. ನಮ್ಮ ಕುಟುಂಬದಲ್ಲಿ ಏನಾದರೂ ನೋವು ಬಂದು, ಅದು ಬಗೆಹರಿಯಬೇಕೆಂದರೆ, ನಾವು ಒಂದು ಯಕ್ಷಗಾನದ ಆಟ ಆಡಿಸುತ್ತೇವೆ ಎಂದು ಹರಕೆ ಹೊರುತ್ತೇವೆ. ಈ ರೀತಿ ಹರಕೆ ಮುಖಾಂತರ ಕೂಡ ಯಕ್ಷಗಾನವನ್ನು ಮಾಡಿಸುತ್ತೇವೆ. ಯಕ್ಷಗಾನ ಒಂದು ಮನೋರಂಜನೆ ಅಲ್ಲ; ಯಕ್ಷಗಾನ ನಮ್ಮ ರಾಜ್ಯ ಮಾತ್ರವಲ್ಲದೇ ಇಡೀ ನಮ್ಮ ದೇಶದ ಸಂಸ್ಕೃತಿ, ಇತಿಹಾಸವನ್ನು ಜನರಿಗೆ ಎಳೆಎಳೆಯಾಗಿ ಬಿಡಿಸಿ ಕೊಡುವಂತಹ ಅದ್ಭುತವಾದ ಕಲೆಯಾಗಿದೆ. ಇದರ ಸಾಹಿತ್ಯ ಕೂಡ ಬಹಳ ಚೆಂದವಾಗಿ ಇರುತ್ತದೆ. ಮಾನ್ಯ ಸಭಾಪತಿಗಳೆ, ನಾನೂ ಕೂಡ ಕಾಲೇಜು ದಿನಗಳಲ್ಲಿ ಯಕ್ಷಗಾನ, ತಾಳಮದ್ದಲೆಯಲ್ಲಿ ಭಾಗವಹಿಸಿದ್ದೇನೆ. ಇದು ಅರ್ಥಪೂರ್ಣವಾದ ಕಲೆಯಾಗಿದೆ. ಎಷ್ಟೋ ವಿಷಯಗಳು ನನಗೆ ಪಾಠದಲ್ಲಿ ಅರ್ಥವಾಗದೇ ಇದ್ದರೂ ಅದನ್ನು ಯಕ್ಷಗಾನದಲ್ಲಿ ಕಲಿತ ಉದಾಹರಣೆಗಳಿವೆ. ಆ ಒಂದೊಂದು ವಿಷಯ, ಒಬ್ಬೊಬ್ಬರ ಇತಿಹಾಸ ಅಂದರೆ, ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ ರಾಣಿ ಚೆನ್ನಮ್ಮ, ರಾಣಿ ಅಬ್ಬಕ್ಕ ಮತ್ತು ಝಾನ್ಸಿ ರಾಣಿ ಲಕ್ಷ್ಮೀಬಾಯಿ

ಇಂತಹ ವೀರವನಿತೆಯರ ಜೀವನ ಚರಿತ್ರೆಗೆ ಸಂಬಂಧಪಟ್ಟಂತೆ ಯಕ್ಷಗಾನದ ಮೂಲಕ ಕಲಿಸುವುದೂ ಇದೆ. ಇಡೀ ಭಾರತದ ಇತಿಹಾಸವನ್ನು ಯಕ್ಷಗಾನದ ಮೂಲಕ ನೈಜ ಚಿತ್ರವನ್ನು ಬಹಳ ಚೆನ್ನಾಗಿ ಹೇಳುತ್ತಾರೆ, ಬಿಡಿಬಿಡಿಯಾಗಿ ಹೇಳುತ್ತಾರೆ. ಈಗಿನ ನಮ್ಮ ಮಕ್ಕಳು-ಮೊಮ್ಮಕ್ಕಳು ಪಾಪ್‌ಸಾಂಗ್, ಡಬ್-ಡಬ್ ಎನ್ನುವ ಶಬ್ದಗಳನ್ನು ಕೇಳುವ ಸ್ಥಿತಿ ಇದೆ. ಬಹುಶಃ ನಮ್ಮ ಸರ್ಕಾರ ಇದಕ್ಕೆ ದೊಡ್ಡ ಪ್ರಮಾಣದಲ್ಲಿ ಒತ್ತು ಕೊಡಬೇಕು. ರೂ. 50 ಕೋಟಿಗಳನ್ನು ಕೊಡಬೇಕು ಎಂದು ಹೇಳಿದ್ದನ್ನು ಅಭಿನಂದಿಸುತ್ತೇನೆ, ಅದಕ್ಕಿಂತಲೂ ಹೆಚ್ಚು ಮೊತ್ತವನ್ನು ಕೊಡಿ. ನಮ್ಮ ದೇಶದ ಸಂಸ್ಕೃತಿಯನ್ನು ಕಲೆಯನ್ನು ಎತ್ತಿ ಹಿಡಿಯುವಂತಹ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಗಳೆ, ನಾನು 2500 ವರ್ಷ ಎಂದೇಕೆ ಹೇಳಿದೆ ಎಂದರೆ, ಭರತನ ನಾಟ್ಯಶಾಸ್ತ್ರದ ಮುಂದುವರೆದ ಭಾಗವೇ ಯಕ್ಷಗಾನವಾಗಿದೆ. ಇದನ್ನು ಕ್ಲ್ಯಾರಿಫೈ ಮಾಡಿದೆ ಅಷ್ಟೆ.

**ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಯಕ್ಷಗಾನದ ಬಗ್ಗೆ ಮಾತನಾಡುವಾಗ, ನಮ್ಮ ಬಾಲ್ಯದಿಂದ ಹಿಡಿದು ನಮ್ಮ ಜೀವನದ ಮೇಲೆ ಬಹಳಷ್ಟು ಪ್ರಭಾವ ಬೀರಿರುವಂತಹ ಕಲೆ ಅದಾಗಿದೆ; ಅದು ಸಾಂಸ್ಕೃತಿಕ ವೈಭವವಾಗಿದೆ. ಏಕತಾನತೆಯ ಬದುಕಿಗೆ, ಒಂದು ಅರ್ಥದಲ್ಲಿ ವಿಧಾನ ಪರಿಷತ್ತಿನ ಅಧಿವೇಶನದ ನಡವಳಿಕೆಗಳ ಸಂದರ್ಭದಲ್ಲಿ ಒಮ್ಮೊಮ್ಮೆ ನಮ್ಮ ಮಾನ್ಯ ಭೋಜೇಗೌಡ ಅವರಂಥವರು ಒಂದು ಬದಲಾವಣೆಯನ್ನು ಕೊಡುತ್ತಾರೆ. ಅವರು ಯಕ್ಷಗಾನವನ್ನು ಬಿಟ್ಟು ಬೇರೆಲ್ಲಾ ಮಾತನಾಡಿದರು. ಆದರೂ ಕೂಡ ನಮ್ಮ ಕಡೆಯಿಂದ ಮತವನ್ನು ಪಡೆದುಕೊಂಡು ಈ ಸ್ಥಾನಕ್ಕೆ ಬಂದಿರುವುದರಿಂದ ಯಕ್ಷಗಾನದ ಬಗ್ಗೆ ಅವರಿಗೆ ಬಹಳಷ್ಟು ಅಭಿಮಾನ ಇದೆ. ಮಾನ್ಯ ಸಭಾಪತಿಗಳೆ, ಶಾಲೆಯಲ್ಲೂ ಕಲಿಸದಂತಹ, ಪಠ್ಯ-ಪುಸ್ತಕಗಳು ಹೇಳಿಕೊಡದಂತಹ ಸಂಗತಿಗಳನ್ನು ತಿಳಿಸಿ ಕೊಡುವ ನಮ್ಮ ಮೇಲೆ ಪ್ರಭಾವ ಬೀರುವುದಲ್ಲದೇ ಕನ್ನಡದ ಬೆಳವಣಿಗೆಗೆ, ಕನ್ನಡಕ್ಕೆ ನಿಜವಾದ ಅರ್ಥದಲ್ಲಿ ಬಹಳ ದೊಡ್ಡ ಕೊಡುಗೆಯನ್ನು ಈ ಯಕ್ಷಗಾನ ಕೊಟ್ಟಿದೆ. ಅದು ಹಾಡುಗಳು ಇರಬಹುದು, ಸಾಹಿತ್ಯ ಇರಬಹುದು ಅಥವಾ ಮಾತನಾಡುವ ಮಾತುಗಳು ಇರಬಹುದು. ನಮ್ಮ ಮಾತಿಗೆ ಬಹಳ ದೊಡ್ಡ ಶುದ್ಧತೆಯನ್ನು ಕೊಟ್ಟಿದೆ ಎನ್ನುವುದಾದರೆ

ಅದರ ಹಿಂದೆ ಯಕ್ಷಗಾನದ ಕೊಡುಗೆ ಬಹಳ ದೊಡ್ಡದಿದೆ. ಯಕ್ಷಗಾನದಲ್ಲಿ ರಾಮಾಯಣ, ಮಹಾಭಾರತದಿಂದ ಹಿಡಿದು, ಇತಿಹಾಸದ ಪ್ರಸಿದ್ಧ ಪುರುಷರಿಗೆ ಸಂಬಂಧಪಟ್ಟ ವಿಚಾರಗಳನ್ನು ಸಹ ಹೇಳಲಾಗುತ್ತದೆ. ಇವತ್ತೂ ಕೂಡ ಯಕ್ಷಗಾನ ಎಂದು ಹೇಳಿದಾಗ ಶ್ರೀ ಕಾಳಿಂಗ ನಾವಡರ ನೆನಪು ಬರುತ್ತದೆ. ಆ ಹಾಡುಗಳು ನಮ್ಮ ಮನಸ್ಸಿನ ಮೇಲೆ, ಹೃದಯದಲ್ಲಿ ಸ್ಥಾಯಿಯಾಗಿ ನಿಂತಿವೆ. ಯಕ್ಷಗಾನ ಎಂದು ಹೇಳಿದಾಗ ಶ್ರೀ ಕಾಳಿಂಗ ನಾವಡರಿಂದ ಹಿಡಿದು ಇತ್ತೀಚೆಗೆ ನಿಧನರಾದ ಶ್ರೀ ಸುಬ್ರಹ್ಮಣ್ಯ ಧಾರೇಶ್ವರ್ ಅವರಂಥವರ ಪರಂಪರೆ ನೆನಪಾಗುತ್ತದೆ. ಇವತ್ತು ಭಾರತದ ಸಾಂಸ್ಕೃತಿಕ, ಆಧ್ಯಾತ್ಮಿಕ, ವೈಚಾರಿಕ ದೃಷ್ಟಿಯಲ್ಲೂ ಕೂಡ ತಾಳಮದ್ದಲೆ ಎಂದು ಹೇಳಿದಾಗ ಅದನ್ನು ಬಹಳ ಹಗುರವಾಗಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಎಂಥೆಂಥ ವಿಷಯಗಳ ಬಗ್ಗೆ ಯಾವರೀತಿಯಲ್ಲಿ ವಾದಗಳನ್ನು ಮಾಡುತ್ತಾರೆ, ಯಾವರೀತಿಯಲ್ಲಿ ಒಂದೊಂದು ಪಾತ್ರವನ್ನು ಸೃಷ್ಟಿಸುತ್ತಾರೆ ಎಂದರೆ, ಅವು ಜೀವನ ಮೌಲ್ಯಗಳಾಗುತ್ತವೆ. ಇದು ಅಂತಹ ಕಲೆಯಾಗಿದೆ. ಕರ್ನಾಟಕದ ಕರಾವಳಿಯ ಭಾಗದ ಈ ಕಲೆಯನ್ನು ಬೆಳೆಸುವಂತಹ ಬಹಳ ದೊಡ್ಡ ಜವಾಬ್ದಾರಿ ನಮ್ಮ ಮೇಲಿದೆ. ನೀವು ಅಕಾಡಮಿ ಮಾಡುತ್ತಿಲ್ಲ ಎಂದು ಹೇಳುತ್ತಿಲ್ಲ. ಆದರೆ, ಅದಕ್ಕೆ ಒಂದು ವಿಶೇಷ ರೂಪ ಕೊಡಬೇಕು. ಮೊದಲು ರಾತ್ರಿಯಿಂದ ಬೆಳಗ್ಗೆಯವರೆಗೆ ಆಗುತ್ತಿದ್ದ ಯಕ್ಷಗಾನ ಈಗ ಒಂದೆರಡು ಗಂಟೆಗಳು ಮಾತ್ರ ಆಗುವಂತಹ ಅನಿವಾರ್ಯತೆ ಸೃಷ್ಟಿಯಾಗಿದೆ. ಅಷ್ಟೇ ರೀತಿಯ ಬಲವನ್ನು ಸರ್ಕಾರ ಕೊಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರ ಇದಕ್ಕೆ ರೂ. 50 ಕೋಟಿ ನೀಡುತ್ತದೆ ಎಂದು ತಿಳಿದುಕೊಳ್ಳುತ್ತೇನೆ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:–** ಮಾನ್ಯ ಸಭಾಪತಿಗಳೆ, ಹಿರಿಯ ಸದಸ್ಯರಾದ ಮಾನ್ಯ ಮಂಜುನಾಥ್ ಭಂಡಾರಿಯವರು ಗಮನ ಸೆಳೆಯುವ ಸೂಚನೆ ಅಡಿ ಯಕ್ಷಗಾನದ ವಿಷಯವನ್ನು ತಂದು, ಒಂದು ಪ್ರಾಧಿಕಾರವನ್ನು ರಚನೆ ಮಾಡಿ ಎಂದು ಹೇಳಿದ್ದಾರೆ. ಈ ಕುರಿತು ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು, ಮಾನ್ಯ ಐವನ್ ಡಿ'ಸೋಜಾರವರು, ಶ್ರೀಮತಿ ಭಾರತಿ ಶೆಟ್ಟಿಯವರು, ಮಾನ್ಯ ಪ್ರತಾಪ್‌ಸಿಂಹ ನಾಯಕ್‌ರವರು ಮತ್ತು ಮಾನ್ಯ ಭೋಜೇಗೌಡರು ಹಾಡು ಹಾಡುವುದರ ಮುಖಾಂತರ ಎಲ್ಲರ ಗಮನವನ್ನು ಸೆಳೆಯುವ ಕೆಲಸ ಮಾಡಿದರು. ಇವರೆಲ್ಲರೂ ಯಕ್ಷಗಾನದ ಬಗ್ಗೆ ಬಹಳ ಚೆನ್ನಾಗಿ

ಹೇಳಿದರು. ಹಿಂದೆ ಜಾನಪದ ಮತ್ತು ಯಕ್ಷಗಾನ ಅಕಾಡಮಿ ಎಂದಿತ್ತು. ನಂತರ ಬಯಲಾಟ ಅಕಾಡಮಿ ಆಯಿತು. ಒಂದೇ ಇದ್ದ ಅಕಾಡಮಿಯನ್ನು ಮೂರು ಅಕಾಡಮಿಗಳನ್ನಾಗಿ ಮಾಡಲಾಯಿತು. ಜಾನಪದ, ಯಕ್ಷಗಾನ ಮತ್ತು ಬಯಲಾಟ ಹೀಗೆ ಪ್ರತ್ಯೇಕವಾಗಿ 3 ಅಕಾಡಮಿಗಳನ್ನು ಮಾಡಿ ಅನುದಾನ ಕೊಡಲಾಗುತ್ತಿತ್ತು. ಇವತ್ತು ಯಕ್ಷಗಾನದ ಬಗ್ಗೆ ಮಾನ್ಯ ಸದಸ್ಯರು ಬಹಳಷ್ಟು ಬೆಳಕನ್ನು ಚೆಲ್ಲಿದ್ದಾರೆ. ಈಗಾಗಲೇ ನಮ್ಮಲ್ಲಿ 14 ಅಕಾಡಮಿಗಳಿವೆ. ಒಂದು ಅಕಾಡಮಿಯನ್ನು ನಾವೇನಾದರೂ ಹೆಚ್ಚಿಗೆ ಮಾಡಿದರೆ ನಾಳೆ 13 ಅಕಾಡಮಿಯವರು ಇದೇ ಮಾತನ್ನು ಕೇಳುವುದಕ್ಕೆ ಪ್ರಾರಂಭ ಮಾಡುತ್ತಾರೆ. ಈಗ 3 ಪ್ರಾಧಿಕಾರಗಳೂ ಸಹ ಇವೆ. ಕರಾವಳಿಯ ಬಗ್ಗೆ, ಯಕ್ಷಗಾನದ ಬಗ್ಗೆ ವಿಶೇಷ ಗೌರವ ಇದೆ. ನೀವು ಹಾಡುಗಳನ್ನು ಹೇಳಿ ಪ್ರಸ್ತಾಪಿಸುತ್ತಿರುವುದನ್ನು ನೋಡಿದರೆ ನನಗೂ ಈಗಲೇ ಘೋಷಣೆ ಮಾಡಬೇಕು ಎಂದೆನಿಸುತ್ತಿದೆ. ಆದರೆ ಇನ್ನೂ 13 ಅಕಾಡಮಿಗಳ ಬಗ್ಗೆಯೂ ಚಿಂತನೆ ಮಾಡಬೇಕಾಗುತ್ತದೆ.

**ಶ್ರೀ ಟಿ.ಶರವಣ:-** ನೀವು ಘೋಷಣೆ ಮಾಡುವುದಾದರೆ ಮಾನ್ಯ ಭೋಜೇಗೌಡರು ಬೇಕಾದರೆ ಇನ್ನೂ 2 ಹಾಡುಗಳನ್ನು ಹಾಡುತ್ತಾರೆ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಭೋಜೇಗೌಡರ ಬಗ್ಗೆ ಬಹಳ ತಪ್ಪಾಗಿ ತಿಳಿದುಕೊಂಡರು. ಜಾನಪದ ಮತ್ತು ಯಕ್ಷಗಾನ ಮೊದಲು ಒಟ್ಟಿಗೆ ಇದ್ದುದನ್ನು ನಂತರ ಬೇರ್ಪಡಿಸಿದರು. ಮಾನ್ಯ ಭೋಜೇಗೌಡರು ಯಕ್ಷಗಾನದ ಬಗ್ಗೆಯೂ ಮಾತನಾಡಿದರು.

**ಸಭಾಪತಿಯವರು:-** ಅದನ್ನು ಕನ್ಸಿಡರ್ ಮಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಗಳೆ, ಕನ್ನಡ ಸಾಹಿತ್ಯಕ್ಕೆ 8 ಜ್ಞಾನಪೀಠ ಪ್ರಶಸ್ತಿಗಳು ಸಿಕ್ಕಿವೆ. ಹಿಂದಿಯಂತಹ ಭಾಷೆಗೆ ರೂ. 1400 ಕೋಟಿ ಹಣವನ್ನು ಕೊಡುವಾಗ, ನಮ್ಮದೇ ಆದ ಭಾಷೆಗೆ ರೂ. 50 ಕೋಟಿ ಕೊಡುವುದರಲ್ಲಿ ತಪ್ಪೇನಿದೆ? ನೀವು ಕೇಂದ್ರ ಸರ್ಕಾರದ ಮೇಲೆ ಒತ್ತಡ

ಹಾಕಿ ಹಣವನ್ನು ತರಬೇಕಾಗುತ್ತದೆ. ಬೇರೆ ಅಕಾಡಮಿಗಳಗೂ ಕೊಡಿ, ಅದರಲ್ಲಿ ತಪ್ಪೇನೂ ಇಲ್ಲ. ಸಾಹಿತ್ಯ, ಕಲೆಗಳಗೆ ಹಣ ಕೊಟ್ಟರೆ ರಾಜ್ಯದಲ್ಲಿ ಶಾಂತಿ–ನೆಮ್ಮದಿ ಉಳದುಕೊಳ್ಳುತ್ತದೆ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:–** ಮಾನ್ಯ ಹರಿಪ್ರಸಾದ್‌ರವರು ಏನು ಸಲಹೆಯನ್ನು ಕೊಟ್ಟರೋ ಅದನ್ನು ನಿಜವಾಗಲೂ ಕಾರ್ಯಗತ ಮಾಡಬೇಕಿದೆ. ಯಕ್ಷಗಾನಕ್ಕೆ ಅನುದಾನ ಕೊಡುವುದನ್ನು ಜಾಸ್ತಿ ಮಾಡಬಹುದು. ಆದರೆ ಪ್ರಾಧಿಕಾರ ಮಾಡಿದರೆ ಎಲ್ಲರೂ ಅದನ್ನೇ ಅಪೇಕ್ಷೆ ಪಡುವುದಕ್ಕೆ ಪ್ರಾರಂಭ ಮಾಡುತ್ತಾರೆ.

**ಸಭಾಪತಿಯವರು:–** ನೀವು ಅನುದಾನ ಜಾಸ್ತಿ ಕೊಡುವಂತಹ ವ್ಯವಸ್ಥೆ ಮಾಡಿ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:–** ಮಾನ್ಯ ಸಭಾಪತಿಗಳೆ, ಮಾನ್ಯ ಶ್ರೀ ಮಂಜುನಾಥ್ ಭಂಡಾರಿಯವರು ಸೇರಿದಂತೆ ಕರಾವಳ ಭಾಗದ ಶಾಸಕರನ್ನು ಕರೆದು ಚರ್ಚೆ ಮಾಡಿ, ಅದನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ತಂದು ಪರಿಶೀಲಿಸುವಂತಹ ಕೆಲಸವನ್ನು ಮಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ನಿಯಮ ೩೩೦ರ ಅಡಿಯಲ್ಲಿನ ಮೊದಲ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರ ಬಂದಿಲ್ಲ. ಗೃಹ ಸಚಿವರು, ಜಲ ಸಂಪನ್ಮೂಲ ಸಚಿವರು ಮತ್ತು ಆರೋಗ್ಯ ಸಚಿವರನ್ನು ಕರೆಸಿ. ಇವರ ವಿಷಯಗಳಗೆ ಸಂಬಂಧಪಟ್ಟಂತೆ ಎಲ್ಲಾ ಉತ್ತರಗಳು ಬಂದಿವೆ.

(ಮುಂದು)

(633) 23-7-2024 3.50 ಡಿಎಸ್-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**10. ನಿಯಮ 330ರ ಮೇರೆಗೆ ಚರ್ಚೆ**

**ವಿಷಯ: ಭೂ ರಹಿತರಿಗೆ ಹಾಗೂ ಬಡ ರೈತರಿಗೆ ಸರ್ಕಾರ ನೀಡಿರುವ ಭೂಮಿಗೆ ಪಹಣಿಯಲ್ಲಿ ಪಿ.ನಂ. ನಮೂದಿಸದಿರುವುದರಿಂದ ಹಾಗೂ ಸದರಿ ಭೂಮಿಯನ್ನು ಇತರರಿಗೆ ಪರಭಾರೆ ಮಾಡಲು ವಿಧಿಸಿರುವ ನಿರ್ಬಂಧವನ್ನು ಸಡಿಲಿಸದೆ ಇರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವ ಬಗ್ಗೆ.**

-------

**ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವದ ವಿಷಯವನ್ನು ನಿಯಮ 330ರ ಅಡಿಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಭೂರಹಿತರು ಮತ್ತು ಬಡ ರೈತರಿಗೆ ಸರ್ಕಾರದಿಂದ ಜಮೀನು ಮಂಜೂರಾದ ನಂತರ ಪಹಣಿಯಲ್ಲಿ ಪಿ.ನಂ. ನಮೂದು ಮತ್ತು ದುರಸ್ತಿ ಆಗದೇ ರೈತರುಗಳಿಗೆ ತೊಂದರೆಗಳಾಗುತ್ತಿರುವುದರ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರಬಯಸುತ್ತಿದ್ದೇನೆ.

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ,

**(ಉತ್ತರವನ್ನು ಲಗತ್ತಿಸಲಾಗಿದೆ)**

ಮಾನ್ಯ ಸಭಾಪತಿಯವರೇ, ಸರ್ಕಾರಿ ಜಮೀನು ಕೆಲವು ರೈತರಿಗೆ ಮಂಜೂರಾಗಿದೆ ಅವರಿಗೆ ಸುಮಾರು 30-40 ವರ್ಷಗಳ ಹಿಂದೆ ಮಂಜೂರಾಗಿದ್ದರೂ ಕೂಡ ಪೋಡಿ ದುರಸ್ತಿಯನ್ನು ಮಾಡಿಕೊಡದೆ ಅವರಿಗೆ ಕೇವಲ ಪಿ.ನಂ.ಗಳನ್ನು ಮಾಡಿ ಹಾಗೆಯೇ ಮುಂದುವರೆದುಕೊಂಡು ಬಂದಿದೆ. ಈ ರೀತಿಯ ಲಕ್ಷಾಂತರ ಪ್ರಕರಣಗಳು ರಾಜ್ಯದಲ್ಲಿ ಬಾಕಿ ಇವೆ. ಇದನ್ನು ಉಳಿಸಿಕೊಂಡು ಬಂದಿರುವುದು ನಿಜವಾಗಿಯೂ ದುರಾದೃಷ್ಟಕರವಾಗಿದೆ. ನಾವು ಈ ಜಮೀನುಗಳನ್ನು ಬಡವರಿಗೆ ಕೊಟ್ಟಿದ್ದೇವೆ. ಬಹುತೇಕ ಜಮೀನು ರೈತರಿಗೆ ಕೊಟ್ಟಿದ್ದೇವೆ. ಕೆಲವರು ಯಾಮಾರಿಸಿ ತೆಗೆದುಕೊಂಡಿರಬಹುದು, ಇಲ್ಲ ಎಂದು ಹೇಳುವುದಿಲ್ಲ. ಆದರೆ ಬಹುತೇಕ ಬಡವರಿಗೆ ಕೊಟ್ಟಿರುವಂತಹ ಜಮೀನು ದುರಸ್ತಿಯಾಗಿಲ್ಲ. ಸುಮಾರು 30-40 ವರ್ಷಗಳಿಂದ ಈ ಸಮಸ್ಯೆ ಹಾಗೆಯೇ ಉಳಿದುಕೊಂಡು ಬಂದಿದೆ. ಲಕ್ಷಾಂತರ ಪ್ರಕರಣಗಳು ಬಾಕಿ ಇವೆ. ಈಗ ದುರಸ್ತಿ ಮಾಡಬೇಕು. ದುರಸ್ತಿ ಮಾಡಬೇಕಾದರೆ ಅನೇಕ ಸಮಸ್ಯೆಗಳಿವೆ. ಇದರಲ್ಲಿ ಮೂಲವಾಗಿ ಏನಾಗಿದೆ ಎಂದರೆ, ಅಲ್ಲಿ ಎಷ್ಟು ಜಮೀನು ಇದೆ ಆ ಜಮೀನಿಗಿಂತ ಜಾಸ್ತಿ ಮಂಜೂರಾತಿಯಾಗಿದೆ. ಒಂದು ಸರ್ವೆ ನಂಬರ್‌ನಲ್ಲಿ ಇರುವುದೇ 60 ಎಕರೆ, ಆದರೆ 90 ಎಕರೆಯನ್ನು ಮಂಜೂರು ಮಾಡಿದ್ದಾರೆ. ಯಾರು ಮಾಡಿರುವುದು ಎಂದರೆ ನಮ್ಮಂತಹ ಶಾಸಕರು ಮಾಡಿರುತ್ತೇವೆ. ಅಕ್ರಮ ಸಕ್ರಮೀಕರಣದ ಸಮಿತಿಯ ಅಧ್ಯಕ್ಷರು ನಾವೇ ಆಗಿರುತ್ತೇವೆ. ಆ ಸರ್ವೆ ನಂಬರ್‌ನಲ್ಲಿ ಇರುವುದೇ 60 ಎಕರೆಯಾದರೆ, ಆ 60 ಎಕರೆಯನ್ನು ಮಂಜೂರು ಮಾಡಿ, ಅದರ ಮೇಲೂ ಮಂಜೂರು ಮಾಡಿಕೊಟ್ಟಿದ್ದೇವೆ. ಆ ರೀತಿ ಇರುವಾಗ ಪೋಡಿ ದುರಸ್ತಿ ಮಾಡುವುದಕ್ಕೆ ಹೋದರೆ ಅಲ್ಲಿ 90 ಎಕರೆ ಜಮೀನೇ ಇಲ್ಲ. 60 ಎಕರೆ ಜಮೀನು ಇದೆ. ಯಾರದು ಕಡಿಮೆ ಮಾಡುವುದು, ಯಾರದು ಜಾಸ್ತಿ ಮಾಡುವುದು, ಈ ಗೋಜು ನನಗೆ ಏಕೆ ಬೇಕು ಎಂದು ಯಥಾಸ್ಥಿತಿಯಾಗಿ ಬಂದಿದೆ. ಆಮೇಲೆ ಈ ರೀತಿ ಸುಮಾರು ಸಮಸ್ಯೆಗಳಿವೆ. ಈ ಸಮಸ್ಯೆಯನ್ನು ನಮ್ಮ ಸರ್ಕಾರವಂತೂ ಬಹಳ ಗಂಭೀರವಾಗಿ ತೆಗೆದುಕೊಂಡಿದೆ. ಏಕೆಂದರೆ, ಮಂಜೂರಾಗಿರುವ ಜಮೀನಿಗೆ ಪೋಡಿ ದುರಸ್ತಿ ಮಾಡಿಕೊಡಲಿಲ್ಲವೆಂದರೆ ನಿಜವಾಗಿಯೂ ಆ ಜನಗಳಿಗೆ ನಾವು ನೆಮ್ಮದಿ ಕೊಡುವುದಕ್ಕಿಂತ ನೆಮ್ಮದಿ ಕಳೆದಿದ್ದೇವೆ ಎನ್ನುವುದೇ ಆಗುತ್ತದೆ. ಅವರು ದಿನ ಬೆಳಗಾದರೆ ನಮ್ಮ ಸರ್ವೆ ಕಚೇರಿಗೆ ಸುತ್ತುವುದೇ ಒಂದು ಉದ್ಯೋಗವಾಗಿದೆ. ಅವರಿಗೆ ಪ್ರತ್ಯೇಕ ನಂಬರ್ ಆಗಿಲ್ಲ. ಅವರುಗಳನ್ನು ಪಿ.ನಂ. ಗಳಲ್ಲಿ ಕೂರಿಸಿ ನಿಜವಾಗಿಯೂ ಗೋಳಾಡಿಸುತ್ತಿದ್ದೇವೆ.

ಇದನ್ನು ಮಾಡಲೇಬೇಕೆಂದು ತೀರ್ಮಾನ ಮಾಡಿದ್ದೇವೆ. ಇದನ್ನು ಪಾರದರ್ಶಕವಾಗಿ ಮಾಡುವುದಕ್ಕೆ ಕೈಹಾಕಿದ್ದೇವೆ. ಹಿಂದಿನ ಸರ್ಕಾರಗಳಲ್ಲಿ ಇದಕ್ಕೆ ನಮೂನೆ 1 ರಿಂದ 5 ಅನ್ನು ಭರ್ತಿ ಮಾಡುವ ಪ್ರೊಸೀಜರ್ ಅನ್ನು ಹಾಗೂ ನಮೂನೆ 6 ರಿಂದ 10 ಅನ್ನು ಭರ್ತಿ ಮಾಡುವ ಪ್ರೊಸೀಜರ್ ಅನ್ನು ತಂದಿದ್ದಾರೆ. ಅದನ್ನು ಈಗ digitalise ಮಾಡುತ್ತಿದ್ದೇವೆ. ನಮೂನೆ 1 ರಿಂದ 5 ಅನ್ನು ಈ ರೀತಿ ರಾಜ್ಯದಲ್ಲಿ ಎಷ್ಟೆಷ್ಟು ಜಮೀನು ಮಂಜೂರಾಗಿ ಪೋಡಿ ಆಗದೆ ಇವೆ, ಆ ಎಲ್ಲಾ ಪ್ರಕರಣಗಳನ್ನು ಹುಡುಕಿ ನಾವೇ online ನಲ್ಲಿ digital format ನಲ್ಲಿ Form No. 1 to 5 ಅನ್ನು ಮಾಡುತ್ತಿದ್ದೇವೆ. ಅದಾದ ಮೇಲೆ ಇರುವ ವಿಸ್ತೀರ್ಣ ಹಾಗೂ ಮಂಜೂರಾಗಿರುವ ವಿಸ್ತೀರ್ಣಕ್ಕೆ ಏನು ಟ್ಯಾಲಿ ಬರುತ್ತದೆ, ಅವರಿಗೆಲ್ಲಾ ನಾವು ತಕ್ಷಣವೇ ನಮೂನೆ 6 ರಿಂದ 10 ಅನ್ನು ಮಾಡಿ ಅವರಿಗೆ ದುರಸ್ತಿ ಮಾಡಿಕೊಡುತ್ತೇವೆ. ಯಾವುದಕ್ಕೆ ಟ್ಯಾಲಿ ಬರುವುದಿಲ್ಲ, ಅಂಥವುಗಳನ್ನು ನಾವು ತಹಸೀಲ್ದಾರ್ ಕೋರ್ಟ್‌ಗೆ, ಎ.ಸಿ. ಕೋರ್ಟ್‌ಗೆ ಹಾಕಿ ಅಲ್ಲಿ ಆ ಪ್ರಕರಣಗಳನ್ನು ಇತ್ಯರ್ಥ ಮಾಡಿ ಆಮೇಲೆ ಅವರಿಗೆ ಪೋಡಿ ಮಾಡಿಕೊಡುತ್ತೇವೆ. ಇಷ್ಟು ದಿನ ಕೇವಲ ಪೇಪರ್‌ನಲ್ಲಿ ನಡೆಯುತ್ತಿತ್ತು. ರಾಜ್ಯದಲ್ಲಿ ಎಷ್ಟು ಪ್ರಕರಣಗಳಿವೆ ಎಂಬುದು ಗೊತ್ತಿಲ್ಲ. ಯಾವ್ಯಾವುದು ಯಾವ ಹಂತದಲ್ಲಿದೆ ಎಂಬುದು ಗೊತ್ತಿಲ್ಲ. ಇದಕ್ಕೆ ತಂತ್ರಾಂಶವನ್ನು ತಯಾರು ಮಾಡಿ ಕೊನೆ ಪಕ್ಷ ಇನ್ನು ಮೇಲೆ ಪಾರದರ್ಶಕವಾಗಿ ಈ ಕೆಲಸ ಆಗಬೇಕು. ಮೇಲಿನಿಂದ ಯಾವ ತಾಲ್ಲೂಕಿನಲ್ಲಿ ಎಷ್ಟು ಈ ರೀತಿ ಬಾಕಿ ಇವೆ ಎಂಬುದು ನಮಗೆ ಗೊತ್ತಾಗಬೇಕು. ಆ ರೀತಿಯ data base monitoring system ಅನ್ನು ಈಗ ತಯಾರು ಮಾಡಿದ್ದೇವೆ. ರಾಜ್ಯದಲ್ಲಿರುವ ಎಲ್ಲಾ ತಾಲ್ಲೂಕುಗಳಿಗೂ ನಾನು ಸೂಚನೆಯನ್ನು ಕೊಟ್ಟಿದ್ದೇನೆ. ಕನಿಷ್ಟ 15 ದಿನಕ್ಕೆ ಒಂದರಂತೆ ಆದರೂ ನಮೂನೆ 1 ರಿಂದ 5 ರ record ಅನ್ನು ಒಬ್ಬ ವಿಲೇಜ್ ಅಕೌಂಟೆಂಟ್ ಮಾಡಲೇಬೇಕು. ಅರ್ಜಿ ಕೊಟ್ಟಿದ್ದಲ್ಲ. ಈಗ ಏನು ನಡೆಯುತ್ತಿದೆ ಎಂದರೆ, ಏಕ ವ್ಯಕ್ತಿ ಪೋಡಿ ಎಂದು ಯಾರು ಒಬ್ಬರು ಬಂದು ಅರ್ಜಿ ಕೊಡುತ್ತಾರೆ, ಅವರದ್ದು ಸುತ್ತಮುತ್ತ ಇನ್ನು ಏನೇನೋ ಇರುತ್ತದೆ. ಅದರ ಆಧಾರದ ಮೇಲೆ ಒಬ್ಬೊಬ್ಬರದ್ದು ನಡೆಯುತ್ತಿದೆ. ಇನ್ನು ಮೇಲೆ ಆ ರೀತಿ ಇರುವುದಿಲ್ಲ. ಆ ಸರ್ವೆ ನಂಬರ್‌ನಲ್ಲಿ ಎಷ್ಟು ಜನರು ಇದ್ದಾರೆ ಅಷ್ಟನ್ನು ಸರ್ಕಾರ ಜವಾಬ್ದಾರಿ ತೆಗೆದುಕೊಂಡು Form No.1 to 5 and Form No.6 to 10 ಅನ್ನು ಮಾಡಬೇಕು. ಆ ರೀತಿಯ ವ್ಯವಸ್ಥೆಗೆ ಚಾಲನೆ ಕೊಡುತ್ತಿದ್ದೇವೆ. ಮುಂದಿನ ಹಂತದಲ್ಲಿ ಅದಕ್ಕೆ ಸರ್ವೇಯರ್‌ಗಳು

ಬೇಕಾಗುತ್ತಾರೆ. ಕಂದಾಯ ಇತ್ಯರ್ಥವಾದರೆ ಸರ್ವೇಯರ್ಸ್ ಬರುತ್ತಾರೆ. ಈಗ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ ಮೇಲೆ ನಮ್ಮ ಸರ್ವೆ ಇಲಾಖೆಯಲ್ಲಿ Surveyor and ADLR posts ಎಷ್ಟು ಹುದ್ದೆಗಳು ಖಾಲಿ ಇತ್ತು ಅಷ್ಟು ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರು ನಮಗೆ ಅನುಮೋದನೆ ಕೊಟ್ಟಿದ್ದಾರೆ. ಕೆ.ಪಿ.ಎಸ್.ಸಿ. ಮುಖಾಂತರ 750 ಸರ್ವೇಯರ್ ಹುದ್ದೆಗಳ ನೇಮಕಾತಿ, 34 ADLR posts recruitment; ಈ ಎರಡು ಹುದ್ದೆಗಳಿಗೆ ನೇಮಕಾತಿಯಾದರೆ ನೂರಕ್ಕೆ ನೂರರಷ್ಟು ಹುದ್ದೆಗಳು ಭರ್ತಿಯಾಗುತ್ತವೆ. ಇವೆರಡು crucial posts. ಅವುಗಳ ನೇಮಕಾತಿ ಮಾಡುತ್ತಿದ್ದೇವೆ. ಇರುವಂತಹ ಸರ್ವೇಯರ್ಸ್ effective ಆಗಿ ಕೆಲಸ ಮಾಡಬೇಕಾದರೆ ಓಬಿರಾಯನ ಕಾಲದ ಚೈನ್‌ಗಳನ್ನು ಹಿಡಿದುಕೊಂಡು ಮಾಡುವಂತಹದ್ದು ಇವತ್ತಿಗೂ ಮುಂದುವರೆದಿದೆ. ಆದರೆ ಕಾಲ ಬದಲಾದ ಹಾಗೆ ಇವತ್ತು ಲಭ್ಯವಿರುವಂತಹ ಆಧುನಿಕ ಸರ್ವೆ ಉಪಕರಣಗಳು, modern survey equipment, ಅವುಗಳನ್ನು ಬಳಕೆ ಮಾಡುವಂಥದ್ದು ಆಗಿಲ್ಲ. ಕೇವಲ Total Station survey ಅಷ್ಟೆ ಅಲ್ಲ, rover ಎಂದು ಬಂದಿವೆ, ಆ rover ಅನ್ನು ಹಿಡಿದುಕೊಂಡರೆ ನಾವು ಚೈನ್ ಹಿಡಿಯುವುದು ಬೇಕಾಕಿಲ್ಲ. ಅದರಲ್ಲೇ ಜಿ.ಪಿ.ಎಸ್. ಇರುತ್ತದೆ, satellite connectivity ಇರುತ್ತದೆ. ಅದರ ಮುಖಾಂತರ modern survey equipment ಅನ್ನು ಖರೀದಿ ಮಾಡುವುದಕ್ಕೆ ಎಲ್ಲಾ ತಾಲ್ಲೂಕುಗಳಿಗೂ, modern survey equipment ಕೊಡುವುದಕ್ಕೆ ಈಗಾಗಲೇ ಟೆಂಡರ್‌ನ್ನು ಕರೆದಿದ್ದೇವೆ. ಈ ಸಮಸ್ಯೆಯನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಇದು ನಾನು ಹೇಳಿದಷ್ಟು ಸಲೀಸಾಗಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವೆಲ್ಲಾ ನಾವು ಬಹಳ ಕೇಳಿದ್ದೇವೆ ಎಂದು ಕೆಲವು ಸದಸ್ಯರುಗಳು ಹೇಳಬಹುದು. ಬಹುಶಃ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಾಲ್ಕೈದು ವರ್ಷಗಳು ಆಗಬಹುದು. ಆದರೆ road map/blue print ಹಾಕಿಕೊಂಡು 3 ವರ್ಷ, 5 ವರ್ಷಗಳಾಗಲಿ ಈ ಸಮಸ್ಯೆಯನ್ನು ಪರಿಹಾರ ಮಾಡಬೇಕೆನ್ನುವಂತಹ ಸಂಕಲ್ಪ ಮಾಡಿ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಿದ್ದೇವೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ನನ್ನ ಹತ್ತಿರ ತಕ್ಷಣಕ್ಕೆ ಪರಿಹಾರ ಇಲ್ಲದಿದ್ದರೂ ಕೂಡ ಶಾಶ್ವತವಾಗಿ ಪರಿಹಾರ ಕೊಡುವಂತಹ ಕೆಲಸವನ್ನು ಬಹಳ ಗಂಭೀರವಾಗಿ ಸರ್ಕಾರ ಮಾಡುತ್ತಿದೆ. ಇದರ ನಡುವೆ 1,991 Licensed Surveyor ಗಳನ್ನು

ಕಳೆದ 4 ತಿಂಗಳ ಅವಧಿಯಲ್ಲಿ ನೇಮಕಾತಿ ಮಾಡಿದ್ದೇವೆ. Licensed Surveyors, Government Surveyors, ADLR recruitment, modern survey equipment and Form No.1 to 5 and Form No.6 to 10 ಅನ್ನು monitor ಮಾಡುವುದಕ್ಕೆ ಒಂದು online data base ಅನ್ನು ತಯಾರು ಮಾಡಿ ಎಲ್ಲಾ ಹಂತದಲ್ಲೂ ಕೂಡ ಮಾನಿಟರ್ ಮಾಡಿ ಮಾಡಿಸುತ್ತೇವೆ. ಎಷ್ಟೇ ಕಷ್ಟವಾದರೂ ಸವಾಲನ್ನು head-on ತೆಗೆದುಕೊಂಡು ಬಗೆಹರಿಸುವಂತಹ ಪ್ರಯತ್ನ ಮಾಡುತ್ತೇವೆ.

**ಶ್ರೀ ಎಂ.ಎಲ್.ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ವಿಷಯವನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದಾರೆ. ಮಾನ್ಯ ಸಚಿವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಪಿ. ನಂಬರ್ ಸಮಸ್ಯೆಯಿಂದ ಏನು ಕಷ್ಟ ಅನುಭವಿಸುತ್ತಿದ್ದಾರೆ ಅವುಗಳನ್ನೆಲ್ಲಾ ಎಳೆಎಳೆಯಾಗಿ ಬಿಡಿಸಿ ಹೇಳಿದ್ದಾರೆ. ಇವತ್ತು ಪಿ. ನಂಬರ್ ಕಾರಣಕ್ಕಾಗಿ ಕಂದಾಯ ಇಲಾಖೆಗೆ ಶೇಕಡ 50 ರಷ್ಟು ರೈತರು ಹೆಚ್ಚಾಗಿ ಹೋಗುತ್ತಿದ್ದಾರೆ. ಈ ಪಿ. ನಂಬರ್ ಏನಾದರೂ ದುರಸ್ತಿಯಾಗದಿದ್ದರೆ ಅವನಿಗೆ ಮಂಜೂರಾಗಿರುವ ಜಮೀನಿನ ಹದ್ದುಬಸ್ತನ್ನು ನಿಗದಿ ಮಾಡುವುದಕ್ಕಾಗುವುದಿಲ್ಲ. ಅವನ ಜಮೀನಿಗೆ ಬೌಂಡರಿಯನ್ನು ಹಾಕಿಕೊಳ್ಳುವುದಕ್ಕಾಗುವುದಿಲ್ಲ. ಮಂಜೂರಾದ ಮೂಲ ಜಮೀನುದಾರರು ತೀರಿ ಹೋದರೆ ಪೌತಿ/ವಾರಸು ಖಾತೆಯಾಗುವುದಿಲ್ಲ ಅಥವಾ ಮೂಲ ಮಂಜೂರಾದ ಜಮೀನನ್ನು ಅವರ ಅಣ್ಣ-ತಮ್ಮಂದಿರು ವಿಭಾಗ ಮಾಡಿಕೊಳ್ಳಬೇಕಾದರೆ ವಿಭಾಗದ ಮೂಲಕ ಖಾತೆಯಾಗುವುದಿಲ್ಲ. ಜಮೀನನ್ನು ಪರಭಾರೆ ಮಾಡುವುದಕ್ಕಾಗುವುದಿಲ್ಲ. ಬ್ಯಾಂಕ್‌ನಲ್ಲಿ ಸಾಲ ಸಿಗುವುದಿಲ್ಲ. ಜಮೀನು ಇದ್ದು ಜಮೀನು ಇಲ್ಲದ ಹಾಗೆ ಆಗುತ್ತದೆ. ಜಮೀನಿನಲ್ಲಿ ಉಳುಮೆ ಮಾಡಿಕೊಳ್ಳಬಹುದು, ಬೆಳೆ ಬೆಳೆದು ತಿನ್ನಬಹುದು. ಅಷ್ಟು ಬಿಟ್ಟರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ವಿಚಾರವಾಗಿ ಬಹಳಷ್ಟು ರೈತರು ಕಷ್ಟ ಅನುಭವಿಸುತ್ತಿದ್ದಾರೆ. ಯಾವಾಗ ಪ್ರಾರಂಭವಾಯಿತು ಎಂದರೆ 2008 ರಲ್ಲಿ ಕಂದಾಯ ಇಲಾಖೆಯವರು ಸುತ್ತೋಲೆಯನ್ನು ಹೊರಡಿಸುತ್ತಾರೆ. ನಮೂನೆ 1 ರಿಂದ 5 ಹಾಗೂ ನಮೂನೆ 6 ರಿಂದ 10 ಅನ್ನು ಮಾಡಿ ದುರಸ್ತಿ ಮಾಡಬೇಕೆಂದು ಸುತ್ತೋಲೆಯನ್ನು ಹೊರಡಿಸುತ್ತಾರೆ. ಅಲ್ಲಿಂದೀಚೆಗೆ ಈ ಸಮಸ್ಯೆ ಪ್ರಾರಂಭವಾಗುತ್ತದೆ. ಅದಕ್ಕಿಂತ ಮುಂಚೆ ಪಿ. ನಂಬರ್ ದುರಸ್ತಿ ಮಾಡುವ ವಿಚಾರದಲ್ಲಿ ಈ ಸಮಸ್ಯೆ ಇರಲಿಲ್ಲ. ಸುತ್ತೋಲೆಯಲ್ಲಿ ನಮೂನೆ 1 ರಿಂದ 5 ಹಾಗೂ ನಮೂನೆ 6

ರಿಂದ 10 ಏನಿದೆ, ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಮಾಡುವುದಕ್ಕೆ ಏನು ಸಾಧ್ಯವಿಲ್ಲ ಅದರ ಸುತ್ತೋಲೆಯನ್ನು ಹೊರಡಿಸಿದ್ದಾರೆ. ಮಾನ್ಯ ಸಚಿವರು ಹೇಳಿದ ಹಾಗೆ ಒಂದು ಸರ್ವೆ ನಂಬರ್‌ನಲ್ಲಿ ಸುಮಾರು 60 ಎಕರೆ ಇರುತ್ತದೆ. ಅದರಲ್ಲಿ 30 ರಿಂದ 40 ಜನ ರೈತರಿಗೆ ಜಮೀನು ಮಂಜೂರು ಮಾಡಿರುತ್ತಾರೆ. ಅದರಲ್ಲಿ ಯಾರಾದರೊಬ್ಬರು ವಿವಾದ ಉಂಟಾಗಿ ನ್ಯಾಯಾಲಯಕ್ಕೆ ಹೋಗಿ ಆ ದಾಖಲೆಗಳನ್ನೆಲ್ಲಾ ನ್ಯಾಯಾಲಯಕ್ಕೆ ಕಳುಹಿಸಿದ್ದರೆ ಉಳಿದಂಥವರಿಗೆ ಯಾರಿಗೂ ಕೂಡ ದುರಸ್ತಿ ಮಾಡುವುದಕ್ಕೆ ಸಾಧ್ಯವಿಲ್ಲ. ಒಟ್ಟು ಸರ್ವೆ ನಂಬರ್‌ನಲ್ಲಿ ಏನಾದರೂ ದಾಖಲೆ ಕಳೆದು ಹೋಗಿದ್ದರೆ ಮತ್ತೆ ಮಾಡುವುದಕ್ಕೆ ಸಾಧ್ಯವಿಲ್ಲ. ಇವತ್ತು ಈ ರೀತಿ ದುರಸ್ತಿ ಮಾಡುವುದರಲ್ಲಿ ಬಹಳ ಸಮಸ್ಯೆ ಆಗಿದೆ.

(ಮುಂದು)

(634) 23/07/2024 4:00/ಎಸ್‌ಪಿಆರ್/ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ಎಲ್.ಅನಿಲ್ ಕುಮಾರ್ (ಮುಂದು):-**

ಸರ್ವೇ ಇಲಾಖೆಯವರು ಇದನ್ನು ಬಳಸಿಕೊಂಡು ಹಳೆಯ ದಿನಾಂಕಕ್ಕೆ ದುರಸ್ತಿ ಮಾಡಿಕೊಡುತ್ತಿದ್ದಾರೆ. ಇವತ್ತಿನ ದಿವಸ ದುರಸ್ತಿ ಆಗುತ್ತಿಲ್ಲವೆಂದಲ್ಲ; ಯಾರು ನಿಜವಾದ ರೈತರು, ಬಡವರಿದ್ದಾರೆ ಅವರ ದುರಸ್ತಿ ಕಾರ್ಯಗಳಾಗುತ್ತಿಲ್ಲ. ಅವರುಗಳು ಕಛೇರಿಗೆ ಹೋದರೆ 1 ರಿಂದ 5 ಮತ್ತು 6 ರಿಂದ 10 ಇದರ ನೆಪ ಹೇಳುತ್ತಾರೆ. ಯಾರಾದರೂ ಶ್ರೀಮಂತರು ಅಥವಾ ರಿಯಲ್ ಎಸ್ಟೇಟ್ ದಂಧೆಯವರು ಹೋದರೆ, ಅವರಿಗೆ ಆಟೋಮ್ಯಾಟಿಕ್ ಆಗಿ ದುರಸ್ತಿಯಾಗುತ್ತದೆ. ಏಕೆಂದರೆ ಎಲ್ಲವನ್ನು ಹಿಂದಿನ ದಿನಾಂಕಕ್ಕೆ ಅಂದರೆ 2008 ನೇ ಇಸ್ವಿಯ ಪೂರ್ವದ ದಿನಾಂಕಕ್ಕೆ ತೆಗೆದುಕೊಂಡು ಎಲ್ಲಾ ದುರಸ್ತಿ ಕಾರ್ಯಗಳನ್ನು ಮಾಡಿಕೊಡುತ್ತಿದ್ದಾರೆ. ಕೇವಲ ನಾನೊಬ್ಬನೇ ಅಲ್ಲ; ಸಚಿವರಿಗೆ ಬಹಳಷ್ಟು ಜನರು ಖಾಸಗಿಯಾಗಿ ಹಾಗೂ ರೈತರು ನೇರವಾಗಿ ಬಂದು ದೂರನ್ನು ಸಲ್ಲಿಸಿದ್ದಾರೆ. ಹಾಲಿ ಸಚಿವರು ಕಂದಾಯ ಇಲಾಖೆಯ ಜವಾಬ್ದಾರಿಯನ್ನು ಹೊತ್ತಕೊಂಡ ಮೇಲೆ ಇಲಾಖೆಯಲ್ಲಿ ಬಹಳಷ್ಟು ಬದಲಾವಣೆಗಳನ್ನು ಜಾರಿಗೊಳಸುತ್ತಿದ್ದಾರೆ. ಈ ಮೂಲಕ ಇಲಾಖೆಯಲ್ಲಿ ಆಮಾಲಾಗ್ರ ಬದಲಾವಣೆಯನ್ನು ತರುತ್ತಿದ್ದಾರೆ. ನಿಜವಾಗಿಯೂ ಸಹ ನಾವು ಇದನ್ನು ಮೆಚ್ಚಲೇಬೇಕು. ಈ ಪೈಕಿ ಇ-ಆಫೀಸ್ ಹಾಗೂ ಸಕಾಲ ಯೋಜನೆಯಡಿ ದೊರೆಯುವ 47 ಸೇವೆಗಳು, ಇವುಗಳ ಬಗ್ಗೆ ಸ್ವತಃ ಮಂತ್ರಿಗಳೇ ಪ್ರತಿವಾರ ಪ್ರಗತಿ ಪರಿಶೀಲನೆ ಮಾಡುತ್ತಿದ್ದಾರೆ. ಸಚಿವರು ಲ್ಯಾಂಡ್ ಬಿಡ್ ಎಂಬ ಯೋಜನೆಯನ್ನು ಜಾರಿಗೊಳಿಸಿದ್ದಾರೆ.

ಇವತ್ತಿನ ದಿವಸ ಸಚಿವರು ಸರ್ಕಾರಿ ಆಸ್ತಿಗಳನ್ನು ಗುರುತಿಸಿ, ಅವುಗಳನ್ನು ಉಳಿಸುವ ಹಾಗೂ ಒತ್ತುವರಿ ಮಾಡದೇ ಇರುವ ಕೆಲಸಗಳನ್ನು ಮಾಡುತ್ತಿದ್ದಾರೆ. ಮುಂದುವರೆದು, ಪಹಣಿಯನ್ನು ಆಧಾರ್‌ನೊಂದಿಗೆ ಜೋಡಿಸುತ್ತಿದ್ದಾರೆ. ಇದರಿಂದ ನಕಲು ಮಾಡದಿರುವುದಕ್ಕೆ ಅಥವಾ ಸರ್ಕಾರಿ ಯೋಜನೆಗಳನ್ನು ಜಾರಿ ಮಾಡುವುದಕ್ಕೆ ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ದಾಖಲೆಗಳನ್ನು ಸ್ಕ್ಯಾನ್ ಮಾಡಿಸುವ ವ್ಯವಸ್ಥೆಯನ್ನು ಜಾರಿಗೊಳಿಸಿದ್ದಾರೆ. ಈ ಮೊದಲು ಅರ್ಜಿ ಸಲ್ಲಿಸಿ, ದಾಖಲೆಗಳನ್ನು ಕೋರಿದಾಗ ದಾಖಲೆಗಳನ್ನು ನೀಡಲು ಬಹಳಷ್ಟು ದಿನಗಳನ್ನು ತೆಗೆದುಕೊಳ್ಳುತ್ತಿದ್ದರು. ಅಥವಾ ಕೋರಿದ ದಾಖಲೆಗಳಿಲ್ಲ ಎಂಬ ಹಿಂಬರಹವನ್ನು ನೀಡುತ್ತಿದ್ದರು. ಇವತ್ತಿನ ದಿವಸ ಕಂದಾಯ ಇಲಾಖೆಯ ಎಲ್ಲಾ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಸಂಗ್ರಹಿಸಿವ ಕೆಲಸವನ್ನು ಮಾಡುತ್ತಿದ್ದಾರೆ. ಈಗ ದಾಖಲೆಗಳನ್ನು ಕೋರಿ ಅರ್ಜಿ ಸಲ್ಲಿಸಿದ ತಕ್ಷಣವೇ ದಾಖಲೆಗಳನ್ನು ಒದಗಿಸುತ್ತಾರೆ. ಇಂತಹ ಜವಾಬ್ದಾರಿ ಹಾಗೂ ಬದ್ಧತೆ ಇರುವ ಇವರು, ರೈತ ಕುಟುಂಬದಿಂದ ಬಂದವರಾಗಿದ್ದಾರೆ. ಇವರ ಅಧಿಕಾರಾವಧಿಯಲ್ಲಿ ಪಿ-ನಂಬರ್ ದುರಸ್ತಿ ಮಾಡುವ ಕೆಲಸವಾಗದೇ ಹೋದರೆ, ಇದನ್ನು ನಂತರದಲ್ಲಿ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಏಕೆಂದರೆ, ಸಚಿವರು ಸ್ವತಃ ಅವರ ಅಸಹಾಯಕತೆಯನ್ನು ತೋಡಿಕೊಳ್ಳುತ್ತಿದ್ದಾರೆ. ಈ ಕೆಲಸವು ಅಷ್ಟು ಸುಲಭವಾಗಿಲ್ಲ; ಇದನ್ನು ಮಾಡಬೇಕಾದರೆ, 3-5 ವರ್ಷಗಳಾಬಹುದು ಎಂದು ಸಚಿವರು ಹೇಳಿದ್ದಾರೆ. ಹೀಗಾಗಿ ಈ ವಿಚಾರದಲ್ಲಿ ನಿಗದಿತ ಕಾಲಾಮಿತಿಯನ್ನಿಟ್ಟುಕೊಂಡು ಯಾವುದೋ ಒಂದು ರೀತಿಯ mechanism ಅನ್ನು ತಂದು ಸಚಿವರು ಕೆಲಸವನ್ನು ಮಾಡಬೇಕೆಂದು ನಾನು ರಾಜ್ಯದ ರೈತರ ಪರವಾಗಿ ತಮ್ಮ ಮೂಲಕ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಪ್ರತಾಪ ಸಿಂಹ ನಾಯಕ್.ಕೆ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸಚಿವರು ಈ ಬಗ್ಗೆ ಬಹಳ ಆಳವಾದ ಅಧ್ಯಯನವನ್ನು ಮಾಡಿ, ಸಮಸ್ಯೆಗೆ ಒಳ್ಳೆಯ ಪರಿಹಾರವನ್ನು ನೀಡುವ ದೃಷ್ಟಿಯಲ್ಲಿ ಯೋಚನೆ ಮಾಡುತ್ತಿದ್ದಾರೆ. ಆದರೆ, ವಾಸ್ತವವಾಗಿ ಅಲ್ಲಿ ಏನಾಗುತ್ತಿದೆ ಎಂದರೆ, ಈಗ ಕ್ರೋಢೀಕರಣ ಮಾಡಿದ್ದಾರೆ. ಈ ಮೊದಲು ವೈಯಕ್ತಿಕವಾಗಿ ಪ್ಲಾಂಟಿಂಗ್ ಮಾಡಿದ್ದವರದ್ದನ್ನು ಎಲ್ಲಾ ಆರ್.ಟಿ.ಸಿ.ಯನ್ನು ಒಟ್ಟಿಗೆ ಮಾಡಿದ್ದಾರೆ. ಇದರ ಪರಿಣಾಮವಾಗಿ, ತಾವೇ ಹೇಳಿದಂತೆ, 60 ಎಕರೆಯಷ್ಟು ಭೂಮಿ ಇದ್ದರೆ ಅದನ್ನು 90 ಎಕರೆಗೆ ಕೊಟ್ಟಿದ್ದಾರೆ. ಇದರಲ್ಲಿ ಸರ್ವೇಯರ್‌ಗಳ ಸಂದಿಗ್ಧ ಪರಿಸ್ಥಿತಿ ಏನೆಂದರೆ, ಸ್ವಾಧೀನತೆಯ ಆಧಾರದ ಮೇಲೆ ಸ್ಕೆಚ್‌ವೊಂದನ್ನು ತಯಾರಿಸಿದರೆ, ಯಾರಲ್ಲಿ ಎಷ್ಟೇ ಜಮೀನು ಇರಲಿ…, ಭೂ ಸುಧಾರಣೆಯಿಂದ ಇದು ನಮ್ಮ ಭಾಗದಿಂದ ಪ್ರಾರಂಭಗೊಂಡಿದೆ ಏಕೆಂದರೆ ಅಲ್ಲಿ ಸಣ್ಣ holdings ನಲ್ಲಿ ಜಮೀನು ಹೊಂದಿದ್ದಾರೆ. ಈ ದೃಷ್ಟಿಯಲ್ಲಿ ಸ್ವಾಧೀನತೆಯ

ಆಧಾರದ ಮೇಲೆ ಅವರಿಗೆ ಎಷ್ಟು ಜಮೀನು ಇದೆಯೋ ಅಷ್ಟಕ್ಕೆ ಸರಿಪಡಿಸುವ ರೀತಿಯಲ್ಲಿ ಮಾಡಿದಾಗ ಮಾತ್ರ, ಯಾರೂ ಸಹ.., ತೀರ್ಪಿನಲ್ಲಿ ಒಂದು ಎಕರೆ ಆಗಿದೆ, ಆದರೆ, ನನ್ನ ಸ್ವಾಧೀನತೆಯಲ್ಲಿ 60 ಎಕರೆ ಜಮೀನು ಇದೆ ಎಂದು ಅವರು ಒಂದು ಎಕರೆ ಜಮೀನು ನೀಡಲೇಬೇಕೆಂದು ಪಟ್ಟು ಹಿಡಿಯುತ್ತಾರೆ. ಆದರೆ, ಸರ್ವೆ ಇಲಾಖೆಯವರು ಇವರ ಬಳಿ 60 ಎಕರೆ ಜಮೀನು ಇದೆ ಎಂದು ಹೇಳುವಂತಹ ನಿರ್ಣಯವನ್ನು ತೆಗೆದುಕೊಂಡು, ಮುಂದೆ ಹೋಗುವ ಧೈರ್ಯವನ್ನು ನೀಡಿದರೆ, ಈ ಎಲ್ಲಾ ವಿಷಯಗಳು ಕೊನೆ ಹಂತಕ್ಕೆ ಹೋಗುವ ಸಾಧ್ಯತೆಗಳಿರುತ್ತವೆ. ಈ ದೃಷ್ಟಿಯಲ್ಲಿಯೂ ಸಹ ಸಚಿವರು ಗಮನಹರಿಸಬೇಕೆಂದು ನಾನು ಕೋರುತ್ತೇನೆ. ಭೂ ಸುಧಾರಣೆಯಲ್ಲಿ ಮೂಲ ಸ್ಕೆಚ್ ಎನ್ನುವುದು ಇಲ್ಲ. ಕೇವಲ ಈ ಬಗ್ಗೆ ತೀರ್ಪು ಮಾತ್ರವೇ ಆಗಿದೆ. ಆ ಕಾರಣಕ್ಕಾಗಿಯೇ ಇದು ಈ ರೀತಿಯಾಗಿಯೇ ವಿಳಂಬವಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಎಲ್ಲರೂ ಸಣ್ಣ ಹಿಡುವಳಿದಾರರಿದ್ದಾರೆ. ಹೀಗಾಗಿ ಸಚಿವರು ಈ ಬಗ್ಗೆ ವಿಶೇಷ ಗಮನವನ್ನು ಹರಿಸಿ, ಇಲ್ಲಿ ಪ್ರಾಯೋಗಿಕ ಯೋಜನೆಯನ್ನು ಮಾಡುವ ಬಗ್ಗೆ ಆಲೋಚನೆ ಮಾಡಿದರೆ, ಬಹಳಷ್ಟು ಸಮಸ್ಯೆಗಳು ಕಡಿಮೆಯಾಗುತ್ತವೆಂದು ನಾನು ತಿಳಿದುಕೊಳ್ಳುತ್ತೇನೆ.

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಕೊಡಗು ಜಿಲ್ಲೆಯಲ್ಲಿ ಪಿ–1, ಪಿ–2, ದುರಸ್ತಿ ಮತ್ತು ಜಮೀನು ಮಂಜೂರಾತಿ ಭೂಮಿ ವಿಷಯಗಳಿಗೆ ಸಂಬಂಧಪಟ್ಟಂತೆ, ಸಚಿವರು ಜಿಲ್ಲೆಗೆ ಭೇಟಿ ನೀಡಿದಾಗ ಅಧಿಕಾರಿಗಳಿಗೆ ಬಿಸಿ ಮುಟ್ಟಿಸಿದ್ದಾರೆ. ಹೀಗಾಗಿ ಅಲ್ಲಿನ ಕೆಲಸಗಳು ವೇಗವಾಗಿ ಸಾಗುತ್ತಿವೆ. ಆದರೂ ಸಹ ಅಲ್ಲಿರುವ ಬಹಳಷ್ಟು ಸಮಸ್ಯೆಗಳನ್ನು ತೀವ್ರಗತಿಯಲ್ಲಿ ಪರಿಹರಿಸುವ ನಿಟ್ಟಿನಲ್ಲಿ ಪುನಃ ಸಚಿವರು ಜಿಲ್ಲೆಗೆ ಬರಬೇಕೆಂದು ನಾನು ಕೋರುತ್ತೇನೆ. ತಮ್ಮ ಜಾಗದಲ್ಲಿ ಪೌತಿ ಖಾತೆ ಮಾಡುವುದರಲ್ಲಿಯೂ ಸಹ ಸಮಸ್ಯೆ ಇದೆ. ಹೀಗಾಗಿ ದಯಮಾಡಿ ಕಂದಾಯ ಸಚಿವರು ಮತ್ತೊಮ್ಮೆ ನಮ್ಮ ಜಿಲ್ಲೆಗೆ ಬಂದು ಕೆಲಸಗಳು ತೀವ್ರಗತಿಯಲ್ಲಿ ಮಾಡುವಂತಹ ವ್ಯವಸ್ಥೆಯನ್ನು ಮಾಡುವಂತೆ ತಮ್ಮ ಮೂಲಕ ಸಚಿವರಲ್ಲಿ ವಿನಂತಿಸುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೆ, ಸದಸ್ಯರು ಹೇಳಿರುವ ಅಂಶಗಳು ನಿಜವಾಗಿವೆ. ಅವರು ಪ್ರಸ್ತಾಪಿಸಿದಂತೆ, ಜಮೀನು ಕೊಟ್ಟಿದ್ದೇವೆ; ಅವರು ಉಳಿಮೆ, ಬಿತ್ತನೆಗಳನ್ನು ಮಾಡಿ, ಒಂದಿಷ್ಟು ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಇದನ್ನು ಬಿಟ್ಟರೆ, ನಿಜವಾಗಿಯೂ ಸಹ ನಾವು ಅವರನ್ನು ತ್ರಿಶಂಕು ಸ್ಥಿತಿಯಲ್ಲಿಟ್ಟಿದ್ದೇವೆ. ಅವರಿಗೆ ಜಮೀನು

ಕೊಟ್ಟಂತಿರಬೇಕು ಅದು ಅವರಿಗೆ ಸಿಗದಂತಿರಬೇಕು. ಒಟ್ಟಾರೆಯಾಗಿ ಹೇಳುವುದಾದರೆ, ಅವರಿಗೆ ಜಮೀನು ಮಂಜೂರು ಮಾಡಿ, ಅವರನ್ನು ತ್ರಿಶಂಕು ಸ್ಥಿತಿಯಲ್ಲಿರಿಸಿ, ಕಳೆದ 30-40 ವರ್ಷಗಳಿಂದ ಅದೇ ಸ್ಥಿತಿಯಲ್ಲಿಟ್ಟಿದ್ದೇವೆ. ಮೂಲತಃ ಅವರ ಕಸುಬು ಪ್ರತಿದಿನ ದುಡಿದು ಜೀವನ ಮಾಡುವುದಲ್ಲ; ಬದಲಾಗಿ ನಮ್ಮ ಕಛೇರಿಗೆ ಸುತ್ತುವುದೇ ಅವರ ಕಸುಬು ಆಗಿದೆ. ಅವರ ಅರ್ಧ ಸಮಯ ನಮ್ಮ ಕಛೇರಿಗಳಿಗೆ ಅಲೆದಾಡುವ ರೀತಿಯಂತೆ ವ್ಯವಸ್ಥೆಯು ಆಗಿದೆ. ಅಲ್ಲಿನ ಸಮಸ್ಯೆಯನ್ನು ಒಪ್ಪಿಕೊಳ್ಳುತ್ತೇವೆ; ಇಲ್ಲವೆಂದರೆ ಅದು ನಮ್ಮ ಮೂರ್ಖತನ ಹಾಗೂ ಆತ್ಮವಂಚನೆಯಾಗುತ್ತದೆ. ಈ ರೀತಿಯ ಎಷ್ಟು ಜನರದ್ದು ಸಮಸ್ಯೆ ಇದೆ ಎನ್ನುವುದನ್ನು ನಾವೀಗ ಒಟ್ಟುಗೂಡಿಸಿದ್ದೇವೆ. ಎಷ್ಟು ಜನರು ಈ ರೀತಿಯ ಸಮಸ್ಯೆಯನ್ನು ಹೊಂದಿದ್ದಾರೆ ಎನ್ನುವುದು ನನಗೆ ಗೊತ್ತಾಗಬೇಕು. ಅವರನ್ನು ಮೂಲ ಸರ್ವೆ ನಂಬರಿಗೆ ಕೂಡಿಸಿದಾಗ ಎಷ್ಟು ಜನರಿಗೆ ಪೋಡಿ ದುರಸ್ತಿಯಾಗದೇ ಬಾಕಿ ಉಳಿದಿದೆ ಎನ್ನುವುದು ನನಗೆ ಗೊತ್ತಾಗುತ್ತದೆ. ಇದು ಪರಿಹಾರದ ಮೊದಲನೇ ಹಂತವಾಗಿದೆ. ಮೊದಲನೇ ಹಂತದಲ್ಲಿ ನಾವು ಅವರನ್ನು ಒಟ್ಟುಗೂಡಿಸಿದ್ದೇವೆ. ರಾಜ್ಯದಲ್ಲಿ ಎಷ್ಟು ಸರ್ವೆ ನಂಬರ್ ಇದೆ, ಒಂದೊಂದು ಸರ್ವೆ ನಂಬರಿನಲ್ಲಿ ಎಷ್ಟು ಜನರಿಗೆ ಜಮೀನು ಮಂಜೂರಾಗಿದೆ, ಆ ಪೈಕಿ ಎಷ್ಟು ಜನರಿಗೆ ಪೋಡಿಯಾಗಿದೆ; ಎಷ್ಟು ಜನರಿಗೆ ಆಗಿಲ್ಲ ಎನ್ನುವ ಮಾಹಿತಿಯು ದೊರೆಯುತ್ತದೆ. ಈ ಹಂತದಿಂದ ನಾನು ಕೆಲಸವನ್ನು ಪ್ರಾರಂಭಿಸುತ್ತಿದ್ದೇನೆ. ನಂತರದಲ್ಲಿ ಗ್ರಾಮ ಲೆಕ್ಕಿಗರ ವೃತ್ತವಾರು 1 ರಿಂದ 5 ಅನ್ನು ಸಿದ್ಧಪಡಿಸಲು ನಾವು ಟಾರ್ಗೆಟ್‌ಗಳನ್ನು ನಿಗದಿಪಡಿಸುತ್ತೇವೆ. ಹೀಗೆ ಮಾಡಿದಾಗ, 1 ರಿಂದ 5 ಹೋಲಿಕೆಯಾದರೆ, ಅಂದರೆ 3 ಮತ್ತು 9 ಒಂದಕ್ಕೊಂದು ತಾಳೆಯಾಗಿ, ಆಕಾರ ಬಂದಿಗೆ ಹೋಲಿಕೆಯಾದರೆ, ಆ ಕೂಡಲೇ ಅದನ್ನು 6 ರಿಂದ 10 ಕ್ಕೆ ಮುಂದೂಡುತ್ತೇವೆ. ಈ ಪದ್ಧತಿಯು ನಮ್ಮಲ್ಲಿ ಚಾಲ್ತಿಯಲ್ಲಿದೆ. ಈ ಹಿಂದೆ ಆ ರೀತಿಯ ಸಮಸ್ಯೆ ಇರಲಿಲ್ಲ; ಹೀಗಾಗಿ 1 ರಿಂದ 5 ಮತ್ತು 6 ರಿಂದ 10 ಅನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ಅವರು ಹೇಳುತ್ತಾರೆ. ಒಂದು ವೇಳೆ ನಾನೇನಾದರೂ 1 ರಿಂದ 5 ಮತ್ತು 6 ರಿಂದ 10 ಮಾಡುವುದನ್ನು ತೆಗೆದು ಹಾಕಿದರೆ, ಬಹಳ ದೊಡ್ಡ ಅನಾಹುತಗಳಾಗುತ್ತವೆ. ಮೂಲ ಮಂಜೂರಾತಿ ದಾಖಲೆ ಇಲ್ಲದಿರುವವರು ಮೊದಲಿಗೆ ಬಂದು ಅದನ್ನು ಮಾಡಿಸಿಕೊಳ್ಳುತ್ತಾರೆ. ಆಗ ನೈಜ ಮಂಜೂರುದಾರರಿಗೆ ನ್ಯಾಯ ದೊರೆಯುವುದಿಲ್ಲ. ಈಗಲೂ ಸಹ ಇದು ನಡೆಯುತ್ತಲೇ ಇದೆ; ಇಲ್ಲವೆಂದಲ್ಲ. ಸದಸ್ಯರು ಹೇಳಿರುವುದು ಸತ್ಯವಾಗಿದೆ. ಏಕ ವ್ಯಕ್ತಿ ಪೋಡಿ ಅರ್ಜಿಯನ್ನು ತೆಗೆದುಕೊಂಡು ನಾವು ಕೆಲಸವನ್ನು ಮಾಡುತ್ತಿದ್ದೇವೆ. ಅನುಕೂಲಸ್ಥರದ್ದು ಈಗಲೂ ಸಹ ನಡೆಯುತ್ತಿದೆ. ವ್ಯವಸ್ಥೆಯ ಒಳಗಿರುವವರು, ಚೆನ್ನಾಗಿ ಮಾಹಿತಿಯನ್ನು ಪಡೆದುಕೊಂಡಿರುವವರು ಇದರ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ; ಇದರಲ್ಲಿ ಅನುಮಾನವೇ ಇಲ್ಲ. ಲಜ್ಜೆಯಿಲ್ಲದೇ ನಾನು

ಇಲ್ಲಿ ಹೇಳುವುದೇನೆಂದರೆ, ಬೆಂಗಳೂರು ನಗರದಲ್ಲಿ ಒಂದೊಂದು ಎಕರೆಯನ್ನು ಪೋಡಿ ಮಾಡಬೇಕಾದರೆ, ಎಷ್ಟು ಹಣ ಖರ್ಚಾಗುತ್ತದೆ ಎಂಬುದು ನನ್ನ ಮನೆಯ ಬಾಗಿಲಿಗೆ ಬಂದ ಜನರು ನನಗೆ ಹೇಳುತ್ತಾರೆ. ಇದೆಲ್ಲಾ ಸತ್ಯ ಸಂಗತಿಗಳಾಗಿವೆ; ಇಲ್ಲವೆಂದಲ್ಲ. ಈ ರೀತಿಯ ಒಂದೊಂದು ಪ್ರಕರಣಗಳನ್ನು ನಾನು ಬಗೆಹರಿಸಲು ಹೋದರೆ, ಪ್ರಾಯಶಃ ನನ್ನ ಆಯಸ್ಸು ಸಾಕಾಗುವುದಿಲ್ಲ; ನನ್ನ ಕೂದಲೂ ಉಳಿಯುವುದಿಲ್ಲ. ಹೀಗಾಗಿ ನಾನು ವ್ಯವಸ್ಥೆಯನ್ನೇ ಸರಿಪಡಿಸುವ ಕೆಲಸಗಳನ್ನು ಮಾಡಬೇಕು. ಈ ದಿಕ್ಕಿನಲ್ಲಿ ನಾನು ಪ್ರಯತ್ನ ಮಾಡುತ್ತಿದ್ದೇನೆ. 1 ರಿಂದ 5 ಮತ್ತು 6 ರಿಂದ 10 ಮಾಡಿಸುವ ವ್ಯವಸ್ಥೆಯನ್ನು ಸರಳೀಕರಣ ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನೂ ನಾನು ಮಾಡುತ್ತಿದ್ದೇನೆ. ಸರ್ವೆ ಇಲಾಖೆಯವರಿಗೆ ನಾನು ಸೂಚನೆಯನ್ನು ನೀಡಿದ್ದೇನೆ. ಯಾವುದೇ ರೀತಿಯ ಅನಾಹುತಗಳು ಆಗದಿರುವ ರೀತಿಯಲ್ಲಿ ವ್ಯವಸ್ಥೆಯನ್ನು ಸರಳೀಕರಣಗೊಳಿಸಬೇಕು. ಏಕೆಂದರೆ ಸರಳೀಕರಣದಿಂದ ಅನಾಹುತಕ್ಕೆ ದಾರಿಯಾಗಬಾರದು. ಆ ರೀತಿಯಲ್ಲಿ ನನಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ನಾನು ಇಲಾಖಾಧಿಕಾರಿಗಳಿಗೆ ಸೂಚನೆಯನ್ನು ನೀಡಿದ್ದೇನೆ. What makes the officers feel convinced ಹಾಗೂ ಏನನ್ನು ಸರಳೀಕರಣ ಮಾಡಿದರೆ, ಅನಾಹುತವಾಗುವುದಿಲ್ಲ ಎಂಬ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿದರೆ, ಅದಕ್ಕೆ ನಾನು ಒಪ್ಪಿಗೆಯನ್ನು ನೀಡುತ್ತೇನೆ. 1 ರಿಂದ 10 ಪ್ರಕ್ರಿಯೆಯನ್ನು ಸರಳೀಕರಣ ಮಾಡುತ್ತೇವೆ. ಯಾವುದೇ ಕ್ರಮ ತೆಗೆದುಕೊಂಡರೂ ಅದರ ಬೆನ್ನುಹತ್ತಿ ಅಲ್ಲಿನ ಸಮಸ್ಯೆಗಳನ್ನು ಪರಿಹಾರ ಮಾಡುವ ಪ್ರಯತ್ನಗಳನ್ನು ಖಂಡಿತವಾಗಿಯೂ ಸಹ ನಾವು ಮಾಡುತ್ತೇವೆ.

ಸದಸ್ಯರಾದ ಶ್ರೀ ಪ್ರತಾಪ ಸಿಂಹ ನಾಯಕ್ ರವರು ಮಾತನಾಡುವ ಸಂದರ್ಭದಲ್ಲಿ ಪ್ರಸ್ತಾಪಿಸಿದಂತೆ, ಸರ್ವೆ ಇಲಾಖೆಯಲ್ಲಿ ಈ ಸಮಸ್ಯೆಯನ್ನು ಹೇಗೆ ಪರಿಹರಿಸಬೇಕು ಎಂಬುದರ ಬಗ್ಗೆ ಸ್ಪಷ್ಟ ಮಾನದಂಡ ಹಾಗೂ ನಿಯಮಾವಳಿಗಳಿವೆ. ಇಲಾಖೆಯಲ್ಲಿ ಈ ಹಿಂದೆ ಕೆಲವು ಒಳ್ಳೆಯ ಆಯುಕ್ತರುಗಳು ಕರ್ತವ್ಯ ನಿರ್ವಹಿಸಿದ್ದಾರೆ. ಅವರುಗಳು ಅಲ್ಲಿನ ಎಲ್ಲಾ ಸಮಸ್ಯೆಗಳನ್ನು ಅವಲೋಕಿಸಿ, ಅವುಗಳನ್ನು ಹೇಗೆ ಇತ್ಯರ್ಥಗೊಳಿಸಬೇಕು ಎಂಬುದರ ಬಗ್ಗೆಯೂ ಸಹ ತಿಳಿಸಿದ್ದರು. ಭೂಮಿ ಮಂಜೂರಾತಿ ಹಾಗೂ ಭೂಮಿಯ ವಾಸ್ತವ ವಿಸ್ತೀರ್ಣಗಳಲ್ಲಿ ಹೊಂದಿಕೆಯಾಗದೇ ಸಮಸ್ಯೆಯಾದರೆ, ಇದನ್ನು ಹೇಗೆ ಇತ್ಯರ್ಥಗೊಳಿಸಬೇಕು ಎಂಬ ಬಗ್ಗೆ ಮಾರ್ಗಸೂಚಿಗಳನ್ನು ಸ್ಪಷ್ಟವಾಗಿ ಬರೆದಿಟ್ಟಿದ್ದಾರೆ. ಒಂದು ಕಡೆ ಭೂ ವಿಸ್ತೀರ್ಣ ಮತ್ತು ಭೂ ಮಂಜೂರಾತಿ ಇವುಗಳನ್ನು ತುಲನೆ ಮಾಡಿ ನೋಡಿದಾಗ, ವ್ಯತ್ಯಾಸಗಳಾದಾಗ, ಎರಡರಲ್ಲಿ ಯಾವುದು ಕಡಿಮೆ ಇದೆಯೋ ಅದನ್ನು ಪರಿಗಣಿಸಬೇಕೆಂದು

ತಿಳಿಸಿದ್ದಾರೆ. ಈ ಮಾನದಂಡವನ್ನು ಇಲ್ಲಿಯವರೆಗೆ ಯಾರೂ ಸಹ ಪ್ರಶ್ನಿಸಿಲ್ಲ. ಹೀಗಾಗಿ ಇವತ್ತಿನ ದಿವಸ ನಮ್ಮ ಕಾನೂನು ಸರಿಯಾಗಿದ್ದು ಮಾನ್ಯ ಮಾಡುವಂತಾಗಿದೆ. ಇದನ್ನು ಏಕೆ ಜಾರಿಗೊಳಿಸುತ್ತಿಲ್ಲ ಎಂದರೆ, ಈ ರೀತಿಯ ಗೊಂದಲಗಳು ಇದ್ದಷ್ಟೂ ಕೆಲವರಿಗೆ ಅನುಕೂಲವಾಗುತ್ತದೆ. ಈ ಗೊಂದಲದಲ್ಲಿ ನಾವು ಏಕೆ ಬೀಳಬೇಕೆಂದು ತಹಶಿಲ್ದಾರ್, ಸರ್ವೇಯರ್ ಹಾಗೂ ಸಹಾಯಕ ಆಯುಕ್ತರುಗಳು ಇದರ ಗೋಜಿಗೆ ಹೋಗುತ್ತಿಲ್ಲ. ಇದನ್ನು ನಾವು ಏಕೆ ಮೈ ಮೇಲೆ ಹಾಕಿಕೊಳ್ಳಬೇಕು ಎನ್ನುವುದು ಅವರ ಮನೋಭಾವನೆಯಾಗಿದೆ. ಇದನ್ನು ಮಾಡುವುದಕ್ಕೆ ಆಗುವುದಿಲ್ಲವೆಂತಲ್ಲ; ನಾವು ಏಕೆ ಮಾಡಬೇಕು ಎಂದು ಅವರುಗಳು ಮಾಡುತ್ತಿಲ್ಲ. ಆದರೆ, ಇನ್ನು ಮುಂದೆ ನಾವೇ ಇಲ್ಲಿ ಬೆನ್ನು ಹತ್ತಿ ತಿಂಗಳಿಗೆ ಇಂತಿಷ್ಟು ಪ್ರಕರಣಗಳು ವಿಲೇ ಆಗಲೇ ಬೇಕೆಂದು ಟಾರ್ಗೆಟ್ ಅನ್ನು ನಿಗದಿಪಡಿಸಿ, ಕೆಲಸವನ್ನು ಮಾಡಿಸುತ್ತೇವೆ. ಇದು ಅವರಿಗೆ ಸಿಹಿಯೋ ಅಥವಾ ಕಹಿಯೋ, ಅವರುಗಳು ಆದೇಶಗಳನ್ನು ಹೊರಡಿಸಲೇಬೇಕೆಂದು ನಾನು ಸೂಚಿಸಿದ್ದೇನೆ. ನಮ್ಮ ಆದೇಶವನ್ನು ಪ್ರಶ್ನಿಸಿ, ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸುತ್ತಾರೆಯೋ, ಸಲ್ಲಿಸಲಿ. We will fight it out. ಅವರು ನ್ಯಾಯಾಲಯದ ಮೊರೆ ಹೋಗುತ್ತಾರೆಂದು ನಾನು ನನ್ನ ಕೆಲಸವನ್ನು ಮಾಡದೇ ಇರುವುದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ; ಇದು ಆಗುವುದೂ ಸಹ ಇಲ್ಲ. As per the laid down procedure, ಅಧಿಕಾರಿಗಳು ತಮ್ಮ ಆದೇಶವನ್ನು ಹೊರಡಿಸಬೇಕು. ಇದನ್ನು ಪ್ರಶ್ನಿಸಿ, ಯಾರಾದರೂ ಮೇಲ್ಮನವಿ ಸಲ್ಲಿಸಿದರೆ, ಸಲ್ಲಿಸಲಿ. ಆದರೆ, ನಮ್ಮ ಕೆಲಸವು ಸ್ಥಗಿತಗೊಳ್ಳಬಾರದು ಎಂದು ನಾನು ಹೇಳಿದ್ದೇನೆ.

(ಮುಂದು)

(635)23-07-2024/4-10/bkp-ks (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೃಷ್ಣಭೈರೇಗೌಡ (ಮುಂದು):-**

ಕೊನೆಗೆ ಕೊಡಗಿನಲ್ಲಿ ಅದು ಬೇರೆ ಸಮಸ್ಯೆಯೇ ಇದೆ. ನಾನು ಅಲ್ಲಿಗೆ ಹೋಗಿ, ಒಂದು ದಿನ ಎಲ್ಲಾ ಅವರ ಜೊತೆಗೆ ಸಭೆಯನ್ನು ನಡೆಸಿ, ಯಾವ ರೀತಿಯಲ್ಲಿ ಮಾಡಬೇಕೆಂದು ಹೇಳಿ, ಕೆಲವು ಗೈಡ್‌ಲೈನ್ಸ್ ಹಾಕಿಕೊಟ್ಟು ಬಂದಿದ್ದೇನೆ, ಮತ್ತೆ, ಇದಕ್ಕೆ ಒಂದು ಸರ್ಕಾರದ ಆದೇಶವನ್ನು ಹೊರಡಿಸುವಂತಹದ್ದು ನನ್ನ ಕಡೆ ಬಾಕಿ ಇದೆ. ಸರ್ಕಾರ ಆದೇಶವನ್ನೂ ಸಹ ಹೊರಡಿಸಿಕೊಡುತ್ತದೆ.

ಅಧಿವೇಶನ ಮುಗಿದ ಕೂಡಲೇ ಮತ್ತೊಮ್ಮೆ ನಾನು ಸಹ ಕೊಡಗಿಗೂ ಬರುತ್ತೇನೆ. ಅದರ ಪ್ರಗತಿಯ ಸಲುವಾಗಿ ಕೈಗೊಳ್ಳಬೇಕಾದ್ದನ್ನು ಕೂಡ ಖಂಡಿತವಾಗಿ ಅಲ್ಲಿಯೇ ಕುಳಿತುಕೊಂಡು ಮಾಡುವಂತಹ ಕೆಲಸವನ್ನು ಮಾಡುತ್ತೇವೆ. ಒಟ್ಟಾರೆ, ಅವರು ಹೇಳಿದ ಸಮಸ್ಯೆ ಇರುವುದು 100ಕ್ಕೆ 100 ರಷ್ಟು ಸತ್ಯ ಇದೆ. ಈ ಸಮಸ್ಯೆ ಪರಿಹಾರ ಆಗಬೇಕು. ಇದರ ಬಗ್ಗೆ ಪ್ರಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ. ಈ ವಿಚಾರದಲ್ಲಿ ನಾವು ಎಷ್ಟು ದೂರ ಸಾಗುತ್ತೇವೆಂದು ನೋಡೋಣ. ಈ ವಿಚಾರದಲ್ಲಿ ಹಿಂದೆ ಎಲ್ಲರೂ ಆಗಿಲ್ಲ ಎಂದು ಹೇಳಿದ್ದಾರೆ, ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡೆ ಸವಾಲು ಏನಿದೆ ಎಂದು ಗೊತ್ತಿದ್ದೂ ಕೂಡ ಪರಿಹಾರ ಮಾಡುವಂತಹ ಪ್ರಯತ್ನವನ್ನು ಮಾಡುತ್ತೇವೆ.

**ಸಭಾಪತಿಯವರು:-** ಡಾ॥ ಧನಂಜಯ ಸರ್ಜಿರವರು,

**ಶ್ರೀ ಎಂ.ಎಲ್. ಅನಿಲ್ ಕುಮಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ.

**ಸಭಾಪತಿಯವರು:-** ಇಲ್ಲ, ಇಲ್ಲ, ಆಗುವುದಿಲ್ಲ ಕುಳಿತು ಕೊಳ್ಳಿ. ನಾನು ಡಾ॥ ಧನಂಜಯ ಸರ್ಜಿರವರವನ್ನು ಮಾತನಾಡಲಿಕ್ಕೆ ಕರೆದಿದ್ದೇನೆ.

**ಶ್ರೀ ಎಂ.ಎಲ್. ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ಇದೇ ಸದನದಲ್ಲಿ 6 ರಿಂದ 9 ಅನ್ನು relax ಮಾಡಬೇಕೆಂದು ಹೇಳಿದರು. ಈಗಾಗಲೇ ದುರಸ್ತಿಯಾಗಿ, ಹೊಸ ನಂಬರ್ ಬಂದಿದ್ದು, ಪಹಣಿಯಲ್ಲಿ ಮತ್ತು ನಕಾಶೆಯಲ್ಲಿ ದಯವಿಟ್ಟು ಇಂಧೀಕರಣ ಮಾಡಿಕೊಡಬೇಕು. ಸಭಾಪತಿಯವರು ಹೇಳುತ್ತಿದ್ದರೂ ತಮ್ಮ ಭಾಷಣವನ್ನು ಮುಂದುವರಿಸುತ್ತಿದ್ದಾರೆ, ಸಭಾಪತಿಯವರಿಗೆ ಕಿಮ್ಮತ್ತು ಇಲ್ಲವೇ?

**ಶ್ರೀ ಕೃಷ್ಣಭೈರೇಗೌಡ:-**ಮಾನ್ಯ ಸಭಾಪತಿಯವರೆ, ಇಂಧೀಕರಣ ಆಗದಿದ್ದರೂ ಕೂಡ ಕಡತದಲ್ಲಿ ಉಳಿದು ಹೋಗಿವೆ. ಅಂತಹದ್ದನ್ನು ನಾನು ತೆಗೆಸುತ್ತಿದ್ದೇನೆ. ಅವುಗಳ ಇಂಧೀಕರಣ

ಕೂಡ ಮಾಡಿಸುತ್ತೇವೆ. ಅದನ್ನೂ ಸಹ digitize ಮಾಡಿ ಎಷ್ಟು ಈ ರೀತಿಯಲ್ಲಿ ಬಾಕಿ ಇದೆ, ಹಿಸ್ಸಾ create ಆಗಿ ಇಂಡೀಕರಣ ಆಗದೇ ಇರುವುದನ್ನೂ ಕೂಡ follow-up ಮಾಡುತ್ತೇವೆ.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಒಂದೇ ಒಂದು ವಿಚಾರ ಏನೆಂದರೆ, ನಮ್ಮ ಜಿಲ್ಲೆಯದ್ದು, ಅರಣ್ಯ ಮತ್ತು ಗೋಮಾಳ ಒಂದೇ ಸರ್ವೆ ನಂಬರ್‌ನಲ್ಲಿ ಜಂಟಿ ಸರ್ವೆ ಆಗಿ bifurcation ಆಗದೇ ಇರುವುದರಿಂದ ನಮ್ಮಲ್ಲಿ ಸಮಸ್ಯೆ ಇರುವುದಾಗಿದೆ. ಉಳಿದಂತೆ ಎಲ್ಲಾ ನೀವು ಹೇಳಿದ್ದನ್ನು ಒಪ್ಪಿಕೊಂಡು, ನಿಮ್ಮ ಪ್ರಯತ್ನಕ್ಕೂ ಅಭಿನಂದನೆ ಸಲ್ಲಿಸುತ್ತಾ, ನೀವು ಎಲ್ಲಿಯವರೆಗೂ ಜಂಟಿ ಸರ್ವೆಯನ್ನು ಮಾಡಿ, ಅರಣ್ಯ ಮತ್ತು ಕಂದಾಯವನ್ನು bifurcation ಮಾಡುವುದಿಲ್ಲವೋ ಅಲ್ಲಿಯವರೆಗೂ ಈ ಸಮಸ್ಯೆ ಬಗೆಹರಿಯುವುದಿಲ್ಲ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೆ, ಈ ಸಮಸ್ಯೆ ಚಿಕ್ಕಮಗಳೂರು ಜಿಲ್ಲೆ ಅಷ್ಟೇ ಅಲ್ಲ, ಶಿವಮೊಗ್ಗ ಹಾಗೂ ರಾಜ್ಯದ ಇತರ ಅನೇಕ ಜಿಲ್ಲೆಗಳಲ್ಲಿ ಒಂದೇ ಸರ್ವೆ ನಂಬರ್‌ನಲ್ಲಿ ರೈತರ ಜಮೀನು ಇರಬಹುದು, ಕಂದಾಯ ಇಲಾಖೆಯು ಇದ್ದು, ಇನ್ನೊಂದು ಕಡೆ ಅರಣ್ಯ ಇಲಾಖೆಯವರು ಸಹ ಇದ್ದಾರೆ. ಇವರುಗಳು ತಮ್ಮ ತಮ್ಮ ಭಾಗವನ್ನು ಪ್ರತ್ಯೇಕ ಮಾಡಬೇಕೆಂದು ಹೇಳಿದರೆ ಜಂಟಿ ಸರ್ವೆ ಒಂದೇ ಆಗಬೇಕಾಗಿರುತ್ತದೆ. ಇದನ್ನು ನಾನು ಸುಮಾರು 3 ತಿಂಗಳುಗಳ ಕಾಲ ಸಮಯ ತೆಗೆದುಕೊಂಡು ಅಧ್ಯಯನ ಮಾಡಿ, ಗೈಡ್‌ಲೈನ್ಸ್ ತಯಾರು ಮಾಡಿ ಅರಣ್ಯ ಮಂತ್ರಿಗಳಿಗೆ ಕಡತವನ್ನು ಕಳುಹಿಸಿ, ಅರಣ್ಯ ಸಚಿವರ ಒಪ್ಪಿಗೆಯನ್ನು ತೆಗೆದುಕೊಂಡು ಬಹುಶಃ ನಾನು ಜನವರಿ ತಿಂಗಳಿನಲ್ಲಿ ಜಂಟಿಯಾಗಿ ಜಂಟಿ ಸರ್ವೆ ಮಾಡಲಿಕ್ಕೆ ಸರ್ಕಾರಿ ಆದೇಶವನ್ನು ಹೊರಡಿಸಿದ್ದೇವೆ. ತಮ್ಮ ಮಾಹಿತಿಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಜಂಟಿಯನ್ನು ಸರ್ವೆ ಮಾಡಲಿಕ್ಕೆ ಆರಂಭವನ್ನೂ ಸಹ ಮಾಡಿದ್ದೇವೆ. ಚಿಕ್ಕಮಗಳೂರು, ಚಾಮರಾಜನಗರ, ಚಿಕ್ಕಬಳ್ಳಾಪುರ,ಶಿವಮೊಗ್ಗ ಈ ರೀತಿಯಾಗಿ 4-5 ಕಡೆ Joint Circular ಹಾಗೂ Joint Guidelines ಅನ್ನು ಕೊಟ್ಟು, ಎರಡು ಇಲಾಖೆಗಳು ಸೇರಿ ಆದೇಶ ಹೊರಡಿಸಿದ್ದೇವೆ. ಅದರ ಆಧಾರದ ಮೇಲೆ ಜಂಟಿ ಸರ್ವೆಯಲ್ಲೂ ಸಹ ಶುರು ಮಾಡಿಸಿದ್ದೇವೆ.

ವಿಶೇಷವಾಗಿ ಚಿಕ್ಕಮಗಳೂರಿನಲ್ಲಿ ಶುರು ಮಾಡಿಸಿದ್ದೇವೆ. ನಾನು ಚಿಕ್ಕಮಗಳೂರಿಗೂ ಸಹ ಹೋಗಿ ನೋಡಿದ್ದು, ಜಂಟಿ ಸರ್ವೆ ಪ್ರಗತಿಯಲ್ಲೂ ಕೂಡ ಇದೆ. ಇನ್ನು ಸ್ವಲ್ಪ speed-up ಮಾಡುವಂತಹ ಕೆಲಸ ಮಾಡುತ್ತೇವೆ.

**ಅ) ವಿಷಯ:- ರಾಜ್ಯಾದ್ಯಂತ ಡೆಂಗ್ಯೂ ಖಾಯಿಲೆ ವ್ಯಾಪಕವಾಗಿ ಹರಡುತ್ತಿದ್ದು, ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಕುರಿತು.**

---

**ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಿನ್ನೆಯ ವರದಿಯ ಪ್ರಕಾರ ಸುಮಾರು 1,00,550 ಡೆಂಗ್ಯೂ ಜ್ವರದ checkup ಮಾಡಿದ್ದಾರೆ. ಇಡಿ ರಾಜ್ಯದಲ್ಲಿ 14, 632 ಪ್ರಕರಣಗಳು ಪಾಸಿಟಿವ್ ಬಂದಿದೆ ಎಂದು ಉಲ್ಲೇಖಿಸಿದ್ದಾರೆ. ಅದರಲ್ಲಿ ಒಟ್ಟು 10 ಸಾವುಗಳಾಗಿದೆ. ಶಿವಮೊಗ್ಗದಲ್ಲಿ 256 ಬೆಡ್ ಆಸ್ಪತ್ರೆ ಇದ್ದು, ಅದರಲ್ಲಿ 1000 ರೋಗಿಗಳನ್ನು ಒಂದು ದಿನಕ್ಕೆ ನೋಡುತ್ತೇವೆ ಜುಲೈ 22ರವರೆಗೆ 1560 ಟೆಸ್ಟ್‌ಗಳನ್ನು ಕಳುಹಿಸಿದ್ದು, ಅದರಲ್ಲಿ 662 ಜನರಿಗೆ ಪಾಸಿಟಿವ್ ಬಂದಿದೆ. 2 ಸಾವು ಆಗಿದೆ. ಆ 2 ಸಾವು ಕೂಡ ನಮ್ಮ Surveillance Unit ಗೆ ವರದಿಯಾಗಿದೆ. ಇನ್ನೂ 3 ಸಾವು ಮನೆಗೆ ಹೋದ ಮೇಲೆ ಆಗಿದೆ. ಒಟ್ಟು ನಮ್ಮ ಶಿವಮೊಗ್ಗದ ಜಿಲ್ಲಾ ಆಸ್ಪತ್ರೆಯಲ್ಲಿ ದಿನಕ್ಕೆ 1000 ರೋಗಿಗಳನ್ನು ನೋಡಿದ್ದಾರೆಂದು 5 ಸಾವು ಆ ಒಂದೇ-ಒಂದು ಆಸ್ಪತ್ರೆಯಲ್ಲಿ ಆಗಿದೆ. ಆ ಶಿವಮೊಗ್ಗ ಜಿಲ್ಲೆಯಲ್ಲಿ 2 ಸಾವು ಎಂದು notify ಮಾಡಿದ್ದಾರೆ. ಮನೆಗೆ ಹೋಗಿ 3 ಸಾವು ಆಗಿದೆ. 1 ದಿನಕ್ಕೆ 10 ಸಾವಿರ ರೋಗಿಗಳನ್ನು ನೋಡುವಂತಹ ಶಿವಮೊಗ್ಗ ನಗರದಲ್ಲಿ ಒಟ್ಟು ನೋಡಿದರೆ, 6,662 ಪಾಸಿಟಿವ್ ಪ್ರಕರಣಗಳು ಜುಲೈವರೆಗೆ ಆಗಿರಬೇಕು. ಇಲ್ಲಿ ಕೊಟ್ಟಿರುವಂತಹ ವರದಿಯನ್ನು ನೋಡಿದರೆ 382 ಪ್ರಕರಣಗಳು ಶಿವಮೊಗ್ಗ ಜಿಲ್ಲೆಯಲ್ಲಿ ಆಗಿವೆ ಎಂದು ವರದಿಯಲ್ಲಿ ಕೊಟ್ಟಿದ್ದಾರೆ. Definitely, ಈ ಬಗ್ಗೆ underreporting ಆಗುತ್ತಿದೆ. ಇಡೀ ರಾಜ್ಯದಲ್ಲಿ ಒಟ್ಟು 10 ಸಾವು ಆಗಿದೆ ಎಂದರೆ ನಮ್ಮ ಆಸ್ಪತ್ರೆ ಒಂದರಲ್ಲಿಯೇ 5 ಸಾವುಗಳಾಗಿದೆ. ಆದ್ದರಿಂದ, ಈ ವಿಚಾರದಲ್ಲಿ ಮಾನ್ಯ ಸಚಿವರು ಗಮನಹರಿಸಬೇಕು. Underreporting ಆಗುತ್ತಿದೆ. ಇಡೀ ರಾಜ್ಯದಲ್ಲಿ ಜ್ವರ ಬಂದು ಸಾವು ಆಗಿರುವವರೆಲ್ಲರ ರಕ್ತದ

ಸ್ಯಾಂಪಲ್ಸ್ ಅನ್ನು ಸಂಗ್ರಹ ಮಾಡಿ Surveillance Unit ಗೆ ಕಳುಹಿಸುವಂತೆ ಆಗಬೇಕು. ಬಹಳ ಮುಖ್ಯವಾಗಿ ಇಲ್ಲಿ ತೊಂದರೆಯಾಗುತ್ತಿರುವುದು peripheral ತಾಲ್ಲೂಕು ಮತ್ತು PHCs (Primary Health Centres) ಗಳಲ್ಲಿ ಪಾಸಿಟಿವ್ ಬಂದಿರುವ ಆ ಸ್ಯಾಂಪಲ್ಸ್ ಅನ್ನು ಕಳುಹಿಸುವುದಕ್ಕೆ ಜಿಲ್ಲಾ ಆಸ್ಪತ್ರೆಗೆ ಆಗುತ್ತಿಲ್ಲ. ಇದು ಮಾನ್ಯ ಸಚಿವರ ಗಮನಕ್ಕೆ ತರುವುದು ಮೊದಲನೆಯ ಅಂಶವಾಗಿದೆ. ಎರಡನೆಯದಾಗಿ, ನಮ್ಮ ಆಸ್ಪತ್ರೆಯಲ್ಲಿ 5 ಸಾವುಗಳಾಗಿದೆ,

ಮೂರನೆಯದಾಗಿ, ಡೆಂಗ್ಯೂ ಕಂಟ್ರೋಲ್ ಆಗಬೇಕೆಂದು, ಎಲ್ಲಾ measures ಗಳನ್ನು sudden ಆಗಿ ತೆಗೆದುಕೊಳ್ಳಬೇಕು, ಇದು ಅತಿ ಅವಶ್ಯಕವೆಂದು ಮಾಡುತ್ತಿದ್ದಾರೆ.

**ಸಭಾಪತಿಯವರು:–** ಇನ್ನೂ ಸಹ 6 ಜನ ಸದಸ್ಯರು ಮಾತನಾಡುವವರು ಇದ್ದಾರೆ.

**ಡಾ॥ ಧನಂಜಯ ಸರ್ಜಿ(ಪದವೀಧರರ ಕ್ಷೇತ್ರ):–**ಮಾನ್ಯ ಸಭಾಪತಿಯವರೆ, ನಾನು ವೈದ್ಯನಾಗಿರುವುದರಿಂದ ಬಹಳ ಮುಖ್ಯವಾದ ವಿಚಾರಗಳನ್ನು ಹೇಳಲಿಕ್ಕೆ ಬಯಸುತ್ತಿದ್ದೇನೆ.

**ಸಭಾಪತಿಯವರು:–** ವೈದ್ಯರಾಗಿರುವುದರಿಂದಲೇ ನಿಮಗೆ ಮೊದಲು ಅವಕಾಶವನ್ನು ಕೊಟ್ಟಿದ್ದೇನೆ.

**ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, 4 ಅಂಶಗಳಿದ್ದು, ಅವುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಎರಡನೆಯದಾಗಿ, ಸೊಳ್ಳೆಗಳನ್ನು ನಿಯಂತ್ರಣ ಮಾಡಬೇಕಾದರೆ ಬಹಳ ಮುಖ್ಯವಾಗಿ ಸೊಳ್ಳೆಗಳಿಗೆ ಸೊಂಕು ಹೇಗೆ ಬರುತ್ತದೆ, ಯಾರು ರೋಗಿ ಇರುತ್ತಾನೋ ಅವನಿಗೆ ಕಚ್ಚುವುದರಿಂದ ಆ ಸೊಳ್ಳೆಗಳಿಗೆ ಸೊಂಕು ಬರುತ್ತದೆ. ಒಂದು ಸೊಳ್ಳೆ ೩೦೦ ಮೊಟ್ಟೆ ಇಡುತ್ತದೆ. ಹಾಗಾಗಿ, ಆ ಮನುಷ್ಯನಿಗೆ ಸೊಳ್ಳೆ ಕಚ್ಚದ ಹಾಗೆ ಮಾಡಬೇಕೆಂದರೆ DEET (diethyltoluamide) content ಇರುವಂತಹ mosquito repellent ಅನ್ನು ಉಚಿತವಾಗಿ ಸರ್ಕಾರದಿಂದ ಎಲ್ಲಾ ಪಾಸಿಟಿವ್ ರೋಗಿಗಳಿಗೆ ಕೊಡಬೇಕು. ಎಷ್ಟು mosquito repellent ಇಡೀ ಕರ್ನಾಟಕ ರಾಜ್ಯದಲ್ಲಿ ಕೊಡಲಾಗಿದೆ ಎನ್ನುವಂತಹ ಉತ್ತರವನ್ನು ಮಾನ್ಯ ಸಚಿವರಿಂದ ಬಯಸುತ್ತೇನೆ. ಮತ್ತೆ, fogging ಎಲ್ಲಾ ಕಡೆ

ಮಾಡುತ್ತಿದ್ದೇವೆಂದು ಹೇಳುತ್ತಾರೆ. ಆದರೆ, ಅದು ಪರಿಣಾಮಕಾರಿಯಾಗಿ ಆಗುತ್ತಿಲ್ಲ. ದೇವರು ದೊಡ್ಡವನು, ಪ್ರಕೃತಿ ದೊಡ್ಡದು ಏಕೆಂದರೆ, ಧಾರಾಕಾರವಾಗಿ ಆ ಭಾಗದಲ್ಲಿ ಮಳೆ ಬಂದಿರುವುದರಿಂದ ಎಲ್ಲಾ larvae ಸತ್ತು ಹೋಗಿರುವುದರಿಂದ ಡೆಂಗ್ಯೂ ಇನ್ನು 15 ದಿವಸಗಳು, ಒಂದು ತಿಂಗಳಲ್ಲಿ ಕಡಿಮೆಯಾಗುತ್ತದೆ. ಮತ್ತೆ ಇದು ವಾಪಸ್ಸು ಬರುವುದರಿಂದ ನಾವು cautious ಆಗಿ ಇರಬೇಕಾಗುತ್ತದೆ ಎಂದು ಮಾನ್ಯ ಸಚಿವರಿಗೆ ಒಂದು ಮನವಿಯನ್ನು ಮಾಡುತ್ತೇನೆ.

ಮೂರನೆಯದಾಗಿ, 2013 ರಿಂದ 2015 ಕ್ಕೆ ರಕ್ತಶ್ರಾವ ಆಗಿ ಸುಮಾರು ಜನರು ಸಾಯುತ್ತಿದ್ದರು. 2016 ರಿಂದ 2019 ರೊಳಗೆ Myocarditis ನಿಂದ heart ಹಾಗೂ liver failure ಆಗಿ ಸತ್ತು ಹೋಗುತ್ತಿದ್ದರು. ಈ ಬಾರಿ ವಿಶೇಷವಾಗಿ 2023-24 ರಲ್ಲಿ ಮೆದುಳು ಸೊಂಕು ಆಗಿ ತೊಂದರೆಗಳಾಗುತ್ತಿದೆ. ಬೆಳಗ್ಗೆ ತಲೆನೋವು ಎಂದು ಬಂದು ಮಧ್ಯಾಹ್ನ ಗೊಂದಲದಲ್ಲಿರುತ್ತಾರೆ. ಸಂಜೆ ಹೊತ್ತಿಗೆ ಮೆದುಳು ತೊಂದರೆಯಾಗಿ ಕಾಣಿಸುತ್ತದೆ. ಹಾಗಾಗಿ, ಇದರ ಬಗ್ಗೆ ವಿಶೇಷ ಸೂಚನೆಗಳನ್ನು ಇಲಾಖೆಯಿಂದ ಎಲ್ಲಾ ಕಡೆ ಕೊಡಬೇಕೆಂದು ಹೇಳಿ ಈ ಸಮಯದಲ್ಲಿ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ, ಈ ರೋಗ ಬಹಳ ಉಲ್ಬಣವಾಗಿರುವುದರಿಂದ ಎಲ್ಲಾ ಆಸ್ಪತ್ರೆಗಳಲ್ಲಿ ಐ.ಸಿ. ಬೆಡ್‌ಗಳೆಲ್ಲವೂ ಪೂರ್ಣವಾಗಿವೆ. ಹಾಗಾಗಿ, ಇದನ್ನು Ayushman Bharat-Arogya Karnataka ನ ಯೋಜನೆಯಡಿ ಚಿಕಿತ್ಸೆಯನ್ನು ಈ ಸಂದರ್ಭದಲ್ಲಿ ಎಪಿಎಲ್ ಇರಲಿ, ಬಿ.ಪಿ.ಎಲ್ ಇರಲಿ., ಪಡೆಯುವಂತಹದ್ದನ್ನು ಮಾಡಬೇಕು. ಹೇಗಿದ್ದರೂ ಪೆಟ್ರೋಲ್, ಡಿಸೆಲ್ ಬೆಲೆ ಜಾಸ್ತಿಯಾಗಿದೆ. ಹಾಲಿನ ಬೆಲೆ ಜಾಸ್ತಿಯಾಗಿದೆ. ವಿದ್ಯುತ್ ಬೆಲೆ ಜಾಸ್ತಿಯಾಗಿದೆ, ಎಲ್ಲವೂ ಜಾಸ್ತಿಯಾಗಿದೆ. ಅದೇ ರೀತಿಯಲ್ಲಿ ನಮ್ಮ ಆಯುಷ್ಮಾನ್ ಭಾರತ್‌ಗೆ ಬರುವಂತಹ ಅನುದಾನವನ್ನು ಜಾಸ್ತಿ ಮಾಡಿ ಎಂದು ಈ ಸಮಯದಲ್ಲಿ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ, ಮೊನ್ನೆ ಏನು Ayurvedic and Allopathy practitioners ಗೆ green ಮತ್ತು blue ಎಂದು signage colour-code ಎಂದು ನೀವು ನೀಡಿರುತ್ತೀರಾ. ಅದು

ಮೊನ್ನೆ ಪತ್ರಿಕೆಯಲ್ಲಿ ಹೇಳಿದ್ದೀರಿ. ಅಲ್ಲಿ ಏನು ಹೇಳಿದ್ದೀರಿ ಎಂದರೆ 7 ಅಡಿ ಅಗಲ, 3 ಅಡಿ ಎತ್ತರ ಎಂದು ಹೇಳಿದ್ದೀರಿ. ಇದು ಆಸ್ಪತ್ರೆಗಳಿಗೆ ಈ ಸೈಜ್ ಆದರೆ ಸರಿ. ಆದರೆ, ಸಣ್ಣ ಸಣ್ಣ ಕ್ಲಿನಿಕ್‌ಗಳು 10X 15 ಅಡಿಅಳತೆಯಲ್ಲಿದ್ದು, ಅಲ್ಲಿ ಈ ಅಳತೆಯ ಬೋರ್ಡ್‌ಗಳನ್ನು ಹಾಕಲಿಕ್ಕೆ ಆಗುವುದಿಲ್ಲ. ಹೀಗಾಗಿ, ದಯವಿಟ್ಟು ಇದನ್ನು ಮಾರ್ಪಾಡು ಮಾಡಿ, ಸೂಚನೆಯನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಏನು ಡೆಂಗ್ಯೂ ನಿಯಂತ್ರಣಕ್ಕಾಗಿ 4 ಪ್ರಮುಖ ಹಂತಗಳಲ್ಲಿ ಸರ್ಕಾರ ಕ್ರಮ ಕೈಗೊಂಡಿದೆ. ಮೊದಲನೆಯದಾಗಿ ಹಲವಾರು ಸಭೆಗಳನ್ನು ಮಾಡಿದ್ದಾರೆ. ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ,ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ಮತ್ತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿದ್ದಾರೆ. ಈ ರೀತಿಯ ಸಭೆಗಳಲ್ಲಿ ಕೆಳಗಿನ ಅಧಿಕಾರಿಗಳಿಗೆ ಇದನ್ನು ಯಾವ ಯಾವ ರೀತಿಯಲ್ಲಿ ನಿಯಂತ್ರಣ ಮಾಡಬೇಕೆಂದು ಸಲಹೆ-ಸೂಚನೆಗಳನ್ನು, ನಿರ್ದೇಶನಗಳನ್ನು ಕೊಟ್ಟಿದ್ದಾರೆ. ಅದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಮೊದಲನೆಯದಾಗಿ, ಮುಖ್ಯವಾಗಿ ಈ ರೋಗವನ್ನು ನಿಯಂತ್ರಣ ಮಾಡುವುದಕ್ಕೆ ಡೆಂಗ್ಯೂ ಸೊಳ್ಳೆಯ larvae ವನ್ನು ನಾಶಪಡಿಸಬೇಕು. ಅದರ ಬಗ್ಗೆ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೀರಿ. ಸೂಚನೆಗಳನ್ನು ಕೊಟ್ಟಿದ್ದೀರಿ.

ಎರಡನೆಯದಾಗಿ, ಡೆಂಗ್ಯೂ ಜ್ವರದ ರೋಗವನ್ನು ಕಂಡು ಹಿಡಿಯಲಿಕ್ಕೆ testing kits ಕೊಟ್ಟಿದ್ದೀರಿ, ಪ್ರಯೋಗಾಲಯವನ್ನು ಸ್ಥಾಪನೆ ಮಾಡಿದ್ದೀರಿ. ಇದು ಒಳ್ಳೆಯ ವಿಚಾರ.

(ಮುಂದು)

(636) 23.07.2024 04.20 ಎಸ್‌ವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ವ್ಹಿ.ಸಂಕನೂರ (ಮುಂದು):-**

ಡೆಂಗ್ಯೂ ಜ್ವರ ಬಂದಾಗ ಅದನ್ನು ನಿರ್ವಹಣೆ ಮಾಡಲಿಕ್ಕೆ ಫೀವರ್ ಕ್ಲಿನಿಕ್ ಅನ್ನು ಪ್ರಾರಂಭ ಮಾಡಲಾಗಿದೆ. ಒಳ್ಳೆಯ ಕೆಲಸ ಮಾಡಿದ್ದೀರಿ. ಇಷ್ಟೆಲ್ಲಾ ಮಾಡಿದರೂ ಕೂಡ ಡೆಂಗ್ಯೂ ಏಕೆ ಇನ್ನೂ ನಿಯಂತ್ರಣಕ್ಕೆ ಬಂದಿಲ್ಲ ಎಂಬುದು ನನ್ನ ಮೂಲ ಪ್ರಶ್ನೆ. 14,723 ಪ್ರಕರಣಗಳು ಇವತ್ತು ವರದಿಯಾಗಿವೆ ಎಂದು ನಾನು ತಿಳಿದಿದ್ದೇನೆ. ಪ್ರತಿದಿನ 400 ಪ್ರಕರಣ ವರದಿಯಾಗುತ್ತವೆ. ಬಹಳ ಗಾಬರಿಯಾಗುವ ಅಂಶವೇನೆಂದರೆ ಒಂದು ವರ್ಷದೊಳಗಿನ 238 ಮಕ್ಕಳಿಗೆ ಡೆಂಗ್ಯೂ ಬಂದಿದೆ. ನನಗಿರತಕ್ಕಂತಹ ಮಾಹಿತಿಯ ಪ್ರಕಾರ ಸತ್ತವರ ಸಂಖ್ಯೆ 12. ತಪ್ಪಿದ್ದರೆ ಮಾನ್ಯ ಸಚಿವರು ಹೇಳಲಿ. ಅದರಲ್ಲಿ ಬೆಳಗಾವಿಯ ಒಬ್ಬ ಸಣ್ಣ ಬಾಲಕಿ ಸತ್ತಿದ್ದಾಳೆ. ಇಲ್ಲಿಯೇ ಪಕ್ಕದ ಹೊಸೂರಿನಲ್ಲಿ ಒಬ್ಬ ವೈದ್ಯರು ಸತ್ತಿದ್ದಾರೆ. ಅಂಕೋಲಾದೊಳಗೆ ಒಬ್ಬ ಯುವಕ ಸತ್ತಿದ್ದಾನೆ. ತುಮಕೂರಿನಲ್ಲಿ ಒಬ್ಬ ಯುವತಿ ಹೀಗೆ ಬಹಳ ಜನರನ್ನು ನಾವು ಕಳೆದುಕೊಂಡಿದ್ದೇವೆ.

ಡೆಂಗ್ಯೂ ಜ್ವರ ಸಾಯುವಂತಹ ರೋಗವಲ್ಲ. Priliminary stage ನಲ್ಲಿ ಕಂಡು ಹಿಡಿದರೆ control ಆಗುತ್ತದೆ. ಆದರೂ ಇಷ್ಟು ಜನ ಏಕೆ ಸತ್ತರು? ಎಲ್ಲಿಯೋ ಒಂದು ಕಡೆ failure ಆಗಿದೆ ಎಂದು ನನಗನ್ನಿಸುತ್ತದೆ. ರಾಜ್ಯ ಮಟ್ಟದಲ್ಲಿ ಮುಖ್ಯಮಂತ್ರಿಯವರು, ತಾವು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಎಲ್ಲರೂ ಸೇರಿ ಸಭೆಗಳನ್ನು ಮಾಡಿದ್ದೀರಿ. ಸಭೆಗಳಲ್ಲಿ ಸೂಚನೆಗಳನ್ನು ಕೊಟ್ಟಿದ್ದು, ಆ ಸೂಚನೆಗಳು ಜಿಲ್ಲಾ ಮಟ್ಟದಲ್ಲಿ ಕಾರ್ಯಗತವಾಗಿಲ್ಲ. ಅದಕ್ಕೆ ಇದೆಲ್ಲಾ failure ಆಗಿದೆ. ನೀವು ಬೆಂಗಳೂರಿನಲ್ಲಿ ಕುಳಿತು virtual meeting ಇರಬಹುದು ಅಥವಾ ಇಲ್ಲಿ ಕರೆಸಿ ಸಭೆ ಮಾಡುವುದಿರಬಹುದು ಇವುಗಳನ್ನು ಬಿಟ್ಟು field ಗೆ ಹೋಗಬೇಕಿತ್ತು. Field ನಲ್ಲಿ ಏನು ಕೆಲಸ ಆಗಬೇಕಾಗಿತ್ತೋ ಅದು ಆಗಿಲ್ಲ. ನಿಮ್ಮ ಸೂಚನೆಗಳನ್ನು ಅವರು ಸರಿಯಾಗಿ ಪಾಲಿಸಿಲ್ಲ. ಹಾಗಾಗಿ ಇದು control ಆಗಿಲ್ಲ ಎಂದು ನನ್ನ ಅನಿಸಿಕೆ. ಇದರ ಬಗ್ಗೆ field ನಲ್ಲಿ ಏನಾದರೂ ಕೆಲಸ ನಡೆದಿದೆಯೋ ಇಲ್ಲವೋ ಎನ್ನುವ ಬಗ್ಗೆ ಸರಿಯಾದ supervision ಇಲ್ಲ. ಇವತ್ತು District Task

Force ಮಾಡಿದ್ದಾರೆ. District Task Force ಸರಿಯಾಗಿ ಕೆಲಸ ಮಾಡುತ್ತಿದೆಯೇ ಎನ್ನುವುದರ ಬಗ್ಗೆ supervision ಇದೆಯೇ? District Task Force ನವರಿಗೆ ಚುನಾಯಿತ ಪ್ರತಿನಿಧಿಗಳನ್ನು ಕರೆದು ಸಭೆ ಮಾಡಿ ಎಂದು ಹೇಳಿದ್ದಾರೆ. ಒಬ್ಬರೂ ನಮ್ಮ ಬಳಿ ಬಂದಿಲ್ಲ. ಅವರ ಸೂಚನೆಗಳು ಸರಿಯಾಗಿವೆ. ಆದರೆ ಜಿಲ್ಲಾ ಮಟ್ಟದೊಳಗೆ, ತಾಲ್ಲೂಕು ಮಟ್ಟದೊಳಗೆ ಅವು ಕಾರ್ಯಗತವಾಗಿಲ್ಲ. ಸರಿಯಾಗಿ supervision ಆಗಿಲ್ಲ. ಆ ಕೆಲಸ ಆಗಬೇಕಾಗಿದೆ. ರಾಜ್ಯಮಟ್ಟದಲ್ಲಿ ಕುಳಿತು ಸಭೆ ಮಾಡುವುದನ್ನು ಬಿಟ್ಟು, ಸಚಿವರು field ಗೆ ಹೋಗಬೇಕೆಂದು ವಿನಂತಿ ಮಾಡುತ್ತೇನೆ. ಇಲಾಖಾ ಅಧಿಕಾರಿಗಳಿಗೆ field ಗೆ ಹೋಗುವಂತೆ ಹೇಳಬೇಕು. ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಎಲ್ಲಿ ಗರಿಷ್ಠ ಪ್ರಕರಣಗಳಿವೆಯೋ ಅಲ್ಲಿ ಹೋಗಿ ಅವರು ನೋಡಬೇಕು. ಸ್ಥಾನಿಕ ವಿಚಾರಣೆಯಿಲ್ಲ, ಸ್ಥಾನಿಕ ಪರಿಶೀಲನೆಯಿಲ್ಲ. ಇದು ನಿಯಂತ್ರಣ ತಪ್ಪಿದೆ. ಹೀಗಾಗಿ ಇದು control ಗೆ ಬರುತ್ತಿಲ್ಲ ಎಂಬುದು ನನ್ನ ಅನಿಸಿಕೆ.

ಇದನ್ನು ಕಂಟ್ರೋಲ್ ಮಾಡಬೇಕಾದರೆ ನಿಂತ ನೀರಿನಲ್ಲಿ ಉತ್ಪತ್ತಿಯಾಗುವ larvae ಗಳನ್ನು ಸಂಪೂರ್ಣವಾಗಿ ನಿಯಂತ್ರಿಸಬೇಕು. ಅವು ಸಾಯುವಂತೆ ಮಾಡಬೇಕು. ಅದಕ್ಕೆ ಏನು spray ಆಗಬೇಕು ಅದು ಆಗುತ್ತಿಲ್ಲ. ಮುಖ್ಯವಾಗಿ larvae ನಿಯಂತ್ರಣ ಮಾಡಿದರೆ ಇದು spread ಆಗುವುದೇ ಇಲ್ಲ. ಆ ಕೆಲಸವನ್ನು ಪ್ರಾಥಮಿಕ ಆದ್ಯತೆಯ ಮೇರೆಗೆ ಮಾಡಬೇಕು. ಇದರ ಜೊತೆಗೆ early testing ಆಗಬೇಕು. ಸರ್ಕಾರಿ ಆಸ್ಪತ್ರೆಯೊಳಗೆ free, ಖಾಸಗಿ ಆಸ್ಪತ್ರೆಗಳಲ್ಲಿ ಹೆಚ್ಚು ಹಣ ಪಡೆಯುತ್ತಿದ್ದ ಕಡೆಗಳಲ್ಲಿ ದರ ನಿಗದಿಪಡಿಸಿ ಆದೇಶ ಮಾಡಿದ್ದಾರೆ. ಎಲ್ಲವನ್ನೂ ಮಾಡಿರುವುದು ಸರಿಯಷ್ಟೆ. Early testing ಆಗಬೇಕು. Maximum testing ಆಗಬೇಕು. Maximum testing ಆದರೆ ನಮಗೆ ಅದು ಗೊತ್ತಾಗುತ್ತದೆ. Immediately treatment ಕೊಡಲಿಕ್ಕೆ ಸಾಧ್ಯವಿದೆ. ಈ mosquito day time ನಲ್ಲಿ ಕಚ್ಚುತ್ತದೆ.

ಮಾನ್ಯ ಸಚಿವರೆ, ಶಾಲಾ ಕಾಲೇಜುಗಳಲ್ಲಿ fogging ಮಾಡಿದ್ದನ್ನು ನಾನು ನೋಡಿಯೇ ಇಲ್ಲ. Fogging ಮಾಡಬೇಕು. ಅದು ಶಾಲೆ ಬೆಳಗ್ಗೆ 10.30 ಗಂಟೆಗೆ ಪ್ರಾರಂಭವಾಗುತ್ತದೆಯೆಂದರೆ ಬೆಳಗ್ಗೆ 9.30 ಗಂಟೆಗೆ fogging ಆಗಬೇಕು. ಯಾವ ಊರಿನ ಶಾಲೆಗಳಲ್ಲಿ ಈ fogging process

ಮಾಡುತ್ತಿದ್ದಾರೆ ಎಂದು ನನಗೆ ಲೆಕ್ಕ ಕೊಡಿ. Day time ನಲ್ಲಿ ಸೊಳ್ಳೆ ಕಚ್ಚುತ್ತದೆ, ಬೆಳಗ್ಗೆ 10 ಗಂಟೆಗೆ ಶಾಲೆ ಪ್ರಾರಂಭವಾಗುತ್ತದೆಯೆಂದರೆ ಬೆಳಗ್ಗೆ 9 ಗಂಟೆಗೆ fogging ಮಾಡಬೇಕು. ಆದರೆ ಎಲ್ಲಿಯೂ fogging ಇಲ್ಲ.

ಗದಗ್‌ನಲ್ಲಿ 2,15,000 ಜನಸಂಖ್ಯೆ ಇದೆ. 35 ವಾರ್ಡ್ ಇವೆ. 35 ವಾರ್ಡ್‌ಗಳಿಗೆ Hand Held Fogging Machine ಕೇವಲ ನಾಲ್ಕು ನೀಡಲಾಗಿದೆ. ಅದೇ ಹುಬ್ಬಳ್ಳಿ-ಧಾರವಾಡದಲ್ಲಿ 82 ವಾರ್ಡ್‌ಗಳಿದ್ದು, ಅವರಿಗೆ 82 ಮೆಷಿನ್‌ಗಳನ್ನು ಕೊಡಲಾಗಿದೆ. ಗದಗ-ಬೆಟಗೇರಿಗೆ ಏಕೆ ಅನ್ಯಾಯ ಮಾಡಲಾಗುತ್ತಿದೆ? ಹೀಗಾಗಿ ಗದಗ-ಬೆಟಗೇರಿಯಲ್ಲಿ ಗರಿಷ್ಠ ಡೆಂಗ್ಯೂ ಪ್ರಕರಣಗಳಿವೆ. ನೀವು ಏನು materials supply ಮಾಡಬೇಕಾಗಿತ್ತೋ ಅದು ಸರಿಯಾಗಿ supply ಆಗಿಲ್ಲ. ಔಷಧಿ ಸರಿಯಾಗಿ supply ಆಗಿಲ್ಲ. ದಯವಿಟ್ಟು ಇದನ್ನು ಜಾಗರೂಕತೆಯಿಂದ ನಿಯಂತ್ರಣ ಮಾಡಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಡೆಂಗ್ಯೂ ಕಾಯಿಲೆ ಒಂದು ಸಾಂಕ್ರಾಮಿಕ ರೋಗ. ಸೊಳ್ಳೆಯಿಂದ ಹರಡತಕ್ಕದ್ದು ಎಂಬುದು ನಮಗೆಲ್ಲಾ ತಿಳಿದಿದೆ. ಜುಲೈ 2022ರವರೆಗೆ ನಮಗೆ ಸಿಕ್ಕ ಮಾಹಿತಿಯಲ್ಲಿ ಆರೋಗ್ಯ ಇಲಾಖೆ ಮತ್ತು ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಆಸ್ಪತ್ರೆಗಳಲ್ಲಿ ಸುಮಾರು 1,00,550 ರಕ್ತ ಮಾದರಿಗಳನ್ನು ಪರೀಕ್ಷೆ ಮಾಡಿದ್ದಾರೆ. ಅದರಲ್ಲಿ ಸುಮಾರು 14,632 ಜನರಿಗೆ ಡೆಂಗ್ಯೂ ಪಾಸಿಟಿವ್ ಬಂದಿದೆ. ಇದರಲ್ಲಿ 10 ಜನ ಸಾವನ್ನಪ್ಪಿದ್ದಾರೆ. ಬಹುತೇಕವಾಗಿ ರಾಜ್ಯದ ಕೆಲವೊಂದು ಜಿಲ್ಲೆಗಳಲ್ಲಿ ಇದು ಅಧಿಕವಾಗಿದೆ. ಪ್ರಥಮವಾಗಿ ಬಿಬಿಎಂಪಿಯಲ್ಲಿ 6563, ಚಿಕ್ಕಮಗಳೂರು ಜಿಲ್ಲೆಯಲ್ಲಿ 635, ಮೈಸೂರಿನಲ್ಲಿ 593, ಹಾಸನದಲ್ಲಿ 595 ಮತ್ತು ಹಾವೇರಿಯಲ್ಲಿ 558 ಆಗಿದೆ. ಬಹುತೇಕವಾಗಿ ರೋಗಿಗಳಲ್ಲಿ ಕಂಡುಬರುವಂತಹ ರೋಗ ಲಕ್ಷಣಗಳು ಯಾವುವೆಂದರೆ ಕಡಿಮೆ ರಕ್ತದೊತ್ತಡ, ಹೃದಯ ಸಮಸ್ಯೆ ಹಾಗೂ ಮೆದುಳಿನ ಸೋಂಕು ಉಲ್ಬಣಗೊಳ್ಳುವುದಾಗಿದೆ.

ಇತ್ತೀಚಿನ ವರದಿಯ ಪ್ರಕಾರ ಯಾರು ಕೊರೊನಾ ಅಲೆ-1 ಮತ್ತು 2ರಲ್ಲಿ ಸೋಂಕಿತರಾದಂತಹ ವ್ಯಕ್ತಿಗಳು ಯಾರಿದ್ದಾರೆಯೋ ಅವರಲ್ಲಿ immunity ಕಡಿಮೆಯಾಗಿ ಸಾಕಷ್ಟು ರೀತಿಯಲ್ಲಿ ಅವರಿಗೆ ತೊಂದರೆಯಾಗುತ್ತಿದೆ. ಬೆಂಗಳೂರಿನಲ್ಲಿ ಈ ಸೋಂಕು ಬಹಳ ವ್ಯಾಪಕವಾಗಿ ಹರಡುತ್ತಿದ್ದು, ಅದನ್ನು out prick ಎಂದು ನಾವು ಹೇಳಬೇಕು. ಅದರಲ್ಲಿಯೂ ಕೂಡ ಮಹದೇವಪುರ, ಎಲೆಕ್ಟ್ರಾನಿಕ್ ಸಿಟಿಯಲ್ಲಿ ವಲಸೆ ಕಾರ್ಮಿಕರು ಹೆಚ್ಚು ಇದ್ದು, ಅಲ್ಲಿ ಸಾಕಷ್ಟು ರೋಗ ಉಲ್ಬಣಗೊಳ್ಳುತ್ತಿದೆ. ಸರ್ಕಾರ ಇದರ ಬಗ್ಗೆ ಎಚ್ಚರಿಕೆ ವಹಿಸಬೇಕಾಗಿದೆ. ಆಸ್ಪತ್ರೆಗಳಲ್ಲಿ ಕೂಡ ಬೆಡ್‌ಗಳಿಲ್ಲದೆ ಪರದಾಡುತ್ತಿದ್ದಾರೆ. ಹಾವೇರಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಆಸ್ಪತ್ರೆಯ ಕಾರಿಡಾರ್‌ಗಳಲ್ಲಿ ಹಾಸಿಗೆ ಹಾಕಿ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಡಾ:ಧನಂಜಯ ಸರ್ಜಿಯವರು ಹೇಳಿದಂತೆ ಐಸಿಯುಗಳ ಸಂಖ್ಯೆಯನ್ನು ಹೆಚ್ಚು ಮಾಡಬೇಕಾಗಿದೆ. ಇದು ಕೇವಲ ವಯಸ್ಸಾದವರಲ್ಲಿ ಮಾತ್ರವಲ್ಲದೆ, ಚಿಕ್ಕ ಮಕ್ಕಳಲ್ಲಿ ಕೂಡ ಅಂದರೆ 18 ವರ್ಷದೊಳಗಿರುವ ಯುವಕರಲ್ಲಿ ಕೂಡ ಇದು ಕಾಣಿಸುತ್ತಿದೆ. ಇದರ ಬಗ್ಗೆ ನಾವು ಎಚ್ಚರ ವಹಿಸಬೇಕು. ತಾವು preventive measure ತೆಗೆದುಕೊಂಡಿದ್ದೀರಿ. ಇಲ್ಲ ಎಂದು ಹೇಳುವುದಿಲ್ಲ. Surveillance ಕೂಡ ಮಾಡಬೇಕಾಗುತ್ತದೆ. Test ಮಾಡಿ free treatment ಕೊಡಬೇಕು. Hotspot ಗಳನ್ನು ಗುರುತಿಸಿದರೆ ಒಳ್ಳೆಯದು. ಜಿಲ್ಲೆಗಳಲ್ಲಿ ಎಲ್ಲಿ ನೀರಾವರಿ ಪ್ರದೇಶ ಇದೆ, ಅಂಥವುಗಳನ್ನು ಗುರುತಿಸಿ mosquito control ಮಾಡಿದರೆ ಈ ಸೋಂಕು ಹತೋಟಿಗೆ ಬರುತ್ತದೆ. ಇನ್ನು NS1 ELISA test, Rapid Card Test ಗೆ ಸಂಬಂಧಪಟ್ಟಂತೆ ಕೂಡ ಯಾರನ್ನಾದರೂ ನಿಗದಿ ಮಾಡಿದ್ದರೂ ಮೇಲ್ವಿಚಾರಣೆ ಮಾಡಬೇಕು. ಅಲ್ಲಿಯೂ ಕೂಡ complaints ಬರುತ್ತಲೇ ಇದೆ.

ನಿಮಗೆ ನನ್ನದೊಂದು ಸಲಹೆ. ಈ ವಿಷಯದಲ್ಲಿ ಕೇಂದ್ರ ಸರ್ಕಾರವು ಸಾಕಷ್ಟು ರೀತಿಯಲ್ಲಿ ನೆರವಿಗೆ ಬರಬೇಕು. ಬಂದಿದೆಯೋ ಬಂದಿಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಅವರದ್ದೇ ಆದಂತಹ National Vector Borne Disease Control Programme (NVBDCP) ಎನ್ನುವ ಸಾಕಷ್ಟು ಪ್ರೋಗ್ರಾಮ್‌ಗಳಿವೆ. Budgetary support ಕೂಡ ಕೊಡುತ್ತಾರೆ. ಯಾವ ರೀತಿಯಾಗಿ ಮಾಡಬೇಕೆನ್ನುವ guidelines ಕೂಡ ಇದೆ. ತಾವು ಅದನ್ನು ಪಡೆದುಕೊಳ್ಳಬೇಕು. ನಾನು ಒಂದು

parliamentary question ನೋಡಿದೆ. 783 Sentinel Surveillance Hospital with Laboratory ಗಳನ್ನು ದೇಶದಲ್ಲಿ ಪ್ರಾರಂಭ ಮಾಡಿದ್ದೇವೆ ಎಂದು ಆರೋಗ್ಯ ಸಚಿವರು ಉತ್ತರಿಸಿದ್ದಾರೆ. (ಮುಂದು)

(637) 23-07-2024 (4.30) ಕೆಜಿ-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ಮುಂದು):-**
ಮಾನ್ಯ ಸಚಿವರು ನಮ್ಮಲ್ಲಿ ಎಷ್ಟು ಆಗಿದೆ ಎಂಬುದನ್ನು ಸಭೆಗೆ ದಯಮಾಡಿ ತಿಳಿಸಿಕೊಡಬೇಕು. ಇದು ಇನ್ನು ನಿಯಂತ್ರಣಕ್ಕೆ ಬರಲಿಲ್ಲವೆಂದರೆ, ಬಹುಶಃ Epidemic Diseases Act ಏನಿದೆ, ಅದರಲ್ಲಿ ಈ ಡೆಂಗ್ಯೂವನ್ನು ಒಂದು outbreak of dengue disease ಎಂದು declare ಮಾಡಿದರೆ, ಬಹುಶಃ ಡಿಪ್ಯೂಟಿ ಕಮಿಷನರ್‌ರವರಿಗೆ ಅಧಿಕಾರ ಕೊಡಬಹುದು. ಎಲ್ಲೆಲ್ಲಿ ಯಾವ ಯಾವ ಜಾಗಗಳನ್ನು declare ಮಾಡಿ, ಅಲ್ಲಿ ನಿಯಂತ್ರಣಕ್ಕೆ ಏನು ವ್ಯವಸ್ಥೆ ಮಾಡಬೇಕಾಗುತ್ತದೆ ಮತ್ತು ಯಾವ ರೀತಿಯಲ್ಲಿ ಜಿಲ್ಲಾಡಳಿತ ಹಾಗೂ ಸರ್ಕಾರ ಕೂಡ ನಿಯಂತ್ರಣ ವ್ಯವಸ್ಥೆಯನ್ನು ಪಡೆಯಬೇಕಾಗುತ್ತದೆ. ಡೆಂಗ್ಯೂ ನಿಯಂತ್ರಣಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಪರೀಕ್ಷೆಗಳನ್ನು ಮಾಡಿದರೆ, ಎಲ್ಲರನ್ನೂ ಸಹ isolation ಮಾಡುವುದರಿಂದ ಹಾಗೂ ಆಸ್ಪತ್ರೆಗಳಲ್ಲಿ admit ಆಗುವುದರಿಂದ ಕೂಡ ಇದು ನಿಯಂತ್ರಣಕ್ಕೆ ಬರಬಹುದು. ಈ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನನ್ನ ಸದಸ್ಯ ಮಿತ್ರರು ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಮೊದಲನೆಯದಾಗಿ, stagnant water ಇದ್ದಲ್ಲಿ ಆ ಸೊಳ್ಳೆಗಳು larvae ಇಡುತ್ತವೆ. ಇದು ಈ ರೀತಿ ಬೆಳೆಯುತ್ತದೆ. ಅದೇರೀತಿ ವೈದ್ಯರು ಹೇಳಿದ ಪ್ರಕಾರ, ಅದು ಮಧ್ಯಾಹ್ನ ಬೆಳೆಯುತ್ತದೆ ಹಾಗೂ ಈ ವೇಳೆಯಲ್ಲಿ ಹೆಚ್ಚು ಕಚ್ಚುತ್ತದೆ. ಹಾಗಾಗಿ, ಎಲ್ಲೆಲ್ಲಿ stagnant water ಇದೆ, ಅಂತಹ ಕಡೆಗಳಲ್ಲಿ ಔಷಧಿಗಳನ್ನು ಸಿಂಪಡಿಸುವುದಾಗಲಿ ಅಥವಾ ಅದರ ನಿಯಂತ್ರಣಕ್ಕೆ ಏನೇನೂ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ನಾವು ಇದನ್ನು ಎಲ್ಲಿಯವರೆಗೂ ಮಾಡುವುದಿಲ್ಲವೋ, ಅಲ್ಲಿಯವರೆಗೆ ಬಹುಶಃ ಅದು control ಗೆ ಬರುವುದಿಲ್ಲ. ಈಗಾಗಲೇ. ಡೆಂಗ್ಯೂ ಪ್ರಕರಣಗಳು ಸುಮಾರು 10 ರಿಂದ 11 ಸಾವಿರ ದಾಟಿವೆ. ಅದಕ್ಕೆ ಇದರ ಬಗ್ಗೆ ಎಚ್ಚತ್ತುಕೊಳ್ಳಬೇಕು. ಈ ಡೆಂಗ್ಯೂ ಪ್ರಕರಣಗಳು ದಿನೇ ದಿನೇ ಹೆಚ್ಚಿಗೆ ಬೆಳೆಯುತ್ತಿವೆ. ಹಾಗಾಗಿ,

ಸರ್ಕಾರ ಅದನ್ನು ನಿಯಂತ್ರಣಗೊಳಿಸುವಂತಹ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು. ಎಲ್ಲಾ ಕಡೆ stagnant water ಇದ್ದರೆ, ಆ ಸೊಳ್ಳೆಗಳು ಬೆಳೆಯುವಂತಹದ್ದು ಸ್ವಾಭಾವಿಕ. ಎಲ್ಲಾ ಕಡೆ ನೀರು ನಿಂತಿರುತ್ತದೆ, ಅಂತಹ ಕಡೆಗಳಲ್ಲಿ ಅದು ಬೆಳೆಯುತ್ತದೆ. ಮೊನ್ನೆ ದಿವಸ ಗುಲ್ಬರ್ಗಾದಲ್ಲಿ ಒಂದು ಕಡೆ ಚರಂಡಿಯನ್ನು ಸರಿ ಮಾಡಬೇಕೆಂದು ಒಂದು ತಿಂಗಳ ಕಾಲ ಚರಂಡಿಯನ್ನು ಓಪನ್ನಾಗಿ ತೆಗೆದಿದ್ದರು. ಅಲ್ಲಿ ಎಲ್ಲಾ ಕಡೆಗಳಲ್ಲಿ ನೀರು ನಿಂತಿರುತ್ತವೆ. ಅಲ್ಲಿ ಯಾರು ಓಡಾಡುವುದಕ್ಕೆ ಬರುವುದಿಲ್ಲ. ಅಲ್ಲಿ ಇದ್ದಂತಹ ಅಂಗಡಿಗಳನ್ನು ಸಹ ಬಂದ್ ಮಾಡಿದ್ದಾರೆ. ಈ ರೀತಿಯಾದರೆ ಅಂತಹ ಕಡೆಗಳಲ್ಲಿ dengue disease spread ಆಗುತ್ತದೆ. ಆ ಪ್ರಮಾಣದಲ್ಲಿ ಆ ರೀತಿಯಲ್ಲಿ ಬಿಡುವುದೇ ದೊಡ್ಡ ತಪ್ಪು. ನಾವು ಎಲ್ಲಿಯವರೆಗೆ ಇದರಿಂದ ಎಚ್ಚೆತ್ತುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಇದು ಹೆಚ್ಚಿಗೆ ಆಗುತ್ತದೆ ಎಂದು ನನಗೆ ಅನಿಸುತ್ತದೆ. ಆ ವಿಚಾರದಲ್ಲಿ Corporation ಗಾಗಲಿ ಅಥವಾ ನಾನು ಮೊನ್ನೆ ದಿವಸ ಅಧಿಕಾರಿಗಳು ಇರುವುದಿಲ್ಲವೆಂದು ಹೇಳಿದ್ದೆ. Lower level ನಲ್ಲಿ ಯಾರು ಇದನ್ನು ನಿಯಂತ್ರಗೊಳಿಸಬೇಕು ಆ ಅಧಿಕಾರಿಗಳು ಇಲ್ಲ. ಸುಮಾರು 2438 ಹುದ್ದೆಗಳು ಖಾಲಿ ಇವೆ. ಕೊನೆಯ ಪಕ್ಷ ಸರ್ಕಾರ ಆ ಹುದ್ದೆಗಳನ್ನು temporary appointment ಆದರೂ ಸಹ, ಮಾಡಿ ಅದನ್ನು ನಿಯಂತ್ರಣಗೊಳಿಸುವಂತಹ ಕೆಲಸವನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

**ಡಾ|| ತಳವಾರ್ ಸಾಬಣ್ಣ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರುಗಳು ಡೆಂಗ್ಯೂ ರೋಗದ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿದ್ದಾರೆ.

**ಸಭಾಪತಿಯವರು:–** ಮಾನ್ಯ ತಳವಾರ್ ಸಾಬಣ್ಣನವರೇ, ಅವರು ಹೇಳಿರುವುದನ್ನು ಬಿಟ್ಟು ತಾವು ಹೇಳಿ.

**ಡಾ|| ತಳವಾರ್ ಸಾಬಣ್ಣ:–** ಮಾನ್ಯ ಸಭಾಪತಿಯವರೇ, ಅದಕ್ಕಾಗಿ ನಾನು ಕೇವಲ ಬೆಳಗಾವಿ ನಗರಕ್ಕೆ ಸೀಮಿತಗೊಂಡು ಮಾನ್ಯ ಸಚಿವರ ಗಮನ ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಾನು ಕಡೆಯ ಬೆಂಚಿನಲ್ಲಿದ್ದೇನೆ. ಹಾಗಾಗಿ, ನನಗೆ ಯಾವಾಗಲೂ ಮಾತನಾಡುವುದಕ್ಕೆ ಸದನದಲ್ಲಿ ಕಡಿಮೆ ಸಮಯ ಸಿಗುತ್ತದೆ. ಮೊದಲೇ ನಾವು ಹಿಂದುಳಿದ ಭಾಗದ ಹಿಂದುಳಿದ ಮನುಷ್ಯರು. ಹೀಗಾಗಿ, ನಮಗೆ ಮಾತನಾಡುವುದಕ್ಕೆ ಕಡಿಮೆ ಸಮಯ ಸಿಕ್ಕಿದರೆ ಸ್ವಲ್ಪ ಕಷ್ಟವಾಗುತ್ತದೆ. ಬೆಳಗಾವಿ ನಗರದಲ್ಲಿ ಒಂದು ಕಡೆ ಕರಾವಳಿ ಭಾಗ, ಇದು ತಮಗೂ ಗೊತ್ತಿದೆ. ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಮಳೆಯಾಗುತ್ತಿದೆ. ಈ ಕಡೆಗೆ ಗೋವಾದಲ್ಲಿಯೂ ಮಳೆಯಾಗುತ್ತಿದೆ. ನಮ್ಮ ಉತ್ತರಕ್ಕೆ ಮಹಾರಾಷ್ಟ್ರ ಇದೆ. ಅಲ್ಲಿಯೂ ಸಹ ಮಳೆಯಾಗುತ್ತಿದೆ. ಈ ರೀತಿ ಸಾಕಷ್ಟು ಮಳೆಯಾಗುತ್ತಿದೆ. ನಾವು ಸಿಕ್ಕಾಪಟ್ಟೆ ಎಂದು ಸಾಮಾನ್ಯ ಭಾಷೆಯಲ್ಲಿ ಹೇಳುತ್ತೇವೆ. ವಿಪರೀತ ಮಳೆ ಬರುತ್ತದೆ. ಈ ವಿಪರೀತ

ಮಳೆ ಬರುತ್ತಿರುವುದರಿಂದ, ಡೆಂಗ್ಯೂ ಕಾಯಿಲೆ ಬಹಳ ತೀವ್ರವಾಗಿ ಬೆಳಗಾವಿ ನಗರ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಹರಡುತ್ತಿದೆ ಎಂಬುದನ್ನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಬೆಳಗಾವಿ ನಗರದಲ್ಲಿ ಸುಮಾರು 20 ರಿಂದ 25 slum area ಗಳು ಇವೆ. ಈ slum area ಗಳಲ್ಲಿ ಇರುವಂತಹವರೆಲ್ಲರೂ ಬಡವರು ಇದ್ದಾರೆ. ಅವರಿಗೆ ಡೆಂಗ್ಯೂ ಅಥವಾ ಜ್ವರ ಬಂದರೆ, ಅವರು ಸರ್ಕಾರದ ಆಸ್ಪತ್ರೆಗಳನ್ನು ನೆಚ್ಚಿಕೊಂಡಿದ್ದಾರೆ. ಅವರು ಖಾಸಗಿ ಆಸ್ಪತ್ರೆಗಳಿಗೆ ಹೋಗುವುದಕ್ಕೆ ಅವರ ಬಳಿ ಹಣ ಇರುವುದಿಲ್ಲ. ಅವರು ದುಡಿಯುವ ವರ್ಗ. ನಾನು ಕಳೆದ ವಾರ ಶನಿವಾರ ಮತ್ತು ಭಾನುವಾರ ಬೆಳಗಾವಿಯಲ್ಲಿದ್ದೆ. ನಾನು ಸಂದರ್ಭದಲ್ಲಿ ಹಗಲು ವೇಳೆಯಲ್ಲಿಯೂ ಸಹ, mosquito repellent liquid ಅನ್ನು ಹಚ್ಚಿಕೊಂಡು ಮನೆಯಲ್ಲಿದ್ದೆ. ಅಂತಹ ಪರಿಸ್ಥಿತಿ ಅಲ್ಲಿದೆ. ಬೆಳಗಾವಿ ನಗರದಲ್ಲಿ ಎಲ್ಲಾ ಕಡೆಯೂ ಸಹ ಇದೆ, ನಮ್ಮ ಮನೆಯ ಮುಂದೆ ಎದುರಗಡೆ ಘಟರ್ ಅರಿದು ಹೋಗುತ್ತದೆ. ಅದನ್ನು Corporation ನವರು ಮುಚ್ಚುವುದಕ್ಕೆ ರೆಡಿ ಇಲ್ಲ. ಇನ್ನು ಬೆಳಗಾವಿ ನಗರದಲ್ಲಿ 1200 open sites ಗಳು ಇವೆ. ಈ open sites ಗಳಲ್ಲಿ garbage and unwanted plants ಬೆಳೆಯುತ್ತದೆ. ಆ open sites ಗಳಿಗೆ ಎಲ್ಲರೂ ಕಸ ತೆಗೆದುಕೊಂಡು ಹೋಗಿ ಹಾಕುತ್ತಾರೆ. ಮಳೆ ಬಂದಂತಹ ಸಂದರ್ಭದಲ್ಲಿ ಹೆಚ್ಚಿನ ಸಮಸ್ಯೆಗೆ ಇಡಾಗುತ್ತಿದೆ. ಹೀಗಾಗಿ ಬೆಳಗಾವಿ ನಗರದಲ್ಲಿ ಜಿಲ್ಲಾಡಳಿತ ಇರಬಹುದು, ವಿಶೇಷವಾಗಿ, ಮಹಾನಗರ ಪಾಲಿಕೆ ಇರಹುದು ಇವರು ಕೈಗೊಂಡಿರುವಂತಹ ಕ್ರಮಗಳು ತೃಪ್ತಿಕರವಾಗಿಲ್ಲ. ಅವರು fogging ಮಾಡಿದ್ದೇವೆಂದು ಹೇಳುತ್ತಾರೆ. ಆದರೆ, ಅವರು fogging ಮಾಡಿದ್ದನ್ನು ನಾವು ನೋಡಿಯೇ ಇಲ್ಲ. ಈಗ ಅಲ್ಲಿ ಮಳೆ ಬರುತ್ತಿದೆ. ಈ ರೀತಿ ಮಳೆ ಬಂದರೆ, ಅಲ್ಲಿ fogging ಹೇಗೆ ಇರುತ್ತದೆ? ಹೀಗಾಗಿ, ಅಲ್ಲಿ ಇದರ ಬಗ್ಗೆ ಕ್ರಮಗಳನ್ನು ಕೈಗೊಳ್ಳಬೇಕು. ಇಲ್ಲವೆಂದರೆ, ಅಲ್ಲಿ ಇರುವಂತಹ ಮಧ್ಯಮ ವರ್ಗದವರಿಗೆ ಹಾಗೂ ಬಡವರಿಗೆ ತೊಂದರೆಯಾಗುತ್ತದೆ ಎಂದು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ವಿಶೇಷವಾಗಿ ಬೆಳಗಾವಿ ನಗರದಲ್ಲಿ ಹೆಚ್ಚು ಮಳೆ ಬರುತ್ತಿದೆ. ಹಾಗಾಗಿ, ಮಾನ್ಯ ಸಚಿವರು ಹೆಚ್ಚು ಆಸಕ್ತಿ ತೋರಿಸಬೇಕು. ಮಾನ್ಯ ಸಚಿವರು ಅಲ್ಲಿನ ಜಿಲ್ಲಾಡಳಿತದವರಿಗೆ ಹಾಗೂ ಮಹಾನಗರ ಪಾಲಿಕೆಯವರಿಗೆ ಅಲ್ಲಿನ ಜನರ ಆರೋಗ್ಯದ ರಕ್ಷಣೆ ಬಗ್ಗೆ instructions ಕೊಡಬೇಕು. ಅಲ್ಲಿ ತುರ್ತು ಪರಿಸ್ಥಿತಿಯಲ್ಲಿ ಇದ್ದಂತೆ ಇದೆ. ನಮ್ಮ ಆರೋಗ್ಯ ದೃಷ್ಟಿಯಿಂದ. ಇಂತಹ ಸಂದರ್ಭದಲ್ಲಿ ಕ್ರಮಗಳನ್ನು ಕೈಗೊಳ್ಳಬೇಕೆಂದು ನಾನು ಮಾನ್ಯ ಸಭಾಪತಿಯವರಾದ ತಮ್ಮ ಮೂಲಕ ಮಾನ್ಯ ಸಚಿವರಿಗೆ ಒತ್ತಾಯ ಮಾಡುತ್ತೇನೆ.

**ಶ್ರೀ ಐವನ್ ಡಿ' ಸೋಜಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಯಲ್ಲಿ ಅತಿಹೆಚ್ಚು ಡೆಂಗ್ಯೂ ರೋಗ ಪತ್ತೆಯಾಗಿದೆ. ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾದ ಶ್ರೀ ದಿನೇಶ್ ಗುಂಡೂರಾವ್‌ರವರು ಇದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರರವರು ನಮ್ಮ ಜಿಲ್ಲೆಗೆ practical ಆಗಿ field ಗೆ ಹೋಗಿ ಎಂದು ಹೇಳಿದಾಗ, ನಾನು ನೆನಪಿಸಿಕೊಂಡೆ. ಬಹುಶಃ ನಮ್ಮನ್ನು ಕರೆಸಿಕೊಂಡು ಬಹಳಷ್ಟು ಸ್ಥಳಗಳಲ್ಲಿರುವ ಕಾರ್ಯಕರ್ತರನ್ನು ಭೇಟಿ ಮಾಡಿ ಚಿಕ್ಕ ಚಿಕ್ಕ ಮನೆಗಳಲ್ಲಿ ಯಾರು ನೀರನ್ನು ಸಂಗ್ರಹ ಮಾಡಿಕೊಂಡಿರುತ್ತಾರೆ, ಅದಕ್ಕೆ ಮದ್ದನ್ನು ಬಿಡುವುದರ ಮೂಲಕ, ಅವರಿಗೆ ಮಾಹಿತಿಯನ್ನು ಕೊಡುವುದಕ್ಕೆ ಶಿಬಿರಗಳನ್ನು ಏರ್ಪಾಡು ಮಾಡಿದ್ದಾರೆ. Larvae ಉತ್ಪತ್ತಿಯಾಗುವುದನ್ನು ತಡೆಯಬೇಕು. ಹೆಚ್ಚು ಮನೆಗಳ ಮೇಲಿನ terrace ಗಳಲ್ಲಿ ನೀರು ನಿಲ್ಲುತ್ತದೆ. ಸಾಧಾರಣವಾಗಿ ಅದರ ಯಾರು ಗೋಜಿಗೆ ಹೋಗುವುದಿಲ್ಲ. ಅದನ್ನು ಹಾಗೆಯೇ ಬಿಟ್ಟು ಬಿಡುತ್ತಾರೆ. ಅದರಲ್ಲಿ ಹೆಚ್ಚಾಗಿ larvae ಆಗುತ್ತದೆ. ಮಾನ್ಯ ಸಚಿವರು ಮಂಗಳೂರಿಗೆ ಭೇಟಿ ಕೊಟ್ಟು ಅವರಿಗೆ aware ಮೂಡಿಸುವಂತಹ ಕೆಲಸವನ್ನು ಮಂಗಳೂರು ಸುತ್ತಮುತ್ತಲೂ ಮಾಡಿದ್ದಾರೆ. ಹಾಗಾಗಿ, ಇದು ಮಂಗಳೂರಿನಲ್ಲಿ ನಿಯಂತ್ರಣಕ್ಕೆ ಬರುವುದಕ್ಕೆ ಸಾಧ್ಯವಾಯಿತು. ಮಂಗಳೂರಿನ Wenlock District Hospital ನಲ್ಲಿ ಅದಕ್ಕೆ ಪ್ರತ್ಯೇಕವಾಗಿ ವಾರ್ಡನ್ನು ತೆರೆಸಿ ಅದಕ್ಕೆ ಪರೀಕ್ಷೆ ಮಾಡುವಂತಹದ್ದಕ್ಕೆ ಅದರ ಪರಿಣಿತರನ್ನು ನೇಮಕ ಮಾಡುವಂತಹ ಕೆಲಸವನ್ನು ಮಾಡಿದ್ದಾರೆ. ಆದರೂ ಸಹ, ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಆ ರೋಗದಿಂದ ಕೈಕಾಲು ನೋವು ಬರುವುದಕ್ಕೆ ಪ್ರಾರಂಭವಾಗಿದೆ. ಯಾರು ಡೆಂಗ್ಯೂ ರೋಗಕ್ಕೆ ತುತ್ತಾಗಿ test ಆಗಿ positive ಇರುತ್ತಾರೆ, ಅವರಿಗೆ ಗಂಟು ನೋವುಗಳು ಪ್ರಾರಂಭವಾಗಿದೆ. ಇದಕ್ಕೆ ಸರಿಯಾದ ಮದ್ದು ಮತ್ತು ಚಿಕಿತ್ಸೆಯನ್ನು ಕೊಡುವಂತಹ ವ್ಯವಸ್ಥೆ ಮಾಡಬೇಕು. ನಮ್ಮಲ್ಲಿ ಅನೇಕ ಮೆಡಿಕಲ್ ಕಾಲೇಜುಗಳು ಮತ್ತು ಆಸ್ಪತ್ರೆಗಳು ಇವೆ. ಈ ಸಂದರ್ಭದಲ್ಲಿ ಇದೊಂದು ಅಂಟುರೋಗವಾಗಿರುವುದರಿಂದ ಡೆಂಗ್ಯೂ ರೋಗದಿಂದ ಬಳಲುವವರಿಗೆ ಸರ್ಕಾರಿ ಮೆಡಿಕಲ್ ಕಾಲೇಜು ಅಥವಾ ಆಸ್ಪತ್ರೆಗಳಲ್ಲಿ, Private Medical College and Hospital ಗಳಲ್ಲಿ ಚಿಕಿತ್ಸೆ ಕೊಡುವುದಕ್ಕೆ ಹೆಚ್ಚು ಸಿಬ್ಬಂದಿಗಳನ್ನು ಸಹ ಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೆಚ್ಚು ಸಿಬ್ಬಂದಿಗಳು ಆಗಿರಬಹುದು, ಆ ರೋಗಕ್ಕೆ ಬೇಕಾದಂತಹ ಮದ್ದು ಮಾತ್ರೆಗಳನ್ನು ಕೊಟ್ಟಿರುವುದಕ್ಕೆ ನಾನು ನಮ್ಮ ಜಿಲ್ಲೆ ಜನರ ಪರವಾಗಿ ಮಾನ್ಯ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ. ಈ ರೋಗ ಅತ್ಯಂತ ಹೆಚ್ಚಾಗಿ ಮಕ್ಕಳಲ್ಲಿ ಬರುತ್ತದೆ. ಮಕ್ಕಳ ಸೊಂಟದ ಕೆಳಗಡೆ ಈ ಸೊಳ್ಳೆ ಕಚ್ಚುತ್ತದೆ. ಆ ಸೊಳ್ಳೆ ಬಹಳ ಎತ್ತರಕ್ಕೆ ಹಾರುವುದಿಲ್ಲ. ಈಗಾಗಲೇ ಎಲ್ಲಾ ಖಾಸಗಿ ಶಾಲೆಗಳಲ್ಲಿ ಮಕ್ಕಳಿಗೆ Odomos mosquito repellent cream ಹಚ್ಚುವಂತೆ ಅಥವಾ Odomos Mosquito Repellent Patches ಹಾಕುವುದಕ್ಕೆ ಸೂಚನೆಯನ್ನು ಕೊಟ್ಟಿದ್ದಾರೆ. ಸರ್ಕಾರಿ ಶಾಲೆಗಳಿಗೆ ಎಲ್ಲಾ ಬಡ ಮಕ್ಕಳು ಬರುತ್ತಿರುತ್ತಾರೆ. ಅವರಿಗೆ ಅನುಕೂಲ ಇರುವುದಿಲ್ಲ. ದಯಮಾಡಿ ಸರ್ಕಾರದ ವತಿಯಿಂದ ಸರ್ಕಾರಿ ಶಾಲೆಗಳಲ್ಲಿ ಕಲ್ಲಿಯುವಂತಹ ಮಕ್ಕಳಿಗೆ ಸೊಳ್ಳೆ ಕಚ್ಚದ ರೀತಿಯಲ್ಲಿ Odomos mosquito repellent cream ಅನ್ನು ಕೊಡುವಂತಹದ್ದು ಅಥವಾ Odomos Mosquito Repellent Patches ಹಾಕುವಂತಹದ್ದು ಅಥವಾ ತರಗತಿಗಳ ಕೊಠಡಿಗಳಲ್ಲಿ mosquito coil ಇಡುವಂತಹದ್ದು ಆಗಬೇಕು. ಆಮೇಲೆ Fogging Machine ಬಗ್ಗೆ ಹೇಳಿದ್ದಾರೆ. ಆದರೆ, ಅದನ್ನು ಎಲ್ಲಿಯೂ ಸಹ fogging ಮಾಡಿರುವುದನ್ನು ನಾವು ನೋಡಿಲ್ಲ. ನಾನು ಶಿವಮೊಗ್ಗದಲ್ಲಿ KDP (Karnataka Development Programme) meeting ನಲ್ಲಿ ಕೇಳಿದೆ. ಅಲ್ಲಿಯೂ ಇಲ್ಲ ಎಂದು ಹೇಳಿದರು. ಆನಂತರದಲ್ಲಿ ಕೇಳಿದೆ. ಎಲ್ಲಿಯೂ ಇಲ್ಲ. ಈ ಬಗ್ಗೆ ಬೇಕಾದರೆ, ಬೇರೆ ಸದಸ್ಯರನ್ನು ಕೇಳಿ ಎಲ್ಲಿಯೂ ಸಹ ಆಗುತ್ತಿಲ್ಲ.

(ಮುಂದು)

(638) 23-07-2024 (4.40) ಎಂವಿ-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಭಾರತಿ ಶೆಟ್ಟಿ (ಮುಂದು):–**

ಮಾನ್ಯ ಸದಸ್ಯರು ಹೇಳಿದ ಹಾಗೆ ಶಾಲೆ ಪ್ರಾರಂಭವಾಗುವ ಒಂದು ಗಂಟೆ ಮುಂಚಿತವಾಗಿ ಎಲ್ಲಾ ಶಾಲೆಗಳಿಗೆ ಆ ರೀತಿ ಮಾಡಿದರೆ ಸೊಳ್ಳೆಯ ಸಂಖ್ಯೆ ಕಡಿಮೆಯಾಗುತ್ತದೆ. ಮೊನ್ನೆಯ ದಿವಸ ಬೆಂಗಳೂರಿನಲ್ಲಿ ನನ್ನ ಸ್ನೇಹಿತರ ಮಗುವನ್ನು ಪುನಃ ಆಸ್ಪತ್ರೆಗೆ ದಾಖಲು ಮಾಡಿದರು. ಡೆಂಗ್ಯೂಗೆ ಮಕ್ಕಳು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಒಳಗಾಗುತ್ತಾರೆ. ಮಾನ್ಯ ಸಚಿವರು ಬೇಕಾದರೆ ವೈದ್ಯರ ಬಳಿ ಅದರ ಮಾಹಿತಿ ಪಡೆದುಕೊಳ್ಳಲಿ. ಇದರಿಂದ ಮಕ್ಕಳು ತುಂಬಾ ಬಳಲುತ್ತಾರೆ. ಆದುದರಿಂದ, ಮಾನ್ಯ ಸಚಿವರು ಅದರ ಬಗ್ಗೆ ಗಮನಹರಿಸಲಿ.

**ಸಭಾಪತಿಯವರು:–** ಈ ವಿಷಯಕ್ಕೆ ಸಂಬಂಧಪಟ್ಟಂತೆ 42 ನಿಮಿಷಗಳ ಕಾಲ ಚರ್ಚೆಯಾಗಿದೆ.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೆ, ಇವತ್ತು ಏನು ಡೆಂಗ್ಯೂ ವಿಚಾರಕ್ಕೆ ಸಂಬಂಧಪಟ್ಟಂತೆ ವಿಧಾನ ಪರಿಷತ್ತಿನ ಸದಸ್ಯರಾದಂತಹ ಶ್ರೀ ಎಸ್.ವ್ಹಿ.ಸಂಕನೂರರವರು, ಶ್ರೀ ಕೆ.ಎ.ತಿಪ್ಪೇಸ್ವಾಮಿಯವರು, ಶ್ರೀ ಶಶೀಲ್ ಜಿ. 1ನಮೋಶಿಯವರು, ಡಾ: ಧನಂಜಯ ಸರ್ಜಿಯವರು ಮತ್ತೆ ಶ್ರೀಮತಿ ಭಾರತಿ ಶೆಟ್ಟಿಯವರು ಹಾಗೂ ಶ್ರೀ ಐವನ್ ಡಿ'ಸೋಜಾರವರು ಸೇರಿದಂತೆ ಹಲವಾರು ಜನ ಮಾನ್ಯ ಸದಸ್ಯರುಗಳು ಡೆಂಗ್ಯೂ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಸದಸ್ಯರುಗಳು ಖಂಡಿವಾಗಿಯೂ ಅತ್ಯಂತ ಪ್ರಮುಖವಾದ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಏಕೆಂದರೆ, ಈ ಡೆಂಗ್ಯೂವಿನ ಸಾಂಕ್ರಾಮಿಕ ರೋಗ ಏನಿದೆ, ಇವತ್ತಿನ ದಿವಸ ಇದು ರಾಜ್ಯದಲ್ಲಿ ಬಹಳ ಹೆಚ್ಚಾಗಿ ಹರಡಿರುವಂಥದ್ದು. ಮತ್ತೆ ಇದು ಮಳೆಗಾಲ ಇರುವವರೆಗೂ ಅಕ್ಟೋಬರ್ ತಿಂಗಳವರೆಗೂ ನಾವು ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ನಾವು ಏನು ಎಲ್ಲವನ್ನು ಮಾಡಿಬಿಟ್ಟಿದ್ದೇವೆ ಎಂದ ತಕ್ಷಣ ಎಲ್ಲವೂ ಸಹ ಸರಿಯಾಗಿಬಿಡುತ್ತದೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ನಾವು ದಿನನಿತ್ಯ ಇದರ ಬಗ್ಗೆ ವಾಚ್ ಅನ್ನು ಮಾಡಿಕೊಳ್ಳಬೇಕಾಗುತ್ತದೆ. ಮತ್ತೆ ಖಂಡಿತವಾಗಿ ಇದರ ಬಗ್ಗೆ ಗಮನವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಈಗಾಗಲೇ ಇದರ ಬಗ್ಗೆ ಹಲವಾರು ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಪ್ರಥಮವಾಗಿ ಈ ಡೆಂಗ್ಯೂ ಹೆಚ್ಚೆಚ್ಚು ಆಗುತ್ತಿದೆ. ಏಕೆಂದರೆ, ಈ ಡೆಂಗ್ಯೂ ನಮ್ಮಲ್ಲಿ ಶಾಶ್ವತವಾಗಿ ಇರುವಂಥದ್ದು. ಇದಕ್ಕೆ ನಾವು endemic ಎಂದು ಹೇಳುತ್ತೇವೆ. ಈ ಡೆಂಗ್ಯೂ ಒಂದು ಬಾರಿ ಹೆಚ್ಚಿಗೆ ಆಗುತ್ತದೆ. ಮತ್ತೊಮ್ಮೆ ಕಡಿಮೆಯಾಗುತ್ತದೆ. ಆದರೆ, ಅದು ನಮ್ಮಲ್ಲಿ ಯಾವಾಗಲೂ ಸಹ ಇರುತ್ತದೆ. ಇದು ನಮ್ಮ ರಾಜ್ಯದಲ್ಲಿ ಇರುವಂತಹ ಒಂದು ಪರಿಸ್ಥಿತಿ. ಇವತ್ತಿನ ದಿವಸ ಇದು ಹೆಚ್ಚಾಗಿ ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಹೆಚ್ಚಿನ ಪ್ರಕರಣಗಳು ಕಾಣುತ್ತಿರುವಂಥದ್ದು. ಅದು ಬೇರೆ ರಾಜ್ಯಗಳಲ್ಲಿ ಇದ್ದರೂ ಕೂಡ ಬಹುಶಃ ಅದು ಬೇರೆ ಬೇರೆ ಯಾವ ಕಾರಣಗಳಿಂದ ಅದು ಕಡಿಮೆ ಇದೆ ಎಂದು ನನಗೆ ಗೊತ್ತಿಲ್ಲ. ನಮ್ಮ ರಾಜ್ಯದಲ್ಲಿ ಹೆಚ್ಚು ಟೆಸ್ಟ್‌ಗಳನ್ನು ಸಹ ಮಾಡುತ್ತಿದ್ದೇವೆ. ಇದರಿಂದ ನಮಗೆ ಹೆಚ್ಚು ಪಾಸಿಟಿವ್ ಕೇಸ್‌ಗಳ ಬಗ್ಗೆ ಗೊತ್ತಾಗುತ್ತಿದೆ. ನಾವು ಡೆಂಗ್ಯೂವನ್ನು notify ಮಾಡಿದ್ದೇವೆ. ಈಗ ಖಾಸಗಿ ಆಸ್ಪತ್ರೆಗಳಲ್ಲಿ ಆಗಲಿ ಅಥವಾ ನಮ್ಮ ಆಸ್ಪತ್ರೆಗಳಲ್ಲಿ ಆಗಲಿ, ಡೆಂಗ್ಯೂ ಪಾಸಿಟಿವ್ ಇದ್ದರೆ ನಮಗೆ notify ಮಾಡಲೇಬೇಕು ಎಂದು ಹೇಳಿರತಕ್ಕಂಥದ್ದು. ನಾವು ದಿನನಿತ್ಯ ಎಲ್ಲಾ ಮಾಹಿತಿಯನ್ನು

ಸ್ಪಷ್ಟವಾಗಿ ಜನರ ಮುಂದೆ ಇಡುತ್ತಿದ್ದೇವೆ. ಯಾವುದನ್ನು ಸಹ ಮುಚ್ಚಿ ಹಾಕುವಂತಹ ಪ್ರಶ್ನೆ ಬರುವುದೇ ಇಲ್ಲ. ದಿನನಿತ್ಯದ ಏನು ಡೇಟಾ ಇದೆ, ಅಂದರೆ, ಇವತ್ತು ಎಷ್ಟು ಜನರಿಗೆ ಡೆಂಗ್ಯೂ ಪಾಸಿಟಿವ್ ಬಂದಿದೆ? ಎಷ್ಟು ಪ್ರಕರಣಗಳಲ್ಲಿ ಜನರು ಆಸ್ಪತ್ರೆಯಲ್ಲಿದ್ದಾರೆ? ಎಷ್ಟು ಜನರು ಐ.ಸಿ.ಯು.ನಲ್ಲಿದ್ದಾರೆ? ಮತ್ತೆ ಅವರ ವಯಸ್ಸನ್ನು ಕೂಡ ನಮೂದಿಸುತ್ತಿದ್ದೇವೆ. ಒಂದು ವರ್ಷದ ಒಳಗೆ ಇರುವಂತಹ ಮಕ್ಕಳು ಎಷ್ಟು ಜನರಿದ್ದಾರೆ? ಒಂದರಿಂದ ಹದಿನೆಂಟು ವರ್ಷ ಇರುವಂತಹ ಮಕ್ಕಳು ಎಷ್ಟು ಜನರು ಇದ್ದಾರೆ? ಮತ್ತೆ ಹದಿನೆಂಟರಿಂದ ಮೇಲ್ಪಟ್ಟಂತಹವರು ಎಷ್ಟು ಜನರು ಇದ್ದಾರೆ? ನಾವು ಇದೆಲ್ಲಾ ಮಾಹಿತಿಯನ್ನು ಕೊಡುತ್ತಲೇ ಇದ್ದೇವೆ.

**ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಮಾಹಿತಿಯನ್ನು ಹೇಳುತ್ತಿದ್ದಾರೆ. ಆದರೆ, ಅದು ಬಹಳ under reporting ಆಗುತ್ತಿದೆ. ಆದರೆ, ಅವುಗಳ samples ಬರುತ್ತಿಲ್ಲ.

**ಶ್ರೀ ದಿನೇಶ್ ಗುಂಡೂರಾವ್:–** ಮಾನ್ಯ ಸಭಾಪತಿಯವರೆ, ನಾವು ಉದ್ದೇಶಪೂರ್ವಕವಾಗಿ ಯಾವುದನ್ನು ನಿಲ್ಲಸುತ್ತಿಲ್ಲ.

**ಡಾ: ಧನಂಜಯ ಸರ್ಜಿ:–** ಮಾನ್ಯ ಸಭಾಪತಿಯವರೆ, ಅವರು ಉದ್ದೇಶಪೂರ್ವಕವಾಗಿ ನಿಲ್ಲಿಸುತ್ತಿಲ್ಲ. ಆದರೆ, samples ಬರುತ್ತಿಲ್ಲ.

**ಶ್ರೀ ದಿನೇಶ್ ಗುಂಡೂರಾವ್:–** ಮಾನ್ಯ ಸಭಾಪತಿಯವರೆ, ನಾವು ಉದ್ದೇಶಪೂರ್ವಕವಾಗಿ ಯಾವುದನ್ನು ಸಹ under report ಮಾಡುತ್ತಿಲ್ಲ. ನಾವು ಆ ರೀತಿ ಏಕೆ ಮಾಡಬೇಕು? ನಮಗೆ ಅದನ್ನು ಆ ರೀತಿ ಮುಚ್ಚಿ ಹಾಕಬೇಕು ಎನ್ನುವಂತಹ ಉದ್ದೇಶವೇನೂ ಇಲ್ಲ.

**ಡಾ: ಧನಂಜಯ ಸರ್ಜಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು samples ಅನ್ನು ಜಾಸ್ತಿ ತರಿಸುವುದಕ್ಕೆ ದಯವಿಟ್ಟು ಆರ್ಡರ್ ಮಾಡಲಿ.

**ಸಭಾಪತಿಯವರು:–** ಡಾ: ಧನಂಜಯ ಸರ್ಜಿಯವರೆ, ಮಾನ್ಯ ಸಚಿವರು ಉತ್ತರ ಹೇಳಲಿ ಬಿಡಿ. ತಾವು ಮಾನ್ಯ ಸಚಿವರು ಹೇಳುವುದನ್ನು ಕೇಳಿ.

**ಶ್ರೀ ದಿನೇಶ್ ಗುಂಡೂರಾವ್:–** ಮಾನ್ಯ ಸಭಾಪತಿಯವರೆ, ನಾನು ಹೇಳುವುದನ್ನು ಮಾನ್ಯ ಸದಸ್ಯರು ತಾಳ್ಮೆಯಿಂದ ಕೇಳುವಂತೆ ಹೇಳಿ. ಈಗ ನಮ್ಮಲ್ಲಿ ಒಟ್ಟು 16,632 ಪ್ರಕರಣಗಳು

ವರದಿಯಾಗಿವೆ. ಈಗ ಅವುಗಳಲ್ಲಿ ಸಕ್ರಿಯವಾಗಿರುವಂತಹ ಪ್ರಕರಣಗಳ ಸಂಖ್ಯೆ 3,402 ಎಂದು ಇದೆ. ಈ 3,402 ಪ್ರಕರಣಗಳಲ್ಲಿ ಆಸ್ಪತ್ರೆಯಲ್ಲಿ ದಾಖಲಾಗಿರುವಂತಹವರ ಸಂಖ್ಯೆ 523 ಪ್ರಕರಣಗಳು. ಮತ್ತೆ ಐ.ಸಿ.ಯು.ನಲ್ಲಿ 13 ಜನರು ಇದ್ದಾರೆ; ಇದು ಇಡೀ ರಾಜ್ಯದಲ್ಲಿ as of yesterday. ಆದುದರಿಂದ, ಇದು ನಮ್ಮ ಬಳಿ ಇರುವಂತಹ ಮಾಹಿತಿ. ಮಾನ್ಯ ಸದಸ್ಯರು ಇದು ಸರಿಯಿಲ್ಲವೆಂದು ಹೇಳಿದರೆ, ನಮ್ಮ ಬಳಿ ಬೇರೆ ಮಾಹಿತಿ ಇಲ್ಲ. ಮತ್ತೊಂದು ವಿಚಾರ ಏನಂದರೆ, ಅನೇಕ ಜನರು ಯಾವುದೇ ರೀತಿಯ ಜ್ವರ ಬಂದರೆ ಅವರು ಪ್ರಥಮವಾಗಿ ತಿಳಿದುಕೊಳ್ಳುವುದು ಅದು ಡೆಂಗ್ಯೂ ಎಂದು. ಈಗ ಎಲ್ಲರ ಮನಸ್ಸಿನಲ್ಲಿ ಏನು ಬಂದಿದೆ ಎಂದರೆ, ಅದು ಬೇರೆ ಕಾಯಿಲೆಯಾಗಿದ್ದರೂ ಕೂಡ ಜ್ವರ ಬಂದ ತಕ್ಷಣ ಅವರು ಮೊದಲು ಯೋಚನೆ ಮಾಡುವುದು ಡೆಂಗ್ಯೂ ಬಂದಿದೆ ಎಂದು. ಅದು ELISA (Enzyme-Linked Immunoassay) Test positive ಬಂದಾಗ ಮಾತ್ರ ಅದು ಡೆಂಗ್ಯೂ ಎಂದು ನಾವು ಅದನ್ನು ಪರಿಗಣಿಸುತ್ತೇವೆ. ಆ ELISA Test positive ಬರಬೇಕು. ಆದುದರಿಂದ, ಆ ಟೆಸ್ಟ್ ಪಾಸಿಟಿವ್ ಬಂದಾಗ ಇದು confirmed dengue ಎಂದು ಆಗುತ್ತದೆ. ಈಗ ಬೇರೆ ಬೇರೆ ಕಾಯಿಲೆಗಳು ಇರುವಂಥದ್ದು ಇರುತ್ತದೆ. ಆ ಆಧಾರದ ಮೇಲೆ ನಮ್ಮ ಬಳಿ ಇರುವಂತಹ ಮಾಹಿತಿ. ಈಗ ಇದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತಿರುವಂಥದ್ದು. ಆದುದರಿಂದ, ಇವತ್ತು ನಾವು ಎಲ್ಲಾ ರೀತಿಯ ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳುವಂಥದ್ದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದ್ದೇವೆ. ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರರವರು ಸಹ ಹೇಳಿದರು. ಅಂದರೆ, ಎಲ್ಲರ ಜೊತೆ ಸಭೆಗಳನ್ನು ನಡೆಸಿದ್ದೇವೆ. ಅಪರ ಮುಖ್ಯ ಕಾರ್ಯದರ್ಶಿ, ಮುಖ್ಯ ಕಾರ್ಯದರ್ಶಿ, ಮಾನ್ಯ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಮತ್ತೆ ನನ್ನ ಸಮ್ಮುಖದಲ್ಲಿ, ಜಿಲ್ಲಾಧಿಕಾರಿಗಳ ಜೊತೆ, ಜಿಲ್ಲಾ ಪಂಚಾಯತ್‌ನ ಕಾರ್ಯನಿರ್ವಹಣಾ ಅಧಿಕಾರಿಗಳ ಜೊತೆ, ನಗರಪಾಲಿಕೆ ಆಯುಕ್ತರ ಜೊತೆ ಈ ರೀತಿ ನಾವು ಎಲ್ಲರ ಜೊತೆಯಲ್ಲಿ ಸಭೆಗಳನ್ನು ಮಾಡಿ, ಈ ರೀತಿಯ ಪರಿಸ್ಥಿತಿ ಇದೆ. ಆದುದರಿಂದ, ತಮ್ಮ ಪ್ರದೇಶಗಳಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕೆಂದು ತಿಳಿಸಿದ್ದೇವೆ. ಅದಕ್ಕೆ ಗೈಡ್‌ಲೈನ್ಸ್ ಸಹ ಇದೆ. ರಾಷ್ಟ್ರಮಟ್ಟದಲ್ಲಿ ಕೇಂದ್ರ ಸರ್ಕಾರದಿಂದ ಬರುವಂತಹ ಗೈಡ್‌ಲೈನ್ಸ್ ಸಹ ಇದೆ. ಅದರ ಬಗ್ಗೆ ಎಲ್ಲರಿಗೂ ಸಹ ತಿಳುವಳಿಕೆಯನ್ನು ಹೇಳಿದ್ದೇವೆ. ಅದೇ ರೀತಿಯಾಗಿ ನಾವು ಮಾನ್ಯ ಮುಖ್ಯಮಂತ್ರಿಗಳ ಸಭೆಯಲ್ಲಿ ಪ್ರತಿ ಶುಕ್ರವಾರ ಈ 'Larva ನಿರ್ಮೂಲನಾ ದಿನ' ಎಂದು

ಮಾಡಬೇಕೆಂದು ತೀರ್ಮಾನವಾಗಿದೆ. ಅದನ್ನು ಸಹ implementation ಮಾಡುವಂಥದ್ದು, 'Notifiable Disease' ಎಂದು ಮಾಡುವುದು ಮತ್ತು ಅಗತ್ಯವಿರುವಂತಹ ಏನೇನೂ ಔಷಧಿಗಳವೆ ಅವುಗಳ ಬಗ್ಗೆ ಮಾನ್ಯ ಸದಸ್ಯರುಗಳು ಸಹ ಹೇಳಿದ್ದಾರೆ, ನಾವು ಎಲ್ಲವನ್ನು ಸಹ ಕೊಡಿಸಿದ್ದೇವೆ. ಅದರ ಬಗ್ಗೆ ಎಲ್ಲೂ ಸಹ ಕೊರತೆ ಇಲ್ಲ. ಅದು blood components ಇರಬಹುದು, platelets ಇರಬಹುದು. ಏಕೆಂದರೆ, ಡೆಂಗ್ಯೂಗೆ ಬೇರೆ ಏನೂ ನಿವಾರಣೆ ಇಲ್ಲ. ಅದಕ್ಕೆ ಒಂದು ಮದ್ದನ್ನು ಕೊಟ್ಟುಬಿಟ್ಟು, ನಾವು ಅದನ್ನು ಗುಣಪಡಿಸಬಹುದು ಎಂದು ಏನೂ ಇಲ್ಲ. ಅದಕ್ಕೆ paracetamol ಕೊಡುತ್ತೇವೆ. ಅದು ತೀವ್ರತೆಗೆ ಹೋದಾಗ, ಅವರಿಗೆ IV fluids ಮತ್ತೆ blood platelets count ಕಡಿಮೆಯಾದಾಗ, ಆ platelets ಗಳನ್ನು ಕೊಡುವಂಥದ್ದನ್ನು ನಾವು ಮಾಡಬಹುದು. ಬೇರೆಯದಕ್ಕೆ special ಆಗಿ ಯಾವುದೋ ಔಷಧಿ ಕೊಟ್ಟುಬಿಟ್ಟರೆ ಅಥವಾ ಒಂದು vaccine ಕೊಟ್ಟುಬಿಟ್ಟರೆ ಅದು ಸರಿ ಹೋಗುತ್ತದೆ ಎಂಬುದು ಏನೂ ಇಲ್ಲ. ನಾವು ಈ ರೀತಿಯಾಗಿ ಮಾಡಿಕೊಂಡು ಬಂದಿದ್ದೇವೆ. ಈಗ Government of India ಹೇಳುವಂತೆ ಏನು confirmed death rate ಬಂದಾಗ, case fatality rate ಎಂದು ಬರುತ್ತದೆ. ಆ case fatality rate ೦.5% ಗಿಂತ ಹೆಚ್ಚಿಗೆ ಇರಬಾರದು. Total cases ನಲ್ಲಿ ಎಷ್ಟು death ಆಗಿದೆ ಎಂದು. ನಾನು ಇದನ್ನು ಹೆಗ್ಗಳಿಕೆಯಿಂದ ಹೇಳುತ್ತಿಲ್ಲ. ನಮ್ಮಲ್ಲಿ ಒಂದು death ಕೂಡ ಆಗಬಾರದು. ಈಗ ಹತ್ತು ಸಾವು ಆಗಿರುವುದೇ ನೋವಿನ ಸಂಗತಿಯಾಗಿದೆ. ನಮ್ಮಲ್ಲಿ ಒಂದೂ ಕೂಡ ಸಾವು ಆಗಬಾರದು. ಈಗ ನಮ್ಮಲ್ಲಿ ಇರುವಂಥದ್ದು ೦.೦7. Total number of cases ಗೂ ಎಷ್ಟು deaths ಆಗಿದೆ ಎಂಬ ಮಾಹಿತಿ ಇದೆ. ಈಗ ನಮ್ಮ ಇಲಾಖೆಯಿಂದ ಆಶಾ ಕಾರ್ಯಕರ್ತೆಯರು, ಆರೋಗ್ಯ ಕಾರ್ಯಕರ್ತರು ಮತ್ತೆ ಬೇರೆ ಬೇರೆ ಕಡೆ ಕೆಲವು volunteers ನ್ನು ಸಹ ತೆಗೆದುಕೊಂಡಿದ್ದೇವೆ. ಅವರಿಗೆ incentive ರೀತಿಯಲ್ಲಿ ರೂ.3೦೦ಗಳನ್ನು ಕೊಟ್ಟು, ಅವರನ್ನು ಉಪಯೋಗಿಸುವಂತಹ ಕೆಲಸ ಮಾಡಿದ್ದೇವೆ. ಅವರು ಎಲ್ಲಾ ಕಡೆಗಳಲ್ಲಿ ಭೇಟಿ ನೀಡಬೇಕು. ಅವರು ಭೇಟಿ ನೀಡಿ, ಅದರಲ್ಲೂ ಕೂಡ ಬಡವರು ಇರುವಂತಹ ಪ್ರದೇಶಗಳು ಮತ್ತು ಸ್ಲಮ್‌ಗಳು ಮತ್ತೆ ಗ್ರಾಮಾಂತರ ಪ್ರದೇಶದ ಎಲ್ಲಾ ಹಳ್ಳಿಗಳಿಗೆ ಹೋಗಿ, ಅವರು ಎಲ್ಲರಿಗೂ educate ಮಾಡುವಂತಹ ಕೆಲಸ ಮಾಡುತ್ತಿದ್ದಾರೆ. ಇದರ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಈಗ ನೀರನ್ನು ಶೇಖರಣೆ ಮಾಡಿದಾಗ, ಅದಕ್ಕೆ ಮುಚ್ಚಳ ಹಾಕುವಂತಹ ವ್ಯವಸ್ಥೆ

ಇರಬೇಕು. ಅದನ್ನು ಓಪನ್ ಆಗಿ ಇಟ್ಟಿರಬಾರದು. ಮತ್ತೆ ನೀರು ಹೆಚ್ಚು ಕಾಲ ಹಾಗೆಯೇ ಇರಬಾರದು. ಅದು ಬಳಕೆಯಾಗುತ್ತಾ ಇದ್ದರೆ, ಆಗ ಮೊಟ್ಟೆ ಇಡುವಂಥದ್ದು ಮತ್ತು larva ಉತ್ಪತ್ತಿ ಆಗುವಂಥದ್ದು ಆಗುವುದಿಲ್ಲ. ಈ ರೀತಿ ಮಾಹಿತಿ ಮತ್ತು ಜಾಗೃತಿ ಮೂಡಿಸುವಂತಹ ಕೆಲಸವನ್ನು ಆಶಾ ಕಾರ್ಯಕರ್ತೆಯರು ಮತ್ತೆ ಬೇರೆ ಇಲಾಖೆಯವರು ಮತ್ತು ಅಂಗನವಾಡಿಯ ಕಾರ್ಯಕರ್ತರನ್ನು ಸಹ ಉಪಯೋಗಿಸಿಕೊಂಡು ಮಾಡುತ್ತಿದ್ದೇವೆ. ಬೆಂಗಳೂರು ನಗರ ಪ್ರದೇಶದಲ್ಲಿ ಆಶಾ ಕಾರ್ಯಕರ್ತೆಯರು ಬಹಳ ಕಡಿಮೆ ಇರುತ್ತಾರೆ. ಅದಕ್ಕೆ ಮುನ್ಸಿಪಾಲಿಟಿಯ ಜನರನ್ನು ಉಪಯೋಗಿಸಿಕೊಂಡು ಕೆಲಸ ಮಾಡಿದ್ದೇವೆ. ಸಾಕಷ್ಟು ಎಲ್ಲಾ ಮನೆಗಳಿಗೂ ಸಹ ಭೇಟಿ ಕೊಟ್ಟು educate ಮಾಡುವಂಥದ್ದನ್ನು ಮಾಡಿದ್ದೇವೆ. ಅದೇ ರೀತಿ ಎಲ್ಲಾ ಶಾಲೆಗಳ ಶಾಲಾ ಶಿಕ್ಷಕರನ್ನು ಭೇಟಿ ಮಾಡಿ, ನೀರು ಶೇಖರಣೆಯಾಗದಂತೆ ಯಾವ ರೀತಿ ಇಟ್ಟುಕೊಳ್ಳಬೇಕೆಂದು ಶಾಲೆಗಳಲ್ಲಿ ಮಕ್ಕಳಿಗೆ ತಿಳಿಸಿದ್ದೇವೆ. ಏಕೆಂದರೆ, ಇದು ಮಕ್ಕಳಿಗೆ ಆಗುವಂಥದ್ದು ಇರುತ್ತದೆ. ಇದು ಹಗಲಿನ ಹೊತ್ತಿನಲ್ಲಿ ಹೆಚ್ಚು ಕಚ್ಚುವುದರಿಂದ ಆ ಶಾಲೆಗಳಲ್ಲಿ ಆ ವ್ಯವಸ್ಥೆಯನ್ನು ಸ್ವಲ್ಪ ನೋಡಿಕೊಳ್ಳಬೇಕೆಂದು ಹೇಳಿದ್ದೇವೆ. ಪ್ರತಿಯೊಂದು ಶಾಲೆಗಳಿಗೂ ಕೂಡ ನಮ್ಮ Health Officers ಮತ್ತು workers ಗಳು ಅಲ್ಲಿಗೆ ಭೇಟಿ ಕೊಟ್ಟು, ಇದರ ಬಗ್ಗೆ ತಿಳಿಸಿದ್ದಾರೆ. ಅದರಲ್ಲೂ ವಿಶೇಷವಾಗಿ Science Teacher ಗಳು ಇದ್ದರೆ, ಅವರಿಗೆ ಇನ್ನು ಹೆಚ್ಚಿನ ವಿಷಯವನ್ನು ತಿಳಿಸಿ, ಮಕ್ಕಳಿಗೆ ಹೇಳಿಕೊಡುವಂತಹ ಕೆಲಸವನ್ನು ಕೂಡ ಮಾಡಿದ್ದೇವೆ. ಈಗ ಎಲ್ಲಿಯಾದರೂ ಒಂದು ಪ್ರದೇಶದಲ್ಲಿ ಎರಡು ಡೆಂಗ್ಯೂ ಪ್ರಕರಣ ಪಾಸಿಟಿವ್ ಬಂದರೆ, ಆ ಒಂದು ಪ್ರದೇಶವನ್ನು 'Hotspot' ಎಂದು ಘೋಷಿಸುತ್ತಿದ್ದೇವೆ. ಆ ರೀತಿ 'Hotspot' ಎಂದು ಮಾಡಿ, ಅಲ್ಲಿ ಸುತ್ತಮುತ್ತ ಇರುವಂತಹ ಎಲ್ಲಾ ಮನೆಗಳಿಗೆ ಭೇಟಿ ಕೊಟ್ಟು, ಅಲ್ಲಿ ಬೇರೆ ಯಾರಿಗಾದರೂ ಈ ರೀತಿಯ symptoms ಇದೆಯೆ; ಜ್ವರ ಇದೆಯೇ? ಎಂದು ಈ ಎಲ್ಲವನ್ನು ಕೂಡ ಪರಿಶೀಲನೆ ಮಾಡವಂತಹ ಕೆಲಸವನ್ನು ಮಾಡಿದ್ದೇವೆ. ಮತ್ತೆ ಅಲ್ಲಿ ಹೆಚ್ಚು ಪ್ರಕರಣಗಳು ಬರುತ್ತಿವೆ ಎನಿಸಿದಾಗ, ಅಲ್ಲಿ Fever Clinic ಗಳನ್ನು ಸಹ ಮಾಡಿಸುತ್ತಿದ್ದೇವೆ. ಅಲ್ಲಿ ಬೇರೆ ಯಾವುದೇ ರೀತಿಯ symptoms ಇದ್ದರೆ ಮತ್ತೆ ಜ್ವರ ಇದ್ದರೆ, ಅವರನ್ನು ಅಲ್ಲಿಯೇ ಟೆಸ್ಟ್ ಮತ್ತು ಪರೀಕ್ಷಿಸಿಸಲು Fever Clinic ಗಳನ್ನು ಸ್ಥಾಪನೆ ಮಾಡುವುದಕ್ಕೆ ಹೇಳಿದ್ದೇವೆ.

(ಮುಂದು)

(639) 23.07.2024 04.50 LL-AK (ಸಭಾಪತಿಯವರ ಉಪಸ್ಥಿತಿ)

**ಶ್ರೀ ದಿನೇಶ್ ಗುಂಡೂರಾವ್ (ಮುಂದು):**

ಅಂದರೆ, ಹಾಟ್‌ಸ್ಪಾಟ್ ಇರುವಂತಹ ಪ್ರದೇಶಗಳಲ್ಲಿ ಮಾತ್ರ, ಫೀವರ್ ಕ್ಲಿನಿಕ್‌ಗಳನ್ನು ಪ್ರಾರಂಭ ಮಾಡಿಸಿರುತ್ತೇವೆ. ಈ ರೀತಿಯಾಗಿ ಒಂದು ವಾರ್ ರೂಮ್ ಅನ್ನು ಮಾಡಿದ್ದೇವೆ. ಜಿಲ್ಲಾ ಮಟ್ಟದಲ್ಲಿ ಕಂಟ್ರೋಲ್ ರೂಮ್‌ಗಳನ್ನು ಮಾಡಿದ್ದೇವೆ. ಇದರಿಂದಾಗಿ, ಸಂಪೂರ್ಣ ಮಾಹಿತಿ ನಮ್ಮಿಂದ ಅವರಿಗೆ ಮತ್ತು ಅವರಿಂದ ಏನು ಮಾಹಿತಿ ಇರುತ್ತದೆ, ಅದನ್ನು ನಮಗೆ ತಿಳಿಸುತ್ತಿರುತ್ತಾರೆ. ಈ ರೀತಿಯ ಅಗತ್ಯ ಕ್ರಮಗಳನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ.

ಇನ್ನು ಅನೇಕ ಮಾನ್ಯ ಸದಸ್ಯರು ಸೊಳ್ಳೆ ನಿಯಂತ್ರಣಕ್ಕೆ ಫಾಗಿಂಗ್ ಅನ್ನು ಮಾಡುತ್ತಿಲ್ಲವೆಂದು ಹೇಳುತ್ತಿದ್ದಾರೆ. ಆದರೆ, ಫಾಗಿಂಗ್ ನಿಂದ ಡೆಂಗ್ಯೂ ಸೊಳ್ಳೆ ನಿಯಂತ್ರಣಕ್ಕೆ ಹೆಚ್ಚು ಪರಿಣಾಮ ಆಗುವುದಿಲ್ಲ. ಏಕೆಂದರೆ, ಫಾಗಿಂಗ್ ಜನರಿಗೆ ಒಂದು ರೀತಿಯ ಧೈರ್ಯ ತುಂಬಿಸುವಂತಹ ಕೆಲಸವಾಗಿದೆ. ಬದಲಾಗಿ, ಆ ಕಾಯಿಲೆ ಹರಡುವ ಸೊಳ್ಳೆಯನ್ನು/ಲಾರ್ವಾವನ್ನು ನಾವು ಸಾಯಿಸಬೇಕು. ಅಂದರೆ, source reduction ಬಹಳ ಮುಖ್ಯವಾಗಿರುತ್ತದೆ. ಅಂದರೆ, ಲಾರ್ವಾ ಉತ್ಪಾದನೆಗೆ ಒಳ್ಳೆಯ ಶುದ್ಧ ನೀರು ಬೇಕು. ಜೊತೆಗೆ, ಈ ರೀತಿಯ ವಾತಾವರಣ ಇದ್ದರೆ, ಅದಕ್ಕೆ ಇನ್ನು ಒಳ್ಳೆಯದು. ಅಂದರೆ, ಜಾಸ್ತಿ ಸೆಕೆ ಇರಬಾರದು ಮತ್ತು ಜಾಸ್ತಿ ಚಳಿ ಕೂಡ ಇರಬಾರದು ಮತ್ತು ಶುದ್ಧ ನೀರು ಇರಬೇಕು. ಹಾಗಾಗಿ, ಪ್ರಸ್ತುತ ವಾತಾವರಣ ಡೆಂಗ್ಯೂ ಸೊಳ್ಳೆಗೆ ಬಹಳ ಅನುಕೂಲವಾಗಿದೆ. ಆದುದರಿಂದ, ನಾವು ಲಾರ್ವಾ ಸ್ಪೈಡರ್‌ಗಳನ್ನು ಉಪಯೋಗಿಸಿ ಲಾರ್ವಾಗಳನ್ನು ನಾಶ ಮಾಡುವಂತಹ ಕೆಲಸ ಮಾಡಿದಾಗ ಮಾತ್ರ ಅದು ನಿಯಂತ್ರಣಕ್ಕೆ ಬರುತ್ತದೆಯೇ ಹೊರತು, ಫಾಗಿಂಗ್‌ನಿಂದ ಸಂಪೂರ್ಣ ನಿಯಂತ್ರಣಕ್ಕೆ ಬರುವುದಿಲ್ಲ. ಅಲ್ಲದೇ, ಫಾಗಿಂಗ್ ಮಾಡುವುದು ನಮ್ಮ ಆರೋಗ್ಯಕ್ಕೂ ಕೂಡ ಒಳ್ಳೆಯದಲ್ಲ. ದಿನನಿತ್ಯ ಫಾಗಿಂಗ್ ಮಾಡುವುದು ಮನುಷ್ಯರ ಆರೋಗ್ಯಕ್ಕೆ ಒಳ್ಳೆಯದಲ್ಲ ಮತ್ತು ಅದರಿಂದಾಗಿ ಡೆಂಗ್ಯೂ ಸೊಳ್ಳೆಗೆ ಅಷ್ಟು ದೊಡ್ಡ ಪರಿಣಾಮ ಬೀರುವುದಿಲ್ಲ. ಈಗ ಈ ಸದನದ ಸದಸ್ಯರಾಗಿರುವಂತಹ ಮತ್ತು ಈ ಹಿಂದೆ ಡಿಹೆಚ್‌ಓ ಆಗಿದ್ದಂತಹ ಡಾ: ಡಿ.

ತಿಮ್ಮಯ್ಯನವರಿಗೆ ಬಹಳ ಚೆನ್ನಾಗಿ ಗೊತ್ತಿರುತ್ತದೆ. ಬಹುಶಃ ಈ ಸದನದಲ್ಲಿ ಬೇರೆ ವೈದ್ಯರು ಇರಬಹುದು. ಅದು ನನಗೆ ಗೊತ್ತಿಲ್ಲ. ಈ ರೀತಿಯಾಗಿ ನಾವು ಖಂಡಿತವಾಗಿಯೂ ಡೆಂಗ್ಯೂ ಜ್ವರವನ್ನು ಬಹಳ ಗಂಭೀರವಾಗಿ ಪರಿಗಣಿಸಿ, ಎಲ್ಲಾ ರೀತಿಯಲ್ಲಿಯೂ ಕೂಡ ಈ ರೋಗವನ್ನು ನಿಯಂತ್ರಣ ಮಾಡುವಂತಹ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಎಲ್ಲೆಲ್ಲಿ ಬಡವರು ಇದ್ದಾರೆ, ಅಂತಹ ಪ್ರದೇಶಗಳಲ್ಲಿ ಯಾರಿಗಾದರೂ ಡೆಂಗ್ಯೂ ಪಾಸಿಟಿವ್ ಬಂದರೆ, ಆ ಸುತ್ತಮುತ್ತಲೂ ಇರುವಂತಹ ಜನರಿಗೆ repellent ಕೊಡತಕ್ಕಂಥದ್ದಕ್ಕೆ ನಾವು ಸೂಚನೆ ನೀಡಿರುತ್ತೇವೆ. ಅವರು ಸ್ಥಳೀಯವಾಗಿ ಅದೆಲ್ಲವನ್ನೂ ತೆಗೆದುಕೊಳ್ಳಬಹುದಾಗಿದೆ. ಇದರ ಜೊತೆಗೆ, citronella oil ಎಂದು ಬರುತ್ತದೆ ಮತ್ತು DEET (N,N-diethyl-meta-toluamide) ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದು, DEET ಆಧಾರಿತ ಕ್ರೀಮ್‌ಗಳನ್ನು ಬಡವರು ಇರುವಂತಹ ಪ್ರದೇಶಗಳಲ್ಲಿ ಜನರಿಗೆ ಹಂಚಿಕೆ ಮಾಡಬೇಕೆಂದು ಸಂಬಂಧಪಟ್ಟವರಿಗೆ ನಾವು ಈಗಾಗಲೇ ಸೂಚನೆ ನೀಡಿರುತ್ತೇವೆ. ಏಕೆಂದರೆ, ಇವುಗಳನ್ನು ನಾವು ಎಲ್ಲಾ ಕಡೆಗಳಲ್ಲಿಯೂ ಹಂಚಿದರೆ, ಬಹುತೇಕ ಜನರು ಅದನ್ನು ಉಪಯೋಗಿಸದೇ, ಹಾಗೆಯೇ ಬಿಸಾಕುತ್ತಾರೆ. ಇದರಿಂದಾಗಿ, ಯಾರಿಗೂ ಪ್ರಯೋಜನವಾಗುವುದಿಲ್ಲ. ಡೆಂಗ್ಯೂ ರೋಗವನ್ನು ತಡೆಗಟ್ಟುವುದಕ್ಕೆ ಸರ್ಕಾರ ಈ ರೀತಿಯ ಕ್ರಮಗಳನ್ನು ತೆಗೆದುಕೊಂಡು ಅದನ್ನು ಹಂಚಿಕೆ ಮಾಡಿದರೆ, ಎಲ್ಲರೂ ಅದನ್ನು ಉಪಯೋಗ ಮಾಡಿಕೊಳ್ಳುವುದಿಲ್ಲ. ಹಾಗಾಗಿ, ಎಲ್ಲೆಲ್ಲಿ ಡೆಂಗ್ಯೂ ಪಾಸಿಟಿವ್ ಎಂದು ಗೊತ್ತಾದ ತಕ್ಷಣ, ಅಂತಹ ಪ್ರದೇಶಗಳಲ್ಲಿ ಇರುವಂತಹ ಸುತ್ತಮುತ್ತಲ ಜನರಿಗೆ ಹಂಚಿಕೆ ಮಾಡಬೇಕೆಂದು ಸೂಚನೆ ನೀಡಿರುತ್ತೇವೆ. ಈ ರೀತಿಯಾದಂತಹ ಕ್ರಮಗಳನ್ನು ನಾವು ಈಗಾಗಲೇ ತೆಗೆದುಕೊಂಡಿರುತ್ತೇವೆ. ಜೊತೆಗೆ, ಇದರ ಬಗ್ಗೆ ನಾವು ನಿರಂತರವಾಗಿ ಗಮನ ಹರಿಸುತ್ತಿದ್ದೇವೆ. ನಾನು ಕೂಡ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗೆ ಭೇಟಿ ನೀಡಿ, ಅದನ್ನು ನಾನು ಲಾಂಚ್ ಮಾಡಿರುತ್ತೇನೆ. ತದನಂತರ, ಮಂಗಳೂರು ಮತ್ತು ಬೆಂಗಳೂರಿನಲ್ಲಿಯೂ ಸಹ ಕೆಲವು ಪ್ರದೇಶಗಳಿಗೆ ನಾನು ಭೇಟಿ ನೀಡಿರುತ್ತೇನೆ. ನಂತರ ಅಧಿವೇಶನ ಪ್ರಾರಂಭವಾಗಿರುತ್ತದೆ. ಈ ಅಧಿವೇಶನ ಮುಕ್ತಾಯವಾದ ನಂತರ, ನಾವು ಈ ಡೆಂಗ್ಯೂ ಜ್ವರದ ಬಗ್ಗೆ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಏಕೆಂದರೆ, ನಾವು ಇನ್ನು 2 ತಿಂಗಳು ಬಹಳ ಎಚ್ಚರಿಕೆಯಿಂದ ಇರಬೇಕು. ಇದರಲ್ಲಿ ನಮ್ಮ ಉದ್ದೇಶ ಏನೆಂದರೆ, ಡೆಂಗ್ಯೂ ಪಾಸಿಟಿವ್ ಆಗುವವರಲ್ಲಿ ಶೇಕಡ 1 ರಷ್ಟು ರೋಗಿಗಳು ಮಾತ್ರ

ಗಂಭೀರ ಸ್ಥಿತಿಗೆ ಹೋಗುತ್ತಾರೆ. ಇದರಲ್ಲಿ ನಾವು ಸಂಪೂರ್ಣವಾಗಿ ನಿಗಾ ವಹಿಸಿದರೆ ಯಾರು ಕೂಡ ಸಾವಿನ ಪರಿಸ್ಥಿತಿಗೆ ಹೋಗುವುದಿಲ್ಲ. ಪ್ರಸ್ತುತ 10 ಜನ ಈ ಡೆಂಗ್ಯೂ ಪಾಸಿಟಿವ್ ನಿಂದ ಸಾವನ್ನಪ್ಪಿರುವುದೇ ನಮಗೆ ನೋವಿನ ಸಂಗತಿ. ಮಾನ್ಯ ಸದಸ್ಯರು ಇನ್ನು ಜಾಸ್ತಿ ಸಾವು ಆಗಿರುತ್ತದೆ ಎಂದು ಹೇಳಿರುತ್ತಾರೆ. ಅದನ್ನು ನಾವು ಅಧಿಕೃತವಾಗಿ ಚೆಕ್ ಮಾಡಿಸುತ್ತೇವೆ. ಆ ರೀತಿ ಚೆಕ್ ಮಾಡಿಸಲು ಆಡಿಟ್ ಮಾಡುತ್ತಾರೆ. ಒಂದು ವೇಳೆ ಆಡಿಟ್ ಮಾಡಿದ ನಂತರ ಅದು ಡೆಂಗ್ಯೂ ಪಾಸಿಟಿವ್ ಕಾರಣದಿಂದಲೇ ಆಗಿದ್ದರೆ, ಅದು ಕೂಡ ಇದರಲ್ಲಿ ಸೇರಿಕೊಳ್ಳುತ್ತದೆ. ಇದರಲ್ಲಿ ಯಾವುದೇ ಅಂಕಿ ಅಂಶಗಳನ್ನು ಮುಚ್ಚಿ ಹಾಕಬೇಕೆಂಬ ಯಾವುದೇ ಉದ್ದೇಶ ಇರುವುದಿಲ್ಲ. ಆ ಸ್ಪಷ್ಟತೆಯಿಂದಲೇ ನಾವು ಕೆಲಸ ಮಾಡುತ್ತಿದ್ದೇವೆ.

ಈ ವಿಷಯದಲ್ಲಿ ತಮ್ಮೆಲ್ಲರ ಸಹಕಾರ ಬೇಕಾಗಿದೆ. ಏಕೆಂದರೆ, ಜನಪ್ರತಿನಿಧಿಗಳಾದ ನಾವು ಎಲ್ಲಾ ಕಡೆ ಓಡಾಡುತ್ತಿರುತ್ತವೆ. ಆ ರೀತಿ ನಾವು ಎಲ್ಲೆಲ್ಲಿ ಹೋಗುತ್ತೇವೆ, ಅಲ್ಲೆಲ್ಲಾ ಕಡೆಗಳಲ್ಲಿಯೂ ಕೂಡ ಜನರಿಗೆ ತಿಳುವಳಿಕೆ ಹೇಳುವುದು, ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕೆ ಹೇಳುವಂಥದ್ದನ್ನು ಮಾಡಬೇಕು. ಅಂದರೆ, ಜನಪ್ರತಿನಿಧಿಗಳು ಕೂಡ ಅಧಿಕಾರಿಗಳಿಗೆ ಡೆಂಗ್ಯೂ ಜ್ವರ ನಿಯಂತ್ರಣಕ್ಕೆ ಯಾವ ಕ್ರಮ ತೆಗೆದುಕೊಂಡಿದ್ದೀರಿ, ಅದರಿಂದ ಏನು ಪ್ರಯೋಜನವಾಗಿದೆ ಎಂಬ ಬಗ್ಗೆ ಸ್ವಲ್ಪ ಕೇಳಿದರೆ, ಖಂಡಿತವಾಗಿಯೂ ಪರಿಣಾಮ ಆಗುತ್ತದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಇದರ ಜೊತೆಗೆ, ಡೆಂಗ್ಯೂ ಜ್ವರಕ್ಕೆ ಸಂಬಂಧಿಸಿದಂತೆ, ಎಲ್ಲಾವನ್ನು ನಾವು ಫ್ರೀ ಮಾಡಿದ್ದೇವೆ. ಆಯುಷ್ಮಾನ್ ಬಿಲ್ ಬಗ್ಗೆ ಕೆಲವು ಮಾನ್ಯ ಸದಸ್ಯರು ಹೇಳಿರುತ್ತಾರೆ. ನಮ್ಮಲ್ಲಿ ಎಪಿಎಲ್ ಕಾರ್ಡು ಆಗಲಿ ಅಥವಾ ಬಿಪಿಎಲ್ ಕಾರ್ಡು ಆಗಲಿ ನಮ್ಮ ಸರ್ಕಾರಿ ಆಸ್ಪತ್ರೆಗಳಿಗೆ ಬಂದರೆ ಎಲ್ಲರಿಗೂ ಉಚಿತ ಚಿಕಿತ್ಸೆ ನೀಡಲಾಗುತ್ತದೆ. ಅದು blood platelets, ICU ಇರಬಹುದು, ಇದರಲ್ಲಿ ಎಪಿಎಲ್ ಅಥವಾ ಬಿಪಿಎಲ್ ಎಂದು ನಾವು ನೋಡುತ್ತಿಲ್ಲ. ಎಲ್ಲರಿಗೂ ಉಚಿತ ಚಿಕಿತ್ಸೆ ನೀಡಿದ್ದೇವೆ. ಜೊತೆಗೆ, ಖಾಸಗಿ ಲ್ಯಾಬ್‌ಗಳಲ್ಲಿಯೂ ಕೂಡ ದರ ನಿಗದಿ ಮಾಡಿ, ನಿಗದಿತ ದರಕ್ಕಿಂತ ಹೆಚ್ಚು ಹಣ ಪಡೆಯುವಂತಿಲ್ಲ ಎಂದು ಸೂಚನೆ ನೀಡಿದ್ದೇವೆ. ಒಂದು ವೇಳೆ ಯಾರಾದರೂ ಹೆಚ್ಚು ದರ ಪಡೆಯುತ್ತಿದ್ದರೆ, ಅಂತಹವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ. ಉದಾಹರಣೆಗೆ, ಬೆಂಗಳೂರಿನಲ್ಲಿ ಸುಮಾರು 30 ಲ್ಯಾಬ್

ಸೆಂಟರ್‌ಗಳಿಗೆ ನಾವು ಈಗಾಗಲೇ ನೋಟಿಸ್ ನೀಡಿ, ನಿಗದಿತ ದರ ಪಡೆದಿರುವುದಕ್ಕೆ ತಮ್ಮ ವಿರುದ್ಧ ಏತಕ್ಕೆ ಕ್ರಮ ಕೈಗೊಳ್ಳಬೇಕಾಗುತ್ತದೆಯೆಂದು ಹೇಳಿರುತ್ತೇವೆ. ಈ ರೀತಿಯಾಗಿ, ಖಂಡಿತವಾಗಿಯೂ ಇನ್ನು ಹೆಚ್ಚು ಅಗತ್ಯ ಕ್ರಮಗಳನ್ನು ನಾವು ತೆಗೆದುಕೊಳ್ಳಬೇಕು. ಈಗ ಎಲ್ಲವೂ ಸರಿಯಾಗಿದೆ ಎಂದು ನಾನು ಹೇಳುತ್ತಿಲ್ಲ. ಏಕೆಂದರೆ, ಇದರ ವ್ಯಾಪ್ತಿ ಬಹಳ ದೊಡ್ಡದಿದೆ. ಇದರ ಜೊತೆಗೆ, ನಮ್ಮ ಅಧಿಕಾರಿಗಳು ಎಲ್ಲಾ ಕೆಲಸಗಳನ್ನು ಒಂದೇ ಬಾರಿಗೆ ಮಾಡುತ್ತಿರುತ್ತಾರೆ. ಬೇರೆ ಕೆಲಸಗಳನ್ನು ಬಿಡುವುದಕ್ಕೆ ಆಗುವುದಿಲ್ಲ. ಉದಾಹರಣೆಗೆ, ಈಗ ಮಳೆಗಾಲ ಇದ್ದು, ನೆರೆ ಆಗುತ್ತಿರುತ್ತದೆ. ಅಲ್ಲಿ ಬೇರೆ ಕೆಲಸಗಳು ಇರುತ್ತವೆ. ಇದರಿಂದಾಗಿ, ನಮ್ಮ ಅಧಿಕಾರಿಗಳು ಆ ಕೆಲಸಗಳಿಗೆ ಡೈವರ್ಟ್ ಆಗುತ್ತಾರೆ. ಅವರಿಗೆ ಡೆಂಗ್ಯೂ ಬಗ್ಗೆ ಹೆಚ್ಚು ಹೇಳಿದರೂ ಕೂಡ, ಬೇರೆ ಯಾವುದಾದರೂ ಅಗತ್ಯ ಕಾರ್ಯಕ್ರಮ ಬಂದಾಗ ಆ ಇಡೀ ಜಿಲ್ಲೆಯ ಎಲ್ಲಾ ಮುಖ್ಯಾಧಿಕಾರಿಗಳು ಬೇರೆ ಬೇರೆ ಕಡೆಗೆ ಹೋಗುತ್ತಾರೆ. (ಗೊಂದಲ) ಹೌದು, ಮಾನ್ಯ ಸದಸ್ಯರು ಹೇಳುವುದು ಸರಿಯಾಗಿದೆ. ಜೋರು ಮಳೆ ಬಂದರೆ ಈ ಡೆಂಗ್ಯೂ ಪಾಸಿಟಿವ್ ಇಳಿಮುಖವಾಗುತ್ತದೆ. ಏಕೆಂದರೆ, ಮಳೆ ನೀರು ಒಂದೇ ಕಡೆ ನಿಂತು ಶೇಖರಣೆಯಾದರೆ ಬಹಳ ಡೇಂಜರ್ ಆಗುತ್ತದೆ. ಆದರೆ, ಆ ನೀರು ಹರಿಯುತ್ತಿದ್ದರೆ, ಲಾರ್ವಾ ಉತ್ಪತ್ತಿಯಾಗುವುದು ಕಡಿಮೆಯಾಗುತ್ತದೆ.

**ಸಭಾಪತಿಯವರು:–** ಆಯಿತು, ಸಾಕು ಕುಳಿತುಕೊಳ್ಳಿ. ಈ ವಿಷಯ ಪ್ರಾರಂಭವಾಗಿ ಈಗಾಗಲೇ ಒಂದು ಗಂಟೆ ಸಮಯ ಆಯಿತು.

**ಡಾ: ಧನಂಜಯ ಸರ್ಜಿ:–** ಮಾನ್ಯ ಸಭಾಪತಿಯವರೇ, DEET ಅನ್ನು ಎಷ್ಟು ಖರೀದಿ ಮಾಡಲಾಗಿದೆ ಮತ್ತು ಎಲ್ಲಿ ಹಂಚಿಕೆ ಮಾಡಲಾಗಿದೆ ಎಂದು ಕೇಳುತ್ತೇನೆ. ಏಕೆಂದರೆ, ನಾವು ಚಿಕ್ಕಮಗಳೂರು ಜಿಲ್ಲೆಯೊಂದರಲ್ಲಿಯೇ ನಾವು ಒತ್ತಡ ಹಾಕಿ ಸುಮಾರು ೩ ಲಕ್ಷ DEET ಅನ್ನು ಖರೀದಿ ಮಾಡಿ, ಎಲ್ಲೆಲ್ಲಿ ಡೆಂಗ್ಯೂ ಪಾಸಿಟಿವ್ ಬರುತ್ತದೆ, ಅಲ್ಲಿ ಹಂಚಬೇಕೆಂದು ಹೇಳಿರುತ್ತೇವೆ. ಏಕೆಂದರೆ, ಯಾವ ಮನುಷ್ಯನಿಗೆ ಡೆಂಗ್ಯೂ ಪಾಸಿಟಿವ್ ಬರುತ್ತದೆ, ಆ ಮನುಷ್ಯ DEET ಅನ್ನು ಹಚ್ಚಿಕೊಂಡರೆ, ಅವರಿಗೆ ಸೊಳ್ಳೆ ಕಚ್ಚುವುದು ನಿಯಂತ್ರಣ ಆಗುತ್ತದೆ. ಜೊತೆಗೆ, ಬೇರೆ ಸೊಳ್ಳೆಗೆ ಸೋಂಕು ಹರಡುವುದು ನಿಯಂತ್ರಣವಾಗುತ್ತದೆ. ಹಾಗಾಗಿ, whether it is Test Kit positive

or ELISA (Enzyme-Linked Immunoassay) positive ಇರಲಿ, ಇದನ್ನು mandatory rule ಮಾಡಬೇಕು.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಡೆಂಗ್ಯೂ ಪಾಸಿಟಿವ್ ಬಂದಿರುವಂತಹ ವ್ಯಕ್ತಿಗೆ ಬೇರೆ ಸೊಳ್ಳೆ ಕಚ್ಚಿದರೆ, ಆ ಸೊಳ್ಳೆ ಡೆಂಗ್ಯೂ ಪಾಸಿಟಿವ್ ಆಗುತ್ತದೆ ಎಂದೇನು ಇಲ್ಲ.

**ಡಾ: ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೇ, ಹೌದು, ಆಗುತ್ತದೆ.

**ಸಭಾಪತಿಯವರು:-** ಆಯಿತು, ಸಾಕು ಕುಳಿತುಕೊಳ್ಳಿ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, Aedes Aegypti ಎಂಬ ಸೊಳ್ಳೆ...

**ಡಾ: ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೇ, Aedes Aegypti ಎಂಬ ಸೊಳ್ಳೆ ಕಚ್ಚಿದಂತಹ ವ್ಯಕ್ತಿಗೆ 10 ದಿನಗಳೊಳಗೆ ವ್ಯಕ್ತಿಗೆ ಬೇರೆ ಸೊಳ್ಳೆ ಕಚ್ಚಿದರೆ, ಆ ಸೊಳ್ಳೆಗೆ ಪಾಸಿಟಿವ್ ಬರುತ್ತದೆ. That is how it spreads. ಅದಕ್ಕೋಸ್ಕರ ಯಾರಿಗೆ ಡೆಂಗ್ಯೂ ಪಾಸಿಟಿವ್ ಬರುತ್ತದೆ, ಅವರು 10 ದಿನ ಕಾಲ DEET ಹಚ್ಚುವುದನ್ನು ಕಡ್ಡಾಯ ಮಾಡಬೇಕು.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಈ ಮಾಹಿತಿ ನನ್ನ ಬಳಿ ಇರುವುದಿಲ್ಲ.

**ಡಾ: ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೇ, ನಾನು literature ಕೊಡುತ್ತೇನೆ. I will give him the literature.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ನಾನು ಅದನ್ನು ಪರಿಶೀಲಿಸುತ್ತೇನೆ.

**ಡಾ: ಯತೀಂದ್ರ ಎಸ್. (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಡಾಕ್ಟರ್ ಧನಂಜಯ ಸರ್ಜಿಯವರು ಹೇಳುತ್ತಿರುವುದು ಸರಿಯಾಗಿದೆ. Aedes Aegypti ಎಂಬ ಸೊಳ್ಳೆ ಕಚ್ಚಿದಂತಹ ವ್ಯಕ್ತಿಗೆ, ಬೇರೆ ಸೊಳ್ಳೆ ಕಚ್ಚಿದರೆ ಆ ಸೊಳ್ಳೆಗೆ ಪಾಸಿಟಿವ್ ಬಂದು, ಅದು ಬೇರೆ ವ್ಯಕ್ತಿಗೆ ಕಚ್ಚುವ ಮುಖಾಂತರ ರೋಗ ಹರಡುತ್ತದೆ.

**ಶ್ರೀ ದಿನೇಶ್ ಗುಂಡೂರಾವ್:–** ಮಾನ್ಯ ಸಭಾಪತಿಯವರೇ, ಇರಬಹುದು.

**ಡಾ: ಧನಂಜಯ ಸರ್ಜಿ:–** ಮಾನ್ಯ ಸಭಾಪತಿಯವರೇ, ಇದು ಬಹಳ ಮುಖ್ಯವಾದ ವಿಚಾರವಾಗಿದೆ. ಹಾಗಾಗಿ, ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಯಾವ ಮನುಷ್ಯನಿಗೆ Aedes Aegypti ಎಂಬ ಸೊಳ್ಳೆ ಕಚ್ಚಿದ ನಂತರ, ಆ ವ್ಯಕ್ತಿಗೆ ಜ್ವರ ಬಂದ ಹತ್ತು ದಿನಗಳವರೆಗೆ, ಆ ಸೊಳ್ಳೆ ಬೇರೆ ವ್ಯಕ್ತಿಗಳಿಗೆ ಆ ರೋಗವನ್ನು ಹರಡುತ್ತದೆ. ಹಾಗಾಗಿ, ಯಾವುದೇ ಪಾಸಿಟಿವ್ ಇದ್ದರೂ ಕೂಡ ಅಂದರೆ, ಎಲಿಸಾ ಪಾಸಿಟಿವ್ ಎಂದಲ್ಲ, ಯಾವುದೇ ಡೆಂಗ್ಯೂ ಕಿಟ್ ಪಾಸಿಟಿವ್ ಬಂದರೂ ಸಹ, ಅವರಿಗೆ ಕಡ್ಡಾಯವಾಗಿ disease onset ಆದಾಗಿನಿಂದ 10 ರಿಂದ 15 ದಿನಗಳವರೆಗೆ DEET ಹಚ್ಚುವುದನ್ನು ಕಡ್ಡಾಯ ಮಾಡಬೇಕು.

**ಸಭಾಪತಿಯವರು:–** ಆಯಿತು. ಸಾಕು. ಈ ವಿಷಯ ಪ್ರಾರಂಭವಾಗಿ ಇಲ್ಲಿಗೆ 1 ಗಂಟೆ ಸಮಯ ಆಯಿತು.

**ಶ್ರೀ ದಿನೇಶ್ ಗುಂಡೂರಾವ್:–** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಮಾನ್ಯ ಸದಸ್ಯರ ಸಲಹೆಯನ್ನು ನಾನು ತೆಗೆದುಕೊಳ್ಳುತ್ತೇನೆ.

**ಡಾ: ಧನಂಜಯ ಸರ್ಜಿ:–** ಮಾನ್ಯ ಸಭಾಪತಿಯವರೇ, ಇನ್ನೊಂದು ಸಲಹೆ ಏನೆಂದರೆ,...

**ಸಭಾಪತಿಯವರು:–** ಮಾನ್ಯ ಧನಂಜಯ ಸರ್ಜಯವರೇ, ಸಾಕು. ಕುಳಿತುಕೊಳ್ಳಿ.

**ಶ್ರೀ ದಿನೇಶ್ ಗುಂಡೂರಾವ್:–** ಮಾನ್ಯ ಸಭಾಪತಿಯವರೇ, ಉಳಿದಿರುವ ಎಲ್ಲಾ ಅಗತ್ಯ ಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ.

**ಡಾ: ಧನಂಜಯ ಸರ್ಜಿ:–** ಮಾನ್ಯ ಸಭಾಪತಿಯವರೇ, ಜೊತೆಗೆ ಯಾರಿಗೆ ಡೆಂಗ್ಯೂ ಜ್ವರ ಬಂದರೆ ಅಥವಾ ಡೆಂಗ್ಯೂನಿಂದ ಸಾವಾದರೆ, ದಯಮಾಡಿ ಅದನ್ನು ರಿಪೋರ್ಟ್ ಮಾಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಮಾನ್ಯ ಧನಂಜಯ ಸರ್ಜಯವರೇ, ಸಾಕು. ಕುಳಿತುಕೊಳ್ಳಿ. ತಾವು ಕೂಡ ಈ ರೀತಿ ಶುರು ಮಾಡಿದ್ದೀರಾ?

**ಶ್ರೀ ದಿನೇಶ್ ಗುಂಡೂರಾವ್:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ನಾವು ಎಲ್ಲಾ ಆಸ್ಪತ್ರೆಗಳಿಗೆ ಸೂಚನೆ ನೀಡಿರುತ್ತೇವೆ. ಅಲ್ಲದೇ, ಇದನ್ನು ಕಡ್ಡಾಯವಾಗಿ ರಿಪೋರ್ಟ್ ಮಾಡಬೇಕೆಂಬ ಕಾರಣಕ್ಕಾಗಿಯೇ ಈ ರೋಗವನ್ನು ನಾವು ನೋಟಿಫೈ ಮಾಡಿರುತ್ತೇವೆ. ಹಾಗಾಗಿ, ಈ ವಿಷಯದಲ್ಲಿ ಮಾನ್ಯ ಸದಸ್ಯರ ಸಲಹೆಯನ್ನು ಕೂಡ ನಾನು ತೆಗೆದುಕೊಳ್ಳುತ್ತೇನೆ. ಜೊತೆಗೆ, ಇನ್ನು ಏನಾದರೂ ಸಲಹೆಗಳಿದ್ದರೆ, ಅವರು ನಮಗೆ ಕೊಡಬಹುದು. ನಾವೆಲ್ಲರೂ ಒಟ್ಟಾಗಿ ಸೇರಿ ಈ ಡೆಂಗ್ಯೂ ಅನ್ನು ನಿಯಂತ್ರಣ ಮಾಡಿ, ಆದಷ್ಟು ಮಟ್ಟಿಗೆ ನಮ್ಮ ಜನರಿಗೆ ತೊಂದರೆಯಾಗದ ರೀತಿ ನಮ್ಮ ಇಲಾಖೆ ಕೆಲಸ ಮಾಡುತ್ತಿದೆ. ಆದಾಗ್ಯೂ, ಈಗ ಎಲ್ಲವೂ ಸರಿಯಾಗಿದೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಇನ್ನು ಹೆಚ್ಚಿನ ತೀವ್ರತೆಯಿಂದ ನಾವು ಇದಕ್ಕೆ ಹೆಚ್ಚಿನ ಗಮನ ಕೊಡುತ್ತೇವೆಂದು ಹೇಳುತ್ತೇನೆ.

**ಇ) ವಿಷಯ; ದೇವನಹಳ್ಳಿ ತಾಲ್ಲೂಕು ಹರಳೂರಿನಲ್ಲಿ ಕೆಐಎಡಿಬಿ ಅಭಿವೃದ್ಧಿ ಪಡಿಸಿರುವ ಹೈಟೆಕ್ ಏರೋಸ್ಪೇಸ್ ಮತ್ತು ಡಿಫೆನ್ಸ್ ಪಾರ್ಕ್‌ನ 2ನೇ ಹಂತದಲ್ಲಿ ವಿಶ್ವವಿದ್ಯಾಲಯ ಸ್ಥಾಪನೆಗಾಗಿ ಮೆ: ಸೆಂಟರ್ ಫಾರ್ ಎಜುಕೇಷನ್ ಅಂಡ್ ಸೋಷಿಯಲ್ ಸ್ಟಡೀಸ್ ರವರಿಗೆ 116.16 ಎಕರೆ ಜಮೀನನ್ನು 99 ವರ್ಷದ ಗುತ್ತಿಗೆಗೆ ಶೈಕ್ಷಣಿಕ ಅಭಿವೃದ್ಧಿ/ವಿಶ್ವವಿದ್ಯಾಲಯ ಆರಂಭಕ್ಕೆ ಕ್ಯಾಬಿನೇಟ್ ಅನುಮತಿ ನೀಡಿರುವುದರ ಬದಲಾಗಿ 10 ವರ್ಷಗಳ ಗುತ್ತಿಗೆ ಕಮ್ ಮಾರಾಟ ಮಾಡುವ ಕುರಿತು.**

– –

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಅವರು ಮಾತನಾಡಿದ ನಂತರ ಏನಾದರೂ ಇದ್ದರೆ ನಾನು ಮಾತನಾಡುತ್ತೇನೆ.

**ಶ್ರೀ ಎಂ.ಬಿ. ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇನೆ. ದಿನಾಂಕ:26.04.2024ರಂದು ಕರ್ನಾಟಕ ರಾಜ್ಯ ಸಚಿವ ಸಂಪುಟದ ಸಭೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನಲ್ಲಿ ಏರೋಸ್ಪೇಸ್ ಮತ್ತು ಹೈಟೆಕ್ ಡಿಫೆನ್ಸ್ ಪಾರ್ಕ್, 2ನೇ ಹಂತದಲ್ಲಿ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಿರುವಂತಹ ಹಾಗೂ ರಾಷ್ಟ್ರೀಯ ಹೆದ್ದಾರಿ–207ರಿಂದ ಪ್ರತ್ಯೇಕ ಸಂಪರ್ಕ ಇರುತ್ತದೆ. ಯಾವುದೇ ಮೂಲಭೂತ ಸೌಕರ್ಯವಿರುವುದಿಲ್ಲ. ಅಂದರೆ, ಅದಕ್ಕೆ ನಾವು bulk land ಎಂದು ನಾವು ಹೇಳುತ್ತೇವೆ. 116.16 ಎಕರೆ ಜಮೀನನ್ನು ಸೆಂಟರ್ ಫಾರ್ ಎಜುಕೇಷನ್ ಅಂಡ್ ಸೋಷಿಯಲ್ ಸ್ಟಡೀಸ್‌ರವರಿಗೆ ಒಟ್ಟು 50 ಕೋಟಿ ಮೊತ್ತಕ್ಕೆ ಹಂಚಿಕೆ ಮಾಡುವುದಕ್ಕೆ ಅಂದಿನ ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ ಮಾಡಲಾಗಿರುತ್ತದೆ. ಅದರಂತೆ, ದಿನಾಂಕ:28.04.2024ರಂದು ಸರ್ಕಾರ ಆದೇಶವನ್ನು ಹೊರಡಿಸಲಾಗಿರುತ್ತದೆ.

(ಮುಂದು)

(640) 23-07-2024 (2.50) ವೈಎಲ್-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ಬಿ.ಪಾಟೀಲ್ (ಮುಂದು):-**

ಸರ್ಕಾರದ ಆದೇಶದಂತೆ ಕೆ.ಐ.ಎ.ಡಿ.ಬಿ. ಯ ಮೆ: ಸೆಂಟರ್ ಫಾರ್ ಎಜುಕೇಷನಲ್ ಅಂಡ್ ಸೋಷಿಯಲ್ ಸ್ಟಡೀಸ್ (ರಿ) ರವರಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿ, ಹರಳೂರು ಮತ್ತು ಪೋಲನಹಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ ಒಟ್ಟು 116-00 1/2 ಎಕರೆ ಜಮೀನನ್ನು (ಯಾವುದೇ ಮೂಲಭೂತ ಸೌಕರ್ಯವಿಲ್ಲದ) ಬಲ್ಕ್ ಲ್ಯಾಂಡ್ ಆಗಿ ಒಟ್ಟಾರೆ ರೂ.50 ಕೋಟಿ ಮೊತ್ತಕ್ಕೆ ವಿಶ್ವವಿದ್ಯಾಲಯದ ಶೈಕ್ಷಣಿಕ ಸ್ಥಾಪನೆಗಾಗಿ ದಿನಾಂಕ: 24.06.2021 ರಂದು ಹಂಚಿಕೆ ಮಾಡಿದ್ದೇವೆ. ಒಟ್ಟಾರೆಯಾಗಿ ಮಂಡಳಿಯಿಂದ 99 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಹಂಚಿಕೆಯಾಗಿದೆ. ತದನಂತರ 10 ವರ್ಷಗಳ ಗುತ್ತಿಗೆ ಮತ್ತು ಮಾರಾಟ ಆಧಾರದ ಕಾರ್ಯನೀತಿ ಅನ್ವಯವಾಗುವುದರಿಂದ ಮೆ: ಸೆಂಟರ್ ಫಾರ್ ಎಜುಕೇಷನಲ್ ಅಂಡ್ ಸೋಷಿಯಲ್ ಸ್ಟಡೀಸ್ (ರಿ) ರವರಿಗೂ ಕೂಡಾ ಗುತ್ತಿಗೆ ಆಧಾರದ ಷರತ್ತು ಏನಿದೆ, ಅದು ಎಲ್ಲರಿಗೂ ಸಾಮಾನ್ಯವಾಗಿ ಅನ್ವಯಿಸುತ್ತದೆ. ಅದರಂತೆ ಅವರಿಗೂ ಕೂಡಾ ಅನ್ವಯಿಸುತ್ತದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ವಿಸ್ತಾರವಾಗಿ ಉತ್ತರ ಕೊಟ್ಟಿದ್ದಾರೆ. ನನ್ನ ಪ್ರಶ್ನೆಯೇನೆಂದರೆ, ಕೆ.ಐ.ಎ.ಡಿ.ಬಿ.ಯ ಮುಖ್ಯ objects ಏನೆಂಬುದನ್ನು ಹೇಳಿದರೆ, ಬಹಳ ಸಂತೋಷವಾಗುತ್ತದೆ. Karnataka Industrial Area Development Board ಎನ್ನುವಂಥದ್ದಾಗಿದೆ. ಭೂಮಿಯನ್ನು ಸ್ವಾಧೀನಪಡಿಸಿಕೊಂಡ ನಂತರ ಅದನ್ನು denotify ಮಾಡುವಂಥದ್ದಾಗಿದ್ದು, ಇದೊಂದು ರೀತಿ ದಂಧೆಯಾಗಿದೆ. ಇದು ಎಲ್ಲಾ ಸರ್ಕಾರದ ಹಂತದಲ್ಲಿಯೂ ನಡೆದಿದೆ. ಬಡವರಿಗೆ ಏನಾದರೂ ಜಾಗ ಕಲ್ಪಿಸಬೇಕೆಂದರೆ ಕೆ.ಐ.ಎ.ಡಿ.ಬಿ. ಯವರು ಜಾಗ ಕೊಡಲು ಮುಂದೆ ಬರುವುದಿಲ್ಲ. ಕೆ.ಐ.ಎ.ಡಿ.ಬಿ. ನಲ್ಲಿ ಕೈಗಾರಿಕೆಯನ್ನು ಸ್ಥಾಪಿಸಿ, ಉದ್ಯೋಗ ಒದಗಿಸುತ್ತೇವೆ ಎಂದು ಕೆಲವು ಜಾಗಗಳನ್ನು allot ಮಾಡಿಸಿಕೊಂಡು, ಒಳ್ಳೆಯ ಚೌಲ್ಟ್ರಿ ಕಟ್ಟಿರುತ್ತಾರೆ. ಸ್ವಾಧೀನಪಡಿಸಿಕೊಂಡಿರುವ ಕೆ.ಐ.ಎ.ಡಿ.ಬಿ. ಭೂಮಿಯಲ್ಲಿ ಎಷ್ಟು denotify ಆಗಿದೆ ಎಂಬುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. 2021-22ನೇ ಸಾಲಿನಲ್ಲಿ ಹೊಸದಾಗಿ ವಿಶ್ವವಿದ್ಯಾಲಯ ಸ್ಥಾಪನೆ ಮಾಡಲಿಕೋಸ್ಕರ 99 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿತ್ತು. ಅದರಲ್ಲಿಯೂ ಕೂಡಾ

ನಿಯಮಾವಳಿಗಳನ್ನು ಮೀರಿ 99 ವರ್ಷದ ಬದಲಾಗಿ ಗುತ್ತಿಗೆ ಅವಧಿಯನ್ನು ಇಳಿಸಿ, 10 ವರ್ಷಗಳ ಗುತ್ತಿಗೆ ಕಮ್ ಮಾರಾಟ ಪತ್ರವಾಗಿ ಕಾರ್ಯಗತಗೊಳಿಸುವ ಕುರಿತು ಅಂದಿನ ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ ಮಾಡಿರುವಂಥದು ನಮ್ಮ ಮುಂದೆ ಇದೆ. ನಿಯಮಾವಳಿ ಅನುಸಾರ ಸರ್ಕಾರದ ವಶದಲ್ಲಿರುವ ಯಾವುದೇ ಭೂಮಿಯನ್ನು ಖಾಸಗಿ ವ್ಯಕ್ತಿಗಳಿಗೆ ಸಹಭಾಗಿತ್ವ ನೀಡುವ ಸಂದರ್ಭದಲ್ಲಿ ಕಡ್ಡಾಯವಾಗಿ 99 ವರ್ಷದ ಅವಧಿಗೆ ಗುತ್ತಿಗೆ ನೀಡಲು ಸರ್ಕಾರದ ನಿಯಮ ಈ ಮೊದಲು 30 ವರ್ಷ ಆಗಿತ್ತು. ಅಂದಿನ ಸಚಿವ ಸಂಪುಟ ಸಭೆಯ ತೀರ್ಮಾನದ ಪ್ರಕಾರ ಭೂ ಹಂಚಿಕೆ ನಿಯಮ ಮೀರಿ ಖಾಸಗಿ ಸಂಸ್ಥೆಗಳಿಗೆ ಜಾಗ ನೀಡಿರುವುದು ಮೇಲ್ನೋಟಕ್ಕೆ ಕಾನೂನು ಉಲ್ಲಂಘನೆಯಾಗಿದೆ. ಇದರ ಬಗ್ಗೆ ವಿಸ್ತಾರವಾಗಿ ಚರ್ಚೆಯಾಗಿದ್ದರೆ ಚೆನ್ನಾಗಿತ್ತು. ಮಾನ್ಯ ಸಚಿವರು ಕೇವಲ 2 ಪುಟಗಳಷ್ಟು ಉತ್ತರ ಕೊಟ್ಟಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹಾಗೆ ಹೇಳುವುದು ಬೇಡ. ಅವರು ಕೇಳಿದ ಪ್ರಶ್ನೆಗೆ ಸೀಮಿತವಾಗಿ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು "116.16 ಎಕರೆ ಜಮೀನನ್ನು ಒಟ್ಟು 50 ಕೋಟಿ ವೆಚ್ಚದಲ್ಲಿ ಸದರಿ ಸಂಸ್ಥೆಗೆ 99 ವರ್ಷದ ಗುತ್ತಿಗೆಗೆ ಶೈಕ್ಷಣಿಕ ಅಭಿವೃದ್ಧಿ/ವಿಶ್ವವಿದ್ಯಾಲಯ ಆರಂಭಕ್ಕೆ ಕ್ಯಾಬಿನೇಟ್ ಅನುಮತಿ ನೀಡಿರುವುದು ಸರಿಯಷ್ಟೆ. ಆದಾಗ್ಯೂ 99 ವರ್ಷದ ಬದಲಾಗಿ ಗುತ್ತಿಗೆ ಅವಧಿಯನ್ನು ಇಳಿಸಿ, ಗುತ್ತಿಗೆ ಪತ್ರದ ಬದಲು 10 ವರ್ಷಗಳ ಗುತ್ತಿಗೆ ಕಮ್ ಮಾರಾಟ ಪತ್ರವಾಗಿ ಕಾರ್ಯಗತಗೊಳಿಸುವ ವಿಷಯದ ಕುರಿತು" ನಿಯಮ 330 ರಡಿ ಸದನದಲ್ಲಿ ಕೇಳಿರುವ ಪ್ರಶ್ನೆಗೆ ಸೀಮಿತವಾಗಿ ನಾನು ಉತ್ತರ ಕೊಟ್ಟಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈ ಸದರಿ ಜಮೀನನ್ನು ಗುತ್ತಿಗೆ ಕೊಡುವ ಸಂದರ್ಭದಲ್ಲಿ ವಿಶ್ವವಿದ್ಯಾಲಯ ಸ್ಥಾಪನೆ ಮಾಡಲು ಸುಮಾರು ರೂ.500 ರಿಂದ ರೂ.600 ಕೋಟಿಗಳಷ್ಟು ವೆಚ್ಚ ಮಾಡುತ್ತೇವೆ. ಅದರಲ್ಲಿ ಎನ್.ಇ.ಪಿ. ನಿಯಮಾವಳಿ ಅನುಸಾರ ಕಾರ್ಯನಿರ್ವಹಿಸುವುದಾಗಿ ತಿಳಿಸಿದ್ದಾರೆ. ವಿದೇಶಿ ವಿಶ್ವವಿದ್ಯಾಲಯದೊಳಗೆ ನಮ್ಮಲ್ಲಿಯೇ Memorandum of Understanding ಮಾಡಿಕೊಂಡಿದ್ದು, ಶೈಕ್ಷಣಿಕ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲದೇ ಸಂಶೋಧನಾ ಕೇಂದ್ರಕ್ಕೆ ದೇಣಿಗೆಯನ್ನು ಪಡೆಯಲು ಯೋಚಿಸಿತ್ತು. ಈಗಾಗಲೇ ನಮ್ಮ ರಾಜ್ಯದಲ್ಲಿ ಎನ್.ಇ.ಪಿ. ಯನ್ನು almost scrap ಮಾಡಿದ್ದು, SEP (State Education Policy) ಜಾರಿಗೆ ಬಂದಿದೆ. ಹಾಗಾಗಿ, ಬಿ.ಜೆ.ಪಿ. ಸರ್ಕಾರದವರ NEP (National Education Policy) ಜಾರಿ ಮಾಡುವಂಥ ಉದ್ದೇಶವೇನಿತ್ತು, ಅದು ಈಗಾಗಲೇ ಬಿದ್ದುಹೋಗಿದೆ.

ಮುಂದುವರೆದು, ಸದರಿ ಸಂಸ್ಥೆಯವರು ಜಮೀನನ್ನು ಭೋಗ್ಯಕ್ಕೆ ಪಡೆಯುವಂಥ ಉದ್ದೇಶವು ಸಾಮಾಜಿಕ ಸೇವೆಯಾಗಿದ್ದು, ಇದೇ ನೆಲಗಟ್ಟಿನಲ್ಲಿ lease deed ಬದಲಾಗಿ sale deed ಆಗಿ ಪರಿವರ್ತಿಸಿ, ಕೈಗಾರಿಕಾ ನಿಯಮವನ್ನು ಬದಲಿಸಿ ಶೈಕ್ಷಣಿಕ ಹುದ್ದೆಗಳಿಗೆ ಮಾರ್ಪಡಿಸುವಂತೆ ಕೋರಿದ್ದು, ಅದಕ್ಕೂ ಸಹ ಅನುಮೋದನೆ ಸಿಕ್ಕಿದೆ. ಅಂದಿನ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ "ಸದರಿ ಕೆ.ಐ.ಎ.ಡಿ.ಬಿ. ಜಮೀನಿಗೆ ೯೯ ವರ್ಷದ ಗುತ್ತಿಗೆ ಬದಲಾಗಿ, 10 ವರ್ಷದ ಗುತ್ತಿಗೆ ಕಮ್ ಮಾರಾಟ ಪತ್ರವಾಗಿ ಸಚಿವ ಸಂಪುಟ ಅನುಮತಿ ನೀಡಬಹುದೆಂದು" ವರದಿ ನೀಡಿದ್ದಾರೆ. ಭೂಮಂಜೂರಾತಿಯೂ ಆರ್ಥಿಕ ಇಲಾಖೆಯ ಅನುಮೋದನೆಯ ವೃತ್ತಿಗೆ ಬಳಸಿರುವುದಿಲ್ಲ ಎಂದು ತಿಳಿಸಿದಾಗ್ಯೂ ಕೂಡಾ ಅಂದಿನ ಭಾರಿ ಮತ್ತು ಕೈಗಾರಿಕಾ ಸಚಿವರ ಅನುಮೋದನೆಯನ್ನು ಕಡತದಲ್ಲಿ ಪಡೆಯಲಾಗಿತ್ತು. ಅಂದರೆ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಲ್ಲಿ ಸಲ್ಲಿಕೆಯಾಗಿರುವ ರಹಸ್ಯ ವರದಿಯಲ್ಲಿ ೯೯ ವರ್ಷಗಳ ಭೋಗ್ಯಕ್ಕೆ ಬದಲಾಗಿ 10 ವರ್ಷಗಳ ಗುತ್ತಿಗೆ-ಕಮ್-ಮಾರಾಟ ಪತ್ರವಾಗಿ ಮಾರಾಟ ಮಾಡಬಹುದೆಂದು ಮತ್ತು ಸದರಿ ಸಂಸ್ಥೆಯೂ ಯಾವುದೇ ಲಾಭೋದ್ದೇಶ ಹೊಂದದೇ ಶೈಕ್ಷಣಿಕ ಪ್ರಗತಿಗಾಗಿ ಶ್ರಮಿಸುವುದಾಗಿ ತಿಳಿಸಲಾಗಿತ್ತು ಹಾಗೂ 15 ದಿನಗಳೊಳಗಾಗಿ ಅನುಷ್ಠಾನಗೊಳಿಸುವಂಥ ಕಾಲಮಿತಿ ಹಾಕಲಾಗಿತ್ತು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ರಹಸ್ಯ ವರದಿ ಎಂದರೆ ಏನು?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ರಹಸ್ಯ ವರದಿ ಎಂದರೆ, ಕ್ಯಾಬಿನೇಟ್ ನೋಟ್ ಆಗಿದೆ. ಸದರಿ ಎರಡು ಸಂಸ್ಥೆಗೆ ಗುರಿಯನ್ನು ನಿಗದಿಪಡಿಸಲಾಗಿತ್ತು. ಸಮಾನತೆ ಒಳಗೊಳ್ಳುವಿಕೆ, ಹೊಸ ಕಲ್ಪನೆಗಳು, ಸಾಮಾಜಿಕ ಹೊಣೆಗಾರಿಕೆ, ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಬದ್ಧತೆ, ವಿದೇಶಿ ಸಂಶೋಧನೆ, ಸಹಭಾಗಿತ್ವ ಮತ್ತು ಸಂಶೋಧನಾ ಕೇಂದ್ರ ಹಾಗೂ ಶ್ರೇಷ್ಠ ಗುರಿಯನ್ನು ಸ್ಥಾಪಿಸಲು ಹೊಂದಿರುವ ರಹಸ್ಯ ಗುರಿಯಾಗಿರುತ್ತದೆ. ಇದಾಗ್ಯೂ ಸದರಿ ಸಂಸ್ಥೆಗಳಿಗೆ ಆತುರಾತುರವಾಗಿ ಕೆ.ಐ.ಎ.ಡಿ.ಬಿ. ಭೂಮಿಯನ್ನು ೯೯ ವರ್ಷಗಳ lease deed ಬದಲಾಗಿ 10 ವರ್ಷಗಳ ಗುತ್ತಿಗೆ-ಕಮ್-ಮಾರಾಟ ಪತ್ರವಾಗಿ ಕಾರ್ಯಗತಗೊಳಿಸಿರುವುದು ಅಂದಿನ ಸರ್ಕಾರದ ಕಾನೂನು ಉಲ್ಲಂಘನೆ ಮೇಲ್ನೋಟಕ್ಕೆ ಕಂಡುಬರುತ್ತದೆ.

ಈ ಕುರಿತಂತೆ ಸರ್ಕಾರದ ಮಟ್ಟದಲ್ಲಿ ಚರ್ಚೆ ಮತ್ತು ಪರಮಾರ್ಶೆ ಅಗತ್ಯ ಇದ್ದು, ನಿಯಮಾವಳಿಗಳಂತೆ ಉದ್ದೇಶಿತ ಕಾರ್ಯಗಳಿಗೆ ಬಳಸುವ ನಿಟ್ಟಿನಲ್ಲಿ ಕ್ರಮಕೈಗೊಂಡು, ಸರ್ಕಾರವು

ಒಂದು ಒಳ್ಳೆಯ ಉದ್ದೇಶಕ್ಕಾಗಿ ವಶಪಡಿಸಿಕೊಂಡಿರುವ ಜಮೀನನ್ನು ಖಾಸಗಿ ವ್ಯಕ್ತಿಗಳು ಶೈಕ್ಷಣಿಕ ಅಭಿವೃದ್ಧಿ ಹೆಸರಿನಲ್ಲಿ ಬೇರೆ ಉದ್ದೇಶಕ್ಕೆ ಜಮೀನನ್ನು ಬಳಸಿ, ದುರುಪಯೋಗ ಪಡಿಸಿಕೊಳ್ಳುವುದನ್ನು ತಪ್ಪಿಸುವ ನಿಟ್ಟಿನಲ್ಲಿ ಸರ್ಕಾರ ಕಟ್ಟುನಿಟ್ಟಿನ ಕ್ರಮಕೈಗೊಳ್ಳಬೇಕಾಗುತ್ತದೆ. ನಾನು ಏತಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆಂದರೆ, 1907ನೇ ಸಾಲಿನಲ್ಲಿ ಬೆಂಗಳೂರು ನಗರಕ್ಕೆ ಮೊಟ್ಟ ಮೊದಲ ಬಾರಿಗೆ 'Silk City' ನಂತರ 'Science City' ಎಂಬ ಹೆಸರು ಬರಲು Indian Institute of Science ಕಾರಣವಾಗಿದ್ದು, ಅವರು ಜಾಗ ಕೇಳಿದರೆ ಜಾಗ ಕೊಡಲಿಲ್ಲ. ಚಿತ್ರದುರ್ಗದಲ್ಲಿ 200 ಎಕರೆ ಜಾಗ ಕೊಟ್ಟಿದ್ದಾರೆ. ಬೆಂಗಳೂರಿನ 18ನೇ ಕ್ರಾಸ್‌ನಲ್ಲಿರುವಂಥ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್. 100 ಪ್ರತಿಷ್ಠಿತ ಉನ್ನತ ಶಿಕ್ಷಣದಲ್ಲಿ ಇಡೀ ದೇಶದಲ್ಲಿಯೇ ಹೆಸರುವಾಸಿಯಾಗಿರುವುದು ಯಾವುದೆಂದರೆ, ಅದು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್. ಅದಕ್ಕೆ ಜಾಗ ಕೊಡದೇ 200 ಕಿಲೋ ಮೀಟರ್ ವ್ಯಾಪ್ತಿಯನ್ನೊಳಗೊಂಡ ಚಿತ್ರದುರ್ಗದಲ್ಲಿ ಜಾಗ ಕೊಟ್ಟಿದ್ದಾರೆ. ಇದು ಯಾವ ರೀತಿ ತಾರತಮ್ಯ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಅದಲ್ಲದೇ ಆ ವಿಚಾರ ಬಂದಾಗ ಬಹುತೇಕವಾಗಿ ಕೆ.ಐ.ಎ.ಡಿ.ಬಿ. ಯವರಾಗಲೀ, ಬಿ.ಡಿ.ಎ. ರವರಾಗಲೀ ಅಥವಾ ಕಂದಾಯ ಇಲಾಖೆಯಲ್ಲಿಯೂ ಸಹ ಬೆಂಗಳೂರು ನಗರದ ಸುತ್ತಮುತ್ತ ದೊಡ್ಡ ಮಾಫಿಯಾವೇ ಇದೆ. ಖಾಲಿ ಸೀಸೆ, ಪೇಪರ್ ಮಾರಾಟ ಮಾಡಲು ಬಂದಿರುವವನು 10 ವರ್ಷದ ಬಳಿಕ helicopter ಇಟ್ಟುಕೊಂಡಿರುತ್ತಾನೆ. ನಾವು Real Estate Business ಮಾಡುವುದರಲ್ಲಿ ತಪ್ಪೇನಿಲ್ಲ ಎಂದು ನಾಚಿಕೆ, ಮಾನ ಮರ್ಯಾದೆ ಬಿಟ್ಟು ಹೇಳುತ್ತಿದ್ದೇವೆ! ಮಾಡಿ. ಇದು ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಯಾರು ಏನು ಬೇಕಾದರೂ ಮಾಡಬಹುದು. ಆದರೆ, ಸಾರ್ವಜನಿಕ ಸ್ವತ್ತನ್ನು ದುರುಪಯೋಗ ಪಡಿಸಿಕೊಳ್ಳಲಿಕ್ಕೆ ಯಾರಿಗೂ ಕೂಡಾ ಹಕ್ಕಿಲ್ಲ. ಸರ್ಕಾರದ ಸ್ವತ್ತು, ಸಾರ್ವಜನಿಕರ ಸ್ವತ್ತಾಗಿದ್ದು, ಅದನ್ನು ಮಾಡಲಿಕ್ಕೆ ಆಗುತ್ತಿಲ್ಲ. ಮಾನ್ಯ ಭೋಜೇಗೌಡರವರು ಸ್ಯಾಂಕಿ ರಸ್ತೆ ಕಡೆಯೇ ಹೋಗುತ್ತಾರೆ. ಬೆಂಗಳೂರು ಅರಮನೆ ಮೈದಾನದ 15 ಎಕರೆ ಜಾಗವನ್ನು ಸ್ವಾಧೀನಪಡಿಸಿಕೊಳ್ಳಲು ಆಗುತ್ತಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾವು ಊರಿಗೆ ಹೋಗುವಾಗ ಅದೇ ರಸ್ತೆಯಲ್ಲಿಯೇ ಹೋಗುವುದು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಕೂಡಾ ಬೇರೆ ಅರ್ಥದಲ್ಲಿ ಹೇಳಿಲ್ಲ. ಬೆಂಗಳೂರು ಅರಮನೆ ಮೈದಾನದಲ್ಲಿ ರಸ್ತೆ ಅಗಲೀಕರಣ ಮಾಡಲಿಕ್ಕೆ 15 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಿಕ್ಕೆ ಆಗುತ್ತಿಲ್ಲ. ಆ ರಸ್ತೆ ಕಡೆ ಏನಾದರೂ ಬಂದ ಪಕ್ಷದಲ್ಲಿ ಪ್ರತಿನಿತ್ಯ ಒಂದು

ಕಿಲೋ ಮೀಟರ್ ಪಾಸ್ ಆಗಲು ಸುಮಾರು 1 ಗಂಟೆ ಸಮಯ ಬೇಕು. ಈ ರೀತಿಯ ನಿರ್ಣಯವನ್ನು ಕೈಗೊಂಡಾಗ ಸಾರ್ವಜನಿಕರಿಗೆ ಏನೆಂದು ಉತ್ತರ ಕೊಡಬೇಕು ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ, ಖಾಸಗಿ ಸಂಸ್ಥೆಗೆ ಕೊಟ್ಟಾಗ,... 1934ನೇ ಸಾಲಿನಲ್ಲಿ 'Bhonsala Military School' ತೆರೆಯಲಾಗಿತ್ತು.

(ಮುಂದು)

(641) 23.07.2024/5.10/ಎಸ್‌ಕೆ-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ. ಹರಿಪ್ರಸಾದ್ (ಮುಂದು):-**

ಅದರಲ್ಲಿ military training ಕೊಡುತ್ತಾರೆ. ಅದು ಯಾರಿಗೂ ಸಹ ಗೊತ್ತಾಗುವುದಿಲ್ಲ. ಈ ಸಂಘಟನೆಗಳಿದ್ದಾವೆ ನೋಡಿ, ಇವತ್ತು ಆ ಒಂದು ಎನ್.ಜಿ.ಓ., ಇಡೀ ವಿಶ್ವದಲ್ಲಿಯೇ ಅತ್ಯಂತ ಶ್ರೀಮಂತವಾದ ಎನ್.ಜಿ.ಓ., ಅದು. ಈ ಸಂಘ ಸಂಸ್ಥೆಗಳು ಅದರ ಅಡಿಯಲ್ಲಿ ಇರುವಂತಹದ್ದು. ಅವರಿಗೆ concessional rate ನಲ್ಲಿ ಕೊಟ್ಟಿದ್ದೀರಿ. ಕೆ.ಐ.ಎ.ಡಿ.ಬಿ.,ನವರು ಭೂ ಸ್ವಾಧೀನ ಪಡಿಸಿಕೊಂಡರು. ಆ ಬಡ ರೈತನಿಗೆ ಎಷ್ಟು ಪರಿಹಾರ ಕೊಟ್ಟಿದ್ದೀರಿ? ಒಂದು ಎಕರೆಗೆ ನಲವತ್ತು ಲಕ್ಷ ರೂಪಾಯಿಗಳು ಇಲ್ಲವೆಂದರೆ, ಅರವತ್ತು ಲಕ್ಷ ರೂಪಾಯಿಗಳನ್ನು ಪರಿಹಾರ ಕೊಟ್ಟಿದ್ದೀರಿ. ದೇವನಹಳ್ಳಿ ಈಗ ಮಾನ್ಯ ಕೆ.ಹೆಚ್. ಮುನಿಯಪ್ಪನವರ ಕ್ಷೇತ್ರ. ಇವರು ಸಹ ಈ ಸದನದಲ್ಲಿದ್ದಾರೆ. ಅದು diamond mine ಇದ್ದ ಹಾಗೆ. ಏಕೆಂದರೆ, ನಮ್ಮ ಹತ್ತಿರ ಆ real estate business ಇಲ್ಲ. ಹಾಗಾಗಿ ನಮಗೆ ಗೊತ್ತಾಗುವುದಿಲ್ಲ. ಅಲ್ಲಿನ ರೈತರಿಗೆ ನಲವತ್ತು ಲಕ್ಷ ರೂಪಾಯಿಗಳಿಂದ ಆರವತ್ತು ಲಕ್ಷ ರೂಪಾಯಿಗಳು ಕೊಡುತ್ತಾರೆ. ರೈತರಿಗೆ ಪರಿಹಾರ ಹಣವಾಗಿ ಆರವತ್ತು ಲಕ್ಷ ರೂಪಾಯಿಗಳಗಿಂತ ಹೆಚ್ಚಿನ ಪರಿಹಾರ ಕೆ.ಐ.ಎ.ಡಿ.ಬಿ., ನವರು ಕೊಡುವುದಿಲ್ಲ. Circle rate ಅಂತಾ Government rate ಎಂದರೆ, ಅದು ಮೂರು ಕೋಟಿ ರೂಪಾಯಿಗಳು. ಮಾರುಕಟ್ಟೆಯಲ್ಲಿ ಆರು ಕೋಟಿ ರೂಪಾಯಿಗಳು. 112 ಎಕರೆ ಜಮೀನಿಗೆ ಐವತ್ತು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಐದು ನೂರು ಕೋಟಿ ರೂಪಾಯಿಗಳ ಆಸ್ತಿಯನ್ನು ಐವತ್ತು ಕೋಟಿ ರೂಪಾಯಿಗೆ ಕೊಟ್ಟಿದ್ದೀರಲ್ಲ, ಇದಕ್ಕೆ ಯಾರು ಜವಾಬ್ದಾರರು? ಇಲ್ಲಿ ಏನು ಮಾಡುತ್ತಾರೆ ಎಂದು ಕೊಡುತ್ತಿದ್ದೀರಿ. ಒಂದು ಕಡೆ

ಸಂವಿಧಾನದಲ್ಲಿ ಪಾಶ್ಚಿಮಾತ್ಯ ಸೊಗಡು ಇದೆ, ಅದ್ದರಿಂದ ಭಾರತೀಯ ಸೊಗಡು ಇಲ್ಲ. ನಾವು ಅದಕ್ಕೆ ಸಂವಿಧಾನವನ್ನು ಒಪ್ಪುವುದಿಲ್ಲವೆಂದು ಒಂದು ಸಂಘಟನೆಗಳು ಹೇಳುತ್ತಿದ್ದರೆ, ಮತ್ತೊಂದು ಕಡೆ ವಿದೇಶಿ University ಗಳನ್ನು ಕರೆದುಕೊಂಡು ಬರುತ್ತೇವೆಂದು ಹೇಳುತ್ತಾರೆ. ಇದರ ಧ್ಯೇಯೋದ್ದೇಶಗಳು ಏನೆಂಬುದು ಸ್ಪಷ್ಟವಾಗಿಲ್ಲ. ಈ ಕಡೆ ರೈತರಿಗೆ ಐವತ್ತು ಲಕ್ಷ ರೂಪಾಯಿಗಳು, ಸರ್ಕಾರಿ circle rate ಮೂರು ಕೋಟಿ ರೂಪಾಯಿಗಳು, ಮಾರುಕಟ್ಟೆ ಬೆಲೆ ಆರು ಕೋಟಿ ರೂಪಾಯಿಗಳು. ಐದು ನೂರು ಕೋಟಿ ರೂಪಾಯಿಗಳು ಯಾರದು ಸ್ವಾಮಿ? ಕೆ.ಐ.ಎ.ಡಿ.ಬಿಗೆ ನಾವು budgetary support ಕೊಡುವುದಿಲ್ಲ. ಅವರು ಒಂದು ರೀತಿ ವ್ಯಾಪಾರ ಮಾಡುತ್ತಾರೆ. ಕೆ.ಐ.ಎ.ಡಿ.ಬಿ., ಬದಲು ಸರ್ಕಾರದ Real Estate ಎಂದು ಹೇಳಿಬಿಟ್ಟರೆ ಚೆನ್ನಾಗಿರುತ್ತದೆ. ಅಲ್ಲಿ ಕುಳಿತುಕೊಂಡು ಯಾರಿಗಾದರೂ ಒಳ್ಳೆಯ ವ್ಯಾಪಾರಸ್ಥರಿಗೆ ವ್ಯಾಪಾರ ಮಾಡಿಸಿದರೆ, ಚೆನ್ನಾಗಿರುತ್ತದೆ. ಅದು ಬಿಟ್ಟು, ಇವರು ಮಾಡಿರುವಂತಹದ್ದನ್ನು ನೋಡಿದಾಗ, ಸರ್ಕಾರದ ಬೊಕ್ಕಸಕ್ಕೆ ಐದು ನೂರು ಕೋಟಿ ರೂಪಾಯಿ ಗೋತ. ಆಕಸ್ಮಾತ್ ಇಲ್ಲ, ಅವರ ಧ್ಯೇಯೋದ್ದೇಶಗಳು ಒಳ್ಳೆಯದು ಇದೆ ಎಂದು ಹೇಳಬಹುದು. ಒಂದು ಯೂನಿರ್ವಸಿಟಿ ಮಾಡುವುದಕ್ಕೆ ಎಷ್ಟು ಹಣ ಬೇಕಾಗುತ್ತದೆ? ಅದಕ್ಕೆ ಕೊಡಿ ಬೇಡ ಎಂದು ಹೇಳುವುದಿಲ್ಲ. ಕರ್ನಾಟಕ ರಾಜ್ಯ ಶಿಕ್ಷಣ ಕ್ಷೇತ್ರದಲ್ಲಿ ಬಹಳ ಮುಂದುವರೆದಿರುವಂತಹ ರಾಜ್ಯವಾಗಿದೆ. ದೇವನಹಳ್ಳಿಯಲ್ಲಿ ನೂರು ಎಕರೆ ಅದಕ್ಕೆ ಕೊಡಿ ನಮ್ಮದೇನೂ ಅಭ್ಯಂತರವೇನಿಲ್ಲ. ಇದು ಅರ್ಥವಾಗದೇ ಇರುವಂತಹ ವಿಚಾರ. ಈಗಾಗಲೇ ದೇವನಹಳ್ಳಿ ಪಕ್ಕದಲ್ಲಿ ಏರ್‌ಪೋರ್ಟ್‌ನ್ನು ಜಾಸ್ತಿ ವಿಸ್ತರಣೆ ಮಾಡುವುದಕ್ಕಾಗುವುದಿಲ್ಲ. ಇನ್ನೊಂದು ಏರ್‌ಪೋರ್ಟ್ ಮಾಡುವುದಕ್ಕೆ ಜಾಗ ಹುಡುಕುತ್ತೇವೆಂದು ಅವರು ಹೇಳುತ್ತಿದ್ದಾರೆ. ಅದರ ಮಧ್ಯೆದಲ್ಲಿ ಒಂದು University ತಂದು, ಅದರ ಧ್ಯೇಯೋದ್ದೇಶ ಏನೆಂಬುದು ಯಾರಿಗೂ ಸಹ ಗೊತ್ತಿಲ್ಲ. ಆದ್ದರಿಂದ ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳುವುದೇನೆಂದರೆ, ಕಾನೂನು ತೊಡಕು ಇರುತ್ತದೆ. Cabinet decisions ಆಗಿವೆ ಎಂದು ಅವರು ಹೇಳುತ್ತಾರೆ. ಅವರ ಉತ್ತರ ಏನೆಂಬುದು ನನಗೆ ಚೆನ್ನಾಗಿ ಗೊತ್ತಿದೆ. ಏಕೆಂದರೆ, ಅವರ ತಂದೆಯವರ ಜೊತೆಗೆ ಇದ್ದವರು ನಾವು. ಇವರು ಉತ್ತರ ಏನು ಕೊಡುತ್ತಾರೆ ಎಂಬುದು ನನಗೆ ಚೆನ್ನಾಗಿ ಗೊತ್ತಿದೆ. ಸಾಮಾನ್ಯ ರೈತರ ಜಮೀನನ್ನು ನೀವು ತೆಗೆದುಕೊಂಡಿದ್ದೀರಿ. ಒಂದು ಅವರಿಗೆ ಆರು ಕೋಟಿ ರೂಪಾಯಿಗಳ ಪರಿಹಾರವನ್ನು ಕೊಡಿ. 2013ನೇ ಭೂ ಸುಧಾರಣೆ ಕಾಯಿದೆಯ ರೀತಿಯಲ್ಲಿ, ನೀವು

ಭೂ ಸ್ವಾಧೀನ ಪಡಿಸಿಕೊಂಡಾಗ, ನಾಲ್ಕು ಪಟ್ಟು ಕೊಡಬೇಕಲ್ಲ ಸ್ವಾಮಿ. ನಾಲ್ಕು ಪಟ್ಟು ಕೊಡಿ. ನಮ್ಮದೇನೂ ಅಭ್ಯಂತರವೇನಿಲ್ಲ. ರೈತರಿಗೆ ಪರಿಹಾರದ ಹಣವಾಗಿ ಐವತ್ತು ಲಕ್ಷ ರೂಪಾಯಿಗಳನ್ನು ಕೊಟ್ಟುಬಿಟ್ಟು, ನೀವು ಭೂಸ್ವಾಧೀನ ಪಡಿಸಿಕೊಂಡಿರುವ ಐದು ನೂರು ಕೋಟಿ ರೂಪಾಯಿಗಳ ಆಸ್ತಿಯನ್ನು ಯಾವುದೋ ಸಂಘ ಸಂಸ್ಥೆಗಳಿಗೆ ಐವತ್ತು ಕೋಟಿ ರೂಪಾಯಿಗಳಿಗೆ ಕೊಟ್ಟರೆ, ಕರ್ನಾಟಕದ ಬೊಕ್ಕಸಕ್ಕೆ ನಷ್ಟ. ಅದ್ದರಿಂದ ದಯವಿಟ್ಟು, ನಾನು ತಮ್ಮ ಮೂಲಕ ಸರ್ಕಾರ ಮತ್ತು ಮಾನ್ಯ ಸಚಿವರಿಗೆ ಮನವಿ ಏನೆಂದರೆ, ಸರ್ಕಾರದ ಬೊಕ್ಕಸಕ್ಕೆ ಏನೊಂದು ನಷ್ಟವಾಗಿದೆ. ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಏನು ಮಾಡಬೇಕು? ಈಗಾಗಲೇ ಜಾಗ ಕೊಟ್ಟು ಎರಡು ವರ್ಷಗಳಾಗಿವೆ. ಅಲ್ಲಿ ಏನೂ ಕೆಲಸ ನಡೆದಿಲ್ಲ. ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡುವುದೇನೆಂದರೆ, ಅಧಿಕಾರಿಗಳು ಇರುವಂತಹ ಒಂದು ಸಣ್ಣ ಸಮಿತಿ ಮಾಡಿ, ಕಳುಹಿಸಿ. ಅಲ್ಲಿ ಏನೇನಾಗಿದೆ ಎಂಬ ಬಗ್ಗೆ ವಿಚಾರ ಮಾಡಿ, ಸದನಕ್ಕೆ ತಿಳಿಸಿದರೆ, ಬಹಳ ಒಳ್ಳೆಯದು ಎಂದು ನಾನು ತಮ್ಮ ಮೂಲಕ ಮನವಿ ಮಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ತಾವು ಉತ್ತರ ಹೇಳಿ.

**ಶ್ರೀ ಎಂ.ಬಿ. ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):–** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾಗಿರುವ ಶ್ರೀ ಬಿ.ಕೆ. ಹರಿಪ್ರಸಾದ್‌ರವರು ಈ CESS (Centre for Educational and Social Studies) ಗೆ Chanakya University ಎನ್ನುತ್ತಾರೆ. ಇದಕ್ಕೆ 116 ಎಕರೆ ಜಮೀನಿಗೆ ಐವತ್ತು ಕೋಟಿ ರೂಪಾಯಿಗಳಿಗೆ ಹಂಚಿಕೆ ಮಾಡಿದೆ. ಆ ಕಾಲದಲ್ಲಿ ಕ್ಯಾಬಿನೆಟ್ ಇದನ್ನು ನಿರ್ಣಯ ಮಾಡಿಕೊಟ್ಟಿದ್ದಾಗಿದೆ. ಈಗಾಗಲೇ ನಾನು ಹೇಳಿರುವಂತೆ, ದಿನಾಂಕ 26.04.2021 ರಂದು ಸಚಿವ ಸಂಪುಟವಾದ ನಂತರ ದಿನಾಂಕ 28.04.2021 ರಂದು ಸರ್ಕಾರಿ ಆದೇಶವಾಗಿರುತ್ತದೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ಹಾಗೇ, ಅದು ಮೂರು ಕೋಟಿ, ಆರು ಕೋಟಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅಲ್ಲಿ ಬಲ್ಕ್ ಅಂದರೆ, ನಾವು development

ಮಾಡುವಾಗಿಲ್ಲ. Bulk allocation ನಲ್ಲಿ ಆವಾಗ ಸ್ವಾಧೀನ ವೆಚ್ಚ, ಸೇವಾ ಶುಲ್ಕ ಹಾಗೂ ಬಡ್ಡಿ ಸೇರಿ ಪ್ರತಿ ಎಕರೆಗೆ 1.61 ಕೋಟಿ ರೂಪಾಯಿಗಳಾಗುತ್ತಿತ್ತು. ಮಾನ್ಯ ಸದಸ್ಯರು ಈಗಾಗಲೇ ಹೇಳಿದ್ದಾರೆ. Land acquisition ಗೆ ನಮ್ಮ ಕೆ.ಐ.ಎ.ಡಿ.ಬಿ.,ಯ Act separate ಇದೆ. ಆದರೆ ನಾವು ಏನು ಪರಿಹಾರ ಕೊಡುತ್ತೇವೆಯೆಲ್ಲಾ, it is as per the 2013 Land Acquisition Act. Four times, ಕೊಡುವುದನ್ನೆಲ್ಲಾ ಮಾಡುತ್ತಿದ್ದಾರೆ. ಕೆ.ಐ.ಎ.ಡಿ.ಬಿ., ಒಂದು real estate ಎಂದು ಮಾನ್ಯ ಸದಸ್ಯರು ಹೇಳಿದರು. ನಮಗೆ ಯಾವುದೇ budgetary support ಇಲ್ಲ. ಕೆ.ಐ.ಎ.ಡಿ.ಬಿ.,ನಿಂದ ಏನು acquire ಮಾಡುತ್ತೇವೋ, ಅದರ ಮೇಲೆ ನಾವು development ಮಾಡಿಕೊಂಡು 15 percent caping ಕೂಡ ಇದೆ. ಆ caping ನಲ್ಲಿ ಕೂಡ ನಾವು ಇದು ಮಾಡಬೇಕಾಗಿದೆ. ಈ ಕೇಸ್‌ನಲ್ಲಿ ನಮಗೆ ಬಹಳಷ್ಟು ಬಾಕಿ ಬರುವುದು ಇದೆ. ನಂತರ ಅದರ ಬಗ್ಗೆ ಹೇಳುತ್ತೇನೆ. ನೂರ ಹದಿನಾರು ಎಕರೆಗೆ ಒಂದು ನೂರ ಎಂಭತ್ತೇಳು ಕೋಟಿ ರೂಪಾಯಿಗಳಾಗುತ್ತಿತ್ತು. ಕೆ.ಐ.ಎ.ಡಿ.ಬಿ.,ಗೆ ನಷ್ಟವಾಗದ ರೀತಿಯಲ್ಲಿ ಇವತ್ತಿನ ದರ ನಿಗಧಿ ಪಡಿಸುವುದಕ್ಕೆ ಆರ್ಥಿಕ ಇಲಾಖೆ ಕೂಡ ಸಲಹೆ ನೀಡಿತ್ತು. ಸಚಿವ ಸಂಪುಟ ಒಂದು ನಿರ್ಣಯ ತೆಗೆದುಕೊಳ್ಳುತ್ತದೆ. ಅದನ್ನು ಐವತ್ತು ಕೋಟಿ ರೂಪಾಯಿಗಳಿಗೆ ನೀಡುವುದಕ್ಕೆ ಸಚಿವ ಸಂಪುಟ ನಿರ್ಧಾರ ಮಾಡುತ್ತದೆ.

ಮಾನ್ಯ ಸಭಾಪತಿಯವರೇ, ಇಲ್ಲಿ ಏನಾಗುತ್ತದೆ ಎಂದರೆ, ಒಟ್ಟು ರೂ. 1.61 ಕೋಟಿಗಳಂತೆ, 116 ಎಕರೆಗೆ ನೂರ ಎಂಭತ್ತೇಳು ಕೋಟಿ ರೂಪಾಯಿಗಳು, ಅದನ್ನು ಐವತ್ತು ಕೋಟಿ ರೂಪಾಯಿಗಳಿಗೆ ಕೊಟ್ಟಾಗ, ಸುಮಾರು ಒಂದು ನೂರ ಮೂವತ್ತೇಳು ಕೋಟಿ ರೂಪಾಯಿಗಳು ನಮ್ಮ ಕೆ.ಐ.ಎ.ಡಿ.ಬಿ.,ಗೆ ಆರ್ಥಿಕ ನಷ್ಟವಾಗುತ್ತದೆ. ನಾವು reimbursement ಮಾಡಬೇಕೆಂದು ಹೇಳಿ, ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ. ಮಾನ್ಯ ಸದಸ್ಯರು ಹೇಳಿರುವಂತೆ, ಇವತ್ತಿನ ದಿವಸ KIADB Industrial Act ನಲ್ಲಿ ನಾವು Educational Institutions ಗೆ ಕೊಡುವುದಕ್ಕೆ ಆಸ್ಪದವಿದೆ. ಈ ಹಿಂದೆ ಧಾರವಾಡದಲ್ಲಿ ಎಸ್.ಡಿ.ಎಂ.,ಗೆ ನನಗೆ ತಿಳಿದ ಪ್ರಕಾರ, subject to correction, ಎಸ್.ಡಿ.ಎಂ.ಗೂ ಕೂಡ ನಾವು ಕೆ.ಐ.ಎ.ಡಿ.ಬಿ.ಯಿಂದ acquire ಮಾಡಿಕೊಟ್ಟಿದ್ದೇವೆ. ಇದರಲ್ಲಿ ಬಹಳ ಶಿಕ್ಷಣ ಸಂಸ್ಥೆಗಳು ಬರುತ್ತದೆ. ಇದರಲ್ಲಿ CA sites ಕೂಡ ಇರುತ್ತದೆ. ಇಲ್ಲಿ ನಮಗೆ ಬಹಳಷ್ಟು

ಅವಕಾಶಗಳಿವೆ. Banks, Post Office, Telephone ಅದೇ ರೀತಿ R & D Centres ಮತ್ತು Technical Institutions, Educational Institutions, Hospitals, Hotels ಗೆ provision ಇದೆ, ಇಲ್ಲವೆಂತೇನಿಲ್ಲ. ಕೆ.ಐ.ಎ.ಡಿ.ಬಿ., ನಲ್ಲಿ ಅದು ಇದೆ.

ಮಾನ್ಯ ಸಭಾಪತಿಯವರೇ, ಇದರಲ್ಲಿ ಏನಾಗುತ್ತದೆ ಎಂದರೆ, ದಿನಾಂಕ 24.06.2021ರಂದು ಇದನ್ನು ತೊಂಭತ್ತೊಂಭತ್ತು ವರ್ಷಗಳ ಕಾಲಕ್ಕೆ ಅವೊತ್ತಿನ ದಿವಸ ಗುತ್ತಿಗೆಯನ್ನು ಕೊಟ್ಟಿದ್ದಾರೆ. ಅವೊತ್ತಿನ ದಿವಸ ಅವರಿಗೆ ಐದು ವರ್ಷಗಳಲ್ಲಿ ಸಮಯ ಇರುತ್ತದೆ. ಅವರು ಐದು ವರ್ಷಗಳಲ್ಲಿ ಈ 116 ಎಕರೆಗೆ ಅದಕ್ಕೆ 51 percent ನಲ್ಲಿ develop ಮಾಡಬೇಕು. ದಿನಾಂಕ 23.06.2026 ರಂದು ಐದು ವರ್ಷಗಳ ಕಾಲಾವಧಿ ಪೂರ್ಣಗೊಳ್ಳುತ್ತದೆ. ಅಂದರೆ ಸುಮಾರು ಒಂದು ವರ್ಷ ಹನ್ನೊಂದು ತಿಂಗಳು ಇದೆ. ಆ ಒಂದು ವರ್ಷದಲ್ಲಿ ಈ ಸಂಸ್ಥೆಗೆ ನಾವೇನು ಭೂಮಿಯನ್ನು ಕೊಟ್ಟಿದ್ದೇವೆ. ಆ ಭೂಮಿಯನ್ನು ಸದುಪಯೋಗ ಮಾಡಿಕೊಂಡು 51 percent development ಮಾಡಿದರೆ ಆಗ ನಮಗೆ cause of action ಬರುತ್ತದೆ. Whether they have developed it or not, ತೊಂಭತ್ತೊಂದು ವರ್ಷಗಳ ಬದಲಿ ಹತ್ತು ವರ್ಷಕ್ಕೆ ಎಂದು ಮತ್ತೊಂದು ವಿಚಾರವನ್ನು ಮಾನ್ಯ ಸದಸ್ಯರು ಹೇಳಿದರು.

ಮಾನ್ಯ ಸಭಾಪತಿಯವರೇ, ಸಚಿವ ಸಂಪುಟ ದಿನಾಂಕ:01.01.2022ರಂದು ತೊಂಭತ್ತೊಂಭತ್ತು ವರ್ಷ ಗುತ್ತಿಗೆಯ ಬದಲಾಗಿ ಹತ್ತು ವರ್ಷ ಎಂಬ ಬಗ್ಗೆ ನಿರ್ಣಯ ತೆಗೆದುಕೊಂಡಿದೆ. ಕೇವಲ ಈ ಒಂದು ಸಂಸ್ಥೆಗಳಿಗೆ ಅಲ್ಲ. ಎಲ್ಲರಿಗೂ ಕೂಡ ಇದು ಅನ್ವಯಿಸುವಂತಹದ್ದು. ಈ existing ಬೇರೆ ಬೇರೆ leases ಇದೆಯೆಲ್ಲಾ, ಅದು ಎಲ್ಲರಿಗೂ ಕೂಡ ಅನ್ವಯವಾಗುತ್ತದೆ. ಹೀಗಾಗಿ, ಹತ್ತು ವರ್ಷದ lease period ಇದೆ. ಇದಕ್ಕೂ ಕೂಡ ಅನ್ವಯವಾಗುತ್ತದೆ. ಇಷ್ಟೆಲ್ಲಾ ಮಾಹಿತಿಯನ್ನು ತಮ್ಮ ಮೂಲಕ ಹಿರಿಯ ಸದಸ್ಯರಾದ ಶ್ರೀ ಹರಿಪ್ರಸಾದ್‌ರವರಿಗೆ ತಿಳಿಸಬಯಸುತ್ತೇನೆ.

**ಸಭಾಪತಿಯವರು:–** ಮಾನ್ಯ ತಿಪ್ಪೇಸ್ವಾಮಿಯವರೇ, ತಾವು ಮಾತನಾಡಿ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಸರ್ಕಾರದ policy ಏನು? ತೊಂಭತ್ತೊಂಭತ್ತು ವರ್ಷಗಳ ಕಾಲ ಕೊಡಬೇಕೆಂಬುದು ಇದೆಯಾ ಅಥವಾ ಮೂವತ್ತು ವರ್ಷಗಳ ಕಾಲ ಕೊಡಬೇಕೆಂಬುದು ಇದೆಯಾ. ಏಕೆಂದರೆ, ಬಿ.ಡಿ.ಎ., ಮತ್ತು ಬಿ.ಬಿ.ಎಂ.ಪಿ., ಹಾಗೂ ತಾವು ಕೊಡುತ್ತಿದ್ದೀರಿ. ಆಮೇಲೆ ...

**ಶ್ರೀ ಎಂ.ಬಿ. ಪಾಟೀಲ್:–** ಮಾನ್ಯ ಸದಸ್ಯರೇ, ಮೊದಲು ತೊಂಭತ್ತೊಂಭತ್ತು ವರ್ಷ ಇತ್ತು ಎಂದು ನಾನು ಈಗಾಗಲೇ ಹೇಳಿದ್ದೇನೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಚಿವರೇ, ಅದನ್ನು ವಾಪಸ್ಸು ಮಾಡಿ, ಹತ್ತು ವರ್ಷ ಎಂದು ಮಾಡಿ.

**ಶ್ರೀ ಎಂ.ಬಿ. ಪಾಟೀಲ್:–** ಮಾನ್ಯ ಸದಸ್ಯರೇ, ತೊಂಭತ್ತೊಂಭತ್ತು ವರ್ಷ ಎಂದು ನಮ್ಮ ಹಿಂದಿನ ಸರ್ಕಾರ ಮಾಡಿದೆ. ಒಟ್ಟು ಹಿಂದಿನ ಸರ್ಕಾರ ಮಾಡಿದೆ ಎಂದು ಹೇಳಿದ್ದೇನೆ. ಈ ಹಿಂದೆ ದಿನಾಂಕ 01.01.2022ರಂದು ಸಚಿವ ಸಂಪುಟದಲ್ಲಿ 99 ವರ್ಷದ ಗುತ್ತಿಗೆ ಅವಧಿಯ ಬದಲಿಗೆ 10 ವರ್ಷ ಎಂದು ಅನುಮೋದನೆ ಮಾಡಿದ್ದಾರೆ. It applies to everyone.

(ಮುಂದು)

(642) 23.07.2024 5.20, ಟಿಸಿಹೆಚ್–ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಬಿ.ಡಿ.ಎ., ಬಿ.ಬಿ.ಎಂ.ಪಿ., ಮತ್ತು ಕೆ.ಐ.ಎ.ಡಿ.ಬಿ.ಯಲ್ಲಿ ಈ ಹಿಂದೆ ಕೂಡ 30 ವರ್ಷಗಳ ಅವಧಿಗೆ lease-cum-sale deed ಕೊಟ್ಟಿಲ್ಲ, ಲೀಸ್‌ಗೆ ಮಾತ್ರ ಕೊಟ್ಟಿದ್ದಾರೆ. 30 ವರ್ಷ ಮುಗಿದ ನಂತರ ಅವರೆಲ್ಲಾ conditions fulfill ಮಾಡಿದರೆ ನಂತರ ಅವರಿಗೆ absolute sale deed ಕೊಡುತ್ತಾರೆ. ಎಲ್ಲಿಯೂ ಕೂಡ lease-cum-sale deed ಕೊಡುವುದಿಲ್ಲ. Lease- cum-sale-deed ಮಾಡಿಕೊಟ್ಟರೆ ಅವರು ಬ್ಯಾಂಕಿನಲ್ಲಿ ಹೋಗಿ ಸಾಲ ಪಡೆದುಕೊಳ್ಳುತ್ತಾರೆ. ದಯಮಾಡಿ ಸರ್ಕಾರದಲ್ಲಿ ಒಂದು ಪಾಲಿಸಿ ಮಾಡಿ. 10 ವರ್ಷಕ್ಕೆ ಲೀಸ್‌ಗೆ

ಕೊಟ್ಟರೆ ಯಾರು ಏನೂ ಮಾಡುವುದಕ್ಕೆ ಆಗುವುದಿಲ್ಲ, ಒಂದು ಯೂನಿವರ್ಸಿಟಿಯನ್ನು ಕಟ್ಟುವುದಕ್ಕೆ ಆಗುವುದಿಲ್ಲ. ನಾನು ಅದರ ಬಗ್ಗೆ ಮಾತನಾಡುತ್ತಿಲ್ಲ. ಯಾರಿಗೂ ಸಾಧ್ಯವಾಗುವುದಿಲ್ಲ. ಅವರಿಗೆ ೩೦ ವರ್ಷಗಳ ಕಾಲ ಲೀಸ್‌ಗೆ ಕೊಡಿ. ನಂತರ ಅವರಿಗೆ ಏನಾದರೂ ಬೇಕಾದರೆ ಅವೊತ್ತಿನ ಮಾರ್ಕೆಟ್ ಬೆಲೆ ಏನಿದೆಯೋ ಅಷ್ಟು ಹಣ ಕೊಟ್ಟರೆ ಆಗ ಅವರಿಗೆ sale deed ನ್ನು execute ಮಾಡಿಕೊಡಬೇಕೆಂದು ಸರ್ಕಾರ ಒಂದು ಪಾಲಿಸಿ ಮಾಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ನೀಡುತ್ತಿದ್ದೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿಯವರಿಗೆ ಬಹಳ ಅನುಭವ ಇದೆ. ನಾನು ಈ ಹಿಂದೆ ಸುಮಾರು ೩೦ ವರ್ಷಗಳ ಅವಧಿಗೆ ಲೀಸ್‌ಗೆ ಕೊಟ್ಟಿದ್ದಾರೆಂದು ಹೇಳಿದೆನು. ಬೆಂಗಳೂರು ನಗರದಲ್ಲಿ ಮೈಸೂರು ಬ್ಯಾಂಕಿನ ಜಾಗದ ಹತ್ತಿರ ಲೀಸ್‌ಗೆ ಕೊಟ್ಟಿರತಕ್ಕಂಥದ್ದು ರೂ.೫೦೦ ಗಳಿಗೆ ಬಾಡಿಗೆಗೆ ಕೊಟ್ಟಿದ್ದಾರೆ. ಅವರು ಕೋರ್ಟ್‌ಗೆ ಹೋಗಿ ಕೇಸ್ ಹಾಕಿಕೊಂಡಿದ್ದಾರೆ. ಅಲ್ಲಿ ಏನೂ ಮಾಡುವುದಕ್ಕೆ ಆಗುತ್ತಿಲ್ಲ. Lease–cum –sale ಎನ್ನತಕ್ಕಂಥದ್ದು ಸಾರ್ವಜನಿಕರ ಆಸ್ತಿ ಸ್ವಾಮಿ. ಪ್ರಜಾಪ್ರಭುತ್ವದಲ್ಲಿ ಅದು ಜನಗಳಿಗೆ ಇರುವಂತಹ direct right. ಇದನ್ನು ಸೇಲ್ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ನೀವು ಯೋಚನೆ ಮಾಡಬೇಕಾಗುತ್ತದೆ. ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮತ್ತೊಂದು ಮನವಿ ಮಾಡುವುದೇನೆಂದರೆ, ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಹೇಳಿದರು. ಕೆ.ಐ.ಎ.ಡಿ.ಬಿ.,ಯಿಂದ ನಾವು ಹೋಟೆಲ್‌ಗಳಿಗೆ ಕೊಡಬಹುದು, educational institutions ಗೆ ಕೊಡಬಹುದು, ಚೌಲ್ಟ್ರಿಗೆ ಕೊಡಬಹುದು ಇತರೆ ಎಲ್ಲದಕ್ಕೂ ಕೊಡಬಹುದು. ಮತ್ತೆ ಕೆ.ಐ.ಎ.ಡಿ.ಬಿ., ಎಂದು ಏಕೆ ಹೆಸರು ಇಟ್ಟಿದ್ದೀರಿ? ಆ nomenclature ನ್ನು ಬದಲಾವಣೆ ಮಾಡಿಬಿಟ್ಟರೆ ಒಳ್ಳೆಯದು. ಅದನ್ನು real estate ಎಂದು ಮಾಡಿಬಿಡಿ ಒಳ್ಳೆಯದು. ಏಕೆಂದರೆ ನನ್ನ ಹತ್ತಿರ ಸಾಕಷ್ಟು ಮಾಹಿತಿ ಇದೆ. ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ ಅಷ್ಟೇ. ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಯಾರ್ಯಾರು ಇದ್ದಾರೆ ಎನ್ನುವುದು ಸಹ ನನಗೆ ಗೊತ್ತಿದೆ. ಅದನ್ನು ಕೂಡ ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ

ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ, ಬೆಂಗಳೂರು ನಗರದ ಹಿತದೃಷ್ಟಿಯಿಂದ ಹೇಳುವುದಾದರೆ, ನೀವು Tata Institute ಗೆ ಜಾಗ ಕೊಡುವುದಕ್ಕೆ ಆಗುವುದಿಲ್ಲವೆಂದರೆ ಇನ್ನು ಯಾವುದಕ್ಕೆ ಜಾಗ ಕೊಡುತ್ತೀರಿ ಸ್ವಾಮಿ? ನಾನು 44 ವರ್ಷಗಳ ಹಿಂದೆ Karnataka Slum Development Clearance Boardನಲ್ಲಿ ಛೇರ್ಮನ್ ಆಗಿದ್ದೆನು. ಕೊಳಚೆ ಪ್ರದೇಶದಲ್ಲಿರುವವರಿಗೆ rehabilitation ಮಾಡೋಣವೆಂದರೆ ಜಾಗ ಕೂಡ ಸಿಗಲಿಲ್ಲ. ಇದಕ್ಕೆಲ್ಲಾ ಫ್ರೀ ಜಾಗ ಕೊಡುತ್ತಿರುವುದು. ಮಾನ್ಯ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿಯವರು ಬಹಳ ಚೆನ್ನಾಗಿ ಹೇಳಿದರು. ಸರ್ಕಾರಿ ಜಮೀನಿನಲ್ಲಿ ನೀವು ಸಾಲ ತೆಗೆದುಕೊಂಡ ನಂತರ 99 ವರ್ಷದಲ್ಲಿ ಏನು ಆಗುತ್ತದೆ? ಆದ್ದರಿಂದ ತಾವು ಮಾಡಿರುವ ಅಗ್ರಿಮೆಂಟ್ ಸಂಪೂರ್ಣವಾಗಿ ದೋಷಪೂರಿತವಾಗಿರುತ್ತದೆ. ಆದ್ದರಿಂದ ಇದರ ಬಗ್ಗೆ ನೀವು ಯೋಚನೆ ಮಾಡಬೇಕು. ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಸಚಿವರಿಗೆ ನನ್ನ ಮನವಿ ಏನೆಂದರೆ, ಕೆ.ಐ.ಎ.ಡಿ.ಬಿ.ಯಿಂದ ಬೆಂಗಳೂರು, ಮಂಗಳೂರು, ಹುಬ್ಬಳ್ಳಿ–ಧಾರವಾಡ, ಬೆಳಗಾವಿಯಲ್ಲಿ ಎಷ್ಟು ಎಕರೆ ಪ್ರದೇಶಗಳನ್ನು acquire ಮಾಡಿದ್ದೀರಿ; ಎಷ್ಟು ಜಮೀನುಗಳನ್ನು denotify ಮಾಡಿದ್ದೀರಿ; ಎಷ್ಟನ್ನು ನೀವು ಕೈಗಾರಿಕೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ ಎನ್ನುವುದನ್ನು ನನಗೆ ಒಂದು ಮಾಹಿತಿ ಕಳುಹಿಸಿಕೊಟ್ಟರೆ ಬಹಳ ನೆಮ್ಮದಿಯಾಗಿ ಮುಂದಿನ ಹೆಜ್ಜೆ ಏನು ಇಡಬೇಕು ಎನ್ನುವುದನ್ನು ಯೋಚನೆ ಮಾಡಬಹುದು. ಏಕೆಂದರೆ ಮಾನ್ಯ ಸಚಿವರು ಹೇಳಿದಂತೆ, ಬಿ.ಡಿ.ಎ.,ನಲ್ಲಿ ಸೈಟ್‌ಗಳು ಅಲಾಟ್ ಆಗುವುದಿಲ್ಲ. ಅಲ್ಲಿ ಜಮೀನು acquire ಮಾಡುವುದು, ಮತ್ತು denotification ಮಾಡುತ್ತಾರೆ. ಕರ್ನಾಟಕ ಹೌಸಿಂಗ್ ಬೋರ್ಡ್‌ನವರು ಕೂಡ ಜಮೀನು acquire ಮಾಡುವುದು ಮತ್ತು denotification ಮಾಡುವುದನ್ನು ಮಾಡುತ್ತಾರೆ. ಯಾರಿಗಾದರು ಬಡವರಿಗೆ ಜಾಗವನ್ನು ಕೊಟ್ಟಿದ್ದೇವೆಂದು ಹೇಳಿಬಿಡಲಿ. ಎಲ್ಲರೂ ತಮ್ಮ ಚುನಾವಣಾ manifesto ನಲ್ಲಿ ಹೇಳುತ್ತಾರೆ. ಸೆಂಟ್ರಲ್ ಬಜೆಟ್‌ನಲ್ಲೂ ಕೂಡ ಲಕ್ಷ ಮನೆಗಳನ್ನು ಕಟ್ಟಿಕೊಡುತ್ತೇವೆಂದು ಹೇಳಿದ್ದಾರೆ. ಅದು ಎಲ್ಲಿ ಕಟ್ಟಿದ್ದಾರೆಂದು ಹೇಳಿಬಿಡಲಿ. ಆದ್ದರಿಂದ ಇದನ್ನು ಇಂಗ್ಲೀಷ್‌ನಲ್ಲಿ 'Banana Republic' ಎಂದು ಹೇಳುತ್ತಾರೆ. ಅಂದರೆ ಕೈಯಲ್ಲಿ ದೊಣ್ಣೆ ಇದ್ದರೆ, ಆತ ಏನು ಬೇಕಾದರೂ ನಡೆಸಿಕೊಂಡು ಹೋಗಬಹುದು. ಆ ರೀತಿ ಆಗುವಂತಿಲ್ಲ. ಸಂವಿಧಾನದ ಚೌಕಟ್ಟಿನಲ್ಲಿ ಕಟ್ಟಕಡೆಯ ವ್ಯಕ್ತಿಯ ಕಷ್ಟಗಳಿಗೆ ಸ್ಪಂದಿಸತಕ್ಕಂಥ ಕೆಲಸ ಸಂವಿಧಾನದ ಮೂಲಕ

ಆಗಬೇಕಾಗಿರುತ್ತದೆ. ಆದ್ದರಿಂದ ಮಾನ್ಯ ಸಚಿವರ ಹತ್ತಿರ ನನ್ನ ಮನವಿ ಏನೆಂದರೆ, ದಯವಿಟ್ಟು ಮಾಹಿತಿಗಳನ್ನು ಕೊಡಬೇಕು. ಅವರಿಗೆ ಎಷ್ಟು ಜಾಗ ಕೊಡಬೇಕೋ ಅಷ್ಟು ಜಾಗವನ್ನು ಆ University ಗೆ ಕೊಡಲಿ, ತಪ್ಪೇನಿಲ್ಲ. ಅದೇನು ಕಾನೂನು ಪ್ರಕಾರ ಮಾಡುತ್ತಾರೋ ಮಾಡಲಿ. ಆದರೆ ಉಳಿಕೆ ಜಾಗವನ್ನು land bank ಮಾಡುವುದು ಬೇಕಾಗಿಲ್ಲ. ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು ಬೇರೆ ಒಳ್ಳೆಯ ಕೆಲಸಗಳಿಗೆ ಉಪಯೋಗಿಸಬೇಕು ಅಥವಾ Tata Institute ಗೆ ಕೊಟ್ಟರೆ ಬಹಳ ಸಂತೋಷ. ಅದನ್ನು ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡುತ್ತಿದ್ದೇನೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ ನಾನು ಒಂದು ವಿಚಾರವನ್ನು ಸ್ಪಷ್ಟಪಡಿಸುತ್ತೇನೆ. ಕೆ.ಐ.ಎ.ಡಿ.ಬಿ.ಯಿಂದ ಇವತ್ತಿನ ದಿವಸ ನಾವು allocation ಮಾಡಿದಾಗ, ಈ ಕೇಸ್ ಬಿಡಿ. ಏಕೆಂದರೆ ಇದಕ್ಕೆ ಕ್ಯಾಬಿನೆಟ್‌ನಲ್ಲಿ concession ಕೊಟ್ಟಿದ್ದೇವೆ. ಇವತ್ತಿನ ದಿವಸ ಪೂರ್ಣ ಪ್ರಮಾಣದ ಹಂಚಿಕೆ ದರವನ್ನು ನಾವು ಪಡೆಯುತ್ತೇವೆ. ಇಂಡಸ್ಟ್ರೀಸ್‌ನವರು ಬಂದಾಗ ನಿಮಗೆ 99 ವರ್ಷಗಳು ಅಥವಾ 30 ವರ್ಷಗಳಿಗೆ ಕೊಡುತ್ತೇವೆ ಎಂದರೆ, ಬಹುಶಃ ಯಾವ ಇಂಡಸ್ಟ್ರೀಸ್‌ನವರು ಕೂಡ ಬರುವುದಿಲ್ಲ. ಇವತ್ತಿನ ಇರತಕ್ಕಂಥ ಪರಿಸ್ಥಿತಿಯನ್ನು ನಾನು ಹೇಳಬೇಕಾಗುತ್ತದೆ. ಇವತ್ತಿನ ದಿವಸ ನಾವು ಅವರಿಗೆ upfront ಆಗಿ ಇವತ್ತಿನ ವ್ಯಾಲ್ಯೂ ಏನಿದೆ, ಅದನ್ನು ಪಡೆದುಕೊಳ್ಳುತ್ತೇನೆ. ನೀವು ಅವರಿಗೆ 30 ವರ್ಷಕ್ಕೆ ಕೊಟ್ಟು, ತದನಂತರ ಅವರು ಆಗಿನ ಮಾರ್ಕೆಟ್ ವ್ಯಾಲ್ಯೂ ಕೊಡಿ ಎಂದರೆ ಯಾವ ಇಂಡಸ್ಟ್ರೀಸ್‌ನವರು ಬರುವುದಿಲ್ಲ. ಇರತಕ್ಕಂಥ ಇಂಡಸ್ಟ್ರೀಸ್‌ನವರು ಕೂಡ ಬಿಟ್ಟು ಹೋಗುತ್ತಾರೆ. ಆಮೇಲೆ ಅದರಂತೆ 10 ವರ್ಷಗಳ ನಂತರ ಅವರಿಗೆ lease-cum-sale deed ನ್ನು ನಾವು ಮಾಡಿಕೊಡುತ್ತೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಎಂ.ಬಿ.ಪಾಟೀಲ್‌ರವರೇ, ಒಂದು ನಿಮಿಷ. 2-ಜಿ ಪ್ರಸಂಗ ಆಯಿತು. ಅದು ಎಷ್ಟು zero ಗಳನ್ನು ಸೇರಿಸಿಬಿಟ್ಟು ನಮ್ಮ ಮೇಲೆ ಸುಮಾರು ರೂ.1,75,000 ಕೋಟಿಗಳು ಎಂದು ಆಪಾದನೆ ಮಾಡಿದರು. ಅದೆಷ್ಟು ಕೋಟಿಗಳು ಎಂದು ನಮಗೆ ಗೊತ್ತೇ ಇಲ್ಲ. Presumptive loss. ಈಗ ನೀವು ಸುಮಾರು ರೂ.1.50 ಕೋಟಿ ರೂಪಾಯಿಗಳಿಗೆ ಅಥವಾ 3

ಕೋಟಿ ರೂಪಾಯಿಗಳಿಗೆ ಕೊಡುವುದು, ಇನ್ನು ಸುಮಾರು 50 ವರ್ಷಗಳಿಗೆ ಅದು ಸಾವಿರಾರು ಕೋಟಿಗಳು ಆಗಿರುತ್ತದೆ. ಸರ್ಕಾರಕ್ಕೆ ಲಾಸ್ ಆಗಿದೆ ಎಂದು ಅದರ ವಿವರವನ್ನು ಹೇಳುವುದಕ್ಕೆ ನಾನೇನು CAG ಅಲ್ಲ. Presumptive loss ಆಗುತ್ತದೆ ಎನ್ನುವುದನ್ನು ಬಹಳ ತಿಳಿದುಕೊಂಡು ಮಾಡಿದರೆ ಸರಿ ಬರುತ್ತದೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಈಗ ಮತ್ತೆ ರಿಪೀಟ್ ಮಾಡುತ್ತೇನೆ. ಕೆ.ಐ.ಎ.ಡಿ.ಬಿ. ಪೂರ್ಣ ಪ್ರಮಾಣದ upfront ಆಗಿರುವ ಹಣವನ್ನು ತೆಗೆದುಕೊಳ್ಳುತ್ತೇವೆ. ಹೀಗಾಗಿ, ನಾವು ಅವರಿಗೆ ಲೀಸ್-ಕಂ-ಸೇಲ್ ಡೀಡ್‌ನ್ನು 10 ವರ್ಷಗಳಿಗೆ ಕೊಡುತ್ತೇವೆ. ಮಾನ್ಯ ಸದಸ್ಯರು ಬಿ.ಡಿ.ಎ., ಮತ್ತು ಕೆ.ಹೆಚ್.ಬಿ., ಬಗ್ಗೆ 30 ವರ್ಷಗಳು ಲೀಸ್ ಇರುತ್ತದೆಂದು ಹೇಳಿದರು. ಆದರೆ ಅಲ್ಲಿ ಅಲಾಟ್‌ಮೆಂಟ್ ರೇಟ್ ಕಡಿಮೆ ಇರುತ್ತದೆ. Upfront ಆಗಿ entire cost of the land including development charges plus 15% ಎಲ್ಲಾ ನಾವು ತೆಗೆದುಕೊಳ್ಳುತ್ತೇವೆ. ಆದರೆ ಬಿ.ಡಿ.ಎ., ಮತ್ತು ಕೆ.ಹೆಚ್.ಬಿ., ಯಲ್ಲಿ 30 ವರ್ಷಗಳಿಗೆ ಲೀಸ್‌ಗೆ ಕೊಡುವಾಗ ಅವರಿಗೆ ಪೂರ್ಣ ಪ್ರಮಾಣದ ಹಣವನ್ನು ಪಡೆಯಲಾಗುತ್ತದೆ. That will be of different value for 30 years' lease. ಹೀಗಿದ್ದಾಗ ಇಲ್ಲಿ ನಾವು 10 ವರ್ಷಗಳಿಗೆ ಅವರಿಗೆ ಲೀಸ್-ಕಂ-ಸೇಲ್ ಡೀಡ್‌ನ್ನು ಮಾಡಿಕೊಡುತ್ತೇವೆ. ಇವರು ಏನಾದರು ಅಗತ್ಯಕ್ಕಿಂತ ಜಾಸ್ತಿ ಲ್ಯಾಂಡ್‌ನ್ನು ಪಡೆದುಕೊಂಡು ರಿಯಲ್ ಎಸ್ಟೇಟ್ ಮಾಡುತ್ತಿದ್ದಾರೆ ಎಂದು ಮಾನ್ಯ ಸದಸ್ಯರಾದ ಹರಿಪ್ರಸಾದ್ ರವರು ಹೇಳಿದರು. ನಾನು ಈಗಾಗಲೇ ಹೇಳಿದಂತೆ, ಅಗತ್ಯಕ್ಕಿಂತ ಜಾಸ್ತಿ ಲ್ಯಾಂಡ್‌ನ್ನು ಪಡೆದುಕೊಂಡು ರಿಯಲ್ ಎಸ್ಟೇಟ್ ಮಾಡುತ್ತಿದ್ದರೆ ಅಂತಹವರದ್ದು ದಿನಾಂಕ 23.06.2026ಕ್ಕೆ 5 ವರ್ಷಗಳು ಪೂರ್ಣವಾಗುತ್ತದೆ. ಇನ್ನೂ 1 ವರ್ಷ 11 ತಿಂಗಳು ಬಾಕಿ ಇದೆ. ಆಗ ಇವರು ಲ್ಯಾಂಡ್ ಪೂರ್ಣ ಪ್ರಮಾಣದಲ್ಲಿ... norms ಇದೆ. ಆ ರೀತಿ ಬರೆಸಿಕೊಂಡಿದ್ದರೆ ಆ ಲ್ಯಾಂಡ್‌ನ್ನು ನಾವು ವಾಪಸ್ಸು ಪಡೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಡಿನೋಟಿಫಿಕೇಷನ್ ಬಗ್ಗೆ ಇನ್ನೊಂದು ವಿಚಾರವನ್ನು ಹೇಳಿದರು. ಡಿನೋಟಿಫಿಕೇಷನ್ ಮಾಡುವುದಕ್ಕೆ ಪ್ರಾವಿಷನ್ ಇಲ್ಲ. ಇವತ್ತಿನ ದಿವಸ as per Section 28(1) ಮಾಡಿರುವುದು, ಕಲಂ 28(1) ಆದ ನಂತರ, ಕಲಂ 28(4) ಅಡಿಯಲ್ಲಿ final

notification ಮಾಡುವವರೆಗೆ ಆ ಸಂದರ್ಭದಲ್ಲಿ ನಾವು denotification ಮಾಡುವುದಕ್ಕೆ ಬರುತ್ತದೆ. Once ಕಲಂ 28 (4) ರಲ್ಲಿ final notification ಆದ ನಂತರ ಡಿನೋಟಿಫಿಕೇಷನ್ ಮಾಡುವುದಕ್ಕೆ ಅವಕಾಶ ಇಲ್ಲ. ಕಲಂ 28(1) ರಿಂದ 28(4) ವರೆಗೆ ಏನಿದೆ, ಆ ಸಂದರ್ಭದಲ್ಲಿ ಅಲ್ಲಿ ಏನಾದರೂ ಮನೆ ಅಥವಾ ತೋಟ ಈ ರೀತಿ ಏನಾದರು ಇದ್ದಲ್ಲಿ ಆಗ ನಾವು ಮಾಡುತ್ತೇವೆ. ಆ ರೀತಿ ಅಲ್ಲಿ ಇರದಿದ್ದರೆ ಡಿನೋಟಿಫಿಕೇಷನ್ ಮಾಡುವ ಪ್ರಶ್ನೆಯೇ ಬರುವುದಿಲ್ಲ. ನಾನು ಈಗಾಗಲೇ ಆ ಒಂದು exercise ಮಾಡುತ್ತಿದ್ದೇನೆ. ಇವತ್ತಿನ ದಿವಸ ಕೆ.ಐ.ಎ.ಡಿ.ಬಿ.,ಯಲ್ಲಿ ಸಂಪೂರ್ಣವಾಗಿ ಏನೇನು ಆಗಿದೆ ಎಂದು ನನಗೂ ಕೂಡ ಅಕಾಡೆಮಿಕ್ ಆಗಿ ಮತ್ತು ಸಚಿವನಾಗಿರುವುದರಿಂದ ಮಾಹಿತಿಯನ್ನು ಪಡೆದುಕೊಂಡು ಎಲ್ಲಾ ಮಾಡುತ್ತಿದ್ದೇವೆ. ಅದನ್ನು ಮಾನ್ಯ ಸದಸ್ಯರಿಗೂ ಕೂಡ ಶೇರ್ ಮಾಡುತ್ತೇನೆ. ಆದರೆ ನಮ್ಮ ಕಾಲದಲ್ಲಿ ಆ ರೀತಿಯ ಯಾವುದು ಡಿನೋಟಿಫಿಕೇಷನ್ ಆಗಿಲ್ಲ ಅಥವಾ ಕೆ.ಐ.ಎ.ಡಿ.ಬಿ., ರಿಯಲ್ ಎಸ್ಟೇಟ್ ಆಗಿ ಕೆಲಸ ಮಾಡುತ್ತಿಲ್ಲ ಅಥವಾ ಈ land ನಲ್ಲೂ ಕೂಡ . . .

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಅದು ಬೇಕಾಗಿಯೂ ಇಲ್ಲ. ಮಾನ್ಯ ಸಚಿವರು ಇರುವುದನ್ನು ಮಾಡಿದರೆ ಸಾಕಾಗಿದೆ. ಅದು ಬೇರೆ ಪ್ರಶ್ನೆ. ಆದರೆ ಬೆಂಗಳೂರು ನಗರದಲ್ಲಿ ಏನಾದರೂ ಅನುಕೂಲ ಆಗುವಂತಿದ್ದರೆ ಮಾಡಿಕೊಡಿ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಆ ಕೆಲಸವನ್ನು ನಾವು ಮಾಡುತ್ತೇವೆ. ಹೀಗಾಗಿ, ಕೆ.ಐ.ಎ.ಡಿ.ಬಿ., ಬಗ್ಗೆ ಕೂಡ ತಪ್ಪು ಸಂದೇಶ ಹೋಗಬಾರದು ಅಥವಾ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ಗೂ ಕೂಡ ತಪ್ಪು ಸಂದೇಶ ಹೋಗಬಾರದು. ಏಕೆಂದರೆ, ನಾವು ಈಗ ಬಹಳ competitive position ನಲ್ಲಿ ಇದ್ದೇವೆ. ನಮ್ಮ ರಾಜ್ಯಕ್ಕೆ ಬೇರೆಬೇರೆ ಇಂಡಸ್ಟ್ರೀಸ್ ಬರಬೇಕು. ಪ್ರತಿಯೊಂದು ತಮಿಳುನಾಡು, ತೆಲಂಗಾಣ, ಗುಜರಾತ್ ಮತ್ತು ಮಹಾರಾಷ್ಟ್ರ ಬಹಳ competitive position ನಲ್ಲಿ ಇದ್ದೇವೆ. ನಾನು ಬೆಳಗ್ಗೆ ಹೇಳಿದಂತೆ ನಾವು ನಿಮ್ಮ ಸಹಾಯವನ್ನು ಕೂಡ ಪಡೆದುಕೊಳ್ಳುತ್ತೇವೆ. ಹೀಗಾಗಿ, ಇಷ್ಟು ವಿಚಾರಗಳು ಈ ಒಂದು Centre for Educational and Social Studies ಬಗ್ಗೆ ಇದೆ. ಇವತ್ತಿನ ದಿವಸ ಆ ಸಂಸ್ಥೆಗೆ ನಾವು 99 ವರ್ಷಗಳಿಗೆ ಲೀಸ್ ಕೊಡುತ್ತಿದ್ದೇವೆ. Actually, ರೂ.187 ಕೋಟಿಗಳು ಅವರು ಕೊಡಬೇಕಾಗಿತ್ತು. ಅದನ್ನು ಸಚಿವ

ಸಂಪುಟ ಅನುಮೋದಿಸಲಾಗಿದ್ದು ರೂ.50 ಕೋಟಿಗಳು ಕೊಟ್ಟಿದೆ. ಇವತ್ತಿನ ದಿವಸ ಕೆ.ಐ.ಎ.ಡಿ.ಬಿ., ಗೆ ಸುಮಾರು ರೂ.137 ಕೋಟಿಗಳಷ್ಟು ಆರ್ಥಿಕ ನಷ್ಟವಾಗಿದೆ. ಅದರ reimbursement ಗೆ ನಾವು ಸರ್ಕಾರಕ್ಕೆ ಕೇಳಿಕೊಂಡಿದ್ದೇವೆ. ಮಾನ್ಯ ಸಭಾಪತಿಯವರೇ ಧನ್ಯವಾದಗಳು.

(ಮುಂದು)

(643)23.7.2024/5.30/ಎಂ.ಎಂ-ಬಿ.ಎನ್.ಎಸ್ (ಸಭಾಪತಿಯವರ ಉಪಸ್ಥಿತಿ)

**11. ಗಮನ ಸೆಳೆಯುವ ಸೂಚನೆ**

ವಿಷಯ: **(ಅ) ಪಶ್ಚಿಮಘಟ್ಟ ಮಲೆನಾಡು ಹಾಗೂ ಕರಾವಳಿ ಪ್ರದೇಶಗಳಲ್ಲಿ ಉಂಟಾಗುತ್ತಿರುವ ಭೂಕುಸಿತಕ್ಕೆ ಕಾರಣಗಳೇನು ಎಂಬ ಕುರಿತು ವೈಜ್ಞಾನಿಕವಾಗಿ ಅಧ್ಯಯನ ನಡೆಸಿ ಪಶ್ಚಿಮಘಟ್ಟಗಳ ಸಂರಕ್ಷಣೆಗೆ ಕ್ರಮ ವಹಿಸುವುದರ ಜೊತೆಗೆ ರಸ್ತೆ ಅಭಿವೃದ್ಧಿ/ನಿರ್ವಹಣೆ ಹಾಗೂ ಬೆಳೆ ಹಾನಿಗೆ ವಿಶೇಷ ಪ್ಯಾಕೇಜ್ ನಿಗದಿ ಮಾಡುವ ಕುರಿತು.**

- - - - -

**ಶ್ರೀ ಕೇಶವ ಪ್ರಸಾದ್. ಎಸ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪಶ್ಚಿಮಘಟ್ಟ ಮಲೆನಾಡು ಹಾಗೂ ಕರಾವಳಿ ಪ್ರದೇಶಗಳಲ್ಲಿ ಉಂಟಾಗುತ್ತಿರುವ ಭೂಕುಸಿತಕ್ಕೆ ಕಾರಣಗಳೇನು ಎಂಬ ಕುರಿತು ವೈಜ್ಞಾನಿಕವಾಗಿ ಅಧ್ಯಯನ ನಡೆಸಿ ಪಶ್ಚಿಮಘಟ್ಟಗಳ ಸಂರಕ್ಷಣೆಗೆ ಕ್ರಮ ವಹಿಸುವುದರ ಜೊತೆಗೆ ರಸ್ತೆ ಅಭಿವೃದ್ಧಿ/ನಿರ್ವಹಣೆ ಹಾಗೂ ಬೆಳೆ ಹಾನಿಗೆ ವಿಶೇಷ ಪ್ಯಾಕೇಜ್ ನಿಗದಿ ಮಾಡುವ ಕುರಿತು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ,

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

**ಶ್ರೀ ಕೇಶವ ಪ್ರಸಾದ್. ಎಸ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆಯಲ್ಲಿ ಪಶ್ಚಿಮಘಟ್ಟಗಳಿಗೆ ಸಂಬಂಧಪಟ್ಟಂತೆ ಪ್ರಮುಖವಾದಂತಹ ಪ್ರಶ್ನೆ ಹಾಕಿ ಸರ್ಕಾರದ ಗಮನ ಸೆಳೆಯುತ್ತಿದ್ದೇವೆ. ಮಳೆಗಾಲ ಬರುತ್ತಿದ್ದ ಹಾಗೆಯೇ ಇಲ್ಲಿ ಏನಾಗುತ್ತದೆಯೋ ಎಂದು ಎಲ್ಲರೂ ಆತಂಕಕ್ಕೊಳಗಾಗುವ ಸಂಗತಿಯಾಗಿರುತ್ತದೆ. ಏಕೆಂದರೆ, ಇದೊಂದು ಸೂಕ್ಷ್ಮ ಪ್ರದೇಶ ಮತ್ತು ಜೀವ ವೈವಿಧ್ಯತೆಯಿಂದ ಕೂಡಿರುವ ಪ್ರದೇಶ ಕೂಡ ಆಗಿದೆ. ಈ ಜಾಗದಲ್ಲಿ ಇಡೀ ದಕ್ಷಿಣ ಕನ್ನಡ ಅವಿಭಾಜಿತ ಜಿಲ್ಲೆಗೆ ಸಂಪರ್ಕ ಕೊಂಡಿಯಾಗಿ ಸುಮಾರು 7–8 ಪ್ರಮುಖವಾದಂತಹ ಘಾಟಿಗಳಿವೆ. ಅದರಲ್ಲಿ ಶಿರಾಡಿ, ಚಾರ್ಮಾಡಿ, ಆಗುಂಬೆ, ಸಂಪಾಜೆ, ಬಿಸಿಲೆ, ಬಾಳೆಬರೆ ಮತ್ತು ನಿಟ್ಟೂರು ಪ್ರಮುಖವಾದವು. ಅಲ್ಲಿನ ಜೀವನ ಹೇಗಿದೆಯೆಂದರೆ, ಬಂದರುಗಳು ತುಂಬಾ ಪ್ರಮುಖವಾದದ್ದು, ಇಡೀ ಆರ್ಥಿಕ ವ್ಯವಹಾರ ನಡೆಯುವುದು ಮಂಗಳೂರಿನಲ್ಲಿ. ಅಲ್ಲಿಂದ ಒಳನಾಡುಗಳಿಗೆ ಬೆಂಗಳೂರಿನ ತನಕ ಎಲ್ಲಾ ಸರಕುಗಳು ಸಾಗಣೆಯಾಗುವಂತಹದ್ದು ಈ ರಸ್ತೆಗಳಲ್ಲೇ ಆಗಿದೆ. ಆದರೆ ಸಾಗುವಂತಹ ರಸ್ತೆಗಳು ಸುಭದ್ರವಾಗಿರಬೇಕು, ಸರ್ವ ಋತುಗಳ ರಸ್ತೆಯಾಗಿರಬೇಕು ಎನ್ನುವಂತಹದ್ದು ನಿಯಮ. ಆದರೆ ಮಳೆಗಾಲ ಬಂದಾಗಲೆಲ್ಲಾ ಈ ಬಾರಿ ಮಳೆ ಜಾಸ್ತಿ ಎನ್ನುವಂತಹದ್ದೇ ಆಗಿದೆ. ಅಂದರೆ ಇಷ್ಟು ವರ್ಷಗಳ ಹಿಂದೆ ತುಂಬಾ ದೊಡ್ಡ ಮಳೆ ಬಂದಿತ್ತೋ ಆ ಮಳೆ ಬಂದಾಗ ಏನಾಗಿತ್ತೋ ಮತ್ತು ಅಲ್ಲಿರುವಂತಹ ಪರಿಸರದಲ್ಲಿ ಆ ಮಳೆಗೆ ತಡೆಯುವಂತಹ ರಸ್ತೆಗಳ ಮತ್ತು ಸುತ್ತ ಮುತ್ತ ಇರುವಂತಹ ಘಟ್ಟ ಪ್ರದೇಶಗಳಲ್ಲಿ ಭೂಕುಸಿತ ನಿರಂತರವಾಗಿ ಆಗುತ್ತಿರುತ್ತದೆ. ಭೂಕುಸಿತ ಆಗುವಂತಹ ಸಂದರ್ಭದಲ್ಲಿ ಆಗುವಂತಹ ಪರಿಣಾಮಗಳೇನು ಆ ಸಂದರ್ಭದಲ್ಲಿ ಅಲ್ಲಿನ ಜನಜೀವನದ ಮೇಲಾಗುವ ಪರಿಣಾಮ ಹಾಗೂ ರಸ್ತೆ ಸಂಚಾರ ವ್ಯತ್ಯಯವಾದಾಗ ಅಲ್ಲಿನ ಜನರು ಹೇಗೆ ಬೇರೆ ಜಾಗಕ್ಕೆ ಹೋಗಬೇಕು ಎನ್ನುವುದರ ಮೇಲೆ ತುಂಬಾ ದೊಡ್ಡ ಪರಿಣಾಮ ಆಗುವಂತಹದ್ದು ಇರುತ್ತದೆ. ಹಾಗಾಗಿ ಕೇಂದ್ರ ಸರ್ಕಾರ ಇರಲಿ, ರಾಜ್ಯ ಸರ್ಕಾರ ಇರಲಿ ರಸ್ತೆಗಳ ನಿರ್ಮಾಣ ಎಂದಾಗ ಅಲ್ಲಿಗೆ ಒಂದು ವಿಶೇಷವಾದಂತಹ ಯೋಜನೆಯನ್ನು ರೂಪಿಸಬೇಕು. ರಸ್ತೆ ನಿರ್ಮಾಣವಾಗುತ್ತಿದೆ ಎನ್ನುತ್ತಾರೆ ಆದರೆ ರಸ್ತೆಗಳ ನಿರ್ಮಾಣ ಎಷ್ಟು ವರ್ಷದಿಂದ ಆಗುತ್ತಿದೆ ಎನ್ನುವುದರ ಬಗ್ಗೆ ಒಂದು ಡೇಟಾ ಇರುವುದಿಲ್ಲ. ಯಾವಾಗ ನೋಡಿದರೂ ಕೂಡ ರಸ್ತೆ ನಿರ್ಮಾಣದ ಕಾರ್ಯ ನಡೆಯುತ್ತಲೇ ಇರುತ್ತದೆ. ಮಳೆಗಾಲದಲ್ಲಿ ಭೂಕುಸಿತದ ಜೊತೆಗೆ ರಸ್ತೆ ತಡೆ ನಿರಂತರ. ಮಳೆ ಜಾಸ್ತಿ ಬಿದ್ದಿದೆ, ಭೂಕುಸಿತವಾಗಿದೆ

ಎಂದಾಗ ರಾತ್ರಿ ಸಂಚಾರ ಕೂಡ ವ್ಯತ್ಯಯವಾಗಿದೆ. ಕಳೆದ 15 ದಿನಗಳಿಂದ ರಾತ್ರಿಯ ಸಂಚಾರ ಅಲ್ಲಿ ವ್ಯತ್ಯಾಸವಾಗಿದೆ. ಅಂದರೆ;

**ಸಭಾಪತಿಯವರು:–** ಮಾನ್ಯ ಕೇಶವ ಪ್ರಸಾದ್‌ರವರೇ, ಇದು Calling Attention, ಮುಗಿಸಿ.

**ಶ್ರೀ ಕೇಶವ ಪ್ರಸಾದ್.ಎಸ್:–** ಮಾನ್ಯ ಸಭಾಪತಿಯವರೇ, ಈ ಪ್ರದೇಶಗಳಲ್ಲಿ ವಿಶೇಷವಾದ ಗಮನ ಅಂದರೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರ ಸರ್ವ ಋತು ರಸ್ತೆಗಳನ್ನು ಮಾಡಲು ಹೇಗೆ ಯೋಜನೆಗಳನ್ನು ಮಾಡಬೇಕು, ಅದನ್ನು ಹೇಗೆ ರೂಪಿಸಬೇಕು ಜೀವ ವೈವಿಧ್ಯತೆಯನ್ನು ಹೇಗೆ ಗಮನದಲ್ಲಿಟ್ಟುಕೊಳ್ಳಬೇಕು, ಎಲ್ಲಾ ರೀತಿಯ ಅಡೆ ತಡೆಗಳನ್ನು ನಿವಾರಿಸುತ್ತಾ ರಸ್ತೆ ನಿರ್ಮಾಣವನ್ನು ಹೇಗೆ ಮಾಡಬೇಕು ಎನ್ನುವ ಕಡೆ ಗಮನವನ್ನು ಸೆಳೆಯಬೇಕೆಂದು ಹೇಳುತ್ತೇನೆ. ರಾಜ್ಯ ಸರ್ಕಾರವು ವಿಶೇಷವಾದ ಗಮನವನ್ನು ಕೊಡಬೇಕು ಮತ್ತು ಕೇಂದ್ರದ ಬಗ್ಗೆ ಗಮನವನ್ನು ಹಾಕಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ಕೇಶವ ಪ್ರಸಾದ್‌ರವರೇ, ಇದು calling attention, ಕುಳಿತುಕೊಳ್ಳಿ.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ವಿಶೇಷವಾಗಿ ಮಲೆನಾಡು ಮತ್ತು ಕರಾವಳಿಯಲ್ಲಿ ಮಳೆ ಹೆಚ್ಚು ಬೀಳುವ ಕಾರಣದಿಂದ;

**ಸಭಾಪತಿಯವರು:–** ಮಾನ್ಯ ರವಿಯವರೇ, ಇದು ಗಮನ ಸೆಳೆಯುವ ಸೂಚನೆಯಾಗಿದೆ, ಭಾಷಣ ಮಾಡುವ ಹಾಗಿಲ್ಲ. ನೋಡಿಕೊಂಡು ಮಾತನಾಡಿ.

**ಶ್ರೀ ಸಿ.ಟಿ. ರವಿ:–** ಆದ್ದರಿಂದಲೇ ಪೂರಾ ಓದದೇ ಜಿಸ್ಟ್ ಮಾತ್ರ ಓದುತ್ತಿದ್ದೇನೆ. ವಿಶೇಷವಾಗಿ ಚಿಕ್ಕಮಗಳೂರು, ಉತ್ತರ ಕನ್ನಡ, ಕೊಡಗು, ಉಡುಪಿ, ಹಾಸನದ ಸಕಲೇಶಪುರ ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಈ ಕಡೆಗಳಲ್ಲಿ ಪ್ರತಿ ವರ್ಷವೂ ಭೂಕುಸಿತದ ಪ್ರಕರಣಗಳು ವರದಿಯಾಗುತ್ತಲೇ ಇರುತ್ತವೆ.

ಅದಕ್ಕೆ ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಇದರಲ್ಲಿ ಭೌಗೋಳಿಕ ಪ್ರದೇಶ ಎಂದು ಒಂದು ಅಧ್ಯಯನ ಮಾಡಬೇಕು. ಅಧ್ಯಯನ ಮಾಡಿ Dos and Don'ts ಅನ್ನು ನಾವು ಪ್ರಕಟಿಸಬೇಕು. ಯಾವುದನ್ನು ಮಾಡಬೇಕು, ಯಾವುದನ್ನು ಮಾಡಬಾರದು ಎನ್ನುವ ಬಗ್ಗೆ ಒಂದು SOP (Standard Operating Procedure) ಅನ್ನು ತಯಾರು ಮಾಡಬೇಕು. ಇಲ್ಲದಿದ್ದರೆ ಪ್ರತಿವರ್ಷವೂ ಭೂಕುಸಿತ ಆಗುತ್ತಲೇ ಇರುತ್ತದೆ. ಹಾಗೆಯೇ ಆ ಭಾಗದಲ್ಲಿ ಮಳೆ ಬಂದರೆ ಮಾತ್ರ ಡ್ಯಾಂ ಭರ್ತಿಯಾಗುತ್ತದೆ. ನಮ್ಮ ಭಾಗದಲ್ಲಿ ಮಳೆ ಬಂದರೆ ತುಂಗಭದ್ರಾ ಡ್ಯಾಂ ಮತ್ತು ಹೇಮಾವತಿ ಡ್ಯಾಂ ಭರ್ತಿಯಾಗುತ್ತದೆ. ಕೊಡಗಿನಲ್ಲಿ ಮಳೆ ಬಂದರೆ ಕಾವೇರಿ ನದಿ ಭರ್ತಿಯಾಗುತ್ತದೆ. ಇಲ್ಲಿ ಸಮೃದ್ಧಿಯಾಗಬೇಕಾದರೆ ನಾವಿಲ್ಲಿ ಯಾವುದನ್ನು ಸಮೃದ್ಧಿ ಎನ್ನುತ್ತೇವೋ ಅಲ್ಲಿರುವ ಜನರ ಬದುಕು ತೊಳೆದು ಹೋಗಿರುತ್ತದೆ. ಈ ಭಾಗದ ಜನರಿಗಾಗಿ ಒಂದು ವಿಶೇಷವಾದ ಪ್ಯಾಕೇಜನ್ನು ಘೋಷಣೆ ಮಾಡಬೇಕು. ಇಲ್ಲದಿದ್ದರೆ ನಾವು ಬೀದಿಗೆ ಬರುತ್ತೇವೆ ನೀವಿಲ್ಲಿ ಒಳ್ಳೆಯ ಮಳೆಯಾಗಿದೆಯೆಂದು 'ಬಾಗಿನ' ಬಿಡುತ್ತೀರಿ. ನಾವೆಲ್ಲಾ ಬೀದಿಗೆ ಬಂದಿರುತ್ತೇವೆ. ಹಾಗಾಗಿ ಈ ಪ್ರದೇಶದ ಜನರಿಗೆ ಇಂತಹ ಸಂದರ್ಭಗಳಲ್ಲಿ ವಿಶೇಷವಾದ ಪ್ಯಾಕೇಜನ್ನು ಮಾಡಬೇಕು. ಈಗಾಗಲೇ ಮಾನ್ಯ ಸದಸ್ಯರಾದ ಕೇಶವ ಪ್ರಸಾದ್‌ರವರು ಹೇಳಿದಂತೆ ಸರ್ವಋತು ರಸ್ತೆಗಳನ್ನು ಮಾಡುವುದರ ಜೊತೆಗೆ ಇಲ್ಲಿಗೆ ಯಾವುದನ್ನು ಮಾಡಬೇಕು ಯಾವುದನ್ನು ಮಾಡಬಾರದು; ಇಡೀ ಮಲೆನಾಡಿಗೆ ನೀಲಗಿರಿ ಮತ್ತು ಅಕೇಶಿಯಾ ಗಿಡಗಳನ್ನು ತಂದು ಹಾಕಿದ್ದಾರೆ. ಬರೀ ಬೀಜವನ್ನು ಬಾಯಿಯಿಂದ ಉಗಿದರೆ ಸಾಕು ಕಾಡು ಬೆಳೆಯುತ್ತದೆ. ಮನುಷ್ಯನ ಹಸ್ತಕ್ಷೇಪ ಇಲ್ಲದಿದ್ದರೆ ಸಾಕು ಕಾಡು ಬೆಳೆಯುತ್ತದೆ. ನಾವು ಹಾಕಿರುವುದು ನೀಲಗಿರಿ ಮತ್ತು ಅಕೇಶಿಯಾದಂತಹ ಪರಿಸರಕ್ಕೆ ಹಾನಿಯಾಗುವಂತಹ ಗಿಡಗಳನ್ನು ಹಾಕಿಬಿಟ್ಟಿದ್ದೇವೆ. ಹಂತ ಹಂತವಾಗಿ ತೆರವುಗೊಳಿಸುತ್ತೇವೆ ಎಂದು ನೀವೇ ನಿರ್ಣಯ ಮಾಡಿ lease ಅನ್ನು renewal ಮಾಡುವುದಕ್ಕೆ ಪ್ರಸ್ತಾವನೆ ಬಂದಿದೆ. ಹಾಗಾಗಿ lease ಅನ್ನು renewal ಮಾಡಬಾರದು ಅದು ಪರಿಸರಕ್ಕೆ ಮತ್ತು ಈ ಪ್ರದೇಶಕ್ಕೆ ಹಾನಿಕರ, ಈ ಭಾಗಕ್ಕೆ ವಿಶೇಷವಾದ ಪ್ಯಾಕೇಜನ್ನು ಕೊಡಬೇಕು ಎಂದು ಹೇಳಿ ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು**):- ಮಾನ್ಯ ಸಭಾಪತಿಯವರೇ, ನಾನು ಹುಟ್ಟಿ ಬೆಳೆದಿದ್ದೇ ಈ ಮಲೆನಾಡು ಮತ್ತು ಕರಾವಳಿ ಪ್ರದೇಶದಲ್ಲಿ. ಇವತ್ತು ಬಹಳ ದೊಡ್ಡ ಎರಡು ಸಮಸ್ಯೆ ಎಂದರೆ ಒಂದು ನಾವು ವಾಸಿಸುವ ಒಳಭಾಗದಲ್ಲಿ ಆಗುವಂತಹ ತೊಂದರೆ ಇನ್ನೊಂದು ಹೊರ ಪ್ರದೇಶದ ರಸ್ತೆಗಳ ಸಂಪರ್ಕದ ತೊಂದರೆ ಏಕೆಂದರೆ ಶಿರಾಡಿಯಿಂದ ಹಿಡಿದು ಬಾಳೆಬರೆ ಆಗುಂಬೆಯಿಂದ ಹಿಡಿದು ಎಲ್ಲಾ ಘಾಟಿಗಳೂ ಬಂದ್ ಆಗುವಂತಹ ಪರಿಸ್ಥಿತಿ ಇದೆ. ಸಣ್ಣದಿಂದ ಹಿಡಿದು ಎಲ್ಲಾ ಜಲಾಶಯಗಳು ತುಂಬಿ ತುಳುಕುವುದು ಮತ್ತು ನಗರ ಪ್ರದೇಶಕ್ಕೆ ನೀರು ನುಗ್ಗಿ ಮನೆ ಕುಸಿತವಾಗುತ್ತದೆ. ಈ ಬಾರಿಯ ಮಳೆಗಾಲದಲ್ಲಂತೂ ಕಳೆದ ಬಾರಿ ಏನು ಜಲಾಶಯಗಳು ಶೇ.20 ರಷ್ಟು ತುಂಬಿತ್ತು ಈ ಬಾರಿ ಜಲಾಶಯಗಳು ಶೇ.51 ರಷ್ಟು ತುಂಬಿವೆ. ಕಳೆದ ವರ್ಷ ಇದೇ ಸಮಯದಲ್ಲಿ ಶೇ.20ರಷ್ಟು ಇತ್ತು. ಇವತ್ತು ಜಲಾಶಯಗಳು ಶೇ.51ರಷ್ಟು ತುಂಬಿವೆ. ಇದರಿಂದ ಆ ಪ್ರದೇಶದವರು ಬಹಳ ದೊಡ್ಡ ತೊಂದರೆಗೆ ಒಳಗಾಗುತ್ತಿದ್ದಾರೆ. ಇವತ್ತು ರಸ್ತೆಗಳನ್ನು ಸರಿ ಮಾಡುತ್ತಾರೆ. ನಮಗೆ ಗೊತ್ತಿರುವ ಹಾಗೆ ನೆರೆ ಬಂದಾಗ ಮನೆಗಳು ಮುಳುಗಿ ಹೋಗುವುದು, ಯಾವುದಾದರೂ ಶಾಲೆಗಳಿಗೆ ಹೋಗುವುದು, ಅಲ್ಲಿ ಊಟ ತರಿಸುವುದು, ಊಟ ಕೊಡುವುದು ಈ ರೀತಿಯ ವ್ಯವಸ್ಥೆಗಳಿರುತ್ತವೆ. ಪ್ರತಿ ಸಲ ಇಂತಹ ಸಮಸ್ಯೆ ಬಂದಾಗ ಅಲ್ಲಿರುವಂತಹ ಸಂಘ ಸಂಸ್ಥೆಗಳು ಬಂದರಿಗೆ ಹೋಗುವುದು, ಬಂದರಿಗೆ ಹೋಗಿ ಸಾಮಾನುಗಳನ್ನು ತಂದು ಜನರನ್ನು ನೋಡುವುದು ಈ ವ್ಯವಸ್ಥೆಯಲ್ಲಿ ಜನರು ಬದುಕುತ್ತಿದ್ದಾರೆ. ಅದರ ಬದಲಾಗಿ ಅವರಿವರ ಬಳಿ ಕೇಳಿಕೊಳ್ಳುವ ಬದಲು ಈ ಭಾಗಕ್ಕೆ ಒಂದು ವಿಶೇಷವಾದ ಪ್ಯಾಕೇಜನ್ನು; ಏಕೆಂದರೆ ಇನ್ನೊಂದು ವರ್ಷ ಬರುವುದಿಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ಬಂದೇ ಬರುತ್ತದೆ, ಅದರ ಮುಂದಿನ ವರ್ಷವೂ ಬಂದೇ ಬರುತ್ತದೆ. ಬರಬಹುದು ಅಥವಾ ಬರದೇ ಇರಬಹುದು. ಅದಕ್ಕೋಸ್ಕರ ಇಂತಹ ಸಂದರ್ಭಗಳಲ್ಲಿ ಸರ್ಕಾರವೇ ಒಂದು ವಿಶೇಷವಾದ ಪ್ಯಾಕೇಜ್ ಅನ್ನು ಕೊಟ್ಟು ಆ ಜನರ ಬದುಕನ್ನು ಹಸನು ಮಾಡುವ ರೀತಿಯಲ್ಲಿ ಕೆಲಸ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, 2019ರಿಂದ ಆರಂಭ ಮಾಡಿ ಮಲೆನಾಡು ಭಾಗದಲ್ಲಿ ಭೂಕುಸಿತವನ್ನು ಹೆಚ್ಚಾಗಿ ನೋಡುತ್ತಿದ್ದೇವೆ. ಇದು 2018ರಿಂದ ಆರಂಭವಾಗಿ 2019ರಿಂದ

2022ರವರೆಗೂ ಆಯಿತು. ಮತ್ತೆ ಈ ವರ್ಷ ನಾವು ಭೂಕುಸಿತವನ್ನು ನೋಡುತ್ತಿದ್ದೇವೆ. ಕಾರಣಗಳೇನೆಂದು ಅಧ್ಯಯನ ಮಾಡಿದ್ದೀರಾ ಎಂದರೆ ಅಧ್ಯಯನ ಸ್ವಲ್ಪ ಮಟ್ಟಿಗೆ ಆಗಿದೆ ಇಲ್ಲವೆಂದಲ್ಲ. ಭಾರತ ಸರ್ಕಾರದ ಭೂ ವೈಜ್ಞಾನಿಕ ಸರ್ವೇಕ್ಷಣಾ ಸಂಸ್ಥೆ ಇದೆ ಮತ್ತು ನಮ್ಮ ರಾಜ್ಯ ಸರ್ಕಾರದ ಕೆಳಗೆ ಕೂಡ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಇದೆ. ಇವುಗಳ ಮುಖಾಂತರ ಮಾಡಿದ ಅಧ್ಯಯನದಲ್ಲಿ ಕಂಡು ಬಂದಿರುವಂತಹ ವಿಷಯಗಳೇನೆಂದರೆ, high intense rainfall. ನಮ್ಮ ರಾಜ್ಯದಲ್ಲಿ ಮೊದಲಿಗೆ ವರ್ಷದಲ್ಲಿ ವಾಡಿಕೆಯಾಗಿ 60 ದಿನ ಮಳೆಯಾಗುತ್ತಿತ್ತು. ಆಗುವಂತಹ ಮಳೆ ಒಟ್ಟು 60 ದಿನಗಳಿಗೆ ಸರಾಸರಿ over a period of 60 days ಆಗುತ್ತಿತ್ತು ಅದನ್ನು 60 rainy days ಎಂದು ಕರೆಯುತ್ತೇವೆ. ಈಗ ಬರಬರುತ್ತಾ ಅಷ್ಟೇ ಮಳೆಯಾದರೂ ಕೂಡ 60 ದಿನಗಳಲ್ಲಿ ಆಗುವುದಿಲ್ಲ 35-40 ದಿನಗಳಲ್ಲಿ ಆಗುತ್ತದೆ. ಅಲ್ಲಿಗೆ ಅರ್ಥವೇನೆಂದರೆ, high intense short burst of rainfall. ಮೊನ್ನೆ ದಿವಸ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ಬಳಿ ಎರಡು ದಿನಗಳಲ್ಲಿ 500 ಮಿಲಿ ಮೀಟರ್ ಮಳೆಯಾಗಿದೆ. Cloud burst is one form. ಅಲ್ಲಲ್ಲಿ cloud burst ಆಗುತ್ತದೆ. ಈಗ ಅದು ಒಂದು ಹೊಸ phenomenon. ಇದು high intense short burst of rainfall, ಅಂದರೆ ಎರಡು ದಿನ ಸತತವಾದ ಮಳೆ ಅಂದರೆ ಮೊನ್ನೆ ದಿವಸ ಕಾರವಾರದಲ್ಲಿ 500 ಮಿಲಿ ಮೀಟರ್ ಮಳೆ ಎರಡು ದಿನದಲ್ಲಿ ಬಿದ್ದಿದೆ. ಈ phenomenon ಆಗುತ್ತಿರುವುದು ಕೂಡ ಒಂದು ಕಾರಣ.

(ಮುಂದು)

(644) 23.7.2024 5.40 ಕೆಹೆಚ್(ಪಿಕೆ):ಕೆಎಸ್ (ಸಭಾಪತಿಗಳ ಉಪಸ್ಥಿತಿ)

**ಶ್ರೀ ಕೃಷ್ಣ ಭೈರೇಗೌಡ(ಮುಂದು):**

Natural slopes ಅಂದರೆ, ನೈಸರ್ಗಿಕ ಇಳಿಜಾರುಗಳೇನಿತ್ತು ಅವುಗಳನ್ನು ಮಾನವ ಅಭಿವೃದ್ಧಿಗಾಗಿ ಬಹಳ ಮಾರ್ಪಾಡು ಮಾಡಿದ್ದೇವೆ. ಎಲ್ಲೆಂದರಲ್ಲಿ ರಸ್ತೆ ಮಾಡಿದ್ದೇವೆ. ರಸ್ತೆ ಮಾಡಿದಾಗ ಆ ಭೂಮಿಯಲ್ಲಿರುವ ಭದ್ರತೆಯನ್ನು ನಾವು ಶಿಥಿಲ ಮಾಡುತ್ತೇವೆ. ಎಲ್ಲೋ ಒಂದು ಕಡೆ ಕಟ್

ಮಾಡಿದಾಗ ಅದು ತಾನೇ ತಾನಾಗಿ, ಸ್ವಾಭಾವಿಕ ನೈಸರ್ಗಿಕ ಭದ್ರತೆಯನ್ನು, ಬಿಗಿಯನ್ನು ಕಳೆದುಕೊಂಡು ಭೂಕುಸಿತಕ್ಕೆ ಕಾರಣವಾಗುತ್ತದೆ. ಮರವನ್ನು ಕಡೆಯುತ್ತಿದ್ದೇವೆ. ಒಂದು ಕಡೆ, ಮಲೆನಾಡು ಭಾಗದಲ್ಲಿ ಈಗ ಲೇಔಟ್‌ಗಳು ಆಗುತ್ತಿವೆ, ಇನ್ನೊಂದು ಕಡೆ ಕಾಫಿ ಎಸ್ಟೇಟ್‌ಗಳಲ್ಲಿ ಐದೈದು ಎಕರೆಗೆ ಒಂದು ಪ್ಲಾಟ್ ಮಾಡಿ, farm plots ಗಳನ್ನು ಮಾಡಿ ಮಾರಾಟ ಮಾಡುತ್ತಿರುವುದು ಕೆಲವು ಕಡೆ ನಡೆಯುತ್ತಿದೆ. ನದಿಗಳಿಗೆ, ಹಳ್ಳಗಳಿಗೆ, ಝುರಿಗಳಿಗೆ ನಾವು ದಾರಿಯನ್ನು ತಪ್ಪಿಸಿದ್ದೇವೆ. ಇದೂ ಕೂಡ ಒಂದು ಕಾರಣವಾಗಿದೆ. ಹೆದ್ದಾರಿಗಳನ್ನು ಕಟ್ಟಿರುವಂಥದ್ದು, ಉದಾಹರಣೆಗೆ NHAI (National Highway Authority of India) ಯವರು State Highway ಮಾಡಿದಾಗ ಅಲ್ಲಿ ತುಂಬಾ… ಮೊನ್ನೆ ಶಿರೂರಿನಲ್ಲಿ ಭೂಕುಸಿತವಾಯಿತೋ ಅದಾದ ಮೇಲೆ ನಾವು Geological Survey of India (GSI) ಸಂಸ್ಥೆಯನ್ನು ಕರೆಸಿ ಅಧ್ಯಯನ ಮಾಡಿಸಿದೆವು. ಇದು ತುಂಬ ಒಳ್ಳೆಯ ಸಂಸ್ಥೆ ಹಾಗೂ it is a Government of India organization. ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಕಾರವಾರಕ್ಕೆ ಬಂದಾಗ, ಅವರು ನಮಗೆ ಒಂದು map ನ್ನು ತೋರಿಸಿದರು. ನೀವು ಈ ರೀತಿ ರಸ್ತೆ ಮಾಡಿದ್ದೀರಿ; ಇಲ್ಲಿ ರಸ್ತೆ ಮಾಡುವ ಅವಶ್ಯಕತೆ ಇಲ್ಲ. ಗುಡ್ಡವನ್ನು ಸುಮಾರು 50-60 ಮೀಟರ್ ಕಡಿದಿದ್ದೀರಿ. ಇದರ ಬದಲಿಗೆ, ಆ alignment ಬಿಟ್ಟು, ಪಕ್ಕದ alignment ಗೆ ಹೋಗಿದ್ದರೆ ಗುಡ್ಡದ ಸಹಾವಾಸಕ್ಕೆ ಹೋಗುವ ಅವಶ್ಯಕತೆ ಇರಲಿಲ್ಲ ಎಂದು ಹೇಳಿದರು. NHAI ಇಷ್ಟೂ ಕೂಡ ತಲೆ ಉಪಯೋಗಿಸಲಿಲ್ಲ ಎಂದು GSI ಯವರು ಮಾನ್ಯ ಸಿ.ಎಂ. ಬಂದಾಗ PPT (PowerPoint Presentation) ಯಲ್ಲಿ ಹಾಕಿ ತೋರಿಸಿದರು. ಈ ತರಹ ನಾವು ಸೂಕ್ಷ್ಮತೆಯನ್ನು ಕಳೆದುಕೊಂಡು ಮತ್ತು ವೈಜ್ಞಾನಿಕವಾಗಿ ಅದನ್ನು ಅಧ್ಯಯನ ಮಾಡದೇ ದೊಡ್ಡ ದೊಡ್ಡ ಯೋಜನೆಗಳನ್ನು ಮಾಡುವುದರಿಂದ ಕೂಡ ಈ ರೀತಿ ಸಂಗತಿಗಳು ಆಗುತ್ತಿವೆ. ಒಟ್ಟಾರೆ ಅದು ಏನೇ ಇರಲಿ, ಈಗ ಆಗುತ್ತಿರುವ ಸಮಸ್ಯೆಯ ಬಗ್ಗೆ ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕು ಎನ್ನುವುದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ನಾನು ಜವಾಬ್ದಾರಿ ತೆಗೆದುಕೊಂಡ ತಕ್ಷಣ GSI ಮತ್ತು National Institute of Rock Mechanics (NIRM) ಎನ್ನುವ ಸಂಸ್ಥೆಯ ಸಹಯೋಗದಲ್ಲಿ ನಮ್ಮ ಕರ್ನಾಟಕದಲ್ಲಿ ಎಲ್ಲೆಲ್ಲಿ ಭೂಕುಸಿತ ಸಾಧ್ಯತೆಗಳಿವೆ ಎನ್ನುವುದನ್ನು ಅಧ್ಯಯನ ಮಾಡಿಸಿದ್ದೇನೆ, mapping ಮಾಡಿಸಿದ್ದೇವೆ. ಅದರಲ್ಲಿ ಅವರು 3

category ಯಲ್ಲಿ mapping ಮಾಡಿಕೊಟ್ಟಿದ್ದಾರೆ. Low vulnerability, Medium vulnerability and High vulnerability ಎಂದು mapping ಮಾಡಿಕೊಟ್ಟಿದ್ದಾರೆ. ಅದು ನನ್ನ ಹತ್ತಿರ ಇದೆ. ನಿರ್ದಿಷ್ಟವಾಗಿ ಅಲ್ಲೇ ಭೂಕುಸಿತವಾಗುತ್ತದೆ ಎಂದೇನಲ್ಲ. ಅದು ಎಲ್ಲಿ ಬೇಕಾದರೂ ಆಗಬಹುದು. ಏಕೆಂದರೆ, sudden ಆಗಿ ಒಂದು ಕಡೆ ಮಳೆ ಬಿದ್ದಾಗ ಅಲ್ಲೂ ಭೂಕುಸಿತವಾಗುತ್ತದೆ. ಆದರೆ, ವೈಜ್ಞಾನಿಕವಾಗಿ ಎಲ್ಲಿ ಸಾಧ್ಯತೆ ಜಾಸ್ತಿ ಇದೆ ಎನ್ನುವಂತಹ ಒಂದು ಚಿತ್ರಣವನ್ನು ತಯಾರು ಮಾಡಿದ್ದೇವೆ. ಅದು ನಮ್ಮ ಅಧ್ಯಯನದ ಪ್ರಕಾರ ಕರ್ನಾಟಕದಲ್ಲಿ ಸುಮಾರು 250 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ, 1,351 ಗ್ರಾಮಗಳಲ್ಲಿ ಸಾಧ್ಯಾಸಾಧ್ಯತೆಯನ್ನು ನಾವು map ಮಾಡಿದ್ದೇವೆ. ಅದರಲ್ಲಿ ತೀರಾ ಯಾವುದು ಜಾಸ್ತಿ ರೆಡ್ ಬಣ್ಣದಲ್ಲಿ ನಮಗೆ ಗುರುತು ಮಾಡಿ ಕೊಟ್ಟಿದ್ದಾರೋ ಅಲ್ಲಿ ತಡೆಗೋಡೆ ಕಟ್ಟುವಂಥ ಕೆಲಸಕ್ಕೆ ಸ್ವಲ್ಪ ಅನುದಾನವನ್ನು ಕೊಡಬೇಕು ಎನ್ನುವ ತೀರ್ಮಾನವನ್ನು ಮುಖ್ಯಮಂತ್ರಿಗಳು ಮಾಡಿದ್ದಾರೆ. ಮೊನ್ನೆ ಕೂಡ ಈ ಕುರಿತು ಮಾತನಾಡಿದ್ದೇವೆ. ಹೋದವರ್ಷವೇ mapping ಮಾಡಿಸಿ ಅವರ ಕಡೆಯಿಂದ ತರಿಸಿಕೊಂಡು, vulnerability mapping ಅನ್ನು ಈಗಾಗಲೇ ಜಿಲ್ಲೆಗಳಿಗೆ ಕೊಟ್ಟಿದ್ದೇನೆ. 1,351 ಸ್ಥಳಗಳನ್ನು ಅಟೆಂಡ್ ಮಾಡುವುದ್ಕಕೆ ಆಗುವುದಿಲ್ಲ. ಅದರಲ್ಲಿ priority ಅನ್ನು select ಮಾಡಿಕೊಂಡು, ಅವರು ಯಾವುದನ್ನು ಜಾಸ್ತಿ vulnerability ಎಂದು, ರೆಡ್‌ನಲ್ಲಿ ಎಂದು ತೋರಿಸಿದ್ದಾರೋ ಅಂತಹ ಕಡೆ, ನಾಳೆ ಆಗಬಹುದಾದ ಭೂಕುಸಿತವನ್ನು ತಡೆಗಟ್ಟುವಂತಹ ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ. ಅದಕ್ಕೆ ಮುಖ್ಯಮಂತ್ರಿಗಳ ಹತ್ತಿರ ನಾನು ಕಳೆದ ವಾರ ಕೂಡ ಚರ್ಚೆ ಮಾಡಿದ್ದೇನೆ. ಕಾರವಾರದಲ್ಲೂ ಮೊನ್ನೆ ಕುಳಿತು ರೂ. 100 ಕೋಟಿಗಳನ್ನು ಈ ತಡೆಗೋಡೆ ಮತ್ತು ಇತರೇ ರಕ್ಷಣಾ ಕೆಲಸಗಳನ್ನು ಮಾಡುವುದಕ್ಕೆ ಒದಗಿಸಿ ಕೊಡಬೇಕು ಎಂಬ ಬಗ್ಗೆ ಚರ್ಚೆ ಮಾಡಿದ್ದೇವೆ. ಇದನ್ನು ಜಿಲ್ಲಾ ಪಂಚಾಯಿತಿಯವರು ಅಥವಾ ಪಿಡಬ್ಲ್ಯೂಡಿಯವರು ಹೇಳಿದ್ದಲ್ಲ. Geological Survey of India ದವರು ಏನು mapping ಮಾಡಿದ್ದಾರೋ ಅದರ ಆಧಾರದ ಮೇಲೆ, ಯಾವುದು most vulnerable ಎಂದು ಕಾಣುತ್ತದೆಯೋ ಅಂತಹ ಕಡೆ, ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಿಗೆ ಸೀಮಿತವಾಗಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕು, ರೂ. 100 ಕೋಟಿಗಳ ವೆಚ್ಚದಲ್ಲಿ ತಡೆಗೋಡೆ ಕಟ್ಟುವ ಕೆಲಸವನ್ನು ಮಾಡಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಅವರು

ಮಾಡಿರುವಂತಹ ಮ್ಯಾಪಿಂಗನ್ನು ತೆಗೆದುಕೊಂಡು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇನೆ. ಅವರ ಕಡೆಯಿಂದ ವರದಿಯನ್ನು ತರಿಸಿಕೊಂಡು prioritize ಮಾಡುತ್ತೇವೆ. ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಿಗೆ ಸೀಮಿತವಾಗಿ ನಾನು ಮಾತನಾಡುತ್ತಿದ್ದೇನೆ. ನಾನು ಇಡೀ ಕರ್ನಾಟಕದ ವಿಷಯವನ್ನು ಮಾತನಾಡುತ್ತಿಲ್ಲ. ಈ ಭಾಗಗಳಲ್ಲಿ ಭೂಕುಸಿತವನ್ನು ತಡೆಯುತ್ತೇವೆ ಎಂದ ಮಾತ್ರಕ್ಕೆ ಎಲ್ಲವನ್ನೂ ತಡೆದು ಬಿಡುತ್ತೇವೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ನಾವು ಇಲ್ಲಿ ತಡೆಗೋಡೆ ಕಟ್ಟಿದ್ದರೆ ಅದು ಇನ್ನೊಂದು ಕಡೆ ಕುಸಿದಿರುತ್ತದೆ. ಆದರೂ ಕೂಡ ನಾವು ಏನು ಮಾಡುವುದಕ್ಕೆ ಸಾಧ್ಯ ಇದೆಯೋ ಅದನ್ನಾದರೂ ಮಾಡಬೇಕು ಎನ್ನುವ ತೀರ್ಮಾನಕ್ಕೆ ಸರ್ಕಾರ ಬಂದಿದೆ. ಇದನ್ನು ಆದಷ್ಟು ಶೀಘ್ರವಾಗಿ ಅನುಷ್ಠಾನದ ಕಡೆಗೆ ಹೆಜ್ಜೆಯನ್ನು ಇಡುತ್ತೇವೆ. ಮಾನ್ಯ ಸದಸ್ಯರು ಮಾತನಾಡುವಾಗ ಹೇಳಿರುವಂತಹ ಬೇರೆ ವಿಷಯಗಳನ್ನು ಗಮನಿಸಿದ್ದೇನೆ. ಕೆಲವನ್ನು ನಾವು ಅಭಿವೃದ್ಧಿ ಮಾಡುವಾಗ ಎಚ್ಚರಿಕೆ ವಹಿಸಬೇಕು ಎನ್ನುವಂಥದ್ದೂ ಇದೆ. ಆ ದಿಕ್ಕಿನಲ್ಲೂ ಕೂಡ ಕೆಲವು ರಿಗ್ಯುಲೇಷನ್‌ಗಳನ್ನು ಬದಲಾವಣೆ ಮಾಡಿ ಬಿಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದರ ಕಡೆ ಗಮನ ಕೊಡುತ್ತೇವೆ. ಮತ್ತೆ, ರಸ್ತೆಗಳ ಬಗ್ಗೆ ಹೇಳಿದರು. ಶಿರಾಡಿ ಘಾಟ್ ರಸ್ತೆಯನ್ನು ರಾತ್ರಿ ಹೊತ್ತು ಬಂದ್ ಮಾಡಬೇಕು ಎನ್ನುವ ತೀರ್ಮಾನ ಮಾಡಿದ್ದರು. ನಾನು ಮತ್ತೆ NHAI ಅವರ ಜೊತೆಗೆ ಮಾತನಾಡಿ, ಮಂಗಳೂರು, ಹಾಸನ ಜಿಲ್ಲಾಧಿಕಾರಿಗಳ ಜೊತೆ ಮೀಟಿಂಗ್ ಮಾಡಿ, ಹೆಚ್ಚಿನ ಮಾನವ ಸಂಪನ್ಮೂಲ ಅಂದರೆ, PWD (Public Works Department) engineers, Police ಹಾಗೂ Z.P. (Zilla Panchayat) engineers ಇವರುಗಳನ್ನು night patrolling ಕೂಡ ಹಾಕಿ, ಅವರು up and down ಆ ರಸ್ತೆಯಲ್ಲಿ ಓಡಾಡುವ ಹಾಗೆ ಮಾಡಿ ಆದಷ್ಟು ರಾತ್ರಿ ಓಪನ್ ಇಡಬೇಕು ಎಂದು ಹೇಳಿದೆ. ಏಕೆಂದರೆ ಅದು ಬಹಳ critical corridor ಆಗಿದೆ. ಬಂದ್ ಮಾಡಬಾರದು ಎಂದು ಸೂಚನೆ ಕೊಟ್ಟಿದ್ದೇನೆ. ಬಹುಶಃ ಶನಿವಾರದಿಂದ ರಾತ್ರಿ ಕೂಡ ವಾಹನ ಓಡಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಗುರುವಾರ ಬಂದ್ ಮಾಡುವಂತಹ ತೀರ್ಮಾನ ಮಾಡಿ, ಗುರುವಾರ ರಾತ್ರಿಯೇ ಬಂದ್ ಮಾಡಿದ್ದರು. ನಾನು ಶುಕ್ರವಾರ ಅವರ ಜೊತೆ ಮಾತನಾಡಿ, ಅವರಿಗೆ, ನೀವು ಹೇಳುವುದೆಲ್ಲಾ ಸರಿಯಿದೆ, ನಿಮ್ಮನ್ನು rule-out ಮಾಡುವುದಿಲ್ಲ, ಆದರೆ alternate ಆಗಿ ಸಂಪಾಜೆ ಕಡೆಗೆ ಕಳುಹಿಸುವುದಕ್ಕಾಗುವುದಿಲ್ಲ, ಏಕೆಂದರೆ ಅದು ಕಡಿದಾಗಿದೆ. ಈ ಕಡೆ ಚಾರ್ಮಡಿಗೂ ಕಳುಹಿಸುವುದಕ್ಕೆ ಆಗುವುದಿಲ್ಲ, ಏಕೆಂದರೆ

ತುಂಬಾ hairpin curves ಇದೆ, narrow roads ಇದೆ. ಸುಮಾರು ಟ್ಯಾಂಕರ್‌ಗಳು up and down movement ಆಗುವುದರಿಂದ, ಇದು ಬಹಳ essential ಆಗಿರುವುದರಿಂದ ಸರ್ಕಾರ ಹೆಚ್ಚಿಗೆ ಶ್ರಮ ತೆಗೆದುಕೊಂಡು ರಸ್ತೆಯನ್ನು ಓಪನ್ ಇಡಬೇಕೆಂದು NHAI ಹಾಗೂ ನಮ್ಮ PWD ಆಗೂ ಎರಡೂ ಇಲಾಖೆಯವರು ಜಿಲ್ಲಾಧಿಕಾರಿಗಳ ಜೊತೆ ಸಭೆ ಮಾಡಿದ್ದೇವೆ. ರಾತ್ರಿ ಹೊತ್ತು ಕೂಡ ಓಪನ್ ಮಾಡಿಸುವಂತಹ ಕೆಲಸವನ್ನು ಶನಿವಾರದಿಂದ ಮಾಡಿದ್ದೇವೆ. ಉಳಿದ ಸಲಹೆಗಳನ್ನು ನಾನು ಗಮನದಲ್ಲಿ ಇಟ್ಟುಕೊಳ್ಳುತ್ತೇನೆ. ಒಟ್ಟಾರೆ ಪಶ್ಚಿಮ ಘಟದಲ್ಲಿ ಮತ್ತು ಕರಾವಳಿ ಭಾಗದಲ್ಲಿ ಭೂಕುಸಿತ vulnerability ಯನ್ನು ತಡೆಯುವ ಕೆಲಸ ಮಾಡುತ್ತೇವೆ.

**ಶ್ರೀ ಸಿ.ಟಿ.ರವಿ:–** ಕಳೆದ 5 ವರ್ಷಗಳಲ್ಲಿ ಈ ಭೂಕುಸಿತದಿಂದ ಎಷ್ಟು ಜನ ಸತ್ತಿದ್ದಾರೆ, ಎಷ್ಟು ಆಸ್ತಿ ಹಾನಿಯಾಗಿದೆ?

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಗಳೆ, ತಕ್ಷಣಕ್ಕೆ ನನ್ನ ಹತ್ತಿರ ಮಾಹಿತಿ ಇಲ್ಲ. ಆ ಮಾಹಿತಿಯನ್ನು ಒದಗಿಸಿ ಕೊಡುತ್ತೇನೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಗಳೆ, ನನ್ನ ಮಾಹಿತಿ ಪ್ರಕಾರ, ಈ ವರ್ಷ ಬಿಟ್ಟು ಕಳೆದ 5 ವರ್ಷಗಳಲ್ಲಿ ಸುಮಾರು 50 ಜನ ಭೂಕುಸಿತದಿಂದ ಮರಣ ಹೊಂದಿದ್ದಾರೆ. ಸಾವಿರಾರು ಎಕರೆ ಕೃಷಿ ಭೂಮಿ ನಷ್ಟವಾಗಿದೆ, ಕೊಚ್ಚಿಕೊಂಡು ಹೋಗಿವೆ. ಮನೆಗಳು ಧ್ವಂಸವಾಗಿವೆ.

**ಶ್ರೀ ಕೃಷ್ಣಭೈರೇಗೌಡ:–** 2018ರ ಮುಂಗಾರಿನ ಅವಧಿಯಲ್ಲಿ ಹೆಚ್ಚು ಅನಾಹುತಗಳಾಯಿತು. ಈಗ ಮಡಿಕೇರಿ ಮತ್ತು ಇನ್ನಿತರ ಕಡೆ ಅನಾಹುತಗಳಾಗುತ್ತಿವೆ. ಮಾನ್ಯ ಸದಸ್ಯರ ಆತಂಕವನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಂಡಿದೆ. ತಕ್ಷಣ ಈ ವರ್ಷದಲ್ಲಿ ರೂ. 100 ಕೋಟಿಗಳನ್ನು ಕರಾವಳಿ ಮತ್ತು ಮಲೆನಾಡು ಪ್ರದೇಶಗಳಿಗೆ ಸೀಮಿತವಾಗಿ ಇಟ್ಟು, ತಡೆಗೋಡೆ ಕಟ್ಟುವುದಕ್ಕೆ ವೆಚ್ಚ ಮಾಡುತ್ತೇವೆ. Geological Survey of India ದವರು ಏನು ಪರಿಹಾರ ಕ್ರಮಗಳನ್ನು ಸೂಚಿಸುತ್ತಾರೋ ಹಾಗೆ ಮಾಡುತ್ತೇವೆ. ಎಲ್ಲಾ ಕಡೆ ತಡೆಗೋಡೆ ಕಟ್ಟುವ ಅವಶ್ಯಕತೆ ಇಲ್ಲ. ಅವರೇನು ಪರಿಹಾರ ಕ್ರಮಗಳನ್ನು

ಸೂಚಿಸುತ್ತಾರೋ ಅವುಗಳನ್ನು ಅಳವಡಿಸಿಕೊಳ್ಳುವುದಕ್ಕೆ ರೂ. 100 ಕೋಟಿಗಳ ವೆಚ್ಚದಲ್ಲಿ ಯೋಜನೆ ಮಾಡುತ್ತೇವೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು ಈ ವಿಷಯದ ಬಗ್ಗೆ ಬಹಳ ವಿಸ್ತಾರವಾಗಿ ಪ್ರಸ್ತಾಪ ಮಾಡಿ ಉತ್ತರ ಕೊಟ್ಟಿದ್ದಾರೆ. ಮೊದಲನೆದಾಗಿ, ವಾಡಿಕೆ ಮಳೆಗಿಂತ ಅತಿ ಹೆಚ್ಚು ಮಳೆ ಒಂದೇ ಬಾರಿ ಸುರಿದಿತ್ತು ಎನ್ನುವುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಸರಾಸರಿ ಮಳೆಯಾದರೆ ಇಂತಹ ತೊಂದರೆಗಳು ಆಗುವುದಿಲ್ಲ. ಮಳೆ ಹೇಳಿ–ಕೇಳಿ ಬರುವುದಿಲ್ಲ. ಮಾನ್ಯ ಸಭಾಪತಿಗಳೇ, ಸರ್ಕಾರ ನೀಲಗಿರಿ ಮತ್ತು ಅಕೇಷಿಯಾ ಮರಗಳ ಬಗ್ಗೆ ಸರ್ಕಾರ ಬಹಳ ಉದಾಸೀನ ಮಾಡುತ್ತಿದೆ. ನಾನು ಈ ಸರ್ಕಾರ ಆ ಸರ್ಕಾರ ಎಂದು blame ಮಾಡುವುದಿಲ್ಲ. ಕಳೆದ 20 ವರ್ಷಗಳಿಂದೀಚೆಗೆ ಹೆಚ್ಚು ನೀಲಗಿರಿ ಮತ್ತು ಅಕೇಷಿಯಾ ಮರಗಳನ್ನು ನೆಟ್ಟಿದ್ದಾರೆ. ನೀಲಗಿರಿ ಮರಗಳನ್ನು ರಸ್ತೆ ಬದಿಯಲ್ಲಿ ಮತ್ತು ಅಕೇಷಿಯಾ ಮರಗಳನ್ನು ಕುದುರೆಮುಖ, ಆಗೊಂಬೆ, ಚಾರ್ಮಾಡಿ ಘಾಟ್ ನಂತಹ ಪ್ರದೇಶಗಳಲ್ಲಿ ಹಾಕುತ್ತೀರಿ. ಆದರೆ ಅಲ್ಲಿ ಸ್ವಾಭಾವಿಕವಾಗಿ ಯಾವುದೇ ಗಿಡಗಳನ್ನು ಬೆಳೆಸುವ ಶಕ್ತಿ ಅಲ್ಲಿನ ಭೂಮಿಗೆ ಇದೆ. ಹೀಗಿರುವಾಗ ಅಲ್ಲಿ ಅಕೇಷಿಯಾ ಹಾಕುವ ಅಗತ್ಯವಿಲ್ಲ. ನೀವು ಹೆಲಿಕಾಪ್ಟರ್‌ನಿಂದ ನೋಡಿದರೆ, ಇಡೀ ಗುಡ್ಡ ಅಕೇಷಿಯಾ ಮರಗಳಿಂದ ಕೂಡಿರುವುದು ಕಾಣುತ್ತದೆ. The lifespan of acacia tree is very short. ಒಂದು ಸಲ ಗಾಳಿ ಬಂದರೆ ಬಿದ್ದು ಹೋಗುತ್ತದೆ. ಅದು ಬಿದ್ದು ಹೋದಾಗ ಅದರ ಬುಡ ಮತ್ತು ಬೇರೂ ಸಹ ಒಣಗುತ್ತದೆ. ಬೇರು ಒಣಗಿದರೆ ಕೊರಕಲು ಆಗುತ್ತದೆ. ಜೋರು ಮಳೆ ಬಂದರೆ ಕೊರಕಲಲ್ಲಿ ಒಳಗಡೆ ನೀರು ಮತ್ತು ಕೆಸರು ಆಗಿ ಅಲ್ಲಿಂದ ಜಾರುವಂಥದ್ದು ಆಗುತ್ತದೆ. ಆಗ ಭೂಕುಸಿತವಾಗುತ್ತದೆ. ಮಾನ್ಯ ಸಭಾಪತಿಗಳೇ, ರಸ್ತೆಗಳನ್ನು ಅಗಲ ಮಾಡುತ್ತಾರೆ. ಆ ಸಂದರ್ಭದಲ್ಲಿ ತಡೆಗೋಡೆಗೆ ಸರಿಯಾದ ಸಿಮೆಂಟ್ ಹಾಕಿ ಮಾಡಬೇಕು. Genting ಇರಬಹುದು, Sun City ಇರಬಹುದು, ಅಲ್ಲಿ ಹೋಗುವಾಗ ಕಾಣಸಿಗುವ double highway roads ನಲ್ಲಿ ಯಾವರೀತಿ ಮಾಡಿದ್ದಾರೆ, ಯಾವರೀತಿ ಗುಡ್ಡ ಕಡಿದಿದ್ದಾರೆ, ಯಾವರೀತಿ ಬ್ಯಾರಿಕೇಡ್ ಮಾಡಿದ್ದಾರೆ ಎನ್ನುವುದನ್ನೂ ನೋಡಿರಬಹುದು. ಆ ರೀತಿ ಶಾಶ್ವತ ಬ್ಯಾರಿಕೇಡ್ ಮಾಡಿದರೆ ಕುಸಿತ ಸಂಭವಿಸುವುದಿಲ್ಲ. ಇದಕ್ಕೆಂದೇ

ಪ್ರತ್ಯೇಕ ಬಜೆಟ್ ಮಾಡಿ. ರೂ. 100 ಕೋಟಿಗಳ ಇಡುತ್ತೇವೆ ಎಂದು ಹೇಳಿದಿರಿ. ಆದರೆ short duration ಗೆ ರೂ. 500 ಕೋಟಿಗಳನ್ನಾದರೂ ಇಡಬೇಕಾಗುತ್ತದೆ. ಸುಮಾರು 3 ಲಕ್ಷ ಕೋಟಿಗಳನ್ನು ಬಜೆಟ್‌ನಲ್ಲಿ ರೂ. 500 ಕೋಟಿಗಳ ಹಣವನ್ನು ಇಟ್ಟು, ನಾಲ್ಕಾರು ಘಾಟ್‌ಗಳಲ್ಲಿ ಬರುವಂತಹ ರಸ್ತೆಗಳ ತಡೆಗೋಡೆ ನಿರ್ಮಾಣಕ್ಕೆ ಮೀಸಲಾಗಿಡಬೇಕು. ಜೊತೆಗೆ ಒಂದು ಸಮಯವನ್ನು ನಿಗದಿ ಮಾಡಬೇಕು. ಅರಣ್ಯ ಇಲಾಖೆಯವರು ಅಕೇಷಿಯಾ ಮತ್ತು ನೀಲಗಿರಿ ಮರಗಳನ್ನು ತೆಗೆದು ಅಲ್ಲಿ ಬೇರೆ ಗಿಡಗಳನ್ನು ಹಾಕಿಸುವಂತಹ ವ್ಯವಸ್ಥೆ ಮಾಡಿಸಿ. ಭೂಮಿಯನ್ನು ಹಿಡಿದಿಟ್ಟುಕೊಳ್ಳುವಂತಹ ಬಿದಿರು, perennial plants ಮತ್ತು ಬೇರೆ ಬೇರೆ ಹಣ್ಣುಗಳ ಗಿಡಗಳನ್ನು ಹಾಕಿಸಿ. ಇದರಿಂದ ಪ್ರಾಣಿ ಪಕ್ಷಿಗಳ ಸಂಕುಲಕ್ಕೆ ಒಳ್ಳೆಯದಾಗುತ್ತದೆ.

(ಮುಂದು)

(645) 23.7.2024 5.50 ಪಿಕೆ:ಕೆಎಸ್ (ಸಭಾಪತಿಗಳ ಉಪಸ್ಥಿತಿ)

**ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಚಾರ್ಮಾಡಿ ಘಾಟ್ ಮತ್ತು ಬೇರೆ ಘಾಟ್‌ಗಳ ಪೈಕಿ ಶಿರಾಡಿ ಘಾಟ್‌ನಲ್ಲಿ ಹಾಗೂ ಮಡಿಕೇರಿಯಲ್ಲಿ ಮಾತ್ರ ಟ್ಯಾಂಕರ್‌ಗಳು, ನೈಟ್ ಬಸ್ಸುಗಳು ಹೋಗುವುದಕ್ಕೆ ಸಾಧ್ಯ. ಆದರೆ ಚಾರ್ಮಾಡಿ ಘಾಟ್‌ನಲ್ಲಿ ಪರ್ಯಾಯ ಎರಡು ರಸ್ತೆಗಳಿವೆ. ಅದರ ಸಾಧ್ಯತೆಯ ಬಗ್ಗೆ ನೋಡಬೇಕು. ಸ್ಥಳೀಯವರು, ಅದು ಹಿಂದೆ cart road ಆಗಿತ್ತು ಎಂದು ಹೇಳುತ್ತಾರೆ. ಪಶ್ಚಿಮ ಘಟ್ಟದ ಸೂಕ್ಷ್ಮತೆಗೆ ಯಾವುದೇ ರೀತಿಯಲ್ಲಿ ಸಮಸ್ಯೆ ಆಗದ ಹಾಗೆ ವ್ಯವಸ್ಥೆ ಮಾಡಲು ಅಲ್ಲಿನ ಸ್ಥಳೀಯರು ತಮ್ಮ ಜಾಗವನ್ನು ಬಿಟ್ಟುಕೊಡುವುದಕ್ಕೆ ತಯಾರಿದ್ದಾರೆ. ಚಾರ್ಮಾಡಿಘಾಟ್‌ನಿಂದ ನೆರಿಯಾದ ಮೇಲೆ ಹೋದರೆ ಕೊಟ್ಟಿಗೆಹಾರಕ್ಕೆ ನೇರವಾಗಿ ತಲುಪುವಂತಹ ರಸ್ತೆ ಇದೆ. ವರ್ಷದಿಂದ ವರ್ಷಕ್ಕೆ ವಾಹನಗಳ ಓಡಾದ ಸಂಖ್ಯೆ ಜಾಸ್ತಿಯಾಗುತ್ತಲೇ ಇರುತ್ತದೆ. ಆ ಹಿನ್ನೆಲೆಯಲ್ಲಿ ಈ ರಸ್ತೆಗಳ ಮೇಲೆ ಲೋಡ್ ಕಡಿಮೆ ಮಾಡಲು ಬದಲಿ ರಸ್ತೆಯನ್ನು ಮಾಡಬೇಕು. ಈಗ ಶಿಶಿಲ ಘಟ್ಟದ ಮೇಲಿನವರೆಗೆ ರಸ್ತೆ ಬಂದಿದೆ.

ಇನ್ನೂ ಮುಂದಕ್ಕೆ 3 ಕಿ.ಮೀ.ನಷ್ಟು ರಸ್ತೆ ಆಗಬೇಕಿದೆ. ಈ ಬದಲಿ ವ್ಯವಸ್ಥೆ ಮಾಡುವ ಕಡೆಗೆ ಸರ್ಕಾರ ಗಮನಹರಿಸಬೇಕು. ಇದಕ್ಕೆ forest clearance ಬೇಕಾಗಬಹುದು.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಗಳೆ, ಬೆಳಗಾವಿ ಅಧಿವೇಶನದಲ್ಲಿ ಚರ್ಚೆ ಮಾಡಿ, ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ, ರಾಜ್ಯದಲ್ಲಿ ನೀಲಗಿರಿ ಮರಗಳನ್ನು ನೆಡುವುದನ್ನು 2017ರಲ್ಲಿ ನಿಷೇಧ ಮಾಡಿದ್ದೇವೆ. ಅರಣ್ಯ ಇಲಾಖೆಯವರೂ ಕೂಡ ನೆಡಬಾರದು ಎಂದು ಅವರಿಗೂ ನಿಷೇಧ ಹೇರಿದ್ದೇವೆ. ಅರಣ್ಯ ಇಲಾಖೆಯಲ್ಲಿ ಕೆಲವು KSFDC (Karnataka State Forest Development Corporation) ಯವರು ಕೆಲವು industries ಗಳಿಗೆ ಲೀಸ್ ಕೊಟ್ಟಿರುವ ಜಾಗಗಳಿವೆ; ಅವರಿಗೆ MPM (The Mysore Paper Mills Limited) ನವರ ಜೊತೆ direct contract ಇರುವುದರಿಂದ ಅಂತಹ ಕೆಲವು ಕಡೆ ಬೆಳೆಸಲೇಬೇಕು ಎಂದು ಒತ್ತಾಯ ಮಾಡಿರುವುದು ಬಿಟ್ಟರೆ, ಅರಣ್ಯಗಳಲ್ಲಾಗಲಿ, ರಸ್ತೆ ಬದಿಗಳಲ್ಲಾಗಲಿ ಬೆಳೆಸಬಾರದು, ರೈತರೂ ಸಹ ಬೆಳೆಸಬಾರದು ಎಂದು 2017ರಲ್ಲಿ ನಿಷೇಧ ಮಾಡಿದ್ದೇವೆ. ಅಕೇಷಿಯಾ ಮರಗಳಿಗೆ ಸಂಬಂಧಪಟ್ಟಂತೆ ನನಗೆ ಜ್ಞಾಪಕ ಬರುತ್ತಿಲ್ಲ. ಮಾನ್ಯ ಸದಸ್ಯರು, ರೂ. 100 ಕೋಟಿಗಳು ಸಾಲುವುದಿಲ್ಲ ಎಂದು ಹೇಳಿದ್ದಾರೆ. ಅದು ಈ ವರ್ಷಕ್ಕೆ ಮಾತ್ರ ಆಗಿದೆ. ಇದನ್ನು ಒಂದೇ ವರ್ಷಕ್ಕೆ ಮಾಡುತ್ತೇವೆ ಎಂದು ಹೇಳಿದರೂ ಅವು ಸದುಪಯೋಗ ಆಗುತ್ತದೆಯೋ ಇಲ್ಲವೋ ಎಂದು ನೋಡುವುದಕ್ಕೆ ಆಗುವುದಿಲ್ಲ, ಅದು ಏನೇನೋ ಆಗುತ್ತದೆ. ಇದರ ಅನುಭವ ಹೇಗಿರುತ್ತದೆ ಎಂದು ನೋಡಿಕೊಂಡು ಮುಂದೆ ಇದಕ್ಕೆ ಅವಕಾಶ ಮಾಡಿಕೊಡುತ್ತೇವೆ. ಖಂಡಿತವಾಗಿ ಇನ್ನೂ ಹೆಚ್ಚಿನ ಅನುದಾನವನ್ನು ಕೊಡುತ್ತೇವೆ. ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರು ಹೇಳಿದ್ದರ ಬಗ್ಗೆ ಐಡಿಯಾ ಇಲ್ಲ. ಪಿಡಬ್ಲ್ಯೂಡಿ ಅವರ ಜೊತೆ ನಾನು ಸಭೆ ಮಾಡುವಾಗ ಪರ್ಯಾಯ ರಸ್ತೆಗಳ ಸಂಬಂಧ ಪರಿಶೀಲನೆ ಮಾಡಿ ಎಂದು ಹೇಳುತ್ತೇನೆ.

**ಶ್ರೀ ಡಿ.ಎಸ್.ಅರುಣ್:–** ಮಾನ್ಯ ಸಭಾಪತಿಗಳೆ, ನಿನ್ನೆಯ ನಿಯಮ 72ರ ಅಡಿಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಇವತ್ತು ಉತ್ತರ ಸಿಗುತ್ತದೆ ಎಂದು ಹೇಳಿದ್ದೀರಿ.

**ಸಭಾಪತಿಯವರು:–** ಅದಕ್ಕೆ ಉತ್ತರ ಬಂದಿಲ್ಲ ದಯವಿಟ್ಟು ಕುಳಿತುಕೊಳ್ಳಿ.

**12. ಅರ್ಧಗಂಟೆ ಕಾಲಾವಧಿ ಚರ್ಚೆ**

**ವಿಷಯ: (ಅ) ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ವಿತರಿಸುವ ವಸ್ತುಗಳ ಖರೀದಿ ದರಗಳ ಬಗ್ಗೆ.**

- - -

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ದಿನಾಂಕ 15.7.2024ರಂದು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 21 ಅನ್ನು ಮಾನ್ಯ ಸಚಿವರಿಗೆ ಕೇಳಿದ್ದೆ. ಆಗ ನನಗೆ ಸರಿಯಾದ ಉತ್ತರ ಸಿಗದೇ ಇದ್ದುದರಿಂದ ಇದನ್ನು ಅರ್ಧಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ, ಅದಕ್ಕೆ ಧನ್ಯವಾದಗಳು.

ಶಾಲೆಗಳಿಗೆ ಮಧ್ಯಾಹ್ನದ ಊಟವನ್ನು ಕೊಡಲು ಮಾನ್ಯ ಮಧು ಬಂಗಾರಪ್ಪನವರ ಇಲಾಖೆಯವರು ಅಕ್ಕಿಯನ್ನು ಪ್ರತಿ ಕೆ.ಜಿ.ಗೆ ರೂ. 29 ರಂತೆ ಖರೀದಿ ಮಾಡುತ್ತಿದ್ದಾರೆ. ಅದೇ ತರಹ ಎಲ್ಲಾ ಜನರಿಗೆ ಏನು ಆಹಾರವನ್ನು ವಿತರಣೆ ಮಾಡುತ್ತಾರೋ ಅವರಿಗೆ ವಿತರಿಸುವ ಅಕ್ಕಿಯನ್ನು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯವರು ರೂ. 34.60 ಗಳಿಗೆ ಕೊಂಡುಕೊಳ್ಳುತ್ತಿದ್ದಾರೆ. ಶಿಕ್ಷಣ ಇಲಾಖೆಯವರು ಮತ್ತು ಆಹಾರ ಹಾಗೂ ನಾಗರಿಕ ಸರಬರಾಜು ಇಲಾಖೆ ಕೊಂಡುಕೊಳ್ಳುತ್ತಿರುವ ಅಕ್ಕಿ ಒಂದೇಯಾಗಿದ್ದರೆ ದರದಲ್ಲಿ ಇಷ್ಟೊಂದು ವ್ಯತ್ಯಾಸವೇಕೆ ಎಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ ನನಗೆ ಸರಿಯಾದ ಉತ್ತರ ಕೊಡಲಿಲ್ಲ. ಕೇಂದ್ರ ಸರ್ಕಾರ ಏನು ರೂ. 29 ಕ್ಕೆ ಬರುತ್ತಿದೆಯೋ, ಅದನ್ನು ಕೊಂಡುಕೊಂಡರೂ ಅದರಲ್ಲಿ ಲಾಭ ಇದೆ. ಉದಾಹರಣೆಗೆ, ರೂ. 29ಕ್ಕೆ ಏನು ಅಕ್ಕಿಯನ್ನು ಕೊಂಡುಕೊಳ್ಳುತಿದ್ದಾರೋ, ಅದು... The GOI (Government of India) issue price of Rice is at Rs. 18.59 per kilogram. ಕೇಂದ್ರ ಭಂಡಾರದಿಂದ ರೂ. 18.59ಕ್ಕೆ ಸಿಗತ್ತಿದೆ. Overall Kendriya Bhandar (KB) margin is Rs. 1.41/- per kg of Bharat Rice, which includes marketing expenses, track and trace monitoring expenses, advertising and promotional expenses of Bharat Brand, and GST on the KB margin. ಇದೆಲ್ಲವು ಸೇರಿದೆ.

**(ಈ ಹಂತದಲ್ಲಿ ವೈಸ್ ಛೇರ್ಮನ್ ಆದ ಶ್ರೀಮತಿ ಭಾರತಿ ಶೆಟ್ಟಿಯವರು ಸಭಾಪತಿಯವರ ಪೀಠವನ್ನು ಅಲಂಕರಿಸಿದರು)**

ಆದರೂ ಕೂಡ, ರೂ. 1.41 ಲಾಭ ಸಿಗುತ್ತದೆ. ಆದರೆ ಇದು ನಮ್ಮ ಕೈಗೆ ಸಿಗುವಾಗ, ಸಾರಿಗೆ ವೆಚ್ಚ ಎಲ್ಲವೂ ಸೇರಿ ರೂ. 29 ಕ್ಕೆ ಶಿಕ್ಷಣ ಇಲಾಖೆ ಕೊಂಡುಕೊಳ್ಳುತ್ತದೆ. ಆದರೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ರೂ. 34.60ಗೆ ಏಕೆ ಕೊಂಡುಕೊಳ್ಳುತ್ತಿದ್ದೆ ಎಂದು ಕೇಳುತ್ತಿದ್ದೇನೆ. ಇದಕ್ಕೆ ಮಾನ್ಯ ಸಚಿವರು, ಕೇಂದ್ರ ಸರ್ಕಾರದಿಂದ ಅಕ್ಕಿಯನ್ನು ಕೇಳಿದ್ದೆ, ಕೇಂದ್ರ ಸರ್ಕಾರ ಸರಬರಾಜು ಮಾಡುತ್ತಿಲ್ಲ, ಕೇಂದ್ರೀಯ ಭಂಡಾರಕ್ಕೆದ ರೂ. 34.60ಕ್ಕೆ ಕೊಟ್ಟು ಖರೀದಿಸುತ್ತಿದ್ದೇವೆ ಎಂದು ಹೇಳಿದರು. ಆದರೆ ಅದರಲ್ಲಿ ದರವೇ ಇಲ್ಲ. ಇದಕ್ಕೆ ಸರಿಯಾದ ಉತ್ತರ ಕೊಡಿ ಎಂದು ಮಾನ್ಯ ಸಚಿವರಿಗೆ ಕೇಳಿದ್ದೆ. ರೂ. 29 ಮತ್ತು ರೂ. 34.60 ಗಳ ವ್ಯತ್ಯಾಸದ ಮೊತ್ತ ಸುಮಾರು ಒಂದು ಕೆ.ಜಿ.ಅಕ್ಕಿಗೆ ರೂ. 5 ರೂಪಾಯಿಗಳು ಮಧ್ಯದಲ್ಲಿ ಯಾರಿಗೆ ಹೋಗುತ್ತಿದೆ? ಅಕಸ್ಮಾತ್ ಅದು ಮಧ್ಯದಲ್ಲಿ ಹೋಗುತ್ತಿದೆ ಎಂದರೆ, ಒಂದು ವರ್ಷಕ್ಕೆ it amounts to, ಸುಮಾರು ರೂ. 100 ರಿಂದ 120 ಕೋಟಿ ಹಣ ಆಗುತ್ತದೆ. ಇದು ಯಾರಿಗೆ ಹೋಗುತ್ತದೆ ಎನ್ನುವ ಪ್ರಶ್ನೆ ಕೇಳಿದ್ದೆ. ಮಾನ್ಯ ಸಚಿವರು ನನಗೆ ಸರಿಯಾದ ಉತ್ತರ ಕೊಡಲಿಲ್ಲ. ಇದಕ್ಕೆ ಸರಿಯಾದ ಉತ್ತರವನ್ನು ಕೊಡಬೇಕು.

**ಶ್ರೀ ಕೆ.ಹೆಚ್.ಮುನಿಯಪ್ಪ (ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಮೊತ್ತಗಳಲ್ಲಿ ಏಕೆ ವ್ಯತ್ಯಾಸವಾಗಿದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ನಾನು ಈ ಕುರಿತು ಹಿಂದೆಯೇ ಉತ್ತರ ಕೊಟ್ಟಿದ್ದೇನೆ. ಕೇಂದ್ರದ ಸ್ವಾಮ್ಯಕ್ಕೆ ಒಳಪಟ್ಟಂಥ ಕೇಂದ್ರಿಯ ಭಂಡಾರ, NAFED (National Agricultural Cooperative Marketing Federation of India Ltd.), NCCF (National Cooperative Consumers' Federation of India) ಮುಖಾಂತರ ನಾವು ಈ ಅಕ್ಕಿಯನ್ನು ತೆಗೆದುಕೊಳ್ಳುತ್ತೇವೆ.

(ಮುಂದು)

(646) 23-7-2024 6.00 ಡಿಎಸ್-ಎಂಡಿ (ವೈಸ್ ಛೇರ್ಮನ್ ಉಪಸ್ಥಿತಿ)

**ಶ್ರೀ ಕೆ.ಹೆಚ್.ಮುನಿಯಪ್ಪ (ಮುಂದು):**

Food Corporation of India ರೂ.34 ದರವನ್ನು ನಿಗದಿ ಮಾಡಿರುತ್ತಾರೆ, transportation charge 60 ಪೈಸೆ. ಅದರ ಆಧಾರದ ಮೇಲೆ ಅದಕ್ಕೆ ಮೇಲ್ಪಡದಂತೆ ನಮಗೆ ಅಕ್ಕಿಯನ್ನು ಕೊಡಬೇಕೆಂದು ನಾವು ಪತ್ರವನ್ನು ಬರೆಯುತ್ತೇವೆ. ಕೇಂದ್ರಿಯ ಭಂಡಾರ, NCCF (National Cooperative Consumers Federation of India) and NAFED (National Agricultural Cooperative Marketing Federation of India) ಅವರು ತೀರ್ಮಾನ ಮಾಡಿ ರೂ.34 ಗಳಿಗೆ ಮೀರದಂತೆ Food Corporation of India rate ಗೆ ಆ ದಿನ ನಾವು ಅಕ್ಕಿ ಕೇಳದಂತಹ ಕಾಲದಲ್ಲಿ ಕೇಂದ್ರ ಸರ್ಕಾರ ಅಂತ್ಯೋದಯ ಮತ್ತು ಬಿಪಿಎಲ್ ಕಾರ್ಡ್‌ಗಳಿಗೆ ಒಂದು ಕೆ.ಜಿ. ಅಕ್ಕಿಗಾಗಿ ಕೊಡುತ್ತಿರುವಂತಹ ದರ ರೂ.34. ನಾವು ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿ ಈ ದರಕ್ಕೆ ಜಾಸ್ತಿಯಾಗದಂತೆ ಅಕ್ಕಿಯನ್ನು ನಮಗೆ ಸರಬರಾಜು ಮಾಡುವುದಕ್ಕೆ ಕೇಂದ್ರ ಸಂಸ್ಥೆಗಳಿಗೆ ಮನವಿ ಮಾಡಿದ್ದೇವೆ. ಅವರು ಅದರಂತೆ ಅಕ್ಕಿಯನ್ನು ಸರಬರಾಜು ಮಾಡಿದರು. ಆ ಸರಬರಾಜಿನಲ್ಲಿ ನಾವು ಒಟ್ಟು ಅಂತ್ಯೋದಯ ಮತ್ತು ಬಿಪಿಎಲ್ ಕಾರ್ಡ್‌ದಾರರಿಗೆ ಒಟ್ಟಿಗೆ ಒಂದು ಕೋಟಿ ಮೂರು ಲಕ್ಷ ಕಾರ್ಡ್‌ಗಳೆಂದರೆ, ಮೂರು ಕೋಟಿ ಐವತ್ತೇಳು ಜನ ಫಲಾನುಭವಿಗಳಿಗೆ ಕೊಡುವಂತಹ ಏರ್ಪಾಟು ಆಯಿತು. ನಾವು ಖರೀದಿ ಮಾಡುತ್ತಿರುವುದು ಕೇವಲ 13,50,863 ಕಾರ್ಡ್‌ಗಳಿಗೆ ಮಾತ್ರ. ಒಂದು ಕೋಟಿ ಮೂರು ಲಕ್ಷ ಮತ್ತು ಹತ್ತು ಲಕ್ಷ ಎಂಭತ್ತು ನಾಲ್ಕು ಸಾವಿರ, ಈ ಎರಡು ಸೇರಿ ಕೇಂದ್ರ ಸರ್ಕಾರ ಕೊಡುತ್ತಿದೆ. ಕೇಂದ್ರ ಸರ್ಕಾರ ಇಷ್ಟು ಕಾರ್ಡ್‌ಗಳಿಗೆ ಕೊಡುತ್ತೇವೆಂದು limit ಇಟ್ಟಿದೆ. ಆ ಕಾರ್ಡ್‌ನ್ನು ಬಿಟ್ಟು ಹೆಚ್ಚುವರಿಯಾಗಿ ಬಿಪಿಎಲ್ ಕಾರ್ಡ್ ಬಂದಿದ್ದಕ್ಕೆ 13,50,863 ಕಾರ್ಡ್ ಅಂದರೆ, 35,91,786 ಮಾತ್ರ ನಾವು ಕೇಂದ್ರ ಭಂಡಾರದಿಂದ ಖರೀದಿ ಮಾಡುವುದಕ್ಕೆ ಕೇಂದ್ರ ಸ್ವಾಮ್ಯ ಸಂಸ್ಥೆಗಳಿಗೆ ಪತ್ರ ಬರೆದಿದ್ದೆವು. Food Corporation of India ದ ಆ ದಿನದ ದರ ಅಷ್ಟು ಇತ್ತು. ಅದರ ಮೇಲಾಗದಂತೆ ಮಾಡಿದ್ದೇವೆ. ಅದರಂತೆ ಸರಬರಾಜು ಮಾಡಿದ್ದೇವೆ. ಇದರಿಂದ ಯಾವುದೇ ರೀತಿಯ ಅವ್ಯವಹಾರ ನಡೆಯುವುದಕ್ಕೆ

ಅವಕಾಶವಿಲ್ಲ. ನಾವು ನೇರವಾಗಿ ಕೇಂದ್ರ ಸಂಸ್ಥೆಯಿಂದ ಮಾಡಿದ್ದೇವೆ. ಹರಾಜು ಮಾಡಿಲ್ಲ, ಯಾರು ಮಾರಾಟಗಾರರು ನಮ್ಮ ಹತ್ತಿರ ಬಂದಿಲ್ಲ. ಟೆಂಡರ್ ಕರೆಯುವುದಕ್ಕೆ ಹೋಗಿಲ್ಲ. ಏಕೆಂದರೆ ಕೇಂದ್ರ ಸ್ವಾಮ್ಯ ಸಂಸ್ಥೆಗಳು ಮೊದಲಿನಿಂದಲೂ ಸರಬರಾಜು ಮಾಡುತಿತ್ತು. ಅದರ ಮುಖಾಂತರ ಈ ಕಾರ್ಯಕ್ರಮವನ್ನು ಮಾಡಿದ್ದೇವೆ.

ಎರಡನೆಯದಾಗಿ, ಶಿಕ್ಷಣ ಇಲಾಖೆಯವರಿಗೆ ಬೇಕಾಗಿರುವುದು ಒಂದು ತಿಂಗಳಿಗೆ ಕೇವಲ ೩,೫೦೦ ಮೆಟ್ರಿಕ್ ಟನ್‌ಗಳು ಅಕ್ಕಿ. ನಮಗೆ ಒಂದು ತಿಂಗಳಿಗೆ ೨೦,೦೦೦ ಮೆಟ್ರಿಕ್ ಟನ್‌ಗಳು ಅಕ್ಕಿ ಬೇಕಾಗಿದೆ. ಕರ್ನಾಟಕ ರಾಜ್ಯದಲ್ಲಿ ನಾವು ಕೊಡುವಂತಹ ಅಕ್ಕಿ stock ಆಗುತ್ತಿದೆ. ಅದು ತೆಲಂಗಾಣ, ಆಂಧ್ರ ಪ್ರದೇಶ, ಹರಿಯಾಣ, ಪಂಜಾಬ್, ಛತ್ತೀಸ್‌ಗಡ್‌ನಿಂದ ಅಕ್ಕಿ ಬರಬೇಕಾಗಿದೆ. ಅದಕ್ಕೆ ನಾವು ಕೇಂದ್ರದ ಮೊರೆ ಹೋದೆವು. ಕೇಂದ್ರದಲ್ಲಿ ಅಕ್ಕಿ ಇದ್ದಂತಹ ಕಾಲದಲ್ಲೂ ಕೂಡ, ನಿಮ್ಮ ರೇಟ್ ಏನಿದೆ ಆ ರೇಟ್ ಒಂದು ಕೆ.ಜಿ. ಅಕ್ಕಿಯನ್ನು ರೂ.೩೪ ಗಳನ್ನು ನಾವು ಕೊಡುತ್ತೇವೆ ಕೊಡಿ ಎಂದು ಕೇಳಿದೆವು. Stock ಇದ್ದರೂ ಕೂಡ ಅವರು ಅಕ್ಕಿಯನ್ನು ಕೊಡುವುದಿಲ್ಲವೆಂದು ಹೇಳಿದರು. ಅಕ್ಕಿಯನ್ನು ಬಜಾರ್‌ಗೆ ಬಿಟ್ಟರು. ರೂ. ೧೯, ರೂ.೧೮, ರೂ.೨೯ ಗಳಿಗೆ ಮಾರಾಟ ಮಾಡಿದರು, ಅವರು ಬೇಕಾದ ಹಾಗೆ ಮಾರಾಟ ಮಾಡಿದರು. ಆದರೆ ಅವರು ಕರ್ನಾಟಕ ರಾಜ್ಯಕ್ಕೆ ಅಕ್ಕಿ ಕೊಡುವುದಕ್ಕೆ ಹಿಂದೆ ಹೋದರು. ಆಗ ನಾವು ಕೇಂದ್ರೀಯ ಭಂಡಾರ, NCCF, NAFED ಬೇಡುವಂತಹ ಪರಿಸ್ಥಿತಿ ಬಂತು. ಆಗಲೂ ಕೂಡ ನಾವು ನೇರವಾಗಿ ಅಕ್ಕಿ ಟೆಂಡರ್ ಮಾಡುವುದಕ್ಕೆ ಹೋಗಲಿಲ್ಲ. ಕೇಂದ್ರ ಸ್ವಾಮ್ಯ ಸಂಸ್ಥೆಗಳಿಂದ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದೆವು. ಅದರಂತೆ ಅಕ್ಕಿಯನ್ನು ಖರೀದಿ ಮಾಡಿದೆವು. ವಿದ್ಯಾ ಸಂಸ್ಥೆಯವರು ಸುಮಾರು ಮೂರೂವರೆ ಸಾವಿರ ಟನ್‌ನಷ್ಟು ಅಕ್ಕಿ Open Market ನಲ್ಲಿ ತೆಗೆದುಕೊಂಡಿದ್ದಾರೆ. ನಾವು ಕೇಂದ್ರ ಸ್ವಾಮ್ಯ ಸಂಸ್ಥೆಗಳಿಂದ ತೆಗೆದುಕೊಂಡಿದ್ದೇವೆ. ನಮಗೆ ಹದಿಮೂರು ಲಕ್ಷ ಕಾರ್ಡ್‌ಗಳಿಗೆ ಪ್ರತಿ ತಿಂಗಳು ೨೦,೦೦೦ ಮೆಟ್ರಿಕ್ ಟನ್‌ಗಳ ಅಕ್ಕಿ ಬೇಕಾಗಿತ್ತು. ಅದನ್ನು ನಾವು ತೆಗೆದುಕೊಂಡಿದ್ದೇವೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

ಮಾನ್ಯ ಸಭಾಪತಿಯವರೇ, ಅಕ್ಕಿಯ ಗುಣಮಟ್ಟ ಯಾವುದೆಂದರೆ raw rice grade 1. Fortified rice ಎಂದು ಏನು ಹೇಳುತ್ತಾರೆ ಅದನ್ನು ಬಿಟ್ಟರೆ, ಅದನ್ನು ನಾವು ಕೇಂದ್ರ ಸಂಸ್ಥೆಯಿಂದ ತೆಗೆದುಕೊಂಡಿದ್ದೇವೆ. ಅವರು Open Market ನಲ್ಲಿ ಸಾಮಾನ್ಯ ಅಕ್ಕಿಯನ್ನು ತೆಗೆದುಕೊಳ್ಳುವಾಗ ರೂ.29, ರೂ.30 ಗಳಿಗೆ ಆಗಿದೆ. ಒಂದು ಜಿಲ್ಲೆಯಲ್ಲಿ ರೂ.31 ಆಗಿದೆ, ಮತ್ತೊಂದು ಜಿಲ್ಲೆಯಲ್ಲಿ ರೂ.32.90 ಪೈಸೆ ಆಗಿದೆ. ರೂ.32.90 ಪೈಸೆಗೆ transportation charge ರೂ.2.60 ಪೈಸೆ ಸೇರಿದಾಗ ರೂ.35, ರೂ.36 ಆಗುತ್ತದೆ. ನಮಗಿಂತ ಜಾಸ್ತಿಯಾಗುತ್ತದೆ. Transportation charge ಬಿಟ್ಟು ಇದು ಇಷ್ಟಾಗಿದೆ. ಆದ್ದರಿಂದ ಆ ಸಂಸ್ಥೆ ಬೇರೆ, ನಮ್ಮದೇ ಬೇರೆ. ನಾವು ಎಷ್ಟು ಜನರಿಗೆ ಕೊಡುತ್ತಿದ್ದೇವೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಅಂತ್ಯೋದಯ, ಬಿಪಿಎಲ್ ಮತ್ತು ಎಪಿಎಲ್ ಕಾರ್ಡ್‌ಗಳು ಸೇರಿ ನಮ್ಮ ಲೆಕ್ಕಾಚಾರದ ಪ್ರಕಾರ ಸುಮಾರು 1,52,37,459 ಕಾರ್ಡ್‌ಗಳಿಗೆ 5,22,47,545 ಜನಗಳಿಗೆ, ಅಂದರೆ ಆರೂವರೆ, ಏಳು ಕೋಟಿ ಜನರು ಇರುವಾಗ ನೂರಕ್ಕೆ ಎಂಭತ್ತು ಭಾಗ ಜನರಿಗೆ ಕರ್ನಾಟಕ ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಎಪಿಎಲ್ ಕಾರ್ಡ್‌ನವರು ಕಡಿಮೆ ತೆಗೆದುಕೊಳ್ಳುತ್ತಾರೆ. ಒಂದು ಸಲ ಜಾಸ್ತಿ ಜನರು ಬರುತ್ತಾರೆ, ಒಂದು ಸಲ ಕಡಿಮೆ ಜನರು ಬರುತ್ತಾರೆ. ಆದರೆ ಕರ್ನಾಟಕ ರಾಜ್ಯದಲ್ಲಿ ರಾಜ್ಯದಿಂದ ಕೊಡುವಂತಹ 10 ಕೆ.ಜಿ. ಬಾಬತ್ತಿನಲ್ಲಿ 5 ಕೆ.ಜಿ. ಅಕ್ಕಿಯನ್ನು ಖರೀದಿ ಮಾಡಿದ್ದೇವೆ. ಇನ್ನು 5 ಕೆ.ಜಿ. ಅಕ್ಕಿಯ ಬದಲಿಗೆ ಹಣವನ್ನು ಕೊಟ್ಟಿದ್ದೇವೆ. ಇದರ ಬಗ್ಗೆ ಸವಿಸ್ತಾರವಾಗಿ ನಾನು ಮಾನ್ಯ ಸದಸ್ಯರಿಗೆ ಉತ್ತರದಲ್ಲಿ ಕೊಟ್ಟಿದ್ದೇನೆ. ಒಬ್ಬರಿಗೆ 5 ಕೆ.ಜಿ. ಅಕ್ಕಿಗೆ ಬದಲಾಗಿ ರೂ.170 ಗಳಂತೆ ನಾವು ಹಣವನ್ನು ಕೊಟ್ಟಿದ್ದೇವೆ. DBT (Direct Benefit Transfer) ಕೊಟ್ಟಿರುವಂತಹ ಮಾಹಿತಿಯನ್ನು ನಾನು ಕೊಟ್ಟಿದ್ದೇನೆ. ಶಿಕ್ಷಣ ಸಂಸ್ಥೆಯವರು ಮಾಡಿರುವುದಕ್ಕೂ ನಮಗೂ ಬೇರೆ ಬೇರೆ ಇದೆ. ಒಂದು ಕಡೆ fortified rice ಕೇಂದ್ರ ಸರ್ಕಾರ ಕೊಡುತ್ತಿದೆ, ನಾವು A-grade rice ನ್ನು ಅದೇ ತತ್ಸಮಾನವಾದಂತಹ ಅಕ್ಕಿಯನ್ನು ಹದಿಮೂರು ಲಕ್ಷ ಕಾರ್ಡ್‌ಗಳಿಗೆ ಕೊಡುವಂಥದ್ದನ್ನು ಮಾಡಿದ್ದೇವೆ. ಇದರ ಮಧ್ಯದಲ್ಲಿ ಯಾವದೊಂದು ವ್ಯತ್ಯಾಸಗಳು ನಡೆದಿಲ್ಲ. ಇದಕ್ಕೆ ಕಾರಣವೇನೆಂದರೆ, ಕೇಂದ್ರ ಸ್ವಾಮ್ಯ ಸಂಸ್ಥೆಗಳ ಮುಖಾಂತರ ನಾವು ವ್ಯವಹಾರ ಮಾಡಿದ್ದೇವೆ. ಅವರು ಏನು ದರವನ್ನು ನಿಗದಿ ಮಾಡಿದ್ದಾರೆ ಆ ದರದಂತೆ ನಾವು ಅಕ್ಕಿಯನ್ನು ತೆಗೆದುಕೊಂಡು ಜನರಿಗೆ ವಿತರಣೆ ಮಾಡಿದ್ದೇವೆ. ಕೇಂದ್ರ ಸರ್ಕಾರ ಅಕ್ಕಿಯನ್ನು

ಕೊಡದಿರುವ ಕಾರಣಕ್ಕಾಗಿ 5 ಕೆ.ಜಿ ಅಕ್ಕಿಯ ಬದಲಾಗಿ ಹಣವನ್ನು ಕೊಡುವಂತಹ ಕಾರ್ಯಕ್ರಮ ಇವತ್ತಿಗೂ ಇದೆ. ಕೇಂದ್ರ ಸರ್ಕಾರದವರು ರೂ.28 ಗಳಿಗೆ ಕೊಡುತ್ತೇವೆಂದು ಹೇಳಿದ್ದಾರೆ. ಅದನ್ನು ಸ್ವಾಗತ ಮಾಡುತ್ತೇವೆ. ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರ ಹದಿಮೂರು ಲಕ್ಷ ಕಾರ್ಡ್‌ಗಳಿಗೆ ರೂ.28 ಗಳಿಗೆ ಕೊಡುವುದಕ್ಕೆ ತೀರ್ಮಾನ ಮಾಡಿದೆ. ನಾವು ರೂ.40 ಗಳಿಗೆ ಅಕ್ಕಿಯನ್ನು ಖರೀದಿ ಮಾಡಿ, ರೂ.28 ಗಳಿಗೆ ಅಕ್ಕಿಯನ್ನು ಕೊಡುತ್ತಿದ್ದೇವೆ. ಇದರ ಹಿಂದೆ ರೂ.19 ಗಳಿಗೆ ಕೊಟ್ಟು ರೂ.10 ಗಳನ್ನು ಮಾರಾಟಗಾರರಿಗೆ ಕಮಿಷನ್ ಕೊಟ್ಟು ಸುಮಾರು ಒಂದು ಕೆ.ಜಿ.ಗೆ ರೂ.17 ಗಳು ನಷ್ಟವಾಗಿದೆ. ಅಂದರೆ ಒಂದೂವರೆ ಕೋಟಿ ಮೆಟ್ರಿಕ್ ಟನ್‌ಗಳು ಭಾರತ ಸರ್ಕಾರ Food Corporation of India ರೂ.12, ರೂ.15, ರೂ.17 ಗಳು ಒಂದು ಕೆ.ಜಿ.ಗೆ ನಷ್ಟವಾಗಿದೆ ಎಂದರೆ ಒಂದೂವರೆ ಕೋಟಿ ಮೆಟ್ರಿಕ್ ಟನ್‌ಗಳಿಗೆ ಎಷ್ಟು ದೇಶದ ಹಣ ಬೊಕ್ಕಸಕ್ಕೆ ನಷ್ಟವಾಗಿದೆ ಎಂಬುದನ್ನು ಸದನಕ್ಕೆ ಹೇಳಲು ನಾನು ಇಷ್ಟಪಡುತ್ತಿದ್ದೇನೆ. ಎಷ್ಟು ಕೋಟಿ ನಷ್ಟವಾಗಿದೆ ಎಂಬುದರ ಪೂರ್ತಿ ಅಂಕಿ-ಅಂಶ ಬೇಕಾದರೆ ಲೆಕ್ಕ ಕೊಡುತ್ತೇನೆ. ಇದು ವಾಸ್ತವಾಂಶ. ಇದರಲ್ಲೇನು ತಾರತಮ್ಯವಾಗಿಲ್ಲ. ನಾವು ಕೇಂದ್ರ ಸರ್ಕಾರದ ಸ್ವಾಮ್ಯ ಸಂಸ್ಥೆಗಳಿಂದ ಅಕ್ಕಿಯನ್ನು ಖರೀದಿ ಮಾಡಿದ್ದೇವೆ. ಏನು ವ್ಯತ್ಯಾಸವಾಗಿಲ್ಲ. ಇದನ್ನು ಪೂರ್ತಿ ಅರ್ಥ ಮಾಡಿಕೊಳ್ಳಬೇಕು. ಅಕ್ಕಿ ಇದ್ದರೂ ಕೂಡ ರಾಜಕೀಯವನ್ನು ಮಾಡಿ ಕೇಂದ್ರ ಸರ್ಕಾರ ನಮಗೆ ಅಕ್ಕಿಯನ್ನು ಕೊಡಲಿಲ್ಲ. ಆದ್ದರಿಂದ ನಾವು ಅವರದ್ದೇ ಸಂಸ್ಥೆಗಳಿಂದ ಖರೀದಿ ಮಾಡಿದ್ದೇವೆ. ಅಕ್ಕಿಯನ್ನು ಜನರಿಗೆ ಸಮರ್ಪಕವಾಗಿ ವಿತರಣೆ ಮಾಡಿದ್ದೇವೆ.

**ಶ್ರೀ ಶಶೀಲ್ ಜಿ.ನಮೋಶಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಅಕ್ಕಿಯ ಗುಣಮಟ್ಟ ಒಳ್ಳೆಯದಿದೆ, ಶಾಲೆಗಳಿಗೆ ಬೇರೆ ಗುಣಮಟ್ಟದ ಅಕ್ಕಿಯನ್ನು ಸರಬರಾಜು ಮಾಡುತ್ತೇವೆ ಎನ್ನುವಂಥದ್ದು ಇಲ್ಲ. ಅಕ್ಕಿಯ ಗುಣಮಟ್ಟವೆಲ್ಲಾ ಒಂದೇ ಇದೆ.

**ಶ್ರೀ ಕೆ.ಹೆಚ್.ಮುನಿಯಪ್ಪ:-** ಮಾನ್ಯ ಸಭಾಪತಿಯವರೇ, ಟೆಂಡರ್ ಕರೆಯುವಾಗ ರೂ.29, ರೂ.30, ರೂ.31, ರೂ.32.99 ಪೈಸೆಗಳಿಗೆ ಖರೀದಿ ಮಾಡಿದ್ದಾರೆ. ಅಂದರೆ ರೂ.33 ಗಳು. Transportation charge ರೂ.2.60 ಪೈಸೆ ಆಗುತ್ತದೆ. ಅಂದರೆ, ಅದನ್ನು ಲೆಕ್ಕಚಾರ

ಮಾಡಿದಾಗ, ರೂ.35.60 ಪೈಸೆ ಆಯಿತು. ನಮ್ಮದ್ದು ರೂ.34.60 ಪೈಸೆ ಆಯಿತು. ಇದು ವಾಸ್ತವಾಂಶ. ನಮ್ಮಿಂದ ನಷ್ಟವಾಗುವುದಕ್ಕೆ ಅವಕಾಶವಿಲ್ಲ.

**ಶ್ರೀ ಶಶೀಲ್ ಜಿ.ನಮೋಶಿ:–** ಮಾನ್ಯ ಸಭಾಪತಿಯವರೇ, ಒಂದು ಕಡೆ ಗುಣಮಟ್ಟ ಎರಡೂ ಒಂದೇ ಇದೆ. Fluctuation of rate ಬಗ್ಗೆ ಹೇಳುತ್ತಾರಲ್ಲಾ, ನನಗೆ ಗೊತ್ತಿರುವ ಹಾಗೆ ಅವರೇನು ಖರೀದಿ ಮಾಡಿದ್ದಾರೆ, from day one ಇಲ್ಲಿಯವರೆಗೆ ದರ ಎಲ್ಲಾ ಒಂದೇ ಇದೆ. ಅದೇ ರೀತಿಯಾಗಿ ಶಿಕ್ಷಣ ಇಲಾಖೆಯವರು ಖರೀದಿ ಮಾಡುತ್ತಿದ್ದಾರೆ ಅದರ ದರವೂ ಒಂದೇ ಇದೆ. ಅಂದರೆ ಎಲ್ಲೋ ಒಂದು ಕಡೆ ಅವರ ಇಲಾಖೆಯಿಂದ ಆ ಮಟ್ಟದ ಪ್ರಯತ್ನ ಆಗಿಲ್ಲ ಎಂದು ನಾನು ಹೇಳುತ್ತಿದ್ದೇನೆ.

(ಮುಂದು)

(647) 23/07/2024 6:10/ಎಸ್‌ಪಿಆರ್/ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಶಶೀಲ್ ಜಿ.ನಮೋಶಿ (ಮುಂದು):**

ತಾವು ಪ್ರಯತ್ನ ಮಾಡಿದರೆ, ಇನ್ನೂ ಕಡಿಮೆ ದರದಲ್ಲಿ ಸಿಗುತ್ತದೆ. ಆದರೆ ಯಾವ ಮಟ್ಟದಲ್ಲಿ ಸಚಿವರು ಪ್ರಯತ್ನಿಸಬೇಕು, ಅಷ್ಟು ಹೋಂ ವರ್ಕ್ ಅನ್ನು ಮಾಡಬೇಕು. ಆದರೆ, ಇಲ್ಲಿ ಎಲ್ಲಿಯೋ ಒಂದು ಕಡೆ ಕೊರತೆ ಇರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಇದು ಸಣ್ಣ ಮೊತ್ತ ಹಾಗೂ ಸಣ್ಣ ವ್ಯತ್ಯಾಸವಲ್ಲ. ಲಕ್ಷಾಂತರ ಟನ್ ಅಕ್ಕಿಗೆ ಇಷ್ಟೆಲ್ಲಾ ಮೊತ್ತವನ್ನು ಲೆಕ್ಕ ಹಾಕಿದರೆ it's a very huge amount. ಇಷ್ಟು ದೊಡ್ಡ ಪ್ರಮಾಣದ ಮೊತ್ತವನ್ನು ಉಳಿಸಿದರೆ, ನಮ್ಮ ರಾಜ್ಯಕ್ಕೆ ಉಳಿತಾಯ ಮಾಡಿದಂತಾಗುತ್ತದೆ. ಈ ನಿಟ್ಟಿನಲ್ಲಿ ಸಚಿವರು ಪ್ರಯತ್ನಿಸಬೇಕು. ಶೇಕಡಾ ನೂರರಷ್ಟು ಇವರಿಗೂ ಸಹ ಅದೇ ದರದಲ್ಲಿಯೇ ಅಕ್ಕಿ ಸಿಗುತ್ತದೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಶಿಕ್ಷಣ ಇಲಾಖೆಯು 74,345 ಕ್ವಿಂಟಾಲ್ ಪ್ರಮಾಣದಷ್ಟು ಸಾಮಾನ್ಯ ಅಕ್ಕಿಯನ್ನು ಕೊಂಡುಕೊಳ್ಳುತ್ತಿದೆ. ಇದರ ದರವನ್ನು ನಾನು ಉದಾಹರಣೆಯ ಮೂಲಕ ಉಲ್ಲೇಖಿಸಬಯಸುತ್ತೇನೆ. ವಿಜಯನಗರ ಜಿಲ್ಲೆಯಲ್ಲಿ 2,088 ಕ್ವಿಂಟಾಲ್ ಅಕ್ಕಿಯನ್ನು ಕೆ.ಜಿ.ಯೊಂದಕ್ಕೆ ರೂ. 29.99 ರಂತೆ

ಕೊಂಡುಕೊಳ್ಳುತ್ತಿದ್ದಾರೆ. ಅದೇ ರೀತಿಯಾಗಿ ವಿಜಯಪುರ ಜಿಲ್ಲೆಯಲ್ಲಿ 4,690 ಕ್ವಿಂಟಾಲ್ ಅಕ್ಕಿಯನ್ನು ಕೆ.ಜಿ.ಯೊಂದಕ್ಕೆ ರೂ. 29.81 ರಂತೆ ಖರೀದಿಸುತ್ತಿದ್ದಾರೆ. ಇನ್ನು ಯಾದಗಿರಿ ಜಿಲ್ಲೆಯ ಬಗ್ಗೆ ಹೇಳುವುದಾದರೆ, 2,105 ಕ್ವಿಂಟಾಲ್ ಅಕ್ಕಿಯನ್ನು ಕೆ.ಜಿ.ಯೊಂದಕ್ಕೆ ರೂ. 30.49 ರಂತೆ ಖರೀದಿಸುತ್ತಿದ್ದಾರೆ. ಈ ರೀತಿಯ ಉದ್ದನೆಯ ಪಟ್ಟಿ ನನ್ನ ಬಳಿ ಇದೆ. ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಪ್ರಮಾಣದ ಅಕ್ಕಿಯನ್ನು ಎಷ್ಟೆಷ್ಟು ರೂಪಾಯಿಗಳಿಗೆ ಖರೀದಿಸಿದ್ದಾರೆ ಎನ್ನುವ ಮಾಹಿತಿಯು ನನ್ನ ಬಳಿ ಇದೆ.

**ಸಭಾಪತಿಯವರು:–** ಈ ಮಾಹಿತಿಯನ್ನು ಸಚಿವರಿಗೆ ಕಳುಹಿಸಿಕೊಡಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೆ, ಈ ಮಾಹಿತಿಯನ್ನು ನಾನು ನೀಡುತ್ತೇನೆ. ಶಿಕ್ಷಣ ಇಲಾಖೆಯು ಇಷ್ಟು ಮೊತ್ತಕ್ಕೆ ಅಕ್ಕಿಯನ್ನು ಖರೀದಿಸುವುದಾದರೆ, ಇದಕ್ಕೆ ಸಾಗಾಣಿಕಾ ವೆಚ್ಚವನ್ನೂ ಸೇರಿಸಿದರೆ, ಇದೇ ಅಕ್ಕಿಯನ್ನು ಈ ಇಲಾಖೆಯೂ ಸಹ ಖರೀದಿಸಬಹುದಲ್ಲವೇ? ಈ ಇಲಾಖೆಯು ಪ್ರತಿ ಕೆ.ಜಿ.ಗೆ 34.60 ರಂತೆ ಏಕೆ ಅಕ್ಕಿಯನ್ನು ಖರೀದಿಸುತ್ತಿದೆ? **(ಗೊಂದಲ)** ಇದು ಸಾರ್ವಜನಿಕರ ಹಣವೆಂದು ನಾನು ಹೇಳುತ್ತಿದ್ದೇನೆ. ಕಡಿಮೆ ದರದಲ್ಲಿ ಅಕ್ಕಿ ದೊರೆಯುವುದಾದರೆ, ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗಬಾರದು. ಇದು ನನ್ನ ಮುಖ್ಯ ಉದ್ದೇಶವಾಗಿದೆ. ಅಕಸ್ಮಾತ್ತಾಗಿ ಈ ಇಲಾಖೆಯು ಸರಿಯಾದ ದರ ನೀಡಿ ಅಕ್ಕಿಯನ್ನು ಖರೀದಿಸುತ್ತಿದ್ದು, ಇದರಲ್ಲಿ ಯಾವುದೇ ಸೋರಿಕೆ ಇಲ್ಲ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಸಚಿವರು ಹೇಳುವುದಾದರೆ, ಕಳಪೆ ಗುಣಮಟ್ಟದ ಅಕ್ಕಿಯನ್ನು ನೀಡಲಾಗುತ್ತಿದೆಯೇ ಎಂಬುದರ ಬಗ್ಗೆ ಶಿಕ್ಷಣ ಸಚಿವರನ್ನು ಕೇಳಿದರೆ, ಅವರು ಇಲ್ಲವೆಂದು ಹೇಳಬಹುದು. ಸರ್ಕಾರ ಒಂದೇಯಾಗಿದೆ ಆದರೆ ಇಲಾಖೆಗಳು ಬೇರೆಯಾಗಿವೆ. ದರದಲ್ಲಿ ಇಷ್ಟು ವ್ಯತ್ಯಾಸಗಳು ಏಕೆ ಎಂದು ನಾನು ಪ್ರಶ್ನಿಸುತ್ತೇನೆ. ಇದರಲ್ಲಿ ಯಾರು ತಪ್ಪು ಮಾಡುತ್ತಿದ್ದಾರೆಂದು ನನಗೆ ಸ್ಪಷ್ಟವಾಗಿ ತಿಳಿಸಬೇಕು.

**ಶ್ರೀ ಶಿವಾನಂದ ಪಾಟೀಲ್:–** ಮಾನ್ಯ ಸಭಾಪತಿಯವರೆ, ನಿಮ್ಮದೇ ಪಕ್ಷದ ಸರ್ಕಾರವು ಈ ಹಿಂದೆ ಅಧಿಕಾರದಲ್ಲಿದ್ದಾಗ ಏಕೆ ಇದನ್ನು ಸರಿಪಡಿಸಲಿಲ್ಲ?

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೆ, ನಾನು ಈ ಬಗ್ಗೆ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

**ಸಭಾಪತಿಯವರು:–** ಶ್ರೀ ರವಿಕುಮಾರ್ ರವರೇ ಕುಳಿತುಕೊಳ್ಳಿ; ಸಚಿವರು ಉತ್ತರಿಸುತ್ತಾರೆ.

**ಶ್ರೀ ಕೆ.ಹೆಚ್.ಮುನಿಯಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೆ, ಒಂದೂವರೆ ಕೋಟಿ ಮೆಟ್ರಿಕ್ ಟನ್‌ನಷ್ಟು ಅಕ್ಕಿಯನ್ನು ಮುಂದಿನ ಮೂರು ತಿಂಗಳಿನಲ್ಲಿ ಮಾರಾಟ ಮಾಡದಿದ್ದರೆ, ಒಂದು ಕೆ.ಜಿ. ಅಕ್ಕಿಯನ್ನು ನಲವತ್ತು ರೂಪಾಯಿಗಳಂತೆ ಮಾರಾಟ ಮಾಡಿದರೆ, ಈ ದೇಶಕ್ಕೆ ಎಷ್ಟು ನಷ್ಟವುಂಟಾಗುತ್ತದೆ ಎನ್ನುವುದನ್ನು ನಾನು ಈ ಸದನಕ್ಕೆ ತಿಳಿಸಬಯಸುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಕೇಂದ್ರದ ಸಂಸದರು ಈ ಬಗ್ಗೆ ಮಾತನಾಡುತ್ತಾರೆ. ಸಚಿವರು ನಮ್ಮ ರಾಜ್ಯಕ್ಕಷ್ಟೇ ಸೀಮಿತವಾಗಿ ಮಾತನಾಡಲಿ. **(ಗೊಂದಲ)** ಇದಕ್ಕೆ ಸಂಸದರು, ರಾಜ್ಯ ಸಭೆ ಮತ್ತು ಲೋಕಸಭೆಗಳಿವೆ. ಹೀಗಾಗಿ ಸಚಿವರು ನಮ್ಮ ರಾಜ್ಯದ್ದಷ್ಟೇ ಹೇಳಲಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೆ, ಸಚಿವರು ಏಕೆ ಕೇಂದ್ರ ಸರ್ಕಾರದ ಬಗ್ಗೆ...

**(ಗೊಂದಲ)**

**ಸಭಾಪತಿಯವರು:–** ಸಚಿವರು ಉತ್ತರಿಸುತ್ತಾರೆ; ನೀವು ಕುಳಿತುಕೊಳ್ಳಿ.

**ಶ್ರೀ ಕೆ.ಹೆಚ್.ಮುನಿಯಪ್ಪ:–** ಮಾನ್ಯ ಸಭಾಪತಿಯವರೆ, ನಾನು ಏಕೆ ಈ ವಿಷಯವನ್ನು ಹೇಳುತ್ತಿದ್ದೇನೆಂದರೆ, ಕೇಂದ್ರದ ಸಚಿವರಾದ ಶ್ರೀ ಪಿಯೂಶ್ ಗೋಯಲ್ ರವರನ್ನು ನಾನು ಎರಡು ಬಾರಿ ಭೇಟಿ ಮಾಡಿ, ತಮ್ಮ ಬಳಿ ಸಾಕಷ್ಟು ದಾಸ್ತಾನು ಇದೆ, ನೀವು ನಿಗದಿಪಡಿಸುವ ರೂ. 34/– ಅನ್ನು ನಾವು ಕೊಡುತ್ತೇವೆ ಎಂದು ಕೇಳಿದೆನು.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೆ, ನಾನು ಈ ಪ್ರಶ್ನೆಯನ್ನು ಕೇಳಿಲ್ಲ. ಕೇಂದ್ರ ಸರ್ಕಾರದ ಐದು ಕೆ.ಜಿ. ಅಕ್ಕಿಯನ್ನು ಕೊಂಡುಕೊಳ್ಳುವ ಪ್ರಶ್ನೆಯನ್ನು ನಾನು ಕೇಳಿಲ್ಲ. ಅಕ್ಕಿಯ ದರದಲ್ಲಿ ಇಷ್ಟು ವ್ಯತ್ಯಾಸ ಏಕೆ ಎಂಬ ನೇರವಾದ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಇಲ್ಲಿ ಕೇಂದ್ರ ಸರ್ಕಾರದ ಪ್ರಶ್ನೆಯೇ ಬರುವುದಿಲ್ಲ. ಸಚಿವರು ನನ್ನ ಪ್ರಶ್ನೆಯನ್ನು ಅರ್ಥ ಮಾಡಿಕೊಳ್ಳಬೇಕು. ಸಚಿವರು ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವ ಕೆಲಸವನ್ನು ಏಕೆ ಮಾಡಬೇಕು?

(ಗೊಂದಲ)

**ಸಭಾಪತಿಯವರು:–** ಇಷ್ಟು ವ್ಯತ್ಯಾಸ ಏಕೆ ಎನ್ನುವ ಬಗ್ಗೆ ಸಚಿವರು ತಿಳಿಸುತ್ತಿದ್ದಾರೆ.

**ಶ್ರೀ ಕೆ.ಹೆಚ್.ಮುನಿಯಪ್ಪ:–** ಮಾನ್ಯ ಸಭಾಪತಿಯವರೆ, ಶಿಕ್ಷಣ ಇಲಾಖೆಯವರು ಒಂದೊಂದು ಜಿಲ್ಲೆಯಲ್ಲಿ ಒಂದೊಂದು ರೀತಿಯಾಗಿ ಮಾಡಿದ್ದಾರೆ. ಅದಕ್ಕೆ ಸಾಗಾಣಿಕೆ ವೆಚ್ಚ ಮತ್ತಿತರ ವೆಚ್ಚಗಳನ್ನು ಏನು ಕೊಟ್ಟಿದ್ದಾರೆ, ಅದರ ವಿವರ ಅವರ ಬಳಿ ಇದೆ. ನಾವು ಖರೀದಿಸಿದ ಅಕ್ಕಿಯ ವಿವರಗಳನ್ನು ವಿವರವಾಗಿ ಹೇಳಿದ್ದೇನೆ. ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಬೇಕಾಗಿದ್ದಲ್ಲಿ ಅದನ್ನು ಪಡೆದುಕೊಳ್ಳಬೇಕಾಗುತ್ತದೆ. ನಾವು ಯಾವ ರೀತಿಯಾಗಿ ಕೇಂದ್ರದ ಸಂಸ್ಥೆಗಳಿಂದ ಅಕ್ಕಿಯನ್ನು ಖರೀದಿಸಿದ್ದೇವೆ ಎನ್ನುವುದನ್ನು ವಿವರಿಸಿದ್ದೇನೆ. ಇದು ವಾಸ್ತವಾಂಶವಿದೆ. ಇದರಲ್ಲಿ ಯಾವುದೇ ಟೆಂಡರ್‌ನ ಅಗತ್ಯವಿಲ್ಲ; ಓಪನ್ ಟೆಂಡರ್ ಅನ್ನೂ ಸಹ ಮಾಡಿರುವುದಿಲ್ಲ. ಇದರಲ್ಲಿ ಯಾರೂ ದಳ್ಳಾಳಿಗಳಿಲ್ಲ. ಕೇಂದ್ರ ಸರ್ಕಾರದ ಸಂಸ್ಥೆಗಳಿಂದ ಅಕ್ಕಿಯನ್ನು ಕೊಂಡಿದ್ದೇವೆ; ಇದರಲ್ಲಿ ಏನೂ ಏರುಪೇರುಗಳಾಗಿಲ್ಲ ಎಂದು ನಾನು ತಿಳಿಸುತ್ತೇನೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೆ, ಇದರ ಹೊಣೆ ಹೊರುವವರು ಯಾರು ಎಂದು ನಾನು ಪ್ರಶ್ನಿಸುತ್ತೇನೆ. ಇದು ಸರಿಯಾದ ಕ್ರಮವಲ್ಲ. ಇಷ್ಟು ವ್ಯತ್ಯಾಸ ಏಕೆ ಎಂಬುದನ್ನು ನಾನು ಕೇಳಿದ್ದೇನೆ.

**ಸಭಾಪತಿಯವರು:–** ಸಚಿವರು ಉತ್ತರಿಸಿದ್ದಾರೆ. ಅದನ್ನು ನೀವು ಕೇಳಿಸಿಕೊಂಡಿಲ್ಲವೇ?

(ಗೊಂದಲ)

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೆ, ಸಚಿವರು ನನಗೆ ಸರಿಯಾದ ಉತ್ತರವನ್ನು ನೀಡಬೇಕು.

**ಶ್ರೀ ಕೆ.ಹೆಚ್.ಮುನಿಯಪ್ಪ:–** ಮಾನ್ಯ ಸಭಾಪತಿಯವರೆ, ನಾನು ಉತ್ತರ ನೀಡಿದ್ದೇನೆ; ಸಚಿವರು ಅರ್ಥಮಾಡಿಕೊಳ್ಳಬೇಕು.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೆ, ಅರ್ಥ ಮಾಡಿಕೊಂಡೇ ನಾನು ಕೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಕೆ.ಹೆಚ್.ಮುನಿಯಪ್ಪ:–** ಮಾನ್ಯ ಸಭಾಪತಿಯವರೆ, ಶಿಕ್ಷಣ ಇಲಾಖೆಯವರು ಸ್ಥಳೀಯ ಮಾರುಕಟ್ಟೆಯಿಂದ ಖರೀದಿಸಿದ್ದರೆ, ನಾವು ಕೇಂದ್ರ ಸರ್ಕಾರದ ಸಂಸ್ಥೆಯಿಂದ ಖರೀದಿಸಿದ್ದೇವೆ.

**ಸಭಾಪತಿಯವರು:–** ಶ್ರೀ ಕೇಶವ ಪ್ರಸಾದ್ ರವರೇ ತಾವು ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಸ್ತಾವನೆಯನ್ನು ತೆಗೆದುಕೊಳ್ಳಿ.

**ಸಭಾಪತಿಯವರು:–** ಇದಕ್ಕೆ ಸಂಬಂಧಿತ ಸಚಿವರು ಬಂದಿಲ್ಲ. ಡಾ॥ ತಳವಾರ್ ಸಾಬಣ್ಣನವರೇ, ನೀವು ಪ್ರಾರಂಭಿಸಿ.

**ಆ) ವಿಷಯ:– ಕಲ್ಯಾಣ ಕರ್ನಾಟಕದಲ್ಲಿ ಶಿಕ್ಷಕರ ಕೊರತೆ ಕುರಿತು.**

* * *

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ನಾನು ಈಗಾಗಲೇ ಚುಕ್ಕೆ ಗುರ್ತಿನ ಪ್ರಶ್ನೆಯ ರೂಪದಲ್ಲಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿರುವ ಶಿಕ್ಷಕರ ಕೊರತೆ ಕುರಿತು ವಿಸ್ತಾರವಾಗಿ ಮಾತನಾಡಿದ್ದೇನೆ; ಆದರೂ ಸಮಂಜಸವಾದ ಉತ್ತರ ನನಗೆ ಸಿಗಲಿಲ್ಲ. ತಮ್ಮ ಅನುಮತಿಯ ಮೇರೆಗೆ ನಾನು ಇದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಯಡಿ ಪ್ರಸ್ತಾಪಿಸಿದ್ದೇನೆ. ಈ ವಿಷಯದಲ್ಲಿ ನಾನು ಆಗ್ರಹಿಸುವುದೇನೆಂದರೆ, ಇಂದಿನ ಶಿಕ್ಷಣ ಗುಣಮಟ್ಟ ಕುಸಿಯುತ್ತಿದೆ. ಅದು ಹಿಂದುಳಿದ ಭಾಗವಾಗಿರುವುದರಿಂದ ಶಿಕ್ಷಣವೇ ಇದಕ್ಕೆ ಆಧಾರವಾಗಿದೆ. ಅದರಲ್ಲೂ ಮುಖ್ಯವಾಗಿ ಬಡವರಿಗೆ ಶಿಕ್ಷಣವೇ ಆಧಾರವಾಗಿದೆ. ಶಿಕ್ಷಣವನ್ನು ನೀಡದಿದ್ದರೆ ಅವರುಗಳು ಜೀವನದಲ್ಲಿ ಮುಂದೆ ಬರುವುದಕ್ಕಾಗುವುದಿಲ್ಲ. ಏಕೆಂದರೆ ಅಲ್ಲಿ ದುಡಿಯುವ ವರ್ಗವಿದೆ. ಅಲ್ಲಿ ವಲಸೆಯ ಸಮಸ್ಯೆಯು ಬಹಳಷ್ಟು ಇದೆ. ಈ ಕಾರಣಗಳಿಂದಾಗಿ ಅವರಿಗೆ ಶಿಕ್ಷಣವು ದೊರೆಯುತ್ತಿಲ್ಲ. ನಾನು ಈಗಾಗಲೇ ನೋಡಿದಂತೆ, ರಾಜ್ಯದಲ್ಲಿ ಪಿ.ಯು.ಸಿ. ಮತ್ತು ಎಸ್.ಎಸ್.ಎಲ್.ಸಿ. ಫಲಿತಾಂಶಗಳು ಪ್ರಕಟಗೊಂಡಾಗ, ಆ ಭಾಗದ ಜಿಲ್ಲೆಗಳೇ ಕೊನೆಯ ಸ್ಥಾನದಲ್ಲಿರುತ್ತವೆ. ಅವರಿಗೆಲ್ಲಾ ಹಿಂದುಳಿದ ಭಾಗದವರು ಎಂಬ ಹಣೆಪಟ್ಟಿಯೂ ಸಹ ದೊರೆಯುತ್ತದೆ. ನಾನು ಬೆಳಗಾವಿಗೆ ಬಂದು 27 ವರ್ಷಗಳಾಗಿವೆ. ಇಷ್ಟು ವರ್ಷಗಳಾದರೂ ಸಹ ನನಗೆ "ನೀವು ಕಲಬುರಗಿಯವರು; ಬಹಳ

ಹಿಂದುಳಿದ ಪ್ರದೇಶದಿಂದ ಬಂದವರು" ಎಂಬುದಾಗಿ ಹೇಳುತ್ತಾರೆ. ಇದರಿಂದ ಬಹಳಷ್ಟು ಅವಮಾನವಾಗುತ್ತದೆ. ನನಗೆ ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕ ಭಾಗಗಳೂ ಸಹ ಗೊತ್ತಿವೆ. ಎರಡೂ ಕಡೆಗಳಲ್ಲಿ ನನಗೆ ಅನುಭವವಿದೆ. ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕ ಭಾಗಗಳಲ್ಲಿರುವ ಶಿಕ್ಷಣ ಕ್ಷೇತ್ರಗಳು ಬಹಳ ಮಟ್ಟಿಗೆ ಬೇರೆಯೇ ಆಗಿವೆ. ಇದನ್ನು ನೋಡಿದಾಗ, ಎಲ್ಲಿಯೋ ಒಂದು ಕಡೆ ನಮಗೆ ಅವಮಾನವೆನಿಸುತ್ತಿರುತ್ತದೆ. ಮೂಲತಃ ನಾನು ಪ್ರಾಧ್ಯಾಪಕನಾಗಿದ್ದೇನೆ. ಶಿಕ್ಷಣ ಕ್ಷೇತ್ರದಲ್ಲಿ ನಾನು 30-32 ವರ್ಷಗಳ ಕಾಲ ಕೆಲಸ ನಿರ್ವಹಿಸಿದ್ದೇನೆ. ಭಾರತದ ಸಂವಿಧಾನದ ಅನುಚ್ಛೇದ 371 (ಜೆ) 2012 ನೇ ಇಸ್ವಿಯಿಂದಲೇ ಜಾರಿಗೆ ಬಂದಿದೆ. ಇದಕ್ಕೆ ಯಾರು ಸಹಾಯ ಮಾಡಿದರು ಎನ್ನುವುದನ್ನು ನಾನು ಚರ್ಚೆಗೊಳಪಡಿಸುವುದಿಲ್ಲ. ನಾವು ಅವರಿಗೆ ಗೌರವವನ್ನು ನೀಡುತ್ತೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಇಲ್ಲಿ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಹೆಸರನ್ನು ಹೇಳಲಿ.

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೆ, ನಾವು ಪಕ್ಷಾತೀತವಾಗಿ ಶ್ರೀ ಮಲ್ಲಿಕಾರ್ಜುನ ಖರ್ಗೆಯವರಿಗೆ ಗೌರವವನ್ನು ಸೂಚಿಸುತ್ತೇವೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ಹರ್ಷ ವ್ಯಕ್ತಪಡಿಸಿದರು)**

ಇದರಲ್ಲಿ ಎರಡು ಮಾತಿಲ್ಲ. ಅವರು ಕೆಟ್ಟದ್ದು ಮಾಡಿದ್ದಾರೆ ಎಂದು ಎಲ್ಲಿಯೂ, ಯಾವಾಗಲೂ ಹೇಳಿಲ್ಲ. ಆದರೆ ನಮಗೆ ಇರುವ ದುಃಖ ಏನೆಂದರೆ, ಕಲಬುರಗಿ ಜಿಲ್ಲೆಯಿಂದ ಇಬ್ಬರು ಮೂರು ಬಾರಿ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ. ದಿವಂಗತ ವೀರೇಂದ್ರ ಪಾಟೀಲ್ ರವರು ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ದಿವಂಗತ ಧರ್ಮಸಿಂಗ್ ರವರೂ ಸಹ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಯಾವುದೇ ರೀತಿಯಲ್ಲಿ ಮುಖ್ಯಮಂತ್ರಿಗಳಿಗಿಂತ ಕಡಿಮೆ ಇಲ್ಲವೆಂದು ನಾನು ಭಾವಿಸಿದ್ದೇನೆ. ಅದೇ ರೀತಿಯಾಗಿ ಆಡಳಿತ ಪಕ್ಷದವರು ತಿಳಿದುಕೊಂಡಿದ್ದಾರೆ ಹೇಗೆ ಎನ್ನುವುದು ನನಗೆ ತಿಳಿದಿಲ್ಲ. ಇವರು ರಾಷ್ಟ್ರ ಮಟ್ಟದ ವ್ಯಕ್ತಿಯಾಗಿದ್ದಾರೆ.

(ಮುಂದು)

(648)23-07-2024/6-20/bkp-ak (ಸಭಾಪತಿಯವರು ಉಪಸ್ಥಿತಿ)

**ಡಾ॥ ತಳವಾರ್ ಸಾಬಣ್ಣ (ಮುಂದು):**

ಇಷ್ಟೆಲ್ಲಾ ಇದ್ದರೂ ಸಹ ಅಲ್ಲಿ ಶಿಕ್ಷಣ ಏತಕ್ಕೆ ಸುಧಾರಣೆಯಾಗಿಲ್ಲ? 6700 ಶಾಲೆಗಳು ಇವತ್ತಿನವರೆಗೆ ಶಿಥಿಲಗೊಂಡಿರುತ್ತವೆಂದು ಹೇಳಿದ್ದೇನೆ. ಸರಿ-ಸುಮಾರು 19,000 ಶಿಕ್ಷಕರ ಕೊರತೆ ಇದೆ ಎಂದು ನಾನು ಹೇಳಿದ್ದೇನೆ. Human Development Index (HDI) ಎಂದು ಬಂದಾಗ, ಅದನ್ನು ಅಳೆಯಬೇಕಾದರೆ ಶಿಕ್ಷಣ, ಆರೋಗ್ಯ ಮತ್ತು life expectancy ಅಳೆಯುತ್ತಾರೆ. ಶಿಕ್ಷಣ ಬಹಳ ಇಳಿಮುಖವಾಗಿದೆ. ರಾಜ್ಯದ 30-31 ಜಿಲ್ಲೆಗಳನ್ನು ತೆಗೆದುಕೊಂಡಾಗ ಕೊನೆಯದಾಗಿ ಬರುವುದು ನಮ್ಮ ಜಿಲ್ಲೆಗಳೇ ಆಗಿವೆ. ಇದರ ಅರ್ಥ ಇಷ್ಟೇ. ನಾವು ಶಿಕ್ಷಣವನ್ನು ಪುನರುತ್ಥಾನ ಮಾಡಬೇಕಾಗಿದೆ. ಆ ಶಿಕ್ಷಣ ಕ್ಷೇತ್ರಕ್ಕೆ ನಾವು ಹೆಚ್ಚಿನ ಆದ್ಯತೆಯನ್ನು ಕೊಡಬೇಕು. K.K.R.D.B. (Kalyana Karnataka Region Development Board) ಗೆ ಕಳೆದ ವರ್ಷ 3 ಸಾವಿರ ಕೋಟಿಯನ್ನು ಕೊಟ್ಟಿದ್ದರು, ಈ ವರ್ಷ ರೂ. 5,000 ಕೋಟಿಗಳನ್ನು ಕೊಟ್ಟಿದ್ದಾರೆ. ಅದು ಯಾವುದಕ್ಕೆ ಉಪಯೋಗವಾಗುತ್ತಿದೆ; ಆ ಕ್ಷೇತ್ರದ ಜನತೆಗೆ ಯಾವ ರೀತಿಯಿಂದ ಉಪಯೋಗಕ್ಕೆ ಬರುತ್ತದೆ?

**ಸಭಾಪತಿಯವರು:-** ಶಿಕ್ಷಕರ ಕೊರತೆಯ ಬಗ್ಗೆ ಮಾತನಾಡಿ.

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೆ, ಶಿಕ್ಷಕರ ಜೊತೆಗೆ ಶಾಲೆಗಳ ಕಟ್ಟಡಗಳನ್ನು ಭದ್ರಪಡಿಸಬೇಕಾಗಿದೆ. ಈ ನಿಟ್ಟಿನಲ್ಲಿ ಆರ್ಟಿಕಲ್ 371(ಜೆ) ಅಡಿಯಲ್ಲಿ ನಾವು ಶಿಕ್ಷಕರ ನೇಮಕಾತಿ ಮಾಡಿಕೊಳ್ಳಬೇಕಾದರೆ, ಯಾವುದೇ ರೀತಿಯಾದಂತಹ ಆರ್ಥಿಕ ನಿಬಂಧನೆಗಳು ಇರುವುದಿಲ್ಲ. ಇದರ ಬಗ್ಗೆ ನಾನು ಮತ್ತೆ ಮತ್ತೆ ಹೇಳುತ್ತಿದ್ದೇನೆ. ಅಲ್ಲಿ ಯಾವುದೇ ರೀತಿಯಾದಂತಹ ಶಿಕ್ಷಕರ ಕೊರತೆ ಇರದಂತೆ ನೋಡಿಕೊಂಡರೆ ಸಾಕು. ಆ ಭಾಗ ಒಂದು ರೀತಿಯಲ್ಲಿ ಧನ್ಯವಾಗುತ್ತದೆ ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ. ಹಾಗಾಗಿ, ಈ ರೀತಿಯಲ್ಲಿ ನಾನು ತಮ್ಮ ಮೂಲಕ ಸನ್ಮಾನ್ಯ ಸಚಿವರಲ್ಲಿ ಮತ್ತೊಮ್ಮೆ ಒತ್ತಾಯ

ಪೂರ್ವಕವಾಗಿ ಕೋರಿಕೆ ಮಾಡುವುದೇನೆಂದರೆ, ಅಲ್ಲಿನ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇಲ್ಲದಂತೆ ವಿಶೇಷವಾಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇಲ್ಲದಂತೆ ನೋಡಿಕೊಳ್ಳಬೇಕು. ಏಕೆಂದರೆ, ಕನಿಷ್ಠ ಶಿಕ್ಷಣವನ್ನು ನಾವು ಕೊಡದಿದ್ದರೆ ನಾವು ಯಾವ ರೀತಿಯಾದಂತಹ ಸೌಲಭ್ಯವನ್ನು ಕೊಡುತ್ತೇವೆ? ನಮಗೆ ಬೇರೆ ಗ್ಯಾರಂಟಿಗಿಂತ ಶಿಕ್ಷಣದ ಗ್ಯಾರಂಟಿ ಆ ಭಾಗದಲ್ಲಿ ಬೇಕಾಗಿದೆ. ನಮಗೆ ಶಿಕ್ಷಣ ಗ್ಯಾರಂಟಿಯಾಗಿ ದೊರೆತರೆ ಸಾಕು. ಇವತ್ತು ನಾನು ಓದಿದ್ದೇನೆ. ಆದರೆ ನನ್ನ ತಂದೆ-ತಾಯಿಯವರು ಅಶಿಕ್ಷಿತರು, ಅವರಿಗೆ ನಾನು ಏನು ಓದಿದ್ದೇನೆಂದು ಸಹ ಗೊತ್ತಿಲ್ಲ. ನಾನು ಓದಿದ್ದಕ್ಕೆ ಇಲ್ಲಿಗೆ ಬಂದಿದ್ದೇನೆ. ಶಿಕ್ಷಣವನ್ನು ಪಡೆದುಕೊಂಡಿದ್ದರಿಂದ ನಾನು ಬಂದಿದ್ದೇನೆ. ಈ ರೀತಿಯಾದಂತಹ ಸಾಕಷ್ಟು ಪ್ರತಿಭೆಗಳು ಅಲ್ಲಿವೆ. ನಮ್ಮ ಕಲ್ಬುರ್ಗಿ ಜಿಲ್ಲೆಯವರೇ, ಕಲ್ಬುರ್ಗಿ ನಗರದವರೇ, ಆದಂತಹ ಡಾ॥ ನೀರಜ್ ಪಾಟೀಲ್ ಎನ್ನುವಂತಹವರು ಲಂಡನ್‌ನಲ್ಲಿ ಮೇಯರ್ ಆಗಿದ್ದರು. ಅಲ್ಲಿ ಪ್ರತಿಭೆಗಳು ಇಲ್ಲವೆಂದು ಹೇಳುತ್ತಿಲ್ಲ. ಪ್ರತಿಭೆ ಎಲ್ಲರ ಸ್ವತ್ತಾಗಿದೆ. ಆದ್ದರಿಂದ ಪ್ರತಿಭೆ ಬೆಳೆಸುವಂತಹ ವಾತಾವರಣ ಬೇಕಾಗಿದೆ. ಅದಕ್ಕೆ ಮೂಲ ಶಿಕ್ಷಣ ಬೇಕಾಗಿದೆ. ಹೀಗಾಗಿ ಕೊರತೆಯನ್ನು ನೀವು ದಯವಿಟ್ಟು ತುಂಬಬೇಕೆಂದು ತಮ್ಮ ಮೂಲಕ ಸನ್ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಈ ಒಂದು ಕಲ್ಯಾಣ ಕರ್ನಾಟಕದಲ್ಲಿ ಶಿಕ್ಷಕರ ಕೊರತೆ ನಿಜವಾಗಿಯೂ ಸಹ ಬಹಳಷ್ಟು ಇದೆ. 'ಕಲ್ಯಾಣ ಕರ್ನಾಟಕ' ಎಂದು ಹೆಸರಿದ್ದರೂ ಸಹ ಅಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಒಂದು ಅಪವಾದ ಬರುತ್ತಿದೆ. ಕಾರಣ ಏನೆಂದರೆ, ಏಕೋಪಾಧ್ಯಾಯ ಶಾಲೆಯಲ್ಲಿ ಶಿಕ್ಷಕರು ಇರುವುದಿಲ್ಲ. ಮೊಟ್ಟಮೊದಲನೆಯದಾಗಿ ಇಲ್ಲಿ ಬೀದರ್‌ನಿಂದ ಬಳ್ಳಾರಿಯವರೆಗೆ ಅಂಕಿ-ಸಂಖ್ಯೆಗಳನ್ನು ಕೊಡಲಿಕ್ಕೆ ನಾನು ಇಷ್ಟಪಡುತ್ತೇನೆ. ಇವತ್ತು ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಸಾವಿರಾರು ಹುದ್ದೆಗಳು ಖಾಲಿ ಇವೆ, ಶಿಕ್ಷಕರು ಕೊರತೆಯಿಲ್ಲದ ಶಾಲೆಗಳೇ ಇರುವುದಿಲ್ಲ. ಕೊಪ್ಪಳ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ

2295 ಮತ್ತು ಪ್ರೌಢಶಾಲೆಗಳಲ್ಲಿ 538 ಹುದ್ದೆಗಳು; ರಾಯಚೂರು ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ 3962 ಮತ್ತು ಪ್ರೌಢಶಾಲೆಗಳಲ್ಲಿ 856 ಹುದ್ದೆಗಳು ವಿಜಯನಗರದ ಪ್ರಾಥಮಿಕ ಶಾಲೆಗಳಲ್ಲಿ 1314 ಹುದ್ದೆಗಳು ಪ್ರೌಢಶಾಲೆಗಳಲ್ಲಿ 340 ಹುದ್ದೆಗಳು,; ಯಾದಗಿರಿ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ 2705 ಹುದ್ದೆಗಳು ಪ್ರೌಢಶಾಲೆಗಳಲ್ಲಿ 671 ಹುದ್ದೆಗಳು; ಬೀದರ್ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ 963 ಹುದ್ದೆಗಳು, ಪ್ರೌಢಶಾಲೆಗಳಲ್ಲಿ 338 ಹುದ್ದೆಗಳು; ಬಳ್ಳಾರಿ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ 1738 ಹುದ್ದೆಗಳು ಪ್ರೌಢಶಾಲೆಗಳಲ್ಲಿ 448 ಹುದ್ದೆಗಳು; ಕಲ್ಬುರ್ಗಿಯ ಪ್ರಾಥಮಿಕ ಶಾಲೆಗಳಲ್ಲಿ 327 ಹುದ್ದೆಗಳು ಪ್ರೌಢಶಾಲೆಗಳಲ್ಲಿ 469 ಹುದ್ದೆಗಳು ಖಾಲಿ ಇವೆ. ಹೀಗೆ ಒಟ್ಟಾರೆ ಹೇಳಬೇಕೆಂದರೆ, ಪ್ರಾಥಮಿಕ ಶಾಲೆಗಳಲ್ಲಿ 16,345 ಹುದ್ದೆಗಳು ಮತ್ತು ಪ್ರೌಢಶಾಲೆಗಳಲ್ಲಿ 3620 ಹುದ್ದೆಗಳು ಖಾಲಿ ಇವೆ. ಇಂತಹ ಪರಿಸ್ಥಿತಿಯಲ್ಲಿ ಮಕ್ಕಳು ಓದಿ ಎಂದರೆ ಹೇಗೆ ಓದಲಿಕ್ಕೆ ಸಾಧ್ಯ? ಏಕೋಪಾಧ್ಯಾಯ ಶಾಲೆಗಳ ಪರಿಸ್ಥಿತಿ ಗಂಭೀರವಾಗಿದ್ದರೆ, ಶಾಲೆಗಳು ರಿಪೇರಿ ಸ್ಥಿತಿಯಲ್ಲಿವೆ. ಇರುವಂತಹ ಏಕೋಪಾಧ್ಯಾಯ ಶಾಲೆಗಳಲ್ಲಿ ಇವತ್ತು ಎಂತಹ ಪರಿಸ್ಥಿತಿ ಇದೆ ಎಂದರೆ, 50-60 ಮಕ್ಕಳಿಗೆ ಒಬ್ಬ ಶಿಕ್ಷಕ ಇರುವಂತಹ ಪರಿಸ್ಥಿತಿ ಬಂದಿದೆ. ಹಳ್ಳಿಗಳಲ್ಲಿ ನಾವು ನೋಡುವುದಾದರೆ ನಿಜವಾಗಿಯೂ ಸಹ ಇವತ್ತಿನ ದಿವಸ ಶಾಲೆಗಳು ಇಲ್ಲದೆ, ಮಳೆ ಬಂತು ಎಂದರೆ, ಗಿಡದ ಮರೆಯಲ್ಲಿ ಕುಳಿತುಕೊಳ್ಳುವಂತಹ ಪರಿಸ್ಥಿತಿ ಇದೆ. 70 ವರ್ಷಗಳು ಕಳೆದರೂ ಸಹ ಇವತ್ತು ಯಾದಗಿರಿ ಜಿಲ್ಲೆಯಲ್ಲಿ ಅನ್ವರ್ ಎನ್ನುವಂತಹ ಒಂದು ಹಳ್ಳಿ ಇದೆ. ಅದು ನಮ್ಮ ಸ್ವಂತ ಹಳ್ಳಿ. ನಮ್ಮ ಯಜಮಾನರ ಊರು. ನಮ್ಮ ಮಾವನವರು ಆ ಶಾಲೆಗೆ ಎರಡು ಕೊಠಡಿಗಳನ್ನು ಹಾಕಿಸಿದ್ದರು. ಇವತ್ತು ಅದೂ ಕೂಡ ಸೋರುತ್ತಿದೆ. ಇವತ್ತು ಅಲ್ಲಿ 350 ಮಕ್ಕಳು ಇದ್ದಾರೆ.

**ಸಭಾಪತಿಯವರು:-** ಪ್ರಶ್ನೆ ಕೇಳಿ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೆ, ನನಗೆ ಸಮಯ ಸಿಕ್ಕಿದ್ದರಿಂದ ಸ್ವಲ್ಪ ಹೇಳುತ್ತಿದ್ದೇನೆ. ಅಲ್ಲಿನ ಮಕ್ಕಳು ಹೊರಗಡೆ ಕುಳಿತುಕೊಂಡು ಓದುವಂತಹ

ಪರಿಸ್ಥಿತಿ ಇದೆ. ಅಂತಹ ಶಾಲೆಗಳು ಏಕೋಪಾಧ್ಯಾಯ ಶಾಲೆಗಳಾಗಿ ಶಿಕ್ಷಕರು ಕಡಿಮೆ ಇರುವಂತಹದ್ದು ಇದೆ. ಮಕ್ಕಳು ಇದ್ದರೂ ಅಗತ್ಯವಿರುವಷ್ಟು ಶಾಲೆಯ ಕೊಠಡಿಗಳಿಲ್ಲ. ಇಷ್ಟೆಲ್ಲಾ ಅವ್ಯವಸ್ಥೆಯ ಕೆಳಗಡೆ ನಾವು ಬದುಕುವಂತಹ ಪರಿಸ್ಥಿತಿ ಇದೆ. ಹೀಗಾಗಿ, ಯಾವ ಒಂದು ಉದ್ದೇಶಕ್ಕೋಸ್ಕರ ಕಲ್ಯಾಣ ಕರ್ನಾಟಕದಲ್ಲಿ ಆರ್ಟಿಕಲ್ 371(ಜೆ) ಜಾರಿಗೆ ಬಂದಿದ್ದರೂ ಸಹ ಯಾರು ಉದ್ದಾರವಾಗಿಲ್ಲ. ಸುಮಾರು 20 ವರ್ಷಗಳು ಕಳೆದರೂ ಇನ್ನೂ ಸಹ ಅಲ್ಲಿ ಅಭಿವೃದ್ಧಿ ಎನ್ನುವುದು ಇವತ್ತಿಗೂ ಇಲ್ಲದಂತಾಗಿದೆ. ಶಿಕ್ಷಣದ ವಿಷಯ ಬಂದರೆ ಶಿಕ್ಷಕರು ಇವತ್ತು ಇದ್ದಾರೆಂದರೂ ಕೂಡ ಅವರು ನಿವೃತ್ತಿಯಾಗಿ ಹೋದರೆ ಆ ಜಾಗಕ್ಕೆ ಮತ್ತೊಬ್ಬರು ಇಲ್ಲವೇ ಇಲ್ಲ. ಎಂತಹ ಪರಿಸ್ಥಿತಿಯಲ್ಲಿ ಮಕ್ಕಳಿಗೆ ಓದಿ ಎಂದರೆ ಅವರು ಏನು ಓದುತ್ತಾರೆ? 5ನೇ ತರಗತಿಯವರೆಗೂ ಮಕ್ಕಳು ಓದಿದರೂ ಸಹ 'ಅ' ಎನ್ನುವ ಅಕ್ಷರ ಸಹ ಅವರಿಗೆ ಬರುವುದಿಲ್ಲ. ಹೀಗಾಗಿ, ಇವತ್ತು ರಾಜ್ಯದಲ್ಲಿನ ಈ ಪ್ರದೇಶದಲ್ಲಿ ಏತಕ್ಕೆ ಇಷ್ಟು ಕಡಿಮೆ ಫಲಿತಾಂಶ ಬಂದಿದೆ? ಇದು ಗಂಭೀರವಾದಂತಹ ವಿಷಯವಾಗಿದೆ. ಜಿಲ್ಲೆಯಲ್ಲಿ ಕೊರತೆ ಇರುವ ಶಿಕ್ಷಕರ ಬಗ್ಗೆ ಪ್ರಸ್ತಾಪಿಸಿ ನಾನು ಬಿಇಓ ರವರಿಗೆ ಏತಕ್ಕೆ ಈ ರೀತಿಯ ಫಲಿತಾಂಶ ಬಂದಿದೆ ಎಂದು ಕೇಳಿದ್ದಕ್ಕೆ ಅವರು ಜಿಲ್ಲಾದ್ಯಂತ ಕೊರತೆಯಿರುವ ಶಿಕ್ಷಕರ ಹುದ್ದೆಗಳಿಗೆ ತಕ್ಷಣ ಅತಿಥಿ ಶಿಕ್ಷಕರನ್ನು ನೇಮಕ ಮಾಡಬೇಕು, ಈ ಸಮಸ್ಯೆಯನ್ನು ಇತ್ಯರ್ಥ ಮಾಡಿದಾಗ ಮಾತ್ರ ಏಕೋಪಾಧ್ಯಾಯ ಶಾಲೆಗಳಿಗೆ ಹೆಚ್ಚುವರಿ ಶಿಕ್ಷಕರನ್ನು ನೀಡಬೇಕೆನ್ನುವ ಕಾರಣವನ್ನು ಹೇಳುತ್ತಾರೆ. ಇದು ಯಾವ ರೀತಿ ಆಗಿದೆ ಎಂದರೆ, ಎತ್ತು ಏರಿಗೆ ಏಳೆದರೆ, ಎಮ್ಮೆ ನೀರಿಗೆ ಎಳೆಯುವಂತಹ ಪರಿಸ್ಥಿತಿ ಆಗಿದೆ. ಇವತ್ತು ಹಳ್ಳಿಗಳಲ್ಲಿ ಮಕ್ಕಳು ಶಾಲೆಗೆ ಹೋಗಲಿಕ್ಕೆ ಬಸ್ಸುಗಳು ಇಲ್ಲದೆ, ತೊಂದರೆ ಪಡುತ್ತಿದ್ದು, ಅವರುಗಳು ನಗರಕ್ಕೆ ಹೋಗಬೇಕಾದರೆ ಬಸ್ಸುಗಳು ಸಹ ಇರುವುದಿಲ್ಲ. ಹೀಗಾಗಿ ಇಲ್ಲಿ ಯಾವ ರೀತಿಯಲ್ಲಿ ಆಗಿದೆ ಎಂದರೆ, ಒಂದೊಂದು ಹಳ್ಳಿಯಲ್ಲಿ ಶಾಲೆಗಳು ಇದ್ದರೂ ಸಹ ಅವುಗಳನ್ನು ದನ ಕಟ್ಟಲಿಕ್ಕೆ ಉಪಯೋಗ ಮಾಡುತ್ತಿದ್ದಾರೆ. ಯಾವ ಶಾಲೆಗಳಿದ್ದರೂ, ಏನಾದರೂ ಎರಡು ಕೊಠಡಿಗಳಿದ್ದರೆ, ಅವುಗಳು ಸಹ ತಿಪ್ಪೆಗಳ ಪಕ್ಕದಲ್ಲಿ ಅಥವಾ gutter ಪಕ್ಕಕ್ಕೆ ಇರುತ್ತವೆ. ಏತಕ್ಕೆ ಇಷ್ಟೊಂದು ಅವ್ಯವಸ್ಥೆ ಆಗಿದೆ ಎಂದು ಮಾನ್ಯ ಸಚಿವರು ತಿಳಿಸಬೇಕು. ಆದ್ದರಿಂದ, ತಾವು ದಯವಿಟ್ಟು ನಮ್ಮ ಕಲ್ಯಾಣ

ಕರ್ನಾಟಕ ಭಾಗಕ್ಕೆ ಪ್ರತ್ಯೇಕವಾಗಿರುವಂತಹ ಒಂದು ಅನುದಾನ ಇದ್ದರೂ ಕೂಡ ನಮ್ಮಲ್ಲಿ ಏತಕ್ಕೆ ಇಷ್ಟೊಂದು ತೊಂದರೆಯಾಗುತ್ತಿದೆ?

**ಸಭಾಪತಿಯವರು:–** ಸಾಕು ತಮ್ಮ ಭಾಷಣವನ್ನು ಮುಗಿಸಿ.

**ಶ್ರೀಮತಿ ಹೇಮಲತಾ ನಾಯಕ್:–** ಮಾನ್ಯ ಸಭಾಪತಿಯವರೆ, ಇನ್ನು ಎರಡು ನಿಮಿಷ ಅವಕಾಶವನ್ನು ಕೊಡಬೇಕೆಂದು ವಿನಂತಿಸುತ್ತೇನೆ. ಇವತ್ತು ಶಾಲೆಗಳನ್ನು ಸಹ ಒಂದು ರೀತಿಯಲ್ಲಿ ನಾವು ಅನಾಥ ಪರಿಸ್ಥಿತಿಯಲ್ಲಿ ನೋಡುತ್ತಿದ್ದೇವೆ. ಇವತ್ತು ನಮ್ಮ ಭಾಗದಲ್ಲಿ **'ಶಾಪಗ್ರಸ್ತ ಕಲ್ಯಾಣ ಕರ್ನಾಟಕ'** ಎಂದರೆ ತಪ್ಪಾಗಲಾರದು. ಆದ್ದರಿಂದ, ಇವತ್ತು ಬಂದಿರತಕ್ಕಂತಹ ಸಮಸ್ಯೆಯನ್ನು ಬಗೆಹರಿಸಿ, ಆದಷ್ಟು ಬೇಗ ಶಿಕ್ಷಕರ ನೇಮಕಾತಿಯನ್ನು ಮಾಡಬೇಕೆಂದು ತಮ್ಮ ಮೂಲಕ ಸಚಿವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:–** ಶ್ರೀಯುತ ನಮೋಶಿಯವರೆ, ನೀವು ಪ್ರಾರಂಭ ಮಾಡಿ. ಆದರೆ, ನೀವು ಭಾಷಣ ಮಾಡಲಿಕ್ಕೆ ಹೋಗಬೇಡಿ, ಪ್ರಶ್ನೆಗಳನ್ನು ಕೇಳಿ.

**ಶ್ರೀ ಶಶಿಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, 15 ವರ್ಷಗಳಿಂದ ಹೇಳುತ್ತಿದ್ದೇನೆ, ಆರ್ಟಿಕಲ್ 371(ಜೆ) ಇದರ ವಿಚಾರವಾಗಿ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಕೇಂದ್ರದಲ್ಲಿ ಮಂತ್ರಿಗಳಾಗಿದ್ದಾಗ 2013 ರಲ್ಲಿ ಈ ಬಿಲ್ ಅನ್ನು ಪಾಸ್ ಮಾಡಿದ್ದಾರೆ. Subsequently, ಅಂದರೆ, ದಿನಾಂಕ: 01-01-2013ರಲ್ಲಿ ಆರ್ಟಿಕಲ್ 371(ಜೆ) ಕಲ್ಯಾಣ ಕರ್ನಾಟಕ ಭಾಗಕ್ಕೆ ಈ ಒಂದು ಬಿಲ್ಲನ್ನು ಪಾಸ್ ಮಾಡಿದ್ದಾರೆ. ಅದರ ನಂತರ ರೂಲ್ಸ್ ಅನ್ನು ಫ್ರೇಮ್ ಮಾಡಿ ನಾವು ಅದನ್ನು ಜಾರಿಗೆ ತಂದಿದ್ದೇವೆ. ಒಪ್ಪೋಣ. ಆದರೆ, ಈ ಹೋರಾಟಕ್ಕೆ ಸುಮಾರು ವರ್ಷಗಳ ಹಿನ್ನೆಲೆ ಇದೆ. ದಯವಿಟ್ಟು ಇದನ್ನು ಯಾರು ಮರೆತಿಲ್ಲ.

**ಶ್ರೀ ಯು.ಬಿ ವೆಂಕಟೇಶ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಹೋರಾಟ ಇದ್ದರೂ ಸಹ ನಿಮ್ಮ ಸರ್ಕಾರ ಇದ್ದಾಗ 2005 ರಲ್ಲಿ ಶ್ರೀಮಾನ್ ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ಈ ವಿಚಾರವಾಗಿ ಅವರಿಗೆ ಇಲ್ಲಿಂದ ಸನ್ಮಾನ್ಯ ಶ್ರೀ ಎಸ್.ಎಂ. ಕೃಷ್ಣ ರವರು ಪತ್ರ ಬರೆಯುತ್ತಾರೆ. ಆಗ ಅದಕ್ಕೆ ಅವರು "this is not feasible" ಎಂದು ಹೇಳುತ್ತಾರೆ. ಅದು ರೆಕಾರ್ಡ್‌ನಲ್ಲಿದೆ.

**ಶ್ರೀ ಎನ್.ಎಸ್.ಭೋಸರಾಜು(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ಕೇಂದ್ರದ ನಿಮ್ಮ ಗೃಹ ಸಚಿವರು ಗುಲ್ಬರ್ಗ ಆಕಾಶವಾಣಿಯ ಶಂಕುಸ್ಥಾಪನೆಯ ಸಂಬಂಧ ಗುಲ್ಬರ್ಗಕ್ಕೆ ಬಂದಿದ್ದರು. ಆಗ ನಾನು ಎಂ.ಎಲ್.ಎ. ಇದ್ದು ಹೆಚ್.ಕ್ಕೆ.ಆರ್.ಡಿ.ಬಿ.ಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುತ್ತಿದ್ದೆ. ನಾವೆಲ್ಲರೂ ಅಂದರೆ, ಸರ್ವ ಪಕ್ಷಗಳ ಸದಸ್ಯರುಗಳೆಲ್ಲರೂ ಹೆಚ್.ಕೆ.ಆರ್.ಡಿ.ಬಿ. ಕಛೇರಿಯಲ್ಲಿ ಕುಳಿತು ಚರ್ಚೆ ಮಾಡಿದ್ದೇವೆ. ಆಗ ನೀವುಗಳು ಇದ್ದಿರೋ ಇಲ್ಲವೋ ಗೊತ್ತಿಲ್ಲ. ಆಗ ಶ್ರೀ ಇಕ್ಬಾಲ್ ಅಹಮದ್ ಸರಡಗಿಯವರು ಇದ್ದರು ಜೊತೆಗೆ ನಮ್ಮವರೆಲ್ಲರೂ ಬಂದಿದ್ದರು.

**ಶ್ರೀ ಶಶೀಲ್ ಜಿ. ನಮೋಶಿ:–** ಅದು ಯಾವಾಗ?

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಸನ್ಮಾನ್ಯ ಕೇಂದ್ರ ಗೃಹ ಸಚಿವರ ಜೊತೆಯಲ್ಲಿ ಅಂದು ಶ್ರೀ ಬಿ.ಎಸ್. ಯಡಿಯೂರಪ್ಪನವರು ನಮ್ಮ ಜೊತೆಯಲ್ಲಿ ಇದ್ದರು. ಶ್ರೀಮಾನ್ ಅನಂತ ಕುಮಾರ್‌ರವರು ಇದ್ದರು. ಮಧ್ಯಾಹ್ನ ಊಟದ ಸಮಯದಲ್ಲಿ ಐವಾನ್ ಶಾಹಿಯಲ್ಲಿ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಶ್ರೀಮಾನ್ ಧರ್ಮಸಿಂಗ್‌ರವರು ಸೇರಿದಂತೆ ನಾವೆಲ್ಲರೂ ಅಲ್ಲಿಗೆ ಹೋಗಿದ್ದೆವು. ಅಲ್ಲಿ ಊಟವಾದ ಕೂಡಲೇ ಈ ವಿಚಾರವಾಗಿ ಅಂದಿನ ನಿಮ್ಮ ಗೃಹ ಸಚಿವರಿಗೆ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಶ್ರೀಮಾನ್ ಧರ್ಮಸಿಂಗ್‌ರವರು ಕೇಳಿದಾಗ ನಿಮಗೆ ಗೊತ್ತಿರುವಂತೆ " ಎಲ್ಲಾ ರಾಜ್ಯಗಳವರು ಇದೇ ರೀತಿಯಲ್ಲಿ ಕೇಳುತ್ತಿದ್ದು, ಕೇಂದ್ರ ಸರ್ಕಾರದ ಮೇಲೆ ಒತ್ತಡ ಇದೆ. ಹೀಗಾಗಿ, ಇದನ್ನು ಹೇಗೆ ಮಾಡಲಿಕ್ಕೆ

ಆಗುತ್ತದೆ" ಎಂದು ನಮ್ಮೆಲ್ಲರ ಮುಂದೆ ಹೇಳಿದರು. ಎಲ್ಲಾ ಪಕ್ಷಗಳ ನಾಯಕರು ಸೇರಿದಂತೆ ಒಟ್ಟು 9 ಮಂದಿ ಅವರನ್ನು ಕೇಳಲಿಕ್ಕೆ ಹೋಗಿದ್ದೆವು. ಅವರು ಓಪನ್ ಆಗಿ ಐವಾನ್ ಶಾಹಿ ಅತಿಥಿಗೃಹದಲ್ಲಿ ಶ್ರೀ ಅನಂತ್ ಕುಮಾರ್‌ರವರು, ಶ್ರೀಮಾನ್ ಬಿ.ಎಸ್.ಯಡಿಯೂರಪ್ಪನವರ ಸಮ್ಮುಖದಲ್ಲಿಯೇ ಹೇಳಿದರು.

**ಶ್ರೀ ಶಶೀಲ್ ಜಿ. ನಮೋಶಿ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ.

**ಸಭಾಪತಿಯವರು:–** ನೀವು ಶಿಕ್ಷಕರ ಬಗ್ಗೆ ಮಾತನಾಡಿ.

**ಶ್ರೀ ಶಶೀಲ್ ಜಿ. ನಮೋಶಿ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ಅವರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದರಿಂದ ನಾನು ಹೇಳುತ್ತಿದ್ದೇನೆ.

**ಸಭಾಪತಿಯವರು:–** ಅದನ್ನು ಏತಕ್ಕೆ ಹೇಳುತ್ತಿದ್ದೀರಿ?

**ಶ್ರೀ ಶಶೀಲ್ ಜಿ. ನಮೋಶಿ:–** ಮಾನ್ಯ ಸಭಾಪತಿಯವರೆ, ಯಡಿಯೂರಪ್ಪನವರ ಸರ್ಕಾರ ಇದ್ದಾಗ ಎರಡು ಮನೆಯಲ್ಲಿ ಅಂದರೆ, ಮೇಲ್ಮನೆ ಮತ್ತು ಕೆಳಮನೆಯಲ್ಲಿ ಒಮ್ಮತವಾಗಿ ಈ ಬಿಲ್ ಅನ್ನು ಪಾಸ್ ಮಾಡಿದ್ದಕ್ಕಾಗಿ 2012 ರಲ್ಲಿ ಅಥವಾ 2013 ರಲ್ಲಿ ಕೇಂದ್ರಕ್ಕೆ ಶಿಫಾರಸ್ಸು ಮಾಡಿದ್ದೇವೆ.

(ಮುಂದು)

(649) 23.07.2024 06.30 ಎಸ್‌ವಿ-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಇದು ಸುಳ್ಳು. ಅವರು ಬಿಲ್ ಪಾಸ್ ಮಾಡಿದ್ದರು. ಆದರೆ ಮಾನ್ಯ ಯಡಿಯೂರಪ್ಪನವರ ನಂತರ ಮಾನ್ಯ ಎಸ್.ಎಂ.ಕೃಷ್ಣ ಅವರು ಬಂದಾಗ ಮಾನ್ಯ ಎಲ್.ಕೆ.ಅಡ್ವಾಣಿಯವರು Chief Minister of Karnataka ಗೆ ಒಂದು ಪತ್ರವನ್ನು ಬರೆದರು. ಇದು viable ಇಲ್ಲ, ಇದು feasible ಇಲ್ಲ, ಇದು ಕೊಡುವುದಿಲ್ಲ ಎಂದು ಪತ್ರ ಬರೆದರು. ಸುಳ್ಳು ಮಾಹಿತಿ ಸದನಕ್ಕೆ ಹೋಗಬಾರದು.

**(ಗೊಂದಲ)**

**ಸಭಾಪತಿಯವರು:–** ಶಿಕ್ಷಕರ ಬಗ್ಗೆ ಮಾತನಾಡಿ. ಏಕೆ ಸುಮ್ಮನೆ ರಾಜಕೀಯ ಮಾತನಾಡುತ್ತೀರಿ?

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ತಪ್ಪು ಮಾಹಿತಿ ಕಡತಕ್ಕೆ ಹೋಗಬಾರದು. 101% ರಾಜ್ಯ ಸರ್ಕಾರ ಈ ಬಿಲ್ ಅನ್ನು ಪಾಸ್ ಮಾಡಿ ಕಳುಹಿಸಿದ್ದು ಆದ ಮೇಲೆ..

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:–** ರಾಜ್ಯ ಸರ್ಕಾರ ಮಾಡಿತು. ಕೇಂದ್ರ ಸರ್ಕಾರ ಮಾಡಲಿಲ್ಲ.

**(ಗೊಂದಲ)**

**ಶ್ರೀ ಶಶೀಲ್ ಜಿ.ನಮೋಶಿ:–** ಮಾನ್ಯ ಸಭಾಪತಿಯವರೆ, ತಾವು ನನಗೆ ಅವಕಾಶ ಕೊಟ್ಟಿದ್ದೀರಿ. ನಾನು yield ಆಗುವುದಿಲ್ಲ. ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಿ.

ಮಾನ್ಯ ಸಭಾಪತಿಯವರೆ, ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. Finally, this was passed in the year 2012 or 2013 at the centre. And subsequently, it was implemented from 01/01/2013. ಅದನ್ನು ನಾನು ಅಲ್ಲಗಳೆಯುತ್ತಿಲ್ಲ. ಇದಕ್ಕೆ 1994–95 ರಿಂದ ನಾವು ಕೂಡ ಹೋರಾಟ ಮಾಡಿದ್ದೇವೆ.

**(ಗೊಂದಲ)**

**ಶ್ರೀ ಶಶೀಲ್ ಜಿ.ನಮೋಶಿ:–** ನಾನು ಮಾತನಾಡಲಿಕ್ಕೆ ಅವಕಾಶವನ್ನಾದರೂ ಕೊಡಿ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾ ನಾಯಕರು):–** ಮಾನ್ಯ ಸಭಾಪತಿಯವರೆ, ಹೋರಾಟವನ್ನು ಎಲ್ಲರೂ ಮಾಡಿದರು. ನೀವೂ ಮಾಡಿದಿರಿ, ನಾವೂ ಮಾಡಿದ್ದೇವೆ. ಆದರೆ ಅಂದು ಇದ್ದಂತಹ ಕೇಂದ್ರ ಸರ್ಕಾರ ನೇರವಾಗಿ reject ಮಾಡಿದೆ.

**ಶ್ರೀ ಶಶೀಲ್ ಜಿ.ನಮೋಶಿ:–** ನಾನು ಇಲ್ಲ ಎಂದು ಹೇಳಿಲ್ಲ.

**ಶ್ರೀ ಎನ್.ಎಸ್.ಬೋಸ್‌ರಾಜು:–** ಅದನ್ನು ಹೇಳಿ. ನಿಮ್ಮ ಸರ್ಕಾರ ಇದಕ್ಕೆ ಆದ್ಯತೆ ಕೊಡಲಿಲ್ಲ. ಈಗ ನೋಡಿ, ನಾವು AIIMS ಸಲುವಾಗಿ ಎಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಇಂದು ಬಜೆಟ್ ಆಗಿದೆ. ಏನಾದರೂ ಮಾಡಿದ್ದಾರಾ? ಕರ್ನಾಟಕ ಎಂದರೆ ನಿಮಗೆ ಆಗುವುದಿಲ್ಲ. ತಾವು ಎಂ.ಎಲ್.ಸಿ. ಆಗಿದ್ದೀರಿ. ರಾಯಚೂರು ನಿಮಗೆ ಬರುತ್ತದೆ. 740 ದಿನಗಳಿಂದ ಹೋರಾಟ ಮಾಡುತ್ತಿದ್ದಾರೆ. ಮಾನ್ಯ ತಿಪ್ಪೇಸ್ವಾಮಿಯವರು ಅದರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದರು. ಕೇಂದ್ರದವರು ಕರ್ನಾಟಕಕ್ಕೆ ಮಲತಾಯಿ ಧೋರಣೆ ಅನುಸರಿಸುತ್ತಿದ್ದಾರೆ.

**ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್:–** ಮಾನ್ಯ ಸಭಾಪತಿಯವರೆ, ಅವರು ಮಾಡಲಿಕ್ಕಾಗುವುದಿಲ್ಲ ಎಂದು ಬಿಟ್ಟ ಮೇಲೆ ನಮ್ಮ ಸರ್ಕಾರ ಬಂದ ಮೇಲೆ ನಾವು ಮಾಡಿದ್ದೇವೆ.

**ಶ್ರೀ ಶಶೀಲ್ ಜಿ.ನಮೋಶಿ:–** ಮಾನ್ಯ ಸಭಾಪತಿಯವರೆ, ಇದು ಒಂದು ಕಾರಣವಾದರೆ ಇನ್ನೊಂದು ಕಾರಣ ನಾನು ಹೇಳಲಿಕ್ಕೆ ಹೊರಟಿದ್ದೇನೆ. ದಯವಿಟ್ಟು ಅವಕಾಶ ಮಾಡಿಕೊಡಬೇಕು.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ನಮೋಶಿಯವರೆ, ಶಿಕ್ಷಕರ ಬಗ್ಗೆ ಮಾತನಾಡಿ.

**ಶ್ರೀ ಶಶೀಲ್ ಜಿ.ನಮೋಶಿ:–** ಮಾನ್ಯ ಧರ್ಮಸಿಂಗ್ ಅವರು ಮುಖ್ಯಮಂತ್ರಿ ಇದ್ದಾಗ ಆರ್ಟಿಕಲ್ 371 ಅನ್ನು ನಮ್ಮ ಭಾಗಕ್ಕೆ ಕೊಡಬೇಕೆನ್ನುವುದರ ಜೊತೆಗೆ ಆ ಪತ್ರದಲ್ಲಿ ಏನು ಸೇರಿಸಿದ್ದಾರೆಂದರೆ "ನಂಜುಂಡಪ್ಪ ವರದಿಯ ಅನುಷ್ಠಾನದ ಆಧಾರದ ಮೇಲೆ ಪ್ರತಿಯೊಂದು ತಾಲ್ಲೂಕುಗಳಿಗೆ indices ಇವೆಯೋ ಅದರ ಆಧಾರದ ಮೇಲೆ ಆರ್ಟಿಕಲ್ 371 ಅನ್ನು ಕೊಡಿ

ಎಂದು ಕೇಳಿದ್ದಾರೆ. ಅದರ ಆಧಾರದಲ್ಲಿ "this cannot happen" ಎಂದು ತಿರಸ್ಕರಿಸಿದ್ದಾರೆ. This is one of the reasons. ನೀವು ಹೇಳಿದ್ದು ಇನ್ನೊಂದು ಕಾರಣ ಇರಬಹುದು. ನಾನು ಅಲ್ಲಗಳೆಯುತ್ತಿಲ್ಲ.

**(ಗೊಂದಲ)**

**ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್:-** ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅದನ್ನು reject ಮಾಡಿರುವ ಇತಿಹಾಸ ಇದೆ. ಮಾನ್ಯ ಎಲ್.ಕೆ.ಅಡ್ವಾಣಿಯವರು reject ಮಾಡಿದರೋ, ಮಾಡಲಿಲ್ಲವೋ?

**ಶ್ರೀ ಶಶೀಲ್ ಜಿ.ನಮೋಶಿ:-** ಇದೂನೂ ಒಂದು ಕಾರಣ.

**ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್:-** ಅವೆಲ್ಲಾ ಕಾರಣ ನೂರು ಇರಬಹುದು. ಕೇಂದ್ರದಲ್ಲಿ ಬಿ.ಜೆ.ಪಿ ಸರ್ಕಾರ ಇದ್ದಾಗ ಮಾಡಿಲ್ಲ. ಅವರು ಏನು ಹೇಳಿದರೆಂದರೆ ಇದು ಮಾಡುವುದಕ್ಕೇ ಆಗುವುದಿಲ್ಲ. ಇದು ಮಾಡಿದರೆ ದೇಶದಲ್ಲಿ ಬೆಂಕಿ ಹತ್ತಿಕೊಳ್ಳುತ್ತದೆ ಎಂದು ಹೇಳಿದರು.

**(ಗೊಂದಲ)**

**ಶ್ರೀ ಎನ್.ಎಸ್.ಬೋಸ್‌ರಾಜು:-** ದಾಖಲೆಗಳಲ್ಲಿ ಸ್ಪಷ್ಟವಾಗಿದೆ. ನೀವು ಸುಮ್ಮನೆ ಅದನ್ನು ಸಮರ್ಥನೆ ಮಾಡುವುದಕ್ಕೆ ಹೋಗಬೇಡಿ.

**(ಗೊಂದಲ)**

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಖಾಲಿ ಹುದ್ದೆಗಳ ವಿಷಯಕ್ಕೆ ಬರುತ್ತೇನೆ. 2022ರ ಅಂಕಿ ಅಂಶದ ಪ್ರಕಾರ 32,885 ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಇಲಾಖೆಯಲ್ಲಿ ಖಾಲಿ ಹುದ್ದೆಗಳ ವಿವರಗಳು ಇವೆ. ಇದು ಸರ್ಕಾರ ಕೊಟ್ಟಂತಹ ಅಂಕಿ-ಅಂಶ. ಇದೇನು ನಮ್ಮ ಮನೆಯದ್ದಲ್ಲ. ಇತ್ತೀಚೆಗಿನ ಖಾಲಿ ಹುದ್ದೆಗಳ ಅಂಕಿ ಸಂಖ್ಯೆ 40,612. Comparatively vacancies ಇವತ್ತು ಇನ್ನೂ ಜಾಸ್ತಿಯಿವೆ. ಆಗ vacancies ಕಡಿಮೆಯಿತ್ತು.

Frequently appointments ಆಗಿದೆ, promotion ಆಗಿದೆ. ಆ ಪ್ರಮಾಣದಲ್ಲಿ ಇವತ್ತು ನಡೆಯುತ್ತಿಲ್ಲ ಎನ್ನುವ ಒಂದು ವಿಷಯವನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಮೊನ್ನೆ ಕೂಡ ಆ ವಿಷಯವನ್ನು ಸ್ಪಷ್ಟಪಡಿಸಿದ್ದೇವೆ. ಮಾನ್ಯ ಶರಣಪ್ರಕಾಶ ರುದ್ರಪ್ಪ ಪಾಟೀಲ್ ಅವರು ಈ ವಿಷಯಕ್ಕೆ ಸ್ವಲ್ಪ ಒತ್ತು ಕೊಡಬೇಕೆಂದು ನಾನು ಹೇಳಬಯಸುತ್ತೇನೆ. ಆರ್ಟಿಕಲ್ 371ಜೆ ಅಡಿಯಲ್ಲಿ it is very clear. ನನಗೆ ಆ ಸೆಕ್ಷನ್, ರೂಲ್ ನಂಬರ್ ನೆನಪಿಲ್ಲ. ಏನು ಹೇಳುತ್ತದೆಯೆಂದರೆ ಆರ್ಥಿಕ ಇಲಾಖೆಯವರು ಯಾವುದೇ ನಿರ್ಬಂಧ ವಿಧಿಸುವಂತಿಲ್ಲ. "You cannot impose restriction of any kind when it comes to filling up the posts in Kalyna Karnataka Region either in aided or government institutions" ಎಂದು ಬಹಳ ಸ್ಪಷ್ಟವಾದ ಒಂದು ಸೆಕ್ಷನ್ ಇದೆ. ನೀವು ಏಕೆ ಅದನ್ನು ಬಳಕೆ ಮಾಡಿ ನಮ್ಮ ಭಾಗದ ಹುದ್ದೆಗಳನ್ನು ಭರ್ತಿ ಮಾಡುತ್ತಿಲ್ಲ?

**ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೆ, ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು. ಮಾನ್ಯ ಶಶೀಲ್ ಜಿ.ನಮೋಶಿಯವರು ಹೇಳುತ್ತಿರುವುದು ಅದು ನಾವೇ ಮಾಡಿರುವ ನಿಯಮ. ನಾನು ಆ ಸಚಿವ ಸಂಪುಟ ಉಪ ಸಮಿತಿಯಲ್ಲಿದ್ದೆನು. ಆಗ ಕಲ್ಯಾಣ ಕರ್ನಾಟಕ ಅಂದರೆ ಸ್ಥಳೀಯ ವೃಂದ recruit ಮಾಡುವುದಕ್ಕೆ sanctioned post ಗಳಿಗೆ Finance Department concurrence ಇಲ್ಲ ಎನ್ನುವುದು ನಿಜ. ಇದು ಅನುದಾನಿತ ಹುದ್ದೆಗಳಗಲ್ಲ. ಸರ್ಕಾರಿ ಹುದ್ದೆಗಳಿಗೆ ಎಂದು ಇದೆ. It is for clarification.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೆ, ಇವತ್ತು ಸರ್ಕಾರಿ ಹುದ್ದೆಗಳ ಬಗ್ಗೆ ಕೇಳಿದರೂ ಕೂಡ ಆರ್ಥಿಕ ಇಲಾಖೆಯಲ್ಲಿದೆ ಎಂದು ಹೇಳುತ್ತಾರೆ. ಮಾನ್ಯ ಶಿಕ್ಷಣ ಸಚಿವರು ಇಲ್ಲಿಯೇ ಇದ್ದಾರೆ. ಅನೇಕ ವಿಚಾರಗಳಲ್ಲಿ ಆರ್ಥಿಕ ಇಲಾಖೆ ಒಪ್ಪಿಲ್ಲ ಎಂದು ಎರಡು ಮೂರು ವಿಚಾರದಲ್ಲಿ ನನಗೆ ಉತ್ತರ ಕೊಟ್ಟಿದ್ದಾರೆ. ಏಕೆ ಆ ರೀತಿ ಮಾಡುತ್ತಾರೆ ಎಂಬುದು ನನ್ನ ಪ್ರಶ್ನೆ. ಪದೇ ಪದೇ ಈ ಮಾತನ್ನು ಒತ್ತು ಕೊಟ್ಟು ಹೇಳುತ್ತಿದ್ದೇನೆ. ನಾನು ಹೇಳಲಿಕ್ಕೆ ಬಯಸುತ್ತಿರುವ ಈ ವಿಚಾರವನ್ನು implement ಮಾಡಿದರೆ ಅದು ಸರಿಯಾಗುತ್ತದೆ. ನನ್ನ ಬಳಿ ವಿವರಗಳಿವೆ. ನಮ್ಮ ಭಾಗದಲ್ಲಿ teacher-pupil

ratio ಹೀಗಿದೆ. ಬಳ್ಳಾರಿ ಜಿಲ್ಲೆಯಲ್ಲಿ the ratio is 28. ಕಲಬುರಗಿ ಜಿಲ್ಲೆಯಲ್ಲಿ 1:20. ಕೊಪ್ಪಳ ಜಿಲ್ಲೆಯಲ್ಲಿ 1:25. ಯಾದಗಿರಿ ಜಿಲ್ಲೆಯಲ್ಲಿ 1:27. ಇದು ಪ್ರಾಥಮಿಕ ಶಾಲಾ ಅಂಕಿ ಅಂಶವಾಗಿದೆ. ಅದೇ ನಾವು ಹಾಸನ, ಮಂಡ್ಯ, ಚಿಕ್ಕಮಗಳೂರು ಜಿಲ್ಲೆಗಳ ಅನುಪಾತ ನೋಡಿದರೆ 11–12 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕ. ಇದು ಇವತ್ತಿನ ಡೇಟಾ ಅಲ್ಲ. And this is just falling. ಭಾಷಾವಾರು ಪ್ರಾಂತ್ಯಗಳ ರಚನೆಯಾಗಬೇಕೆಂದು ನಾವು ಹೈದರಾಬಾದ್ ಭಾಗದಲ್ಲಿದ್ದವರು ಕರ್ನಾಟಕಕ್ಕೆ ಬಂದು ಸೇರಿದ್ದೇವೆ. ಇನ್ನೂ ಎಷ್ಟು ವರ್ಷ ಎಂದು ನಮ್ಮನ್ನು ಹಾಗೆಯೇ ನೋಡುತ್ತೀರಿ? Why can't you equate this? ಇದನ್ನು equate ಮಾಡಲಿಕ್ಕೆ ಎರಡು ಮೂರು ವರ್ಷದ ಹಿಂದೆ ನಮ್ಮ Additional Commissioner ನವರು ಒಂದು ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ರಾಜ್ಯದ ಸರಾಸರಿ 17.89 ಅಂದರೆ 18 ಅನುಪಾತ ಇದೆ. ರಾಜ್ಯದಲ್ಲಿ 18 ವಿದ್ಯಾರ್ಥಿಗಳು ಇದ್ದರೆ ಒಬ್ಬ ಶಿಕ್ಷಕರನಿರುತ್ತಾನೆ ಎಂದು ಆ ಪ್ರಸ್ತಾವನೆ ಸ್ಪಷ್ಟವಾಗಿ ಹೇಳುತ್ತದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ 30 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕ ಇರುತ್ತಾರೆ. ಮಂಡ್ಯ ಮತ್ತು ಹಾಸನದಲ್ಲಿ 11 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕ. ಏಕೀ ವ್ಯತ್ಯಾಸ? ಇನ್ನೂ ಎಷ್ಟು ವರ್ಷ? ಸರಿ ಮಾಡಿ.

ಈ ಕಾರಣಕ್ಕಾಗಿ rationalize ಮಾಡುತ್ತೇವೆಂದು ಹಿಂದಿನ ಆಯುಕ್ತರು, ಹಿಂದಿನ ಮಂತ್ರಿಗಳು ಬಹಳ ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದಾರೆ. Rationalize ಮಾಡುತ್ತೇವೆಂದು ಹೇಳಿ ಮೂರು ವರ್ಷವಾಯಿತು. ಅದನ್ನು ಏಕೆ ಹಾಗೆಯೇ ಇಟ್ಟುಕೊಂಡಿದ್ದರು? ಏಕೆ ಮಾಡಬಾರದು? Rationalize ಮಾಡುವುದರಿಂದ ಅಲ್ಲಿನ ಶಿಕ್ಷಕರು ನಮ್ಮ ಕಡೆಗೆ ಬರುವುದಿಲ್ಲ. Excess ಇರುವ ಹುದ್ದೆಗಳನ್ನು transfer ಮಾಡಿ. ಇದನ್ನು transfer ಮಾಡುವುದರಿಂದ ರಾಜ್ಯದಲ್ಲಿರುವ ಸರಾಸರಿ ಹೊಂದುತ್ತದೆ. ಇದು ಒಂದು ದಿನದ exercise ಅಲ್ಲ. ನಾನು ಮಾನ್ಯ ಶರಣಪ್ರಕಾಶ ಪಾಟೀಲ್ ಅವರ ಬಳಿ ಮನವಿ ಮಾಡುತ್ತೇನೆ. ದಯವಿಟ್ಟು ಇದರ implementation ಪ್ರಾರಂಭಿಸಬೇಕು. ಇವತ್ತಲ್ಲದಿದ್ದರೂ ಇನ್ನು 8–10 ವರ್ಷಗಳಿಗಾದರೂ ನಾವು equate ಆಗುತ್ತೇವೆ. ದಯವಿಟ್ಟು ಮಾನ್ಯ ಸಚಿವರು ಇದರ ಬಗ್ಗೆ ಗಮನ ಹರಿಸಬೇಕು.

**Dr. SHARANPRAKASH RUDRAPPA PATIL:** If the Hon. Member yields for a minute, I would like to throw some light on this issue, because a wrong picture should not be given to the House. ಇವರು ಹೇಳುತ್ತಿರುವುದು ಸತ್ಯ ಇದೆ. ಇದನ್ನು ನಮ್ಮ ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸಿದೆ. ಇದರ ಬಗ್ಗೆ ಸಚಿವ ಸಂಪುಟ ಉಪಸಮಿತಿ review ಮಾಡುತ್ತಿದೆ. ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಹುದ್ದೆಗಳು ಖಾಲಿ ಇವೆಯೋ ಅವುಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ Finance Department concurrence ಅಗತ್ಯ ಇಲ್ಲ ಎನ್ನುವುದಕ್ಕೆ ನಾವು ನಿರ್ದೇಶನ ಕೊಟ್ಟಿದ್ದೇವೆ.

(ಮುಂದು)

(650) 23-07-2024 (6.40) ಕೆಜಿ-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಶರಣ ಪ್ರಕಾಶ್ ಪಾಟೀಲ್ (ಮುಂದು):**

ಮಾನ್ಯ ಸದಸ್ಯರು ಈಗಾಗಲೇ ಹೇಳಿದ ಹಾಗೆ, Education Department ಗೂ ಸಹ ಮಾನ್ಯ ಮುಖ್ಯಮಂತ್ರಿಯವರು ಒಂದು ಸಭೆಯನ್ನು ಮಾಡಿ ಅಲ್ಲಿ Finance Secretary ಯವರಿಗೆ ಬಹಳ specific ಆಗಿ ಹೇಳಿದ್ದಾರೆ. ಯಾವುದೇ ಹುದ್ದೆಗೆ Finance Department concurrence ಬರುವಂತಹ ಅವಶ್ಯಕತೆ ಇಲ್ಲ, you go ahead ಎಂದು ಹೇಳಿದ್ದಾರೆ. ಇಲಾಖೆಯವರು ಅದನ್ನು ಪಾಲನೆ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ, Finance Department ಗೆ ನಾವು ಅವರ ಮಾಹಿತಿಗಾದರೂ ಸಹ ಕೊಡಬೇಕು. ಏಕೆಂದರೆ, ಅವರು ನಮಗೆ ಹಣ ಒದಗಿಸಬೇಕಾಗುತ್ತದೆ, ಅದಕ್ಕಾಗಿ ಮಾಹಿತಿಗಾಗಿ ಕಳುಹಿಸುತ್ತಿದ್ದೇವೆಂದು ಹೇಳಿದ್ದಾರೆ. ನಮ್ಮ ಸರ್ಕಾರ ಬಂದ ಮೇಲೆ ಈಗಾಗಲೇ 3-4 Cabinet Sub-Committee meeting ಗಳನ್ನು ಮಾಡಿದ್ದೇವೆ. ಸುಮಾರು 15 ಸಾವಿರ ಹುದ್ದೆಗಳು recruitment process ನಲ್ಲಿವೆ. ನಾನು ಶಿಕ್ಷಣ ಇಲಾಖೆಯಿಂದ ಹಿಡಿದು ಹೇಳುತ್ತಿದ್ದೇನೆ. ಈಗ ನಾವು department wise identify ಮಾಡಿದ್ದೇವೆ. ಯಾವ ಯಾವ ಇಲಾಖೆಯಲ್ಲಿ ಸ್ಥಳೀಯ ವೃಂದದಲ್ಲಿ ಎಷ್ಟೆಷ್ಟು ಹುದ್ದೆಗಳು ಇವೆ ಎಂದು identify ಮಾಡಿ ಅವರಿಗೆ directions ಕೊಟ್ಟಿದ್ದೇವೆ. ಬರುವಂತಹ ಒಂದೂವರೆ ವರ್ಷದಲ್ಲಿ ಇನ್ನೂ 15,000 postಗಳನ್ನು

recruitment ಮಾಡುವುದಕ್ಕೆ directions ಕೊಟ್ಟಿದ್ದೇವೆ. ಈಗ ಮೂರು ವರ್ಷದಲ್ಲಿ minimum thirty thousand posts ಗಳನ್ನು recruitment ಮಾಡುವುದಕ್ಕೆ ಸರ್ಕಾರ ಈಗಾಗಲೇ ಕ್ರಮಕೈಗೊಳ್ಳುತ್ತಿದೆ. ಹಾಗಾಗಿ, we are on the path now. ದಯವಿಟ್ಟು, be rest assured. ಕಲ್ಯಾಣ ಕರ್ನಾಟಕ ಭಾಗಕ್ಕೆ Article 371-J ರಡಿಯಲ್ಲಿ ನಮಗೆ ಏನು ನ್ಯಾಯ ಸಿಗಬೇಕೋ ಅದಕ್ಕೆ 100% ನ್ಯಾಯದೊರಕಿಸಿ ಕೊಡುವುದಕ್ಕೆ ಈ ಸರ್ಕಾರ ಬದ್ಧವಾಗಿದೆ.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಶ್ರೀ ಶಶೀಲ್ ಜಿ.ನಮೋಶಿಯವರೇ, ತಾವು ಕುಳಿತುಕೊಳ್ಳಿ. ತಾವು ಎಷ್ಟು ಹೊತ್ತು ಮಾತನಾಡುತ್ತೀರಿ? ಮಾನ್ಯ ಸಚಿವರೇ, ತಾವು ಉತ್ತರ ಹೇಳಿ.

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನೇಮಕಾತಿ ಮಾಡುವುದರಿಂದ ಈ problem solve ಆಗುವುದಿಲ್ಲ. ಹಾಗಾಗಿ, ದೊಡ್ಡ ಸಂಖ್ಯೆಯಲ್ಲಿ the difference is too huge. ಅದಕ್ಕೆ rationalization ಮಾಡಿ ಅದನ್ನು ಲೆಕ್ಕ ಮಾಡಿ ಕೊಟ್ಟಿದ್ದಾರೆ. ಇಲಾಖೆಯವರು ಕೈ ಹಂಚ್ಚಿಲ್ಲ. ದಯವಿಟ್ಟು ಅದನ್ನು rationalization ಮಾಡಿ ಸರಿಪಡಿಸಿ ಎಂದು ಕೇಳುತ್ತಿದ್ದೇನೆ. ಕೊನೆಯದಾಗಿ, ಒಂದು ವಿಷಯ ಇದೆ. ನಮ್ಮ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರು ಇಲ್ಲದಿರುವುದರಿಂದ ಫಲಿತಾಂಶ ಕಡಿಮೆ ಬರುತ್ತಿದೆ. ನಮ್ಮ ಭಾಗಕ್ಕೆ ಶಿಕ್ಷಕರನ್ನು ನೇಮಕ ಮಾಡಿ. ನಾವು ತಮಗಿಂತ ಬಹಳ ಜಾಣರು ಇದ್ದೇವೆ. ದಯವಿಟ್ಟು, ಇದರ ಅರ್ಥವನ್ನು ಸರಿಯಾಗಿ ತಿಳಿದುಕೊಳ್ಳಬೇಕು. ನಮ್ಮ ಭಾಗದಲ್ಲಿ ಶಿಕ್ಷಕರು ಕಡಿಮೆ ಸಂಖ್ಯೆಯಲ್ಲಿ ಇದ್ದಾರೆ. ಹಾಗಾಗಿ, the result is poor. ಸುಮಾರು ಅರ್ಧ ಜನ ಶಿಕ್ಷಕರು ಇಲ್ಲವೆಂದರೆ, ಫಲಿತಾಂಶವನ್ನು ಎಲ್ಲಿಂದ ಕೊಡುತ್ತಾರೆ? ನಮ್ಮ ಭಾಗಕ್ಕೆ ಶಿಕ್ಷಕರನ್ನು ಕೊಡಿ. ನಿಮಗಿಂತಲೂ ಅಂದರೆ, ಉಡುಪಿ ಇರಲಿ, ಮಂಗಳೂರು ಇರಲಿ, ಮೈಸೂರು ಇರಲಿ, ಬೆಂಗಳೂರು ಇರಲಿ, ನಿಮಗಿಂತ ಒಳ್ಳೆಯ ಫಲಿತಾಂಶವನ್ನು ನಾವು ಕೊಡಬಹುದು. ದಯವಿಟ್ಟು, ಶಿಕ್ಷಕರನ್ನು ಕೊಡಿ ಹಾಗೂ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ತಾವು ಇದನ್ನು ಚರ್ಚೆಗೆ ಹಾಕಿಕೊಂಡಿದ್ದೀರಿ, ವಿಶೇಷವಾಗಿ, ಕಲ್ಯಾಣ ಕರ್ನಾಟಕದ ಭಾಗದ ಎಲ್ಲಾ ಸದಸ್ಯರೂ ಸಹ ಬಹಳ ವಿಚಾರಗಳನ್ನು ಹೇಳಿದ್ದಾರೆ. ಮಾನ್ಯ ಸಚಿವರು ಸಭೆಗೆ ಹೇಳಿರುವ ಪ್ರಕಾರ, Kalyana-Karnataka division ನಲ್ಲಿ ಯಾವುದೇ ನೇಮಕಾತಿಗೆ allocation ಗೆ ಮಾತ್ರ ನಾವು apply ಮಾಡಿ ಹೇಳಿದ್ದೇವೆ ಹೊರತು Finance Department

ದ್ದು permission ಗೆ ಎಲ್ಲಾ ಕೇಳುತ್ತಿಲ್ಲ. ಏಕೆಂದರೆ, ಅವರು ಹೇಳದಂತೆ ಹಣ ಬೇಕಾಗುತ್ತದೆ. ಹಣ ಒದಗಿಸಿ ಎಂದು ಹೇಳಿರುವಂತಹದ್ದನ್ನು ನಾನು ಗಮನಕ್ಕೆ ತರುತ್ತಿದ್ದೇನೆ. ನಮ್ಮ ಸರ್ಕಾರ ಬಂದ ಮೇಲೆ ಮಾನ್ಯ ಮುಖ್ಯಮಂತ್ರಿಯವರೂ ಸಹ, ವಿಶೇಷವಾಗಿ KKRDB ಯಲ್ಲಿ ಇರತಕ್ಕ ಹಣದಲ್ಲಿ 25% ಕನಿಷ್ಠ, ಅದರ ಮೇಲೆ ಎಷ್ಟಾದರೂ, ಕೆಲವರು ಶಾಸಕರು ತುಂಬಾ ಕೊಟ್ಟಿದ್ದಾರೆ. ಅದರಲ್ಲಿ 40%. "ಅಕ್ಷರ ಅವಿಷ್ಕಾರ" ಎಂಬ ಒಂದು ಕಾರ್ಯಕ್ರಮವನ್ನು ಮಾಡಿ ಅದು ಶ್ರೀ ಅಜೇಯ್ ಸಿಂಗ್‌ರವರೂ ಸಹ, 25% minimum ಇಡಬೇಕು. ಅದರ ಮೇಲೆ ಎಷ್ಟಾದರೂ ಸಹ ಇಡಬಹುದು. ಕೆಲವರು ಸದಸ್ಯರು ಹೆಚ್ಚು ಕಟ್ಟಡಕ್ಕೆ, ಏಕೆಂದರೆ, ಕಟ್ಟಡದ ಕೊರತೆ ಇದೆ. ಸಾಕಷ್ಟು ಕೊರತೆಗಳು ಇವೆ. ಅದಕ್ಕೆ ಅವರು ಆಗಲೇ ಕೊಡುತ್ತಿದ್ದಾರೆ. ಈಗ 2ನೇ ಬಜೆಟ್‌ಗೂ ಬಂದಿದೆ. ಕಳೆದ ಬಾರಿ ಸುಮಾರು ರೂ.600 ಕೋಟಿಗಳು ಬಂದಿತ್ತು. ಈ ಬಾರಿ ಸುಮಾರು ರೂ.700 ಕೋಟಿಗಳು ಬಂದಿದೆ. ಅದು ಎಷ್ಟು ಬಜೆಟ್ ಇಡುತ್ತಾರೋ, 25% ಇಟ್ಟಿರುವುದು ವಿಶೇಷವಾಗಿ ಈ ಭಾಗದಲ್ಲಿ ಶಿಕ್ಷಣಕ್ಕೆ ಒತ್ತುಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ವೈಯಕ್ತಿಕವಾಗಿ responsibility ತೆಗೆದುಕೊಂಡು, ಅಲ್ಲಿಗೆ ಅವರೇ ಹೋಗಿ ಅಕ್ಷರ ಅವಿಷ್ಕಾರ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದ್ದರು. ತಾವು ಸಹ ಎಲ್ಲರೂ ಆ ಕಾರ್ಯಕ್ರಮದಲ್ಲಿ ಭಾಗವಹಿಸಿರುತ್ತೀರಿ ಎಂದು ನಾನು ಅಂದು ಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ಇನ್ನೊಂದು ವಿಚಾರವನ್ನು ನಾನು ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ನಾನು ಈ ಇಲಾಖೆಗೆ ಸಚಿವನಾದ ಮೇಲೆ ಈ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡಾಗ ಶಿಕ್ಷಕರದ್ದು ಬಹಳ ದೊಡ್ಡ ಸಮಸ್ಯೆ ಇದೆ. ಇದರ ಜೊತೆಗೆ ವಿಶೇಷವಾಗಿ ಈಗ ನಡೆದ 10ನೇ ತರಗತಿಯ ಪರೀಕ್ಷೆಯನ್ನು ಸ್ವಲ್ಪ ಬಿಗಿಯಾಗಿ ಮಾಡಿದ್ದೇವೆ. ಇದು ತಮಗೂ ಕೂಡ ಗೊತ್ತಿದೆ. ಏಕೆಂದರೆ, ನಾವು ಎಲ್ಲಿ ಇದ್ದೇವೆಂದು ನಮಗೆ ಗೊತ್ತಾಗಲಿಲ್ಲವೆಂದರೆ, ನಾವು ಮಕ್ಕಳಿಗೆ ಸಹಕಾರ ಮಾಡುವುದರಲ್ಲಿ ಸೋಲುತ್ತೇವೆ. ಏಕೆಂದರೆ, ನಮಗೆ ಅದರಲ್ಲಿ ಸ್ವಲ್ಪ ತೊಂದರೆ ಆಯಿತು. ಮಕ್ಕಳಿಗೆ ಬಹಳ ಬಿಗಿಯಾಗಿ ಪರೀಕ್ಷೆಯನ್ನು ಮಾಡಿದ್ದೇವೆ. ಅದು ತಪ್ಪು ಮಕ್ಕಳದ್ದಲ್ಲ.

**ಶ್ರೀಮತಿ ಹೇಮಲತಾ ನಾಯಕ್;-** ಮಾನ್ಯ ಸಭಾಪತಿಯವರೇ, ಶಿಕ್ಷಕರು ಇಲ್ಲವೆಂದರೆ, ಮಕ್ಕಳು ಪಾಸಾಗು ಎಂದರೆ, ಅವರು ಹೇಗೆ ಪಾಸು ಆಗುತ್ತಾರೆ?

**ಸಭಾಪತಿಯವರು:-** ಮಾನ್ಯ ಹೇಮಲತಾ ನಾಯಕ್‌ರವರೇ, ಮಾನ್ಯ ಸಚಿವರು ಉತ್ತರ ಕೊಡುತ್ತಿದ್ದಾರೆ. ತಾವು ಕುಳಿತುಕೊಳ್ಳಿ.

**ಶ್ರೀ ಮಧು ಬಂಗಾರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಶಿಕ್ಷಕರು ಇಲ್ಲವೆಂದು ಹೇಳುತ್ತಿದ್ದೇನೆ. ಇಲ್ಲಿ ಬರಿ ಶಿಕ್ಷಕರದ್ದು ಅಲ್ಲ. ಮಾನ್ಯ ಸದಸ್ಯರು ಇದನ್ನು ತಿಳಿದುಕೊಳ್ಳಲಿ. ನಾನು ಮೊನ್ನೆ ದಿವಸ ಶ್ರೀ ರಾಯರೆಡ್ಡಿಯವರ ಕ್ಷೇತ್ರಕ್ಕೆ ಹೋದಾಗ, ಆ ಜಿಲ್ಲೆಯಲ್ಲಿನ ಸಂಪೂರ್ಣ ವಿಚಾರಗಳನ್ನು ನಾನು ತಿಳಿದುಕೊಂಡೆ. ಯಲಬುರ್ಗದಲ್ಲಿ ಮೂರು ಕಡೆಗೆ ಹೋಗಿದ್ದೆ. ಅಲ್ಲಿ ತಾವು ಕೂಡ ಇದ್ದೀರಿ. ಆಮೇಲೆ ತಾವು ಹೊರಟಿದ್ದೀರಿ. ನಾನು ಮೊನ್ನೆ ದಿವಸ ಅವರು ಸಿಕ್ಕಾಗ ಕೇಳಿದೆ. ತಾವು ಇರಬೇಕಾಗಿತ್ತು. ಏಕೆಂದರೆ, ನಾನು ಭಾಷಣ ಮಾಡುವಾಗ problem is not only with the teachers ಎಂದು ಹೇಳಿದ್ದೆ. ಶಿಕ್ಷಕರ ಕೊರತೆ ಇದೆ. ಶಿಕ್ಷಕರ ಕೊರತೆಯನ್ನು ನಿಗಿಸುವುದಕ್ಕೆ highest ಅತಿಥಿ ಶಿಕ್ಷಕರನ್ನು ನಾನು ಸಚಿವನಾದ ಮೇಲೆ, ನಮ್ಮ ಸರ್ಕಾರದವರು, ಮುಂಚೆ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿಯೇ ಎಲ್ಲಾ ಅತಿಥಿ ಶಿಕ್ಷಕರನ್ನು ತೆಗೆದುಕೊಳ್ಳುತ್ತಿದ್ದರು. ಏಕೆಂದರೆ, ಹಣ ಉಳಿತಾಯವಾಗುತ್ತದೆ ಎಂದು ತೆಗೆದುಕೊಳ್ಳುತ್ತಿದ್ದರು. ಕಳೆದ ಬಾರಿಯೂ ಸಹ, ನಾವು 40 ಸಾವಿರ ಶಿಕ್ಷಕರನ್ನು academic year ಶುರುವಾಗುವಷ್ಟರಲ್ಲಿ ತೆಗೆದುಕೊಂಡಿದ್ದೇವೆ. ಈ ಬಾರಿಯೂ ಸಹ ಮುಂಚೆ ತೆಗೆದುಕೊಂಡಿದ್ದೇವೆ. ಒಂದು ನಿಮಿಷ. Let me complete. ಇದರ ಗುಣಮಟ್ಟವನ್ನು ಸರಿಪಡಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಈ ಹಿಂದೆ ಯಾರು ಸಹ ಮಾಡಿರಲಿಲ್ಲ. ನಾನೂ ಸಹ ಒಬ್ಬ ಶಾಸಕನಾಗಬೇಕೆಂದರೆ, ನಾನು ಹೋಗಿ DDP ಯವರ ಕೈಕಾಲು ಹಿಡಿಯುವುದು ಒಂದು ಬಾಕಿ ಇತ್ತು. ಏನೆಂದರೆ, part by part ನಲ್ಲಿ ಕೊಡುತ್ತಿದ್ದರು. ಅದರಲ್ಲಿ ಹೋಗಿ ತೆಗೆದುಕೊಂಡು ಬರುತ್ತಿದ್ದೆವು. ಈಗ ಆ ರೀತಿ ಮಾಡಲಿಲ್ಲ. 45 ಸಾವಿರ ಅತಿಥಿ ಶಿಕ್ಷಕರನ್ನು ಯಾರಿಗೂ ತೊಂದರೆಯಾಗದ ರೀತಿಯಲ್ಲಿ, ಇಲಾಖೆಯಲ್ಲಿ ಮಾತ್ರ ಹೇಳಿದ್ದೇನೆ. ಕಲ್ಯಾಣ ಕರ್ನಾಟಕ ಭಾಗಕ್ಕೆ ಮೊದಲು ಆದ್ಯತೆಯನ್ನು ಕೊಡಿ ಹಾಗೂ ಹೆಚ್ಚುವರಿಯನ್ನು ಕೊಡಿ ಎಂದು ಹೇಳಿದ್ದೇನೆ. ನಾವು ತೆಗೆದುಕೊಳ್ಳುವಂತಹ 12 ಸಾವಿರ ಶಿಕ್ಷಕರರಲ್ಲಿ 4 ಸಾವಿರ ಶಿಕ್ಷಕರನ್ನು ಉತ್ತರ ಕರ್ನಾಟಕ ಭಾಗಕ್ಕೆ ಮಾತ್ರವೇ ಮೀಸಲು ಇಟ್ಟಿದ್ದೇವೆ. ಮಾನ್ಯ ಸದಸ್ಯರು ವೈಯಕ್ತಿಕವಾಗಿ ಬಂದು ನಮ್ಮ ಜೊತೆಗೆ ಚರ್ಚೆ ಮಾಡಿ ಹೇಳುತ್ತಿದ್ದರು. ಆಗಲೇ 3 ಸಾವಿರ ಶಿಕ್ಷಕರು ಅಲ್ಲಿಗೆ ಹೋಗಿ ಪಾಠ ಹೇಳಿಕೊಡುವಂತಹ ವ್ಯವಸ್ಥೆ ಆಗಿದೆ. ಏಕೆಂದರೆ, counselling ಮಾಡಿದಾಗ ಸಾಕಷ್ಟು ಶಿಕ್ಷಕರು ಅಲ್ಲಿಂದ ಹೊರಗಡೆಗೆ ಬಂದು ಬಿಟ್ಟರು. ಏಕೆಂದರೆ, ಅವರು ಸುಮಾರು 15–20 ವರ್ಷಗಳಿಂದ ಅಲ್ಲಿ ಕೆಲಸ ಮಾಡಿದ್ದರು. ಹಾಗಾಗಿ, ಅವರು counselling ನಲ್ಲಿ ತೆಗೆದುಕೊಂಡುಬಿಡುತ್ತಾರೆ. ಶಿಕ್ಷಕರು ಖಾಯಂ ಆಗಿ, ಏಕೆಂದರೆ ಕಳೆದ ಸರ್ಕಾರ ಇದ್ದಾಗ ಮಾಡಿದ್ದರು. ನಾನು ಸಚಿವನಾದ ಮೇಲೆ ಅವರನ್ನು recruit ಮಾಡಿಕೊಳ್ಳುವಂತಹ ಪದ್ಧತಿಯನ್ನು ಮಾಡಿ highest ಆ ಭಾಗಕ್ಕೆ ಶಿಕ್ಷಕರನ್ನು ಕೊಟ್ಟಿದ್ದೇನೆ.

ಪ್ಲಸ್ ಈಗಲೂ ಸಹ, 10 ಸಾವಿರ ಶಿಕ್ಷಕರನ್ನು ತೆಗೆದುಕೊಳ್ಳುವಂತಹ ಪ್ರಸ್ತಾವನೆಯನ್ನು ಕಳುಹಿಸಿದ್ದೇನೆ. ನಮಗೆ ಅವರಿಂದ budget allocation ಸಿಕ್ಕಿದ ತಕ್ಷಣ ಅದರಲ್ಲಿ ಸುಮಾರು 6500 ಶಿಕ್ಷಕರನ್ನು ಆ ಭಾಗಕ್ಕೆ ಕೊಡುತ್ತಿದ್ದೇವೆ. ಅದರ ಜೊತೆಗೆ ಒಳ್ಳೆಯ ಕಾರ್ಯಕ್ರಮಗಳನ್ನು ಎಲ್ಲಾ, ಅವರು ಸಹ ಎಲ್ಲಾ ಕಾರ್ಯಕ್ರಮಗಳಿಗೂ ಹೋಗುತ್ತಾರೆ, KKRDB ಯಲ್ಲಿ ಏನೇನು ಕಾರ್ಯಕ್ರಮಗಳನ್ನು ಮಾಡುತ್ತೇವೆ, ಅದಕ್ಕೆಲ್ಲಾ ಹೆಚ್ಚು ಒತ್ತನ್ನು ಆ ಕಡೆಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ನಮಗೆ ಈ ಬಾರಿ 10ನೇ ತರಗತಿಯ percentage ಕಡಿಮೆ ಆಗಿತ್ತು. But we wanted to know, ನಮ್ಮ ಮಕ್ಕಳು ಎಲ್ಲಿಯವರೆಗೆ ಇದ್ದಾರೆ ಎಂದು ನೋಡಿದಾಗ, ದಯವಿಟ್ಟು ನಾನು ತಮ್ಮಲ್ಲಿಯೂ ಸಹ ಮನವಿಯನ್ನು ಮಾಡಿಕೊಳ್ಳುತ್ತೇನೆ. ಜನಪ್ರತಿನಿಧಿಗಳಾದ ತಾವೂ ಆ ಕಡೆಗೆ ಹೋದಾಗ it is the problem with the parents also. ನಾನು ತಮ್ಮಲ್ಲಿ ಮನವಿಯನ್ನು ಮಾಡುವುದಕ್ಕೆ ಇಷ್ಟಪಡುತ್ತೇನೆ. ತಂದೆ-ತಾಯಿಯವರು ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ. ಒಟ್ಟು 6 ದಿವಸಗಳಲ್ಲಿ, 2 ದಿವಸಗಳು ಮಾತ್ರ ಶಾಲೆಗೆ ಹೋಗುತ್ತಾರೆ. ಇನ್ನು 4 ದಿವಸಗಳು ಶಾಲೆಗೆ ಬರುವುದಿಲ್ಲ. ಈಗ ಅದಕ್ಕೆ ನಮ್ಮ SATS (Student Achievement Tracking System) ಎಂದು ಏನಿದೆ, tracking system ಅನ್ನು ಸ್ವಲ್ಪ strong ಮಾಡುತ್ತಿದ್ದೇವೆ. Face recognition attendance system ಅನ್ನು ಮಾಡುತ್ತಿದ್ದೇವೆ. ನಾವು ಯಾರಿಗೂ ತೊಂದರೆ ಕೊಡುವುದಕ್ಕೆ ಅಲ್ಲ, ಏಕೆಂದರೆ, ಮಕ್ಕಳು ಶಾಲೆಗೆ ಹೋದರೆ the best teachers are in the Government Schools. ಖಾಸಗಿ ಮತ್ತು ಅನುದಾನಿತ ಶಾಲೆಯಲ್ಲಿ ಸಿಗುವುದಿಲ್ಲ, ನಾನು influence ಮಾಡಿದರೂ ಸಹ, ಯಾವುದೇ ಶಿಕ್ಷಕನಿಗೆ ಕೆಲಸ ಕೊಡುವುದಕ್ಕೆ ಆಗುವುದಿಲ್ಲ. 'Best teachers but least used.' I will not say 'worst used'. ಏಕೆಂದರೆ, ಅವರು worst ಅಲ್ಲ, they are the best. ಏಕೆಂದರೆ, ಈ ವರ್ಷ ಇಷ್ಟೊಂದು ಬಿಗಿ ಮಾಡಿ ಸರ್ಕಾರಿ ಶಾಲೆಯಲ್ಲಿ 625 ಅಂಕಗಳಿಗೆ 625 ಅಂಕಗಳನ್ನು ಒಬ್ಬ ಹೆಣ್ಣು ಮಗಳು ತೆಗೆದುಕೊಂಡಿದ್ದಾಳೆ. ನಮಗೆ ಅದಕ್ಕೆ ಹೆಮ್ಮೆ ಇದೆ. ಅಂದರೆ, ಅದರ ಅರ್ಥ ಸರ್ಕಾರಿ ಶಾಲೆಯಲ್ಲಿ ಓದುವಂತಹ ಮಕ್ಕಳಿಗೆ ಅವರು number one position ಗೆ ಬರುವುದಕ್ಕೆ ಅವಕಾಶಗಳು ಇವೆ. ಅದೇರೀತಿ ಕೊರತೆಗಳು ಸಾಕಷ್ಟು ಇವೆ. ಅದು ನನ್ನ ಸಂದರ್ಭದಲ್ಲಿ ಅಲ್ಲ. ನಾನು ಇಲಾಖೆಯ ಸಚಿವನಾದ ಮೇಲೆ, ನಾನು ಗ್ಯಾರಂಟಿ ಕೊಡುತ್ತೇನೆ. ನಾನು ಬೇಕಾದರೆ ಲೆಕ್ಕ ಕೊಡುತ್ತೇನೆ. ಅದು ಹಂತ, ಹಂತವಾಗಿ ಮೇಲೆ ಬರುತ್ತಿದೆ. ಇದಕ್ಕೆ ತಮ್ಮಲ್ಲೆರ ಮಾರ್ಗದರ್ಶನ ಕೂಡ ಸಾಕಷ್ಟು ಇದೆ. ತಾವು ಸಾಕಷ್ಟು ನನಗೆ ತಲೆ ತಿಂದಿದ್ದೀರಿ. Pressure ಹಾಕಿದ್ದೀರಿ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ನಮ್ಮ ಸದಸ್ಯರ ಜೊತೆಗೆ ಸಭೆಗಳನ್ನು ಮಾಡಿರುವುದು ಬಹಳ ಕಡಿಮೆ. ಮಾನ್ಯ ಸಚಿವರು ದಯಮಾಡಿ ವಿಶೇಷವಾಗಿ ಶಿಕ್ಷಣ ಕ್ಷೇತ್ರದಿಂದ ಆಯ್ಕೆಯಾಗಿರುವ ಸದಸ್ಯರ ಜೊತೆಗೆ ಸಭೆಗಳನ್ನು ಮಾಡಬೇಕು. ನಾವು ಅನೇಕ ಸಮಸ್ಯೆಗಳಿಗೆ suggestions ಅನ್ನು ಕೊಡುತ್ತೇವೆ. Problems ಅನ್ನು ಸಹ solve ಮಾಡಿಕೊಡುತ್ತೇವೆ.

**(ಗೊಂದಲ)**

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಒಂದು ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಮಾನ್ಯ ಸಚಿವರು ಮಾತನಾಡುವಂತಹ ಸಂದರ್ಭದಲ್ಲಿ ಬೇರೆ ಭಾಗದಿಂದ ಕಲ್ಯಾಣ ಕರ್ನಾಟಕದ ಭಾಗಕ್ಕೆ ಯಾರು ನೇಮಕಾತಿ ಹೊಂದುತ್ತಾರೋ, ನೇಮಕಾತಿ ಹೊಂದಿದವರು ಅದು 20 percent, 30 percent ಹೀಗೆ depend on cadre wise ಇದೆ. ಅಲ್ಲಿ ಯಾರು 20 percent, 30 percent appoint ಆಗಿ ಬರುತ್ತಾರೋ ಅಲ್ಲವೇ, ಅವರು 2-3 ವರ್ಷಗಳು ಅದ ಮೇಲೆ ವರ್ಗಾವಣೆಯಾಗಿ ಹೊರಗಡೆ ಬಂದು ಬಿಡುತ್ತಾರೆ.

(ಮುಂದು)

(651) 23-07-2024 (6.50) ಎಂವಿ-ವಿಕೆ (ಸಭಾಪತಿಯವರ ಉಪಸ್ಥಿತಿ)

**ಡಾ: ತಳವಾರ್ ಸಾಬಣ್ಣ (ಮುಂದು):**

ಈಗ vacancy ಗಳು accumulate ಆಗುತ್ತಿಲ್ಲ.

**ಸಭಾಪತಿಯವರು:–** ಆ ರೀತಿ ಬರುವಂತೆ ಇಲ್ಲ. ಅವರು ಕೌನ್ಸಿಲಿಂಗ್ ಮುಖಾಂತರ ಬರಬೇಕು.

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಅಲ್ಲಿ vacancy problem ಆಗುತ್ತಿದೆ.

**(ಗೊಂದಲ)**

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವರು ಯಾವಾಗಲಾದರೂ ಹೋಗುತ್ತಾರೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಆ ರೀತಿ ಬರುವಂತೆ ಇಲ್ಲ. ಅದಕ್ಕೆ ಕಾನೂನು ಇಲ್ಲ.

**(ಗೊಂದಲ)**

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾನು ಒಂದು ನಿಮಿಷ ಮಾತನಾಡುತ್ತೇನೆ.

**ಸಭಾಪತಿಯವರು:–** ಈಗ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ, ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):–** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಸದಸ್ಯರಿಗೆ ಏನು ಹೇಳುವುದಕ್ಕೆ ಇಷ್ಟಪಡುತ್ತೇನೆಂದರೆ,...

**ಸಭಾಪತಿಯವರು:–** ಮಾನ್ಯ ಸಚಿವರೆ, ನಮ್ಮ ಊರಿನ ಶಾಲೆಯ ಶಿಕ್ಷಕರ ಬಗ್ಗೆ ಹೇಳಿ.

**ಶ್ರೀ ಮಧು ಬಂಗಾರಪ್ಪ:–** ಮಾನ್ಯ ಸಭಾಪತಿಯವರೆ, ಅಲ್ಲಿ ಕೆ.ಪಿ.ಎಸ್. (Karnataka Public School) ನಲ್ಲಿ ಕಡಿಮೆ ಇರಬೇಕು. ಆದರೆ, ಅಲ್ಲಿ ಬಿಡುವುದಿಲ್ಲ. ಅಲ್ಲಿನ ಜನರು strike ಮಾಡುತ್ತಾರೆ. ಅಂದರೆ, ಅಲ್ಲಿನ ಶಾಲೆಗೆ ಅಡ್ಮಿಷನ್ ಕೊಡಿ ಎಂದು. ಅದಕ್ಕೆ ಮಾನ್ಯ ಸಭಾಪತಿಯವರು ಅಲ್ಲಿನ ಎಲ್ಲಾ ಮಕ್ಕಳನ್ನು ಭೇಟಿ ಮಾಡಿಸಿ, ಶಾಲೆಯನ್ನು ಯಾವ ರೀತಿ ಮಾಡಬೇಕೆಂದು ನನ್ನನ್ನು ಕರೆದುಕೊಂಡು ಹೋಗಿದ್ದರು. ಬೆಳಗಾವಿಯ ಅಧಿವೇಶನ ಇದ್ದಾಗ ಆ ಕಡೆಗಳಲ್ಲಿ ಓಡಾಡಿದ್ದೇನೆ. ಮೊನ್ನೆಯ ದಿವಸ ಯಲಬುರ್ಗಕ್ಕೆ ಹೋದಾಗ ಅಲ್ಲಿನ ಶಾಲೆಗಳಿಗೆ ಭೇಟಿ ಮಾಡಿ, ಅಲ್ಲಿನ ಮಕ್ಕಳನ್ನು ನೋಡಿದಾಗ ನನಗೆ ಒಂದು ವಿಶ್ವಾಸ ಮೂಡಿತು. ಈಗ ಯಾವುದೇ ಮಕ್ಕಳಿಗೆ ಶಿಕ್ಷಣವನ್ನು ಕೆಳಮಟ್ಟದಿಂದಲೇ ಕೊಟ್ಟುಬಿಟ್ಟರೆ, ಅವರ ಪಾಡಿಗೆ ಅವರು ಬಂದು ಬಿಡುತ್ತಾರೆ. ಆದರೆ, ಆ ಕೊರತೆ ಕಲ್ಯಾಣ ಕರ್ನಾಟಕದಲ್ಲಿ ಎದ್ದು ಕಾಣಿಸುತ್ತಿದೆ. ಅದಕ್ಕೆ ನಾವು ಹೆಚ್ಚು ಒತ್ತನ್ನು ಕೊಟ್ಟು, ಮತ್ತೆ ಅವರಿಗೆ special programmes ನೀಡಬೇಕಾಗುತ್ತದೆ. ಈಗ ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಾನು ಮೊಟ್ಟೆಯ ವಿಚಾರವನ್ನು ಹೇಳುತ್ತಿದ್ದೆ. ಮೊಟ್ಟೆ ಕೊಡುವುದಕ್ಕೆ ನಾವು ಸರ್ಕಾರದ ತೆರಿಗೆಯ ಹಣವನ್ನು ತೆಗೆದುಕೊಳ್ಳಲಿಲ್ಲ. ಅದಕ್ಕೆ ನನಗೆ ಹೆಮ್ಮೆ ಇದೆ. ಏಕೆಂದರೆ, ಶಿಕ್ಷಣ ಎಷ್ಟು ಮುಖ್ಯವೆಂದು ನನಗೆ ಗೊತ್ತಿದೆ. ಶಿಕ್ಷಣಕ್ಕೆ parallel ಆಗಿ, ಪೌಷ್ಠಿಕತೆಯನ್ನು ಸಹ ಕೊಡಬೇಕಾಗುತ್ತದೆ. ಕೆಲವು ಬಾರಿ ಪೌಷ್ಠಿಕತೆ ಶಿಕ್ಷಣಕ್ಕೆ ಅನುಕೂಲವಾಗುತ್ತದೆ. ಈಗ ಮಕ್ಕಳೆ weak ಇದ್ದರೆ, ಅಲ್ಲಿ ಎಲ್ಲರೂ ಇದ್ದರು, weak studies ನಲ್ಲಿ ಹಿಂದೆ ಬೀಳುತ್ತಾರೆ. ಅದಕ್ಕೆ ನಾವು ಶ್ರೀ ಅಜೀಂ

ಪ್ರೇಮ್‌ಜಿ ಪೌಂಡೇಷನ್ ಕಡೆಯಿಂದ, ಮೊನ್ನೆ ಶನಿವಾರ ಸುಮಾರು ರೂ.1,500 ಕೋಟಿ ವೆಚ್ಚದಲ್ಲಿ ಮೂರು ವರ್ಷಕ್ಕೆ ಪ್ರತಿದಿನ ಮೊಟ್ಟೆ ಕೊಡಬೇಕೆಂದು ಈಗಾಗಲೇ MOU ಅನ್ನು ಮಾನ್ಯ ಮುಖ್ಯಮಂತ್ರಿಗಳ ಎದುರುಗಡೆ ಸಹಿ ಹಾಕಿದ್ದೇವೆ. ನಾವು ಸರ್ಕಾರದಿಂದ ಹಣ ತೆಗೆದುಕೊಳ್ಳಲಿಲ್ಲ. ನಮಗೆ ಸರ್ಕಾರದಿಂದ ಹಣ ಪಡೆಯುವ ಇತಿಮಿತಿ ಸಹ ಬರುತ್ತದೆ. ಏಕೆಂದರೆ, ಇಡೀ ರಾಜ್ಯದಲ್ಲಿ ನಮ್ಮ ಇಲಾಖೆಯಲ್ಲಿ highest ರೂ.44,000/- ಕೋಟಿಗಳಿಗೂ ಹೆಚ್ಚು ಹಣ ವೇತನಕ್ಕೆ ಹೋಗುತ್ತದೆ. ಆ ವೇತನ ಸರಿಯಾಗಿ ಉಪಯೋಗವಾಗಬೇಕೆಂದರೆ, ಮಕ್ಕಳು ಶಾಲೆಯಲ್ಲಿ ಇರಬೇಕು. ಮತ್ತೆ ಅವರು ಸುಸಜ್ಜಿತವಾದಂತಹ ಕಟ್ಟಡದಲ್ಲಿರಬೇಕು. ಅವರಿಗೆ ಅಲ್ಲಿ ಒಳ್ಳೆಯ ರೀತಿಯಲ್ಲಿ studies ಅನ್ನು ಕೊಡಿಸಬೇಕು. ಅದರ ಜೊತೆಗೆ ಅವುಗಳನ್ನು improve ಮಾಡುವುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಮೊನ್ನೆಯ ಕ್ಯಾಬಿನೆಟ್‌ನಲ್ಲಿ ಉಚಿತ ವಿದ್ಯುತ್ ಎಂದು ಮಾಡಿದ್ದೇವೆ. ಎಲ್ಲಾ ಕಡೆಗೆ ಹೋದಾಗ ಮತ್ತೆ ತಮಗೂ ಸಹ ಮನವಿ ಮಾಡುತ್ತೇನೆ. Best teachers are there and least used ಎಂದು ಹೇಳಿದೆ. ಮಕ್ಕಳಿಗೆ ಸಾಯಂಕಾಲ ವಿಶೇಷ ತರಗತಿಗಳನ್ನು ತೆಗೆದುಕೊಳ್ಳಲಿ. ಎಲ್ಲರೂ ಬುದ್ಧಿವಂತರು ಇರುವುದಿಲ್ಲ. ಅದರಲ್ಲಿ 20 ಮಕ್ಕಳು ಇದ್ದರೆ, ಅದರಲ್ಲಿ ಐದರಿಂದ ಹತ್ತು ವಿದ್ಯಾರ್ಥಿಗಳು ದಡ್ಡರು ಇದ್ದಾರೆ ಎಂದರೆ, ಅವರನ್ನು ಕೂರಿಸಿಕೊಂಡು, they need helping hand. ಅವರಿಗೆ ಸಹಾಯಹಸ್ತ ಬೇಕು. ಅದನ್ನು ಅದೇ ಶಿಕ್ಷಕರು ಮಾಡುವುದು ಒಳ್ಳೆಯದು. ನಾನು ಅದೃಷ್ಟ ಮಾಡಿದ್ದೆ. ಏಕೆಂದರೆ, ನಮ್ಮ ತಂದೆಯವರು ನನ್ನನ್ನು ಟ್ಯೂಷನ್‌ಗೆ ಕಳುಹಿಸಿದರು. ಆದರೂ ನಮಗೆ ಒಂದು limitation ಇತ್ತು. ಅದಕ್ಕೆ ನಾವು ಹೆಚ್ಚಿಗೆ ಓದಲಿಲ್ಲ. ನಾವು ಸಿಟಿಯಲ್ಲಿ ಓದಿರಬಹುದು. ಆದರೆ, ಮಕ್ಕಳ ಕಷ್ಟ ಏನೆಂದು ಗೊತ್ತಿದೆ. ಏಕೆಂದರೆ, ದಿವಂಗತ ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್.ಬಂಗಾರಪ್ಪನವರು ಸರ್ಕಾರಿ ಶಾಲೆಯಲ್ಲಿ ಓದಿ ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಕೂಡ ಸರ್ಕಾರಿ ಶಾಲೆಯಲ್ಲಿ ಓದಿ ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ. ಅವರಂತೆ ಸಾಕಷ್ಟು ಜನರು ಆಗಿದ್ದಾರೆ. ನನಗೆ ಅದರ ಬಗ್ಗೆ ವಿಶ್ವಾಸವಿದೆ. ಅಂದರೆ, ಎಲ್ಲರಲ್ಲೂ ಸಹ talent ಇರುತ್ತದೆ. ಅವರು ವಿಶ್ವಾಸ ಇಟ್ಟುಕೊಳ್ಳಲಿ. ಶಿಕ್ಷಕರ ಕೊರತೆಯ ಬಗ್ಗೆ ಮಾನ್ಯ ಸದಸ್ಯರು ಏನು ವಿಚಾರವನ್ನು ಹೇಳಿದ್ದಾರೆ, ಅದು day one ನಿಂದ ಗೊತ್ತಿದೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇವೆ. KKRDB division ಬಗ್ಗೆ ಬಹಳ ಸಂತೋಷವಿದೆ. ಅದರ ಬಗ್ಗೆ ನಮ್ಮ ಪಕ್ಷದ manifesto ದಲ್ಲಿ ಹಾಕಿದ್ದೇವೆ. ಅಂದರೆ, ನಾನು ನಮ್ಮ ಪಕ್ಷದ ಪ್ರಣಾಳಿಕೆಯ ಉಪಾಧ್ಯಕ್ಷನಾಗಿದ್ದೇನೆ. ಅದರಲ್ಲಿ ಕಲ್ಯಾಣ ಕರ್ನಾಟಕದಲ್ಲಿ ನಾವು ಐದು ವರ್ಷದ ಒಳಗೆ ಸುಮಾರು ಐವತ್ತು ಸಾವಿರ ಹುದ್ದೆಗಳನ್ನು

ತುಂಬುತ್ತೇವೆಂದು ಹೇಳಿದ್ದೇವೆ. ಅದರ ಜೊತೆಗೆ ಮಾನ್ಯ ಸಚಿವರಾದ ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್‌ರವರು ಸುಮಾರು ಮೂವತ್ತು ಸಾವಿರ ಹುದ್ದೆಗಳನ್ನು ತುಂಬುತ್ತೇವೆಂದು ಹೇಳಿದ್ದಾರೆ. ಅದರಲ್ಲಿ ಹೆಚ್ಚು ಪಾಲು ಶಿಕ್ಷಕರೆ ಇದ್ದಾರೆ. ಸರ್ಕಾರದಲ್ಲಿ ಇರತಕ್ಕಂಥದ್ದರಲ್ಲಿ ಶೇಕಡಾ 40ರಷ್ಟು ಶಿಕ್ಷಕರೆ ಇದ್ದಾರೆ. ಅದಕ್ಕೆ ನಾನು ಆ ವಿಶ್ವಾಸವನ್ನು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಇದು backlog ಸಮಸ್ಯೆಯೇ ಹೊರತು ಒಂದೇ ಬಾರಿಗೆ ಸೃಷ್ಟಿಯಾಗಿರತಕ್ಕಂತಹ ಸಮಸ್ಯೆಯಲ್ಲ. ಅದರ ಜೊತೆಗೆ ಸಾಕಷ್ಟು ಸಮಸ್ಯೆಗಳಿವೆ. ನಾನು ಸುಮಾರು ವಿಷಯಗಳನ್ನು ಬರೆದುಕೊಂಡು ಬಂದಿದ್ದೇನೆ. ಈಗ ನಾನು ಅವುಗಳನ್ನೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ. ಈ ವರ್ಷದಿಂದ ಸರ್ಕಾರಲ್ಲಿಯೇ ಸುಮಾರು 1,008 ಎಲ್.ಕೆ.ಜಿ. ಮತ್ತು ಯು.ಕೆ.ಜಿ.ಗಳ ಶಾಲೆಗಳನ್ನು ಪ್ರಾರಂಭ ಮಾಡಿದ್ದೇವೆ. ಅದು ಏಕೆಂದರೆ, ಈಗ ಅಂಗನವಾಡಿ-1, ಅಂಗನವಾಡಿ-2 ಮತ್ತೆ ಅಂಗನವಾಡಿ-3 ಎಂದು ಇದೆ. ಕೆಲವು ಬಾರಿ ಪೋಷಕರು ಏನಾದರೂ ಆರ್ಥಿಕವಾಗಿ ಚೆನ್ನಾಗಿದ್ದರೆ, ಆಗ ಅವರು ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳುಹಿಸಿಬಿಡುತ್ತಾರೆ. ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡರು ತಮ್ಮ ಮಕ್ಕಳನ್ನು ಏನು ಮಾಡಿದ್ದಾರೋ ಎಂದು ನನಗೆ ಗೊತ್ತಿಲ್ಲ. ಅಲ್ಲಿ ಏನಾಗುತ್ತದೆಂದರೆ, ಎಲ್.ಕೆ.ಜಿ. ಮತ್ತು ಯು.ಕೆ.ಜಿ. ಆಗಿ ಅವರುಗಳು ಏನಾದರೂ ಖಾಸಗಿ ಶಾಲೆಗಳಿಗೆ ಹೋದರೆ, ಅವರು ಮತ್ತೆ ಸರ್ಕಾರಿ ಶಾಲೆಗಳಿಗೆ ಬರುವುದಿಲ್ಲ. ಅದಕ್ಕೋಸ್ಕರವೇ ಈ ಬಾರಿ for the first time ಸರ್ಕಾರದ ವತಿಯಿಂದ ಅದಕ್ಕೆ ಪ್ರತ್ಯೇಕವಾಗಿ ಕೆ.ಕೆ.ಆರ್.ಡಿ.ಬಿ. ವತಿಯಿಂದ ದುಡ್ಡು ಇಟ್ಟು, ಸುಮಾರು 1,008 ಎಲ್.ಕೆ.ಜಿ. ಮತ್ತು ಯು.ಕೆ.ಜಿ.ಯನ್ನು ಓಪನ್ ಮಾಡಿದ್ದೇವೆ. ಇದರಿಂದ, ಈ ವರ್ಷ ಕೇವಲ ಒಂದು ತಿಂಗಳನಲ್ಲಿ ಸುಮಾರು ಮೂವತ್ತು ಸಾವಿರ ಮಕ್ಕಳು ಅಡ್ಮಿಷನ್ ತೆಗೆದುಕೊಂಡಿದ್ದಾರೆ. ಅದೇ ಮಕ್ಕಳು ನಾಳೆಯ ದಿವಸ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಸರ್ಕಾರಿ ಶಾಲೆಗಳಲ್ಲಿ ಓದುತ್ತಾರೆ. ನಾವು ಮೊದಲು ಶ್ರೀ ಅಜೀಂ ಪ್ರೇಮ್‌ಜಿಯವರ 1,500 ಕೋಟಿ ರೂಪಾಯಿಗಳನ್ನು ಬಳಕೆ ಮಾಡಿದೆವು ಎಂದರೆ, ಈಗ ಬೇರೆ investors ಬರುತ್ತಾರೆ. ಅದನ್ನು ಫೌಂಡೇಶನ್‌ನಿಂದ nutrition ಗೆ ಎಂದು ಮಾಡಿರುವುದು. ಕಲಿಕೆಗೆ infrastructure ಕೊಡಬೇಕಾಗುತ್ತದೆ. ಅದನ್ನು ಬೇರೆ ಬೇರೆ ರೀತಿಯಲ್ಲಿ ಕೊಡಬೇಕಾಗುತ್ತದೆಂದು. ಈಗ ಕೆ.ಪಿ.ಎಸ್. ಶಾಲೆಗಳ ಬಗ್ಗೆ ಹೇಳುವುದಾದರೆ, ಈಗ ಮೈಸೂರು ಭಾಗದಲ್ಲಿ ಮಕ್ಕಳ ಸಂಖ್ಯೆಗೆ ಆಧಾರಿತವಾಗಿ ನೋಡಿದರೆ, ನಮಗೆಲ್ಲಾ ಅನ್ಯಾಯವಾಗುತ್ತಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಆದರೆ, ನಮ್ಮ ಮಲೆನಾಡು ಭಾಗದಲ್ಲಿ ಒಬ್ಬರು ಶಿಕ್ಷಕರು ಹತ್ತು ಜನ ವಿದ್ಯಾರ್ಥಿಗಳು ಇದ್ದಾರೆ. ಈ ಸಮಸ್ಯೆ ಹಿಂದಿನಿಂದ ಆಗಿರುವಂಥದ್ದು. ಮೊದಲು students less ಶಾಲೆಗಳು ಬೇಕಾದಷ್ಟಿವೆ. ಅದೆಲ್ಲಾ ಸಮಸ್ಯೆಗಳು ಬಂದುಬಿಟ್ಟಿವೆ.

ಸಭಾಪತಿಯವರು:- ಸುಮಾರು ಹತ್ತೊಂಬತ್ತು ನೂರು ಶಾಲೆಗಳಲ್ಲಿ ಹತ್ತು ವಿದ್ಯಾರ್ಥಿಗಳಗಿಂತ ಕಡಿಮೆ ಇದ್ದಾರೆ.

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ಈಗ students ಏನಿದ್ದಾರೆ, ಅದನ್ನು rationalize ಮಾಡುವುದನ್ನು ಪ್ರತಿವರ್ಷ ಮಾಡುತ್ತಿದ್ದಾರೆಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಶ್ರೀ ಶಶೀಲ್ ಜಿ. ನಮೋಶಿ:- ಮಾನ್ಯ ಸಭಾಪತಿಯವರೆ, ದೊಡ್ಡ ಪ್ರಮಾಣದಲ್ಲಿ ಈ ವರದಿಯ ಆಧಾರದ ಮೇಲೆ ಮಾಡಿಲ್ಲ.

**ಸಭಾಪತಿಯವರು:-** ಶ್ರೀ ಶಶೀಲ್ ಜಿ. ನಮೋಶಿಯವರೆ, ಇರಲಿ ಬಿಡಿ, ಅವರು ಅದನ್ನು ಮಾಡಿದ್ದಾರೆ.

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, 2022-23ನೇ ಸಾಲಿನಲ್ಲಿ ಮಾಡಿದ್ದಾರೆ. ಈಗ 2024ನೇ ಸಾಲಿನಲ್ಲಿ ಮಾಡುತ್ತಾರೆ. ಅಂದರೆ, ಎರಡು ವರ್ಷಕ್ಕೆ ಮಾಡುತ್ತಾರೆ. ಮಾನ್ಯ ಸದಸ್ಯರಿಗೆ ವೈಯಕ್ತಿಕವಾಗಿ ಅದರ ಮಾಹಿತಿಯನ್ನು ನಾಳೆ ಬೆಳಗ್ಗೆಯೇ ಕೊಡುತ್ತೇನೆ. ಆ ರೀತಿ ಆಗಬಾರದು. ಏಕೆಂದರೆ, ಸಮಾನತೆ ಶಿಕ್ಷಣವನ್ನು ಕೊಡಬೇಕಾದರೆ, ಎಲ್ಲಾ ಮಕ್ಕಳಿಗೂ ಕೂಡ ಅವರು ಯಾವುದೇ ಜಿಲ್ಲೆಯಲ್ಲಿ ಇರಬಹುದು. ಅವರಿಗೆ ಅದೇ ratio ರೀತಿ teachers ಗಳನ್ನು ಕೊಡತಕ್ಕಂಥದ್ದು ಆಗುತ್ತದೆ. ಈಗ transfers ಯಾವಾಗಲೂ ಆಗುವುದಿಲ್ಲ. ಇದನ್ನು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ಕೌನ್ಸಿಲಿಂಗ್‌ನಲ್ಲಿ ತೆಗೆದುಕೊಂಡುಬಿಡುತ್ತಾರೆ. ಕಳೆದ ಬಾರಿ ಅದನ್ನು ಏಕೆ ಒಪ್ಪಿಕೊಂಡೆ ಎಂದರೆ, ಸುಮಾರು ಹನ್ನೆರಡು ಸಾವಿರ ಶಿಕ್ಷಕರು ಬರುತ್ತಾರೆಂದು ಗೊತ್ತಿತ್ತು. ಅವರನ್ನು ಆ ಕಡೆಗೆ ಕಳುಹಿಸಬಹುದು ಎಂಬ ನಿಟ್ಟಿನ ಆಧಾರದ ಮೇಲೆ ಆ ರೀತಿಯ ತೀರ್ಮಾನವನ್ನು ತೆಗೆದುಕೊಂಡೆವು. ಇಲ್ಲವಾಗಿದ್ದರೆ ನಾನು ಅದನ್ನು ಸ್ವಲ್ಪ ಮುಂದಕ್ಕೆ ಹಾಕುತ್ತಿದ್ದೆ. ಇಲ್ಲದಿದ್ದರೆ ಇನ್ನು ಬಹಳ ತೊಂದರೆಯಾಗುತ್ತಿತ್ತು. ಎಷ್ಟು ಜನರು ಹೊರಗೆ ಬಂದಿದ್ದಾರೆ, ಅಷ್ಟನೇ ವಾಪಸ್ಸು ಕೊಟ್ಟಿದ್ದೇವೆ. ನಾಳೆ ಬೆಳಗ್ಗೆ ಅದರ ಲೆಕ್ಕವನ್ನು ಕೊಡುತ್ತೇನೆ. ನಾನು ಮಾತನಾಡುವುದಕ್ಕೆ ಹೆಚ್ಚು ಸಮಯ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಕಲ್ಯಾಣ ಕರ್ನಾಟಕ ಭಾಗಕ್ಕೆ ನಮ್ಮ ಸರ್ಕಾರದ ವತಿಯಿಂದ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಈಗ ಎಲ್.ಕೆ.ಜಿ. ಮತ್ತು ಯು.ಕೆ.ಜಿ. ಶಾಲೆಗಳು ಮತ್ತೆ ಬೇರೆ ಬೇರೆ ವಿಚಾರಗಳಲ್ಲೂ ಕೂಡ ಕೊಡತಕ್ಕಂಥದ್ದು. ಈಗ ಪಿ.ಯು.ಸಿ. ಕೊರತೆ ಇರುವುದರಿಂದ ರಾಜ್ಯದಲ್ಲಿ ಇರತಕ್ಕಂತಹ ಎಲ್ಲಾ ಆದರ್ಶ ಶಾಲೆಗಳಲ್ಲಿ ಪಿ.ಯು.ಸಿ.ಯನ್ನು ಘೋಷಣೆ ಮಾಡಿ, ಅಲ್ಲಿಗೆ sanction ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ. ಅದರ ಜೊತೆಗೆ ಶಿಕ್ಷಣದ ಗುಣಮಟ್ಟ ಚೆನ್ನಾಗಿ ಆಗಬೇಕೆಂದು ಮಾನ್ಯ ಸದಸ್ಯರುಗಳು ಹೇಳಿದರು. ಈಗ NEET ಮತ್ತು CET

ಪರೀಕ್ಷೆಗಳಿಗೆ ಸುಮಾರು ಹತ್ತು ಕೋಟಿ ರೂಪಾಯಿಗಳನ್ನು ಸುಮಾರು ಇಪ್ಪತ್ತೈದು ಸಾವಿರ ವಿದ್ಯಾರ್ಥಿಗಳಿಗೆ ಕೊಡುವಂಥದ್ದು. ಏಕೆಂದರೆ, ಅನುಕೂಲ ಇರುವಂತಹವರು ಒಳ್ಳೊಳ್ಳೆ private institutions ಗಳ ಕೋಚಿಂಗ್‌ಗೆ ಕಳುಹಿಸುತ್ತಾರೆ. ಅವರು ಒಂದು ಲಕ್ಷ, ಎರಡು ಲಕ್ಷ, ಮೂರೂವರೆ ಮತ್ತೆ ನಾಲ್ಕು ಲಕ್ಷದವರೆಗೂ ಖರ್ಚು ಮಾಡುತ್ತಾರೆ. ಇನ್ನು ಮುಂದೆ ರಾಜ್ಯಮಟ್ಟದಲ್ಲಿ ಸುಮಾರು ಇಪ್ಪತ್ತೈದು ಸಾವಿರ ಮಕ್ಕಳಿಗೆ including ಕಲ್ಯಾಣ ಕರ್ನಾಟಕ ಭಾಗದಲ್ಲೂ ಕೂಡ ಹೆಚ್ಚು ಒತ್ತು ಕೊಡುವುದಕ್ಕೆ ನಾನೂ ಕೂಡ ಪ್ರಯತ್ನಪಡುತ್ತೇನೆ. ಏಕೆಂದರೆ, ನಾವು ಇದನ್ನು ಮೊದಲಬಾರಿಗೆ ಮಾಡುವುದರಿಂದ, ಈ ಕೋಚಿಂಗ್ ಅನ್ನು ಸರ್ಕಾರದ ವತಿಯಿಂದಲೇ ಸುಮಾರು ಇಪ್ಪತ್ತೈದು ಸಾವಿರ ಮಕ್ಕಳಿಗೆ ನಮ್ಮ ಇಲಾಖೆಯಿಂದ ನಾವು ಉಚಿತವಾಗಿ ನೀಡುತ್ತಿದ್ದೇವೆ. ಇಲ್ಲವಾದರೆ ಅವರು ಮಂಗಳೂರು ಹೋಗುತ್ತಿದ್ದರು ಮತ್ತು ಬೆಂಗಳೂರಿಗೆ ಬರುತ್ತಿದ್ದರು. ಆ ಕಡೆಯ ಭಾಗದಲ್ಲಿ main District Centre ಎಲ್ಲಿ ಇರುತ್ತದೆ ಅಲ್ಲಿಗೆ ಹೋಗುತ್ತಿದ್ದರು. ಇಂತಹ ಸಾಕಷ್ಟು ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಮಾಹಿತಿಯನ್ನು ಒದಗಿಸುವಂತಹ ಪ್ರಯತ್ನವನ್ನು ಮಾಡುತ್ತೇವೆ. ಆದರೆ, ಮಾನ್ಯ ಸದಸ್ಯರು ಒಂದು ವಿಶ್ವಾಸವನ್ನು ಇಟ್ಟುಕೊಳ್ಳಲಿ. ಕರ್ನಾಟಕ ಭಾಗದಲ್ಲಿಯೇ ಕಲ್ಯಾಣ ಕರ್ನಾಟಕ ಸಹ ಇದೆ. ನಮಗೆ ಅಲ್ಲಿನ ಸಮಸ್ಯೆ ಇರುವುದು ಗೊತ್ತಿದೆ. ಅದಕ್ಕೆ ಹೆಚ್ಚು ಒತ್ತನ್ನು ಆ ಕಡೆಯ ಭಾಗಕ್ಕೆ ಕೊಡುವಂಥದ್ದನ್ನು ನಮ್ಮ ಸರ್ಕಾರದ ವತಿಯಿಂದ ಪ್ರಾಮಾಣಿಕವಾಗಿ ಬದಲಾವಣೆಯನ್ನು ತರತಕ್ಕಂತಹ, in the interest of childrens. ಮಕ್ಕಳ ಹಿತದೃಷ್ಟಿಯಿಂದ ಅವರ ವಿದ್ಯಾಭ್ಯಾಸಕ್ಕೆ ನಾವು ನೂರಕ್ಕೆ ನೂರು ಒಳ್ಳೆಯ ರೀತಿಯಲ್ಲಿ ಕೊಡುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಹೆಚ್ಚಿನ ಕಾರ್ಯಕ್ರಮಗಳನ್ನು ಆ ಕಡೆಯ ಭಾಗಕ್ಕೆ ಮತ್ತು ರಾಜ್ಯಕ್ಕೆ ಕೊಡುವಂತಹ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

**ಶ್ರೀಮತಿ ಹೇಮಲತಾ ನಾಯಕ್:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ಮಾತನಾಡುತ್ತೇನೆ.

**ಸಭಾಪತಿಯವರು:–** ಶ್ರೀಮತಿ ಹೇಮಲತಾ ನಾಯಕ್‌ರವರೆ ತಾವು ಕುಳಿತುಕೊಳ್ಳಿ. ತಾವು ಈ ರೀತಿಯ ಮೊಂಡತನ ಮಾಡಬಾರದು.

**13. ಪ್ರಕಟಣೆ**

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ: 23.07.2024ರಂದು "ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) (ಎರಡನೇ ತಿದ್ದುಪಡಿ) ವಿಧೇಯಕ, 2024" ಅನ್ನು ಹಾಗೂ ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) ವಿಧೇಯಕ, 2024' ಅನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ. ಇದಕ್ಕೆ ಸಭೆಯು ಒಪ್ಪಿರುತ್ತೆಂದು ಭಾವಿಸುತ್ತೇನೆ.

(ಮುಂದು)

(652) 23.07.2024 07.00 LL-BNS (ಸಭಾಪತಿಯವರ ಉಪಸ್ಥಿತಿ)

**14. ಅರ್ಧ ಗಂಟೆ ಕಾಲಾವಧಿ ಚರ್ಚೆ**

**ಇ) ವಿಷಯ:- ರಾಜ್ಯದ ನೇಕಾರರ ಕುರಿತು.**

- - -

**ಶ್ರೀ ಕೇಶವಪ್ರಸಾದ್.ಎಸ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ದಿನಾಂಕ: 16.07.2024ರಂದು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 233 ಅನ್ನು ಕೇಳಿದ್ದೆನು. ಆ ಪ್ರಶ್ನೆಗೆ ಒಂದು ಸವಿಸ್ತಾರ ಉತ್ತರ ನನಗೆ ಬೇಕಾಗಿದ್ದರಿಂದ, ಈ ಬಗ್ಗೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತಮ್ಮನ್ನು ಕೋರಿದ್ದು, ತಾವು ಅದಕ್ಕೆ ಕಾಲಾವಕಾಶ ನೀಡಿರುತ್ತೀರಿ. ತುಂಬಾ ಸಂತೋಷ. ಅದಕ್ಕಾಗಿ ತಮಗೆ ಧನ್ಯವಾದಗಳು. ನೇಕಾರರ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ನಾನು ಕೇಳಿರುವಂತಹ ಪ್ರಶ್ನೆಗಳಿಗೆ ನಾನು ಎಷ್ಟು ಕೇಳಿದ್ದೇನೆ ಅಷ್ಟಕ್ಕೆ ಮಾತ್ರ ಉತ್ತರ ನೀಡಿರುತ್ತಾರೆ. ಹಾಗಾಗಿ, ನನಗೆ ಅನ್ನಿಸಿದೇನೆಂದರೆ, ಇಡೀ ದೇಶದಲ್ಲಿ ಕೃಷಿಯ ನಂತರ ನೇಕಾರಿಕೆ ತುಂಬಾ ದೊಡ್ಡ ಕಸಬಾಗಿದೆ. ಹಾಗಾಗಿ, ಆಗಸ್ಟ್ 7 ನೇ ತಾರೀಖನ್ನು ರಾಷ್ಟ್ರೀಯ ಕೈಮಗ್ಗ ದಿನ ಎಂದು ರಾಷ್ಟ್ರದಲ್ಲಿ ಘೋಷಣೆ

ಮಾಡಿದ್ದೇವೆ. ಜೊತೆಗೆ, ರಾಜ್ಯದಲ್ಲಿಯೂ ಕೂಡ ನಾವು ಅದನ್ನು ಆಚರಿಸುತ್ತೇವೆ. ಹಾಗೆಯೇ, ಭಾರತಕ್ಕೆ ಈ ಬಟ್ಟೆ ತಯಾರಿಕೆಯಲ್ಲಿ ತನ್ನದೇ ಆದಂತಹ ಒಂದು ವಿಶೇಷತೆ ಇದೆ. ಮಸ್ಲಿನ್ ಬಟ್ಟೆ ತಯಾರಿಕೆಯಿಂದ ಹಿಡಿದು ನಮ್ಮ ಕರ್ನಾಟಕದ್ದು ಎಂದು ಹೇಳಬಹುದಾದರೆ, ಇಳಕಲ್ ಸೀರೆ ಇವೊತ್ತಿನ ದಿವಸ G.I. tag ಇರುವಂತಹ ಪ್ರಖ್ಯಾತ ಸೀರೆಯಾಗಿದೆ. ಹಾಗೆಯೇ ಗುಳೇದಗುಡ್ಡದ ಕಣ, ರಬಕವಿ ಬನಹಟ್ಟಿಯ ಹರಳೇ ಸೀರೆಗಳು, ಕಿನ್ನಿಗೋಳಿಯ ತಾಲಪಾಡಿಯಾ ಉಡುಪಿ ಸೀರೆಗಳು, ಮೊಳಕಾಲ್ಮೂರಿನ ಸೀರೆಗಳು, ಬೆಂಗಳೂರಿನ ಸೀರೆಗಳು, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ತನ್ನದೇ ಆದಂತಹ ಪ್ರಖ್ಯಾತಿಯನ್ನು ಹೊಂದಿರುತ್ತವೆ. ತಲಾತಲಾಂತರಗಳಿಂದ ಕುಲಕಸುಬಾಗಿ ತೆಗೆದುಕೊಂಡಿದ್ದರೂ ಸಹ, ಇದೊಂದು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನೇಕಾರಿಕೆಯನ್ನು ಜನ ಅನುಭವಿಸುತ್ತಾ ಮತ್ತು ಆಚರಿಸುತ್ತಾ ಬಂದಿದ್ದಾರೆ. ಈ ಕೈ ಮಗ್ಗದ ಅಭಿವೃದ್ಧಿಗೆ ಕರ್ನಾಟಕದಲ್ಲಿ ಅನೇಕ ಸಂಸ್ಥೆಗಳಿವೆ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ರೇಷ್ಮೆ ಮಂಡಳಿ, ಖಾದಿ ಗ್ರಾಮೋದ್ಯೋಗ ನಿಗಮ, ಕಾವೇರಿ ಕೈಮಗ್ಗ ನೇಕಾರರ ಸಮುದಾಯಗಳ ಅಭಿವೃದ್ಧಿ ನಿಗಮ, ಈ ರೀತಿ ನಾನಾ ನಿಗಮಗಳು ಮತ್ತು ಮಂಡಳಿಗಳ ಮೂಲಕ ನೇಕಾರಿಕೆಯನ್ನು ಉಳಿಸಬೇಕು, ಬೆಳೆಸಬೇಕು ಮತ್ತು ಅವರ ಬದುಕನ್ನು ಹಸನು ಮಾಡಬೇಕೆಂಬ ಒಂದು ದೀರ್ಘಕಾಲೀನ ಯೋಚನೆಯಿಂದ ಮಾಡಿರುವಂತಹ ಸಂಸ್ಥೆಗಳು. ಇದೆಲ್ಲವೂ ಚೆನ್ನಾಗಿ ನಡೆಯಬೇಕು ಅನ್ನುವಂಥದ್ದಕ್ಕೆ ಪೂರಕವಾಗಿ ಪ್ರೈವೇಟ್ ಸೆಕ್ಟರ್‌ನಿಂದ ಬಹಳ ದೊಡ್ಡ ಪ್ರಮಾಣದಲ್ಲಿ ಜನ ಸಹಾಯ ಮಾಡುತ್ತಿದ್ದಾರೆ. ನಬಾರ್ಡ್‌ನ ಸಹಯೋಗದೊಂದಿಗೆ, ಕಿನ್ನಿಗೋಳಿಯ ತಾಳಪಾಡಿನಲ್ಲಿ ನೇಕಾರಿಕೆಯನ್ನು ಪುನರುಜ್ಜೀವನಗೊಳಿಸುವಂತಹ ಕೆಲಸಕ್ಕೆ ಕೈ ಹಾಕಿದ್ದಾರೆ. ಅದರಲ್ಲಿ ನೇಕಾರಿಕೆಯನ್ನು ಕಲಿಯುವಂತಹ ಸಂದರ್ಭದಲ್ಲಿ ಅವರಿಗೆ stipend ಎಂದು ಕೊಟ್ಟು, ತದನಂತರದ ದಿನಗಳಲ್ಲಿ ನೇಕಾರಿಕೆಯನ್ನೇ ಕಸುಬನ್ನಾಗಿ ಮಾಡಿಕೊಳ್ಳುವುದಕ್ಕೆ ಪ್ರೋತ್ಸಾಹ ಕೊಡುತ್ತಿದ್ದಾರೆ. ನೇರವಾಗಿ ನಬಾರ್ಡ್ ಇದನ್ನು ಗಮನಿಸುತ್ತಿದೆ ಮತ್ತು ಅದನ್ನು ಬಹಳ ದೊಡ್ಡ ಪ್ರಮಾಣದಲ್ಲಿರುವಂತಹ ಸ್ಥಳೀಯರು ಬಹಳ ಗಮನ ಕೊಡುತ್ತಿದ್ದಾರೆ. ಹಾಗಾಗಿ, ಇದಕ್ಕೆ ಒಂದು ವಿಶೇಷವಾದಂತಹ ಒತ್ತನ್ನು ಅಲ್ಲಿರುವಂತಹ ಸಂಸ್ಥೆಗಳು ಕೂಡ ಕೊಡುತ್ತಿವೆ. ಅಲ್ಲಿ ಶ್ರೀಮತಿ ಮಮತಾ ರೈ ಅನ್ನುವಂತಹವರು ಇದಕ್ಕೆ ವಿಶೇಷವಾದಂತಹ ಪ್ರಯತ್ನವನ್ನು ಮಾಡಿದ್ದಾರೆ. ಅವರ ಜೊತೆಗೆ, ಶ್ರೀ ವಾಸುದೇವ್ ಶೆಟ್ಟಿಗಾರ್ ಮತ್ತು ಶ್ರೀ ದಿನೇಶ್

ಶೆಟ್ಟಿಗಾರ್ ಎನ್ನುವವರು ಉಡುಪಿ ಸೀರೆಗಳನ್ನು ಹರಳೇ ಸೀರೆಗಳನ್ನು ನೇಯ್ದು, ನೈಸರ್ಗಿಕ ಬಣ್ಣಗಳನ್ನು ಬಳಸುತ್ತಿರುವಂಥದ್ದಕ್ಕೆ ಇನ್ನಷ್ಟು ಮೆರಗು ಕೊಟ್ಟು, ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾರಾಟ ಆಗುವಂತಹ ಒಂದು ಪ್ರಯತ್ನಕ್ಕೆ ಕೈ ಹಾಕಿದ್ದಾರೆ. ಅದೇ ರೀತಿ, ಬೆಂಗಳೂರು ಮಹಾನಗರದಲ್ಲಿಯೂ ಕೂಡ ಶ್ರೀ ನಾಗರಾಜು ಎನ್ನುವವರು ಕೈಮಗ್ಗದ ನೇಕಾರಿಕೆಯನ್ನು ಉಸಿರಾಗಿಟ್ಟುಕೊಂಡು ಯುವ ಜನರಿಗೆ ಕೈಗಾರಿಕೆಯನ್ನು ಕುಲಕಸುಬಿನ ಜೊತೆಗೆ, ಆಸಕ್ತಿ ಉಳ್ಳವರಿಗೂ ಕೂಡ ನೇಕಾರಿಕೆಯನ್ನು ಕಲಿಸಿಕೊಡಬೇಕು ಎನ್ನುವಂತಹ ಪ್ರಯತ್ನದಲ್ಲಿ ಮುಂದಿದ್ದಾರೆ. ಅದೇ ರೀತಿ, ನೇಕಾರಿಕೆಯಲ್ಲಿ ಇನ್ನಷ್ಟು ವಿಶೇಷತೆಗಳನ್ನು ತಂದವರು ಇದ್ದಾರೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತಿ ಹೊಂದಿರುವಂತಹವರನ್ನು, ರಾಷ್ಟ್ರಧ್ವಜ ಮತ್ತು ಅಶೋಕ ಚಕ್ರವನ್ನು ನೇಯ್ದು ಬಹಳ ಕಡೆ ಇದು ಪ್ರದರ್ಶನಗೊಳ್ಳುವಂತಹ ರೀತಿಯಲ್ಲಿಯೂ ಕೂಡ ಮಾಡಿದ್ದಾರೆ. ಅದರಲ್ಲಿಯೂ ವಿಶೇಷವಾಗಿ ಬೆಂಗಳೂರಿನ ಶ್ರೀ ಎ.ಪಿ. ನಾಗರಾಜುರವರು ಹಾಗೆಯೇ ಬೆಂಗಳೂರಿನ ಹನುಮಂತ ಶೆಟ್ಟಿ ಎನ್ನುವವರು ಈ ಪ್ರಯತ್ನದಲ್ಲಿ ಸಾಕಷ್ಟು ಯಶಸ್ವಿ ಕೂಡ ಆಗಿದ್ದಾರೆ. ಅದೇ ರೀತಿ, ಟೆಕ್ಸ್‌ಟೈಲ್ ಇಂಜಿನಿಯರಿಂಗ್ ಮಾಡಿಕೊಂಡಂತಹವರು ಕೂಡ ಈ ಒಂದು ಪ್ರಯತ್ನವನ್ನು ಮುಂದುವರೆಸಿರುತ್ತಾರೆ. ಈ ಬಟ್ಟೆಯನ್ನು ಬೇರೆ ಬೇರೆ ರೀತಿಯಲ್ಲಿ ಹೇಗೆ ಬಳಸಬಹುದು, ಇದಕ್ಕೆ ಪುಸ್ತಕದ ಕವರ್ ಆಗಿ, ಹೊಸ ಹೊಸ ವಿನ್ಯಾಸಗಳನ್ನು ಪುರುಷರ ಉಡುಗೆಯಲ್ಲಿ ಮತ್ತು ಮಹಿಳೆಯರ ಉಡುಗೆಯಲ್ಲಿ ಹೇಗೆ ವಿನ್ಯಾಸಗೊಳಸಿಬಹುದು ಎನ್ನುವಂತಹ ನಿಟ್ಟಿನಲ್ಲಿ ಪ್ರಯತ್ನ ಮಾಡಿದ್ದಾರೆ. ಹಾಗೆಯೇ, ಇವೊತ್ತಿನ ದಿವಸ ರ್‍ಯಾಂಪ್ ವಾಕ್ ಎಂದು ಎಲ್ಲಾ ಕಡೆ ಏನು ಮಾಡುತ್ತೇವೆ, ಅಲ್ಲಿ ರೂಪದರ್ಶಿಗಳು ಪ್ರದರ್ಶನಗೊಳ್ಳುವುದರಲ್ಲಿಯೂ ಕೂಡ ಕೈಮಗ್ಗದ ಸೀರೆಗಳಿಗೆ ಬಹಳ ಬೇಡಿಕೆ ಬಂದಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ಬಟ್ಟೆಗಳಿಗೆ ದೊಡ್ಡ ರೀತಿಯ ಬೇಡಿಕೆ ಬಂದು, ರೂಪದರ್ಶಿಗಳು ಕೂಡ ಅದನ್ನು ಧರಿಸುತ್ತಾ, ಹೊಸ ಹೊಸ ವಿನ್ಯಾಸದಲ್ಲಿ ಅದನ್ನು ಬಳಸುತ್ತಿದ್ದಾರೆ. ಹಾಗಾಗಿ, ಕೈಮಗ್ಗದ ನೇಕಾರಿಕೆಯ ಪುನಶ್ಚೇತನಕ್ಕೆ ಇದು ಸರಿಯಾದಂತಹ ಕಾಲ ಎಂದು ನಾನು ಹೇಳುತ್ತೇನೆ. ಅದೇ ರೀತಿ, ರಾಷ್ಟ್ರೀಯ ಮಟ್ಟದಲ್ಲಿಯೂ ಕೂಡ ಕೇಂದ್ರ ಸರ್ಕಾರ ಇದಕ್ಕೆ ಬಹಳ ದೊಡ್ಡದಾಗಿ ಗಮನ ಕೊಡುತ್ತಿದೆ. ಈ ಟೆಕ್ಸ್‌ಟೈಲ್ ಇಂಡಸ್ಟ್ರಿಗಳಿಗೆ ಟೆಕ್ಸ್‌ಟೈಲ್ ಪಾರ್ಕ್ ಎನ್ನುವಂಥದ್ದರಿಂದ ಹಿಡಿದು ಇದನ್ನು ಇಡೀ ದೇಶದಲ್ಲಿ ಒಂದು ಗಣನೀಯವಾದಂತಹ

ಉದ್ಯಮವನ್ನಾಗಿ ಆಂತರಿಕ ಬಳಕೆಗೆ ಮತ್ತು ಅಂತರರಾಷ್ಟ್ರೀಯವಾಗಿ ಇದನ್ನು export ಮಾಡುವಂತಹ ದೃಷ್ಟಿಯಿಂದ ಇದಕ್ಕೆ ಹೆಚ್ಚು ಗಮನ ಕೊಡುತ್ತಿದ್ದಾರೆ. ಇದಕ್ಕೆ ಪೂರಕವಾಗಿ ನಮ್ಮ ದೇಶದ ಪ್ರಧಾನಮಂತ್ರಿಗಳಾದಂತಹ ಶ್ರೀ ನರೇಂದ್ರ ಮೋದಿಯವರು ಖಾದಿ ಗ್ರಾಮೋದ್ಯೋಗದಲ್ಲಿ ಮಹಾತ್ಮ ಗಾಂಧೀಜಿಯವರ ಜನ್ಮದಿನದಂದು ಎಲ್ಲರೂ ಖಾದಿ ಬಟ್ಟೆಯನ್ನು ಧರಿಸಬೇಕೆಂದು ಕರೆ ನೀಡಿರುತ್ತಾರೆ. ಇದರಿಂದಾಗಿ, ಕಳೆದ ವರ್ಷ ನಮ್ಮ ಖಾದಿ ಗ್ರಾಮೋದ್ಯೋಗವು ಕೂಡ ಸುಮಾರು 50 ಕೋಟಿ ರೂಪಾಯಿಗಿಂತಲೂ ಹೆಚ್ಚು ವ್ಯವಹಾರವನ್ನು ಮಾಡಿದೆ. ಇದೆಲ್ಲ ಪೂರಕ ವಾತಾವರಣದ ಜೊತೆಗೆ, ನಮ್ಮ ದೇಶದಲ್ಲಿ ಪವರ್ ಲೂಮ್ ಇಂಡಸ್ಟ್ರಿ ಕೂಡ ಇದೆ. ಈ ಪವರ್ ಲೂಮ್ ಇಂಡಸ್ಟ್ರಿ ಕೂಡ ಈ ದೇಶದ ಕಾಂಪಿಟೇಷನ್ ನಲ್ಲಿ ತೊಡಗುತ್ತಾ, ಇಡೀ ದೇಶದ ವಸ್ತ್ರದ ವಿನ್ಯಾಸದಲ್ಲಿ ಮತ್ತು ಉತ್ಪಾದನೆಯಲ್ಲಿ ತನ್ನ ಛಾಪನ್ನು ಮೂಡಿಸಿದೆ. ಅದೇ ರೀತಿ ಬೇರೆ ಬೇರೆ ದೇಶಗಳು ಕೂಡ ನಮಗೆ ಕಾಂಪಿಟೇಷನ್‌ನಲ್ಲಿ ಇವೆ. ಅವುಗಳೆಂದರೆ, ಬಾಂಗ್ಲಾದೇಶ ಅಥವಾ ವಿಯೆಟ್ನಾಂ ಇರಬಹುದು ಅಂದರೆ, ಸಣ್ಣಪುಟ್ಟ ದೇಶಗಳು ಎಲ್ಲಿ ವಿಫಲವಾದಂತಹ ಕಾರ್ಮಿಕರು ಸಿಗುತ್ತಿದೆಯೋ ಆ ದೇಶಗಳು ಈ ಒಂದು ಸುವಿಧವನ್ನು ನಮಗಿಂತಲೂ ಚೆನ್ನಾಗಿ ಬಳಸಿಕೊಳ್ಳಬೇಕೆಂದು ಯೋಚನೆ ಮಾಡುತ್ತಿದ್ದಾರೆ. ಹಾಗಾಗಿ, ನಮಗೆ ಅದೊಂದು ಚಾಲೆಂಜ್ ಆಗಿದೆ. ಈ ಒಂದು ಚಾಲೆಂಜಿಂಗ್ ಸಂದರ್ಭದಲ್ಲಿ ನಮ್ಮ ರಾಜ್ಯ ಸರ್ಕಾರ ನಮಗೆ ಇರುವಂತಹ ಇಷ್ಟೆಲ್ಲಾ ಅನುಕೂಲತೆಗಳನ್ನು ಹೇಗೆ ಬಳಸಿಕೊಳ್ಳುತ್ತಿದೆ ಎನ್ನುವಂಥದ್ದು ಅತ್ಯಂತ ಪ್ರಮುಖವಾದಂತಹ ಸಂಗತಿಯಾಗಿದೆ. ಚುನಾವಣಾ ಸಂದರ್ಭದಲ್ಲಿ ವಿಶೇಷವಾಗಿ ಎಲ್ಲಾ ಸಮುದಾಯಗಳಿಗೂ ಗಮನಕೊಡುತ್ತೇವೆ. ಹಾಗೆಯೇ ನೇಕಾರರ ಸಮುದಾಯಕ್ಕೆ ವಿಶೇಷವಾದಂತಹ ಗಮನವನ್ನು ಕೊಡುವಂಥ ಪ್ರಯತ್ನವನ್ನು ಮಾಡಿದ್ದರು. ಆಗ ಶ್ರೀ ಡಿ.ಕೆ ಶಿವಕುಮಾರ್‌ರವರು ಬನಹಟ್ಟಿಯಲ್ಲಿ ಒಂದು ಸಭೆ ನಡೆಸುತ್ತಾರೆ. ಆ ಸಭೆಯಲ್ಲಿ ನೇಕಾರರ ಸಮಸ್ಯೆಗಳನ್ನು ಆಮೂಲಾಗ್ರವಾಗಿ ಆಲಿಸುತ್ತಾ, ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣವೇ ತಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡುವಂಥ ನಿಟ್ಟಿನಲ್ಲಿ ತಕ್ಷಣ ಕ್ರಮ ಕೈಗೊಳ್ಳುತ್ತೇವೆಂದು ಹೇಳಿರುತ್ತಾರೆ. ಈ ಸಂದರ್ಭದಲ್ಲಿ ಬಾಗಲಕೋಟೆ ನಗರದಲ್ಲಿ ಸಹಕಾರಿ ಬ್ಯಾಂಕ್ ಆವರಣದಲ್ಲಿ ರಾತ್ರಿ 12 ಗಂಟೆಯವರೆಗೆ ಸಭೆ ನಡೆಯುತ್ತದೆ. ಆ ಸಭೆಯಲ್ಲಿ ಕೂಲಂಕಷವಾಗಿ ಎಲ್ಲಾ ಸಮಸ್ಯೆಗಳನ್ನು ಆಲಿಸಿದಂತಹ ಮಾನ್ಯ ಡಿ.ಕೆ. ಶಿವಕುಮಾರ್‌ರವರು ಈಗ ಮಾನ್ಯ ಉಪ ಮುಖ್ಯಮಂತ್ರಿಗಳಾಗಿರುವಂಥವರು ಸರ್ಕಾರ ಅಧಿಕಾರಕ್ಕೆ

ಬಂದ ತಕ್ಷಣ ಸಮಗ್ರ ಯೋಜನೆಯನ್ನು ಮಾಡಿ, ಕಾರ್ಯಗತಗೊಳಿಸುತ್ತೇವೆಂದು ಭರವಸೆಯನ್ನು ಸಹ ಕೊಟ್ಟಿದ್ದರು. **(ಗೊಂದಲ)** ಮಾನ್ಯ ಮುಖ್ಯಮಂತ್ರಿಗಳು ಪ್ರಮಾಣವಚನ ಸ್ವೀಕರಿಸಿ ಬಂದ ನಂತರ ನೇಕಾರರು ಅವರಿಗೆ ಒಂದು ಅಭಿನಂದನಾ ಸಮಾರಂಭವನ್ನು ಇಟ್ಟುಕೊಂಡಿದ್ದರು. ಅಲ್ಲಿ ಮಾನ್ಯ ಮುಖ್ಯಮಂತ್ರಿಗಳು ನೇಕಾರರ ಸಮಸ್ಯೆಯನ್ನು ಆಲಿಸುತ್ತಾರೆ. ಆ ಸಂದರ್ಭದಲ್ಲಿ ನೇಕಾರರು 10 ಸಮಸ್ಯೆಯಗಳ ಪಟ್ಟಿಯನ್ನು ಅವರ ಮುಂದಿಡುತ್ತಾರೆ. ಅದರಲ್ಲಿ ಒಂದು ಸಮಸ್ಯೆಗೆ ಮಾತ್ರ ಮಾನ್ಯ ಮುಖ್ಯಮಂತ್ರಿಗಳು ಸ್ಪಂದಿಸುತ್ತಾರೆ. ಇನ್ನುಳಿದ ಸಮಸ್ಯೆಗಳನ್ನು ಗಮನಿಸುತ್ತೇನೆ/ನೋಡುತ್ತೇನೆ ಎಂದು ಹೇಳಿರುತ್ತಾರೆ. ಸಮಸ್ಯೆಗಳ ಪಟ್ಟಿಯಲ್ಲಿ ಏನಿದೆ ಎಂದರೆ, 10 ಹೆಚ್.ಪಿ. ವಿದ್ಯುತ್ ಬಳಸುವಂತಹವರಿಗೆ ರಿಯಾಯಿತಿ ಕೊಡುತ್ತೇವೆಂದು ಹೇಳಿದ್ದು, ಅದನ್ನು 20 ಹೆಚ್.ಪಿ.ವರೆಗೆ ವಿಸ್ತರಣೆ ಮಾಡಬೇಕು ಅನ್ನುವಂಥಹ ಬೇಡಿಕೆ ಇತ್ತು. ಅದಕ್ಕೆ ಸರ್ಕಾರ ಇನ್ನು ಒಗೊಟ್ಟಿಲ್ಲ ಮತ್ತು ಸಮಸ್ಯೆಗಳ ಪರಿಹಾರಕ್ಕೆ ಕೈ ಹಾಕಿರುವುದಿಲ್ಲ. ಅದೇ ರೀತಿ ಕನಿಷ್ಟ ಚಾರ್ಜ್ ಏನಿತ್ತೋ ಅದನ್ನು ಹೆಚ್ಚಳ ಮಾಡಿದ್ದರು. ಈ ಕನಿಷ್ಠ ಚಾರ್ಜ್ ಅನ್ನು ಹೆಚ್ಚಳ ಮಾಡಬಾರದು, ಕಡಿಮೆ ಮಾಡಬೇಕು ಅನ್ನುವಂಥದ್ದು ಇನ್ನೊಂದು ಬೇಡಿಕೆಯಾಗಿತ್ತು.

(ಮುಂದು)

(653) 23-07-2024 (7.10) ವೈಎಲ್-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೇಶವ ಪ್ರಸಾದ್.ಎಸ್ (ಮುಂದು):-**

ನೇಕಾರರ ಉತ್ಪನ್ನಗಳಿಗೆ ನೇರ ಮಾರುಕಟ್ಟೆ ಸೌಲಭ್ಯವನ್ನು ಒದಗಿಸಬೇಕೆನ್ನುವಂಥದ್ದು ಸಹ ಆಗಿತ್ತು. ನೇಕಾರ ಸಮ್ಮಾನ್ ಯೋಜನೆಯನ್ನು ತುಂಬಾ ಚೆನ್ನಾಗಿ ಅನುಷ್ಠಾನಕ್ಕೆ ತರಬೇಕೆನ್ನುವುದು ಮತ್ತೊಂದು ಬೇಡಿಕೆಯಾಗಿತ್ತು. ಶೂನ್ಯ ದರದ ಬಡ್ಡಿ ಸಾಲವನ್ನು ಸಮರ್ಪಕವಾಗಿ ವಿತರಣೆಯಾಗಬೇಕು ಮತ್ತು ಜಾರಿ ಮಾಡಬೇಕೆನ್ನುವಂಥದ್ದಾಗಿತ್ತು. ಹಾಗೆಯೇ ಸುಮಾರು 42 ಜನ ಆತ್ಮಹತ್ಯೆಗೀಡಾಗಿದ್ದ ನೇಕಾರರಲ್ಲಿ ಸುಮಾರು 25 ಜನರಿಗೆ ಪರಿಹಾರ ಸೂಚಿಸಲಾಗಿದೆ. ಉಳಿದವರಿಗೆ ಕಾರಣ ಕೊಟ್ಟಿದ್ದಾರೆ. ಆದರೆ, ಇವರೆಲ್ಲರಿಗೂ ಆದ್ಯತೆ ಮೇರೆಗೆ ಪರಿಹಾರ ಸಿಗುವ ರೀತಿ ಕೆಲಸ ಮಾಡಬೇಕು ಎನ್ನುವಂಥದ್ದಾಗಿದೆ. ಮುಂದುವರೆದಂತೆ ನಾನು ಹೇಳುವುದೇನೆಂದರೆ, ಇಷ್ಟೆಲ್ಲಾ ಸಮಸ್ಯೆಯನ್ನು

ಅರಿತಿರುವಂಥ ಸರ್ಕಾರ,... ಚುಕ್ಕೆ ರಹಿತ ಪ್ರಶ್ನೆಯಲ್ಲಿ "ನಮ್ಮ ಹತ್ತಿರ ಏನೇನು ಇದೆ" ಎನ್ನುವಂಥ ಪ್ರಶ್ನೆಗೆ ವಿವರ ಕೊಟ್ಟಿದ್ದಾರೆ. ಸಮಯದ ಅಭಾವ ಇರುವ ಕಾರಣ ವಿವರಗಳನ್ನು ಉಲ್ಲೇಖಿಸಲು ಹೋಗುವುದಿಲ್ಲ. ಇವೆಲ್ಲವೂ ಕೂಡಾ ಇದೆ ಎನ್ನುವುದು ಇನ್ನೊಂದು ಸಂತೋಷದಾಯಕ ಸಂಗತಿಯಾಗಿದೆ. ಇದಿಷ್ಟು ಸಂಗತಿಗಳು ಇದ್ದಾಗ್ಯೂ ನೇಕಾರರು, ಅದರಲ್ಲಿಯೂ ವಿಶೇಷವಾಗಿ ಕೈಮಗ್ಗದ ನೇಕಾರರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದೆ. ಪವರ್ ಲೂಮ್ ಮಾಡುವಂಥವರ ಸಮಸ್ಯೆ ನಿರಂತರವಾಗಿದೆ. ಈ ಕ್ಷೇತ್ರದಲ್ಲಿನ ಜನ "ನಮ್ಮ ಜೀವನಕ್ಕೆ, ನಮ್ಮ ತಲೆಮಾರಿಗೆ" ಈ ಕಸುಬು ಸಾಕು, ಇನ್ನು ಮುಂದೆ ಬೇಕಾಗಿಲ್ಲ. ನಮ್ಮ ಮಕ್ಕಳು ಈ ರೀತಿ ಈ ಕಸುಬನ್ನು ಅವಲಂಬಿಸಿ ಬೆತ್ತಲೆಯಾಗುವಂಥ ಅವಶ್ಯಕತೆ ಇಲ್ಲವೆನ್ನುವ ರೀತಿಯಲ್ಲಿ ಹೊರಗೆ ಹೋಗುತ್ತಿದ್ದಾರೆ. ಇದಕ್ಕೆ ಕಾರಣವೇನು ಎಂಬುದಕ್ಕೆ ಸರ್ಕಾರ introspection ಮಾಡಬೇಕಾಗಿದೆ.

ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಯಾವಾಗ ಮೊದಲಿನ ಸಭೆ ಸೇರಿಸಿದರು, ಆವೊತ್ತಿನಿಂದ ಇಲ್ಲಿಯವರೆಗೂ ನಿರಂತರವಾಗಿ ಇದಕ್ಕೆ ಒಂದು ಕಮಿಟಿ ರಚನೆ ಮಾಡಬೇಕಾಗಿತ್ತು. ಸಮಸ್ಯೆಯ ಕುರಿತು ಆಮೂಲಾಗ್ರವಾಗಿ ಅಧ್ಯಯನ ಮಾಡಲಿಕ್ಕೆ ಅವಕಾಶ ಕೊಟ್ಟು, ಅದಕ್ಕೆ ನಮ್ಮಿಂದ ಯಾವ ಯಾವ ಪರಿಹಾರಗಳು ಇವೆ ಮತ್ತು ನಾನು ಹೇಳಿದಂಥ ವಿವಿಧ ನಿಗಮಗಳು, ಮಂಡಳಿಗಳಿಗೆ ಪೂರಕವಾದ ಅನುದಾನವನ್ನು ಸರ್ಕಾರ ಹೇಗೆ ಕೊಡಬೇಕು; ಏನು ಕೊಡಬೇಕು ಎಂಬುದಕ್ಕೆ ನಿರಂತರವಾಗಿ ಚರ್ಚೆಯಾಗಬೇಕಾಗಿತ್ತು. ಹಾಗಾಗಿ, ನಿರಂತರ ಕಾರ್ಯಕ್ರಮಗಳ ಕೊರತೆ ಇದೆ ಎಂಬುದನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ.

ಹಾಗೆಯೇ ಪುನರಾವಲೋಕನ ಮಾಡಿಕೊಳ್ಳಬೇಕು. ಯಾವಾಗಲೂ ಕೂಡಾ ಎಷ್ಟು ದಿವಸಗಳಿಗೊಮ್ಮೆ ಸಭೆ ಸೇರಬೇಕು, progress ಏನಾಗಿದೆ, ಟಾರ್ಗೆಟ್ ಏನು ಫಿಕ್ಸ್ ಮಾಡಿದ್ದೇವೆ ಎಂಬುದರ ಬಗ್ಗೆ review ಆಗಬೇಕು. ಹಾಗೆಯೇ ಕರ್ನಾಟಕದಲ್ಲಿ ಕೈಮಗ್ಗ ನೇಕಾರರ ಸಂಖ್ಯೆ ಎಷ್ಟಿದೆ; ಪವರ್ ಲೂಮ್ ನೇಕಾರರ ಸಂಖ್ಯೆ ಎಷ್ಟಿದೆ ಎಂಬುದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ರಾಜ್ಯ ಸರ್ಕಾರ ಕೊಟ್ಟಿರುವ ನೇಕಾರರ ಸಂಖ್ಯೆಗೂ ಮತ್ತು ರಾಷ್ಟ್ರೀಯ ಮಟ್ಟದ ನೇಕಾರರ ಸಂಖ್ಯೆಗೂ ಅಜಗಜಾಂತರ ವ್ಯತ್ಯಾಸ ಇದೆ. ಇಷ್ಟೊಂದು ವ್ಯತ್ಯಾಸ ಏತಕ್ಕೆ? ಕೇಂದ್ರ ಸರ್ಕಾರದ benefit ಅನ್ನು ತೆಗೆದುಕೊಳ್ಳುವವರ ಸಂಖ್ಯೆ ಜಾಸ್ತಿ ಇದ್ದಾಗ, ರಾಜ್ಯ ಸರ್ಕಾರದ roll ನಲ್ಲಿ ಇಷ್ಟು ಮಟ್ಟಿಗೆ ಜನಸಂಖ್ಯೆ ಕಡಿಮೆಯಾಗಲು ಕಾರಣವೇನು ಎನ್ನುವುದು ನನ್ನ ಪ್ರಶ್ನೆಯಾಗಿದೆ. ಭಾರತ ಸರ್ಕಾರದಿಂದ ಬೆಂಗಳೂರಿನಲ್ಲಿರುವವರಿಗೆ 47,883 ಪೆಹಚಾನ್ ಕಾರ್ಡ್‌ಗಳನ್ನು ವಿತರಿಸಲಾಗಿದೆ ಎಂದು ಮತ್ತು

ವಿದ್ಯುತ್ ಮಗ್ಗ ಉಳ್ಳವರಿಗೆ ಸುಮಾರು 1,17,099 ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಲಾಗಿದೆ ಎಂದು ಮಾಹಿತಿ ಇದೆ. ಆದರೆ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿ ಸುಮಾರು 3,757 ನೇಕಾರರು ನೋಂದಾಯಿಸಿಕೊಂಡಿದ್ದಾರೆ. ಏತಕ್ಕೆ ಇಷ್ಟು ವ್ಯತ್ಯಾಸಗಳು ಆಗಿವೆ? ಅಂದರೆ ಎಲ್ಲಿಯೋ ಒಂದು ಕಡೆ ನಾವು ಕೊಡುವಂಥ ಅಂಕಿಸಂಖ್ಯೆಗಳು ವಸ್ತುನಿಷ್ಠವಾದಂಥ ಗ್ರೌಂಡ್ ರಿಯಾಲಿಟಿಯೊಂದಿಗೆ ತಾಳೆಯಾಗುತ್ತಿಲ್ಲ ಏತಕ್ಕೆ? ಇದರ ಬಗ್ಗೆ ಸರ್ಕಾರ ತೀವ್ರವಾದಂಥ ಗಮನ ಕೊಡಬೇಕಾಗಿದೆ.

ಹಾಗೆಯೇ ಈ ಎಲ್ಲಾ ಎನ್.ಜಿ.ಓ. ಗಳು, ಇತರೆ ಸಂಘ-ಸಂಸ್ಥೆಗಳು, ವ್ಯಕ್ತಿಗಳು ಇಷ್ಟೊಂದು ಕೈಮಗ್ಗದ ಸೀರೆಯನ್ನು ಪ್ರಮೋಟ್ ಮಾಡಬೇಕು, ನೇಕಾರರ ಸಮಸ್ಯೆಯನ್ನು ಒಂದು ಹಳಿಗೆ ತರಬೇಕು, ನೇಕಾರಿಕೆಯನ್ನು ಒಂದು ವೃತ್ತಿಯ ಜೊತೆಗೆ ನಮ್ಮ ಸಾಂಸ್ಕೃತಿಕ ರಾಯಭಾರತನವನ್ನು ಮುಂದುವರೆಸಬೇಕೆಂದು ಇದ್ದಾಗ ಇವರನ್ನು ಕೂಡಾ ಈ ಕಮಿಟಿಯಲ್ಲಿ ಸೇರಿಸುತ್ತಾ, ಏನು ಮಾಡಬಹುದು, ಹೇಗೆ ಮಾಡಬಹುದು ಎನ್ನುವಂಥ ಯೋಚನೆ ಸರ್ಕಾರದ ಮುಂದೆ ಏತಕ್ಕೆ ಬರಲಿಲ್ಲ? ಹಾಗಾಗಿ, ಇವತ್ತಿನ technology driven ಎನ್ನುವಂಥದು ಏನಿದೆ, ಅದರ App ಗಳಿದ್ದು, ಎಲ್ಲಾ ಮಾರ್ಕೆಟಿಂಗ್ throughout India and World ಆಗುತ್ತದೆ. ಇದನ್ನು ಆಧರಿಸಿ ಅದೇ ನೇಕಾರಿಕೆ ವೃತ್ತಿಯನ್ನು ಅವಲಂಬಿಸಿ ಜೀವನ ಮಾಡುತ್ತಿರುವವರ ಬದುಕನ್ನು ಸರಿ ಮಾಡಲಿಕ್ಕೆ ಏತಕ್ಕೆ ಗಮನಕೊಡಲಿಲ್ಲ? Road mapping ಅನ್ನು ಸರ್ಕಾರ ಏತಕ್ಕೆ ಮಾಡಲಿಲ್ಲ ಎನ್ನುವುದಕ್ಕೆ ಪೂರ್ಣವಾದ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಆಗ್ರಹಿಸುತ್ತೇನೆ.

**ಶ್ರೀ ಶಿವಾನಂದ ಪಾಟೀಲ್ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯ, ಸಹಕಾರ ಇಲಾಖೆಯಿಂದ ಕೃಷಿ ಮಾರುಕಟ್ಟೆ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ಚುಕ್ಕೆ ಗುರುತಿನ ಪ್ರಶ್ನೆ ಅಡಿ 07 ಪ್ರಶ್ನೆಗಳನ್ನು ಕೇಳಿದ್ದು, ಆ 07 ಪ್ರಶ್ನೆಗಳಿಗೂ ನಾನು ಉತ್ತರ ಒದಗಿಸಿದ್ದೇನೆ. ಆದಾಗ್ಯೂ ಕೂಡಾ ತಮ್ಮ ನೈಪುಣ್ಯತೆಯಿಂದ ಅರ್ಧ ಗಂಟೆ ಕಾಲಾವಧಿ ಅಡಿ ಚರ್ಚಿಸಲು ಅವಕಾಶ ಕೇಳಿದ್ದೀರಿ. ಅದಕ್ಕೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಆ ಅರ್ಧ ತಾಸಿನಲ್ಲಿ ಕೂಡಾ ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. I don't dispute over those issues. ಮಾನ್ಯ ಸದಸ್ಯರು ಸ್ವತಃ ನೇಕಾರರಾಗಿದ್ದು, ನನಗಿಂತಲೂ ಅವರಿಗೆ ಜಾಸ್ತಿ ಅನುಭವ ಇದೆ. ಈ ವಿಚಾರವಾಗಿ ಮಾನ್ಯ ಸದಸ್ಯರ ಸಲಹೆಯನ್ನು ಕೂಡಾ ಆಮೇಲೆ ತೆಗೆದುಕೊಳ್ಳುತ್ತೇನೆ, ಅದರಲ್ಲಿ ಎರಡನೇ ಮಾತಿಲ್ಲ.

**ಸಭಾಪತಿಯವರು:–** ಮಾನ್ಯ ಸಚಿವರೇ, ಹಾಗಾದರೆ, ಮಾನ್ಯ ಸದಸ್ಯರಿಗೆ ತಮ್ಮ ಸಲಹೆಯನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಿ ಅಲ್ಲಿಗೆ ತಮ್ಮ ಮಾತನ್ನು ಮುಗಿಸಿಬಿಡಿ.

**ಶ್ರೀ ಶಿವಾನಂದ ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ರಾಮಕೃಷ್ಣ ಹೆಗಡೆಯವರಿಗೆ ನಾವು ಕೃತಜ್ಞತೆಯನ್ನು ಸಲ್ಲಿಸಬೇಕು. ಏಕೆಂದರೆ, ನೇಕಾರರ ಬದುಕನ್ನು ಕಟ್ಟಿಸಿಕೊಡುವಂಥ ಪ್ರಯತ್ನವನ್ನು ಅವರು ಮಾಡಿದ್ದರು. ಆವೊತ್ತಿನಿಂದ ಇವತ್ತಿನವರೆಗೂ ಅವರ ಬದುಕು ಬಹಳಷ್ಟು ಕ್ಷೀಣಿಸುತ್ತಿದೆ. ನೇಕಾರರು ಎಷ್ಟು migrate ಆಗಿದ್ದಾರೆ ಎಂಬುದರ ಕುರಿತು ನನ್ನ ಬಳಿ census figures ಇದೆ, ಈಗಾಗಲೇ ಮಾನ್ಯ ಸದಸ್ಯರು ಹೇಳಿದ್ದಾರೆ. 1987 ರಲ್ಲಿ ಸುಮಾರು 26,000 ಕೈಮಗ್ಗ ನೇಕಾರರು ಇದ್ದರು. ಆದರೆ, ಈಗ ಕೇವಲ 3,757 ನೇಕಾರರಿದ್ದಾರೆ. ಇಷ್ಟು ಜನ ನೇಕಾರಿಕೆಯನ್ನು ಬಿಡಬೇಕಾದರೆ ಅವರಿಗೆ ಏನು ಕಷ್ಟ ಎಂಬುದು ತಮಗೂ ಕೂಡಾ ಗೊತ್ತಿದೆ. ಅವರು ಒಂದು ಸೀರೆಯನ್ನು ನೇಯ್ದರೆ ಅವರಿಗೆ ಸಿಗುವಂಥ ಹಣ ಕೇವಲ ರೂ.200 ರಿಂದ ರೂ.300 ಮಾತ್ರ. MGNREG ನಲ್ಲಿ ಅದಕ್ಕಿಂತ ಜಾಸ್ತಿ ಸಿಗುತ್ತದೆ. ಆ ಒಂದು migration ಆಗುವುದನ್ನು ತಡೆಯಬೇಕಾದರೆ, ಸರ್ಕಾರದ ಯೋಜನೆಗಳು ಕೂಡಾ ಪೂರಕವಾಗಿರಬೇಕು. ಮಾನ್ಯ ಸಚಿವರಾದ ಶ್ರೀ ಮಧು ಬಂಗಾರಪ್ಪನವರು ಸದನದಲ್ಲಿಲ್ಲ, ಅವರು ಇದ್ದಿದ್ದರೆ ಚೆನ್ನಾಗಿತ್ತು. ಇವತ್ತು ವಿದ್ಯಾ ವಿಕಾಸ ಯೋಜನೆ ಅಡಿ ಇಡೀ ರಾಜ್ಯದ order ಅನ್ನು through Karnataka Handloom Development Corporation (KHDC) ಇವರಿಗೆ ಕೊಡಿಸಿದ್ದೇವೆ. ಒಟ್ಟಾರೆಯಾಗಿ ಅವೆಲ್ಲವೂ ಮುಚ್ಚಿ ಹೋಗುತ್ತಿದೆ. ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದಾಗ ನೇಕಾರರಿಗೆ ಆರ್ಡರ್ ನೀಡಿದರೆ, ನೇಕಾರರು ಕೇಂದ್ರೀಯ ಭಂಡಾರ ಮತ್ತು NCCF (National Cooperative Consumer's Federation) ಗೆ ಆರ್ಡರ್ ತೆಗೆದುಕೊಂಡು, ನೇಕಾರರಿಗೆ ಯಾವುದೋ ಮಿಲ್‌ನವರು inferior quality material ಅನ್ನು supply ಕೊಟ್ಟ ಕಾರಣ ಅದು ಕೂಡಾ ಇವತ್ತು ಒಂದು ಸಮಸ್ಯೆಯಾಗಿ ಉದ್ಭವಿಸಿದೆ. ಈ ಹಿಂದೆ ಏನು ಶೇಕಡಾ 100 ರಷ್ಟು ಆರ್ಡರ್ ಸಿಗುತ್ತಿತ್ತು, ಅದರಲ್ಲಿ ಕೊನೆಪಕ್ಷ ಶೇಕಡಾ 25 ರಷ್ಟು ಆರ್ಡರ್ ಸಿಗುತ್ತಿಲ್ಲ. ಕೇವಲ ಕಲ್ಯಾಣ ಕರ್ನಾಟಕಕ್ಕೆ ಮಾತ್ರ ವಿದ್ಯಾ ವಿಕಾಸ ಯೋಜನೆಯಡಿ ಬಟ್ಟೆಯನ್ನು ನಾವು ಕೊಡಿಸುತ್ತಿದ್ದೇವೆ. ಅದನ್ನು ಹೊರತುಪಡಿಸಿ private ನಲ್ಲಿ geo tag ಇರುವವರಿದ್ದಾರೆ, ಇಳಕಲ್ ಸೀರೆ, ಉಡುಪಿ ಕಡೆಯ ಸೀರೆ ಈ ರೀತಿಯಾಗಿ ಮಾನ್ಯ ಸದಸ್ಯರು ಏನು mention ಮಾಡಿದ್ದಾರೆ, ಇವೆಲ್ಲವೂ ಈ ಹಿಂದೆ ಶೋ ರೂಮ್‌ನಲ್ಲಿ ಮಾರಾಟ ಮಾಡುವಂಥ ವ್ಯವಸ್ಥೆ ಇತ್ತು. ಆದರೆ, ಈಗ ಆ ಶೋ ರೂಮ್‌ಗಳೆಲ್ಲವೂ

ಬಂದ್ ಆಗಿದೆ. ಜೊತೆಗೆ KHDCL ನಲ್ಲಿದ್ದ ಸಿಬ್ಬಂದಿ ಎಲ್ಲರೂ ಪಾನೀಯ ನಿಗಮಕ್ಕೆ ಹೋಗಿದ್ದಾರೆ. 5 ಮಂದಿಯನ್ನು ವಾಪಸ್ ತೆಗೆದುಕೊಳ್ಳಲು ಕಷ್ಟಪಡುತ್ತಿದ್ದೇವೆ. ಮಾನ್ಯ ಸದಸ್ಯರು 10,... ಚುನಾವಣಾ ಪೂರ್ವದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಘೋಷಣೆ ಮಾಡಿದಂತೆ ಉಚಿತ ವಿದ್ಯುತ್ ಕೊಡುವಂಥ 1 to 10 HP ಕರೆಂಟ್ ಕೊಡುತ್ತಿದ್ದು, 10 to 20 HP ವರೆಗೂ ಕೂಡಾ 200 ಯೂನಿಟ್‌ವರೆಗೂ ರೂ.1.25 ಪೈಸೆಯಂತೆ ಸರ್ಕಾರ ಉಚಿತ ವಿದ್ಯುತ್ ಕೊಡುತ್ತಿದೆ. ಈ ರೀತಿಯಾಗಿ ಎಲ್ಲಾ ಯೋಜನೆಗಳನ್ನು ಹಂತ ಹಂತವಾಗಿ ತರುವಂಥ ಪ್ರಯತ್ನ ಮಾಡುತ್ತಿದ್ದೇವೆ.

ಕರ್ನಾಟಕದಲ್ಲಿರುವಂಥ ವಿವಿಧ ಸೀರೆಗಳಾಗಲಿ ಅಥವಾ ರೂಪದರ್ಶಿಯರು ಧರಿಸುವಂಥ ಬಟ್ಟೆಗಳನ್ನಾಗಲಿ ಒಂದೇ ಶೋ ರೂಮ್‌ನಲ್ಲಿ ಮಾರಾಟ ಮಾಡುವಂಥ ಕೆಲಸ ಮಾಡಿದರೆ, ಮತ್ತಷ್ಟು ಜನರನ್ನು attract ಮಾಡುವಂಥ ಪ್ರಯತ್ನವಾಗುತ್ತದೆ. ನೇಕಾರರ ಮಕ್ಕಳಲ್ಲಿ ಕೂಡಾ ಪ್ರತಿಭೆ ಇರುವಂಥ ಮಕ್ಕಳು ಇರುವುದರಿಂದ ಬಹಳಷ್ಟು ನೇಕಾರರ ಮಕ್ಕಳು ನೇಕಾರಿಕೆ ಮೇಲೆ ಅವಲಂಬಿತರಾಗಿ ಬದುಕುತ್ತಿದ್ದು, ಅವರು ಬೇರೆ ಬೇರೆ ಕಡೆ migrate ಆಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಯಾವ ನೇಕಾರರು KHDC ಯಲ್ಲಿ enrolment ಮಾಡಿದ್ದಾರೆ, ಅವರಿಗೆ ಕಚ್ಚಾ ವಸ್ತುಗಳನ್ನು ಕೊಟ್ಟು, ಇನ್ನು ಹೆಚ್ಚಿನ ಹುದ್ದೆಯನ್ನು ಕೊಡುವಂಥ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಿದ್ದೇವೆ. 2013 ರಿಂದ 2018ನೇ ಸಾಲಿನವರೆಗೂ ಅಥವಾ 2023ನೇ ಸಾಲಿನಲ್ಲಿರಬಹುದು. ಯಾವಾಗ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿದೆ, ನೇಕಾರರ ಯಾವುದೇ ಸಾಲವನ್ನು ಮನ್ನಾ ಮಾಡುವಂಥ ಪ್ರಯತ್ನ ಮಾಡಿದ್ದೇವೆ ಮತ್ತು subsidised rate ನಲ್ಲಿ ಕೂಡಾ ಸಾಲ ಕೊಡುವಂಥ ವ್ಯವಸ್ಥೆ ಮಾಡಿದ್ದೇವೆ. ಮಾನ್ಯ ಸದಸ್ಯರು ಇನ್ನು ಏನಾದರೂ ಹೆಚ್ಚಿನ ಸಲಹೆ ಕೊಟ್ಟರೆ, ಅದನ್ನು ಮಾಡುವಂಥ ಪ್ರಯತ್ನ ಮಾಡುತ್ತೇವೆ.

**ಶ್ರೀ ಕೇಶವ ಪ್ರಸಾದ್.ಎಸ್:–** ಮಾನ್ಯ ಸಭಾಪತಿಯವರೇ, 20 ಹೆಚ್.ಪಿ. ವರೆಗೂ ಅವರಿಗೆ ಪೂರ್ಣ ವಿರಾಮ ಕೊಟ್ಟರೆ, ಬಹಳ ಅನುಕೂಲವಾಗುತ್ತದೆ ಎನ್ನುವುದು ನನ್ನ ಬೇಡಿಕೆಯಾಗಿದೆ.

**ಶ್ರೀ ಶಿವಾನಂದ ಪಾಟೀಲ:–** ಮಾನ್ಯ ಸಭಾಪತಿಯವರೇ, ನೇಕಾರರಿಗೆ ಹ್ಯಾಂಡ್ ಲೂಮ್‌ನೊಂದಿಗೆ ಪವರ್ ಲೂಮ್ ಕೂಡ ಕೊಡುವಂಥ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಏಕೆಂದರೆ, ಟೆಕ್ನಾಲಜಿ upgrade ಆದರೆ ಮಾತ್ರ ಅವರು ಬದುಕಲು ಸಾಧ್ಯವಾಗುತ್ತದೆ. ಬರೀ ಹ್ಯಾಂಡ್‌ಲೂಮ್ ಅವಲಂಬಿಸಿ ಬದುಕಿದರೆ, ಅವರಿಗೆ ಸರಿಯಾದ ಕೂಲಿ ಸಹ ಸಿಗುವುದಿಲ್ಲ. ತಮಿಳುನಾಡು, ಗುಜರಾತ್, ಬೇರೆ ಬೇರೆ ರಾಜ್ಯಗಳಲ್ಲಿ ಇವತ್ತು ಹ್ಯಾಂಡ್‌ಲೂಮ್‌ನಿಂದ ಪವರ್

ಲೂಮ್ ಜೊತೆಗೆ migrate ಆಗುವ ಪ್ರಯತ್ನ ಮಾಡಿದ್ದಾರೆ. ನಾವು ಕೂಡಾ ಆ ರೀತಿ ಟೆಕ್ನಾಲಜಿಯನ್ನು ಅಪ್‌ಗ್ರೇಡ್ ಮಾಡಿ, ಇನ್ನೂ ಹೆಚ್ಚಿನ ಶಕ್ತಿ ಬರುವಂಥ ಕೆಲಸ ಮಾಡಿದರೆ, ಖಂಡಿತ ಆ ಪ್ರಯತ್ನಕ್ಕೆ ಫಲ ಸಿಗುತ್ತದೆ. 10 ರಿಂದ 20 ಹೆಚ್.ಪಿ. ವರೆಗಿನ ಬಳಕೆದಾರರ ಸಂಖ್ಯೆ ಬಹಳ ಕಡಿಮೆ ಇದೆ.

(ಮುಂದು)

(654) 23.07.2024/7.20/ಎಸ್‌ಕೆ- ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಶಿವಾನಂದ ಪಾಟೀಲ್ (ಮುಂದು):**

ನಾನು ತಮಗೆ ಹೇಳಬೇಕೆಂದರೆ, hardly, about 10-20% of Powerloom units are having 1-20 H.P. power connection. ಅವರಿಗೆ Rs. 1.25 per unit ಗೆ ನಾವು ಈಗಾಗಲೇ concessional rate ಮೇಲೆ up to 200 units ನ್ನು ಕೊಡುತ್ತಿದ್ದೇವೆ.

**ಶ್ರೀ ಕೇಶವ ಪ್ರಸಾದ್.ಎಸ್:-** ಮಾನ್ಯ ಸಭಾಪತಿಯವರೇ, ಕುಲ ಕಸುಬಿಗೆ ವಿಶೇಷವಾದಂತಹ ಒಂದು ಪ್ಯಾಕೇಜ್‌ನ್ನು ಕೊಟ್ಟು, ಅದನ್ನು develop ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಶಿವಾನಂದ ಪಾಟೀಲ್:-** ಈಗ KHDC (Karnataka Handloom Development Corporation) ನಲ್ಲಿ ಅದರ ಬಗ್ಗೆ ಹೇಳುವುದಾದರೆ,...

**ಸಭಾಪತಿಯವರು:-** ಮಾನ್ಯ ಸಚಿವರೇ, ತಮಗೆ ಶ್ರೀಮತಿ ಉಮಾಶ್ರೀಯವರು ಏನು ಕೇಳುತ್ತಾರೆ ನೋಡಿ.

**ಶ್ರೀ ಶಿವಾನಂದ ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನಾದರೂ ಕೇಳುವುದು ಇದೆಯೇ?

**ಶ್ರೀಮತಿ ಉಮಾಶ್ರೀ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಕೈಮಗ್ಗ ಎಂದ ಕೂಡಲೇ ಸರ್ಕಾರದ ಅಧೀನದಲ್ಲಿ ಬರುವಂತಹ ಕೆ.ಹೆಚ್.ಡಿ.ಸಿ., ಎಂಬುದು ಎಲ್ಲರಿಗೂ ಗೊತ್ತಾಗುತ್ತದೆ. ಅವರು ಹೇಳುತ್ತಿರುವುದು ಕೂಡ, other than that. ಮೊಳಕಾಲ್ಮೂರಿನಲ್ಲಿ ರೇಷ್ಮೆ ಸೀರೆಗಳನ್ನು ನೇಯುವಂತಹದ್ದು ಇರಬಹುದು ಮತ್ತು ಉಡುಪಿಯಲ್ಲಿ ಕಾಟನ್ ಸೀರೆಗಳನ್ನು ನೇಯುವಂತಹದ್ದು ಇರಬಹುದು. ಹೊಸ ಹೊಸ ವಿನ್ಯಾಸಗಳನ್ನು ಪರಿಷ್ಕಾರಗಳನ್ನು ಮಾಡುತ್ತಿರುವಂತಹ ಅನೇಕ ಕೈಮಗ್ಗದವರು ಇದ್ದಾರೆ. ಆ ಕೈಮಗ್ಗ ನೇಕಾರರು ನಿಮ್ಮ ಕಾವೇರಿ ಹ್ಯಾಂಡ್‌ಲೂಮ್ ಮತ್ತು ಖಾದಿ ಗ್ರಾಮೋದ್ಯೋಗ ಇರಬಹುದು. ಈ ರೀತಿಯ ಬೇರೆ ಬೇರೆ ನೇಕಾರರುಗಳಿಗೆ ಒಂದು ವಿಶೇಷವಾದಂತಹ ಯೋಜನೆಗಳು ಮತ್ತು ಅವರಿಗೆ supportive system ಇರುವಂತಹ ಪ್ರತ್ಯೇಕವಾಗಿ ತರಬೇಕೆಂಬುದು ಮೊದಲನೆಯದು. ಎರಡನೆಯದಾಗಿ, ಈಗ ಕೆ.ಹೆಚ್.ಡಿ.ಸಿ., ನಲ್ಲಿ ನೇಕಾರರು ಕಡಿಮೆಯಾಗಿದ್ದಾರೆ ಎಂದು ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರೆ. ಶಿಕ್ಷಣ ಇಲಾಖೆಯ ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ಕೆ.ಹೆಚ್.ಡಿ.ಸಿ.,ಗೆ ನಿರಂತರವಾಗಿ MOU (Memorandum Of Understanding) ಆಗಿತ್ತು. ವಿದ್ಯಾವಿಕಾಸ ಯೋಜನೆ ಕೆ.ಹೆಚ್.ಡಿ.ಸಿ., ಮತ್ತು Karnataka State Powerloom Development Corporation (KSPDC) ಗೆ MOU ಆಗಿತ್ತು. ಆಗ KSPDC ನಿಗಮ ಎಂಬುದು ಇತ್ತು. ಈಗ ಅದರ ಹೆಸರನ್ನು ಬದಲಾವಣೆ ಮಾಡಿದ್ದಾರೆ. ಇದರ ಮಧ್ಯೆ ಏನೇನು ನಡೆದಿದೆ ಎಂಬುದು ಕೆಲವೊಂದು ವಿಚಾರಗಳನ್ನು ಹಾಗೂ KHDC ಅಥವಾ KSPDC ಏನೇನು ಮಾಡುತ್ತಿದ್ದಾರೆ ಎಂಬ ಬಗ್ಗೆ ಮಾನ್ಯ ಸಚಿವರು ಸೂಕ್ಷ್ಮವಾಗಿ ಹೇಳಿದ್ದಾರೆ. ಕೆಲವೊಂದು ಹಗರಣಗಳಾಗಿ ಎಂ.ಡಿ., ಜೈಲಿಗೆ ಹೋಗಿದ್ದು, ಆಗಿನ ಕಾಲದ ಅಧ್ಯಕ್ಷರು ಅಪರ–ತಪಡ (ಗೋಲ್ ಮಾಲ್) ಇವೆಲ್ಲವೂ ಹಿಂದಿನ ಸರ್ಕಾರದಲ್ಲಿ ನಡೆದಿರುವ ಬಗ್ಗೆ ಮಾನ್ಯ ಸಚಿವರು ಏತಕ್ಕಾಗಿ ಹೇಳುತ್ತಿಲ್ಲ. ಅದು ಇರಲಿ, ಅದನ್ನು ಒಂದು ಕಡೆ ಇಟ್ಟು ನೋಡಬೇಕೆಂದು ಹೇಳಿದರೆ, ಈಗ ಇರುವಂತಹ ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ uniforms ಏನಿದೆ, ಅದನ್ನು ಕೆ.ಹೆಚ್.ಡಿ.ಸಿ.,ಗೆ ಕೊಡಬೇಕೆಂದರೆ, ಶೇಕಡಾ 50 ರಷ್ಟು ನೇಯ್ದು ಕೊಡುವುದಕ್ಕೂ ಕೂಡ ಮಗ್ಗದಲ್ಲಿ ನೇಕಾರರುಗಳ ಸಂಖ್ಯೆ ಕಡಿಮೆಯಾಗಿದೆ ಎನ್ನುವ ಅಷ್ಟೇ ಸತ್ಯವಾಗಿದೆ. ಆ ಕಾರಣದಿಂದ ಮತ್ತಷ್ಟು ನೇಕಾರರು ಬರಬೇಕು. ಆ ಉದ್ಯೋಗವನ್ನು ನಂಬಿಕೊಂಡು ಬರಬೇಕೆಂದರೆ, ಕೂಲಿ ಹೆಚ್ಚು

ಮಾಡಬೇಕು. ಮಾಲು ಕೊಡುವುದರ ಜೊತೆಗೆ ಕೂಲಿ ಹೆಚ್ಚಾಗಬೇಕು. ನೇಕಾರರ ಜೀವನ ಭದ್ರತೆಗೆ ಸಂಬಂಧಪಟ್ಟಂತೆ, ಇನ್ನೂ ಅನೇಕ ಯೋಜನೆಗಳು ಬರಬೇಕು. ಆಗ ಮಾತ್ರ ಇಲ್ಲಿ attract ಆಗಿ ಉಳಿಯುವುದಕ್ಕೆ ಸಾಧ್ಯವಾಗುತ್ತದೆ, ಇಲ್ಲವೆಂದರೆ ಇಲ್ಲ. Powerloom ವಿಭಾದಲ್ಲಿ ಇರುವಂತಹ ಕಾರ್ಮಿಕರ ಬೇಡಿಕೆಗಳೇ ಬೇರೆ, ಮತ್ತು ನೇಕಾರಿಕೆ ಮಾಲೀಕರ ಬೇಡಿಕೆಗಳೇ ಬೇರೆ ಇದೆ. ಹಾಗಾಗಿ ಎರಡ್ಮೂರು ವಿಧಾನಗಳು ಇರುವುದರಿಂದ export qualities ಗಳೇ ಬೇರೆ ಇದೆ. Silk ನ qualities ಗಳು ಬೇರೆ ಇದೆ. ಈ ತರಹದ್ದೆಲ್ಲಾ ತುಂಬಾ ಇದೆ, ಬಹಳ vast ಇದು. ಮಾನ್ಯ ಸಚಿವರು ಮಾತನಾಡುವಾಗ ಅಥವಾ ಬೇರೆಯವರು ಮಾತನಾಡುವಾಗ, textile park ಇನ್ನೊಂದು ಮತ್ತೊಂದು ದೊಡ್ಡ ಯೋಜನೆಗಳು ಕೇಂದ್ರ ಸರ್ಕಾರದ ಅನುದಾನಗಳು ಅವೆಲ್ಲಾ ಬಹಳ ದೊಡ್ಡದ್ದು ಹಾಗೂ rapid ಮಗ್ಗಗಳನ್ನು ಮಾಡತಕ್ಕಂತಹದ್ದು. ಇಲ್ಲಿ ಸಣ್ಣ ನೇಕಾರರು ಸ್ಥಳೀಯವಾಗಿರುವಂತಹವರು. ಮನೆಯಲ್ಲಿಯೇ ಗುಡಿ ಕೈಗಾರಿಕೆಗಳ ಮಾಡುವಂತಹ ಉದ್ಯಮ ಏನಿದೆ ಇದು ಉದ್ಯೋಗ ಸೃಷ್ಟಿಗೆ ಬಹಳ ಅನುಕೂಲವಾಗಿರುವಂತಹದ್ದು. ಆದುದರಿಂದ ಇದಕ್ಕೆ ಮಾನ್ಯ ಸಚಿವರು ಒತ್ತು ಕೊಡಬೇಕು, ಏಕೆಂದರೆ ಇಲ್ಲಿ ಬಹಳಷ್ಟು ಹಣ ಪೋಲಾಗುತ್ತಿದೆ. ಅಲ್ಲದೆ, ಎಸ್.ಸಿ./ ಎಸ್.ಟಿ., ಗಳಿಗೆ ಕೊಡುವಂತಹ ಅನುದಾನ ಏನಿದೆ ಅದು ಸಮರ್ಪಕವಾಗಿ ಉಪಯೋಗವಾಗುತ್ತಿಲ್ಲ. ಅಲ್ಲಿಯೂ ಕೂಡ ಬಹಳಷ್ಟು ಹಣ ಸೋರಿಕೆಯಾಗುತ್ತಿದೆ. ಅದರ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಕಾರ್ಯನ್ಮೋಖರಾಗಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರೇ ತಾವು ಮಾತನಾಡಿ.

**ಶ್ರೀ ಕೇಶವ ಪ್ರಸಾದ್ .ಎಸ್:–** ಮಾನ್ಯ ಸಭಾಪತಿಯವರೇ, ನನ್ನದು ಒಂದೇ ಒಂದು housing problem ಇದೆ.

**ಶ್ರೀ ಶಿವಾನಂದ ಪಾಟೀಲ್:–** ಮಾನ್ಯ ಕೇಶವ ಪ್ರಸಾದ್‌ರವರೇ, ಈಗ ಆ ವಿಷಯ ಬೇಡ.

**ಶ್ರೀ ಕೇಶವ ಪ್ರಸಾದ್ ಎಸ್:–** ಮಾನ್ಯ ಸಚಿವರೇ, ಇಲ್ಲಿ ಒಂದು housing problem ಇದೆ.

**ಶ್ರೀಮತಿ ಉಮಾಶ್ರೀ:–** ಮಾನ್ಯ ಸಚಿವರೇ, ಜವಳಿ ಇಲಾಖೆಯಿಂದ ಮತ್ತು KHDC ನಿಂದ ಕಟ್ಟಿಸಿದಂತಹ ಮನೆಗಳ ಮೇಲೆ ಸರ್ಕಾರ ರೂ.32 ಕೋಟಿಗಳಷ್ಟು ಸಾಲ ಮನ್ನಾ ಮಾಡಿದೆ.

**ಶ್ರೀ ಶಿವಾನಂದ ಪಾಟೀಲ್:–** ಅದು ತಾವಿದ್ದಾಗ ಕೂಡ ಆಗಿರುವಂತಹದ್ದು.

**ಶ್ರೀಮತಿ ಉಮಾಶ್ರೀ:–** ಮಾನ್ಯ ಸಚಿವರೇ, ಸಾಲ ಮನ್ನಾ ಆಗಿದೆ. ಆದರೆ ಹೊಸ ಮನೆಗಳನ್ನು ಕೊಡಬೇಕೆಂಬ ಬೇಡಿಕೆ ಇದೆ. ಅದರ ಬಗ್ಗೆ ತಾವು ಗಮನಹರಿಸಿ.

**ಸಭಾಪತಿಯವರು:–** ಮಾನ್ಯ ಸಚಿವರೇ, ತಾವು ಹೇಳಿ.

**ಶ್ರೀ ಶಿವಾನಂದ ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸದಸ್ಯರು ಹೇಳಿದ ಹಾಗೇ KSIC (Karnataka Silk Industries Corporation Limited) ನಮ್ಮ ಅಧೀನದಲ್ಲಿ ಇಲ್ಲ. ಇವತ್ತು, KSIC is the most profitable industry.

**ಶ್ರೀಮತಿ ಉಮಾಶ್ರೀ:–** ನಾನು KSIC ಬಗ್ಗೆ ಹೇಳುತ್ತಿಲ್ಲ.

**ಶ್ರೀ ಶಿವಾನಂದ ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಸ್ವಲ್ಪ ಈ ಇಲಾಖೆಯನ್ನು restructure ಮಾಡಬೇಕು. KSTIDC (Karnataka State Textile Infrastructure Development Corporation) ಮತ್ತು KHDC ಎಲ್ಲಾ ಬೇರೆ ಬೇರೆ ಮಾಡಿ, ಇದರ administrative cost ಜಾಸ್ತಿಯಾಗುತ್ತದೆ. ತಮಿಳುನಾಡಿನಲ್ಲಿ ಯಾವ ತರಹ amalgamate ಮಾಡಿದ್ದಾರೆ? ಅದೇ ತರಹ ನಾವು ಮಾಡಬೇಕೆನ್ನುವ ವಿಚಾರವಿದೆ. ಮೊದಲು KHDC loss wipeout ಆಗಬೇಕು, ಇವು ಹನ್ನೆರಡು ವರ್ಷಗಳಿಂದ ನಷ್ಟದಲ್ಲಿ ಇದೆ. ಸುಮಾರು ನೂರ ಎಂಭತ್ತು ಕೋಟಿ ರೂಪಾಯಿಗಳಷ್ಟು ನಷ್ಟದಲ್ಲಿ ಇದೆ. ಅದೇ ರೀತಿಯಲ್ಲಿ KSTIDC ಪೂರ್ತಿ ನಷ್ಟದಲ್ಲಿ ಇದೆ. ಇವೆಲ್ಲಾ ನಷ್ಟದಿಂದ wipeout ಆಗಿ, restructure ಮಾಡುವಂತಹ ಒಂದು ಯೋಜನೆಯನ್ನು KSTIDC ಹಾಗೂ KHDC ನಲ್ಲಿ ಇಟ್ಟುಕೊಂಡಿದ್ದೇವೆ. KSIC ನನ್ನ ಕೈಯಲ್ಲಿ ಇಲ್ಲ. ಅದನ್ನು ಕೂಡ ಇದಕ್ಕೆ ಸೇರಿಸುವಂತಹ ಒಂದು ಪ್ರಯತ್ನವನ್ನು ಮಾಡಿ, ಈ ಮನೆಗಳು ಏನಿದೆ, ಅದು ವಸತಿ ಇಲಾಖೆಗೆ

ಸಂಬಂಧಪಟ್ಟಿರುವಂತಹದ್ದು. ನಾವು ವಸತಿ ಇಲಾಖೆಯ ಸಚಿವರಿಗೆ ಮನವಿ ಮಾಡಿಕೊಳ್ಳಬೇಕು. ಏಕೆಂದರೆ, ಮೀನುಗಾರಿಕೆ ಇಲಾಖೆಯಲ್ಲಿ ಮೀನುಗಾರರಿಗೆ ಮನೆ ಕೊಡುತ್ತಾರೆ. ಅದೇ ರೀತಿ ನೇಕಾರರಿಗೆ ಕೊಡಬೇಕೆಂಬುದರ ಬಗ್ಗೆ ನಾನು ಮಾನ್ಯ ವಸತಿ ಸಚಿವರಿಗೆ ವಿನಂತಿಯನ್ನು ಮಾಡಿಕೊಂಡು, ಅದನ್ನು ಕೊಡಿಸುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರಿಂದ ಪ್ರಯತ್ನ ಮಾಡುತ್ತೇನೆ.

**ಶ್ರೀಮತಿ ಉಮಾಶ್ರೀ:–** ಮಾನ್ಯ ಸಚಿವರೇ, ಎಸ್.ಸಿ., ಎಸ್.ಟಿ.,ಗೆ ಕೊಡುವಂತಹ ಅನುದಾನ ಸರಿಯಾದ ರೀತಿಯಲ್ಲಿ ಸಮರ್ಪಕವಾಗುತ್ತಿಲ್ಲ ಎಂಬುದು ನನ್ನ ಗಮನಕ್ಕೆ ಬಂದಿದೆ.

**ಶ್ರೀ ಶಿವಾನಂದ ಪಾಟೀಲ್:–** ಅದು ದುರಪಯೋಗುತ್ತಿದೆ ಎನ್ನುವಂತಹದ್ದು ನನ್ನ ಗಮನಕ್ಕೆ ಬಂದಿದೆ. ಅದು ಮೂಲ ನೇಕಾರರಿಗೆ ಹೋಗಬೇಕು. ಆದರೆ ಏನಾಗುತ್ತದೆ ಎಂದರೆ, ಜಾತಿ ವ್ಯವಸ್ಥೆಯಲ್ಲಿ ಎಸ್.ಸಿ./ಎಸ್.ಟಿ.,ಗೆ ಬಂದು ಬಿಡುತ್ತದೆ. ಅದೊಂದು ಬಹಳ ಕಷ್ಟವಿದೆ. ನಾವು ಕೊಡಬೇಕಾದ ಅನಿವಾರ್ಯತೆ ಇದೆ.

**ಶ್ರೀಮತಿ ಉಮಾಶ್ರೀ:–** ಮಾನ್ಯ ಸಚಿವರೇ, ಅನುದಾನ ಕೊಡುವುದು ತಪ್ಪು ಎಂದು ಹೇಳುತ್ತಿಲ್ಲ. ಆದರೆ ಅದು ಉಪಯೋಗವಾಗಬೇಕು. ಉದ್ಯೋಗ ಸೃಷ್ಟಿಯಾಗಬೇಕೆಂಬುದರ ಕಡೆ ನೋಡುತ್ತಿರುವುದು...

**ಸಭಾಪತಿಯವರು:–** ಮಾನ್ಯ ಸದಸ್ಯರು ಕೇಳಿರುವಂತಹದ್ದಕ್ಕೆ ಮಾನ್ಯ ಸಚಿವರೇ, ಉತ್ತರ ಹೇಳಿ. ಮಾನ್ಯ ಸದಸ್ಯರೇ, ತಾವು ಕುಳಿತುಕೊಳ್ಳಿ.

**ಶ್ರೀಮತಿ ಉಮಾಶ್ರೀ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಇಲ್ಲಿ ಕೇವಲ ನಮ್ಮ ಅನುವಂಶೀಯ ನೇಕಾರರು ಮಾತ್ರವಲ್ಲದೆ, ಎಲ್ಲಾ ಜಾತಿ ಜನಾಂಗದವರಲ್ಲಿಯೂ ನೇಕಾರರು ಇದ್ದಾರೆ. ಅವರು ಉದ್ಧಾರವಾಗಲಿ. ಅದನ್ನು ಸದುಪಯೋಗ ಮಾಡಿಕೊಳ್ಳಲಿ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಮಾನ್ಯ ಸಚಿವರು ಮಾತನಾಡುವಾಗ, ಮಧ್ಯ ಎದ್ದುನಿಂತು ಮಾತನಾಡಬಾರದು.

**ಶ್ರೀ ಶಿವಾನಂದ ಪಾಟೀಲ್:–** ಮಾನ್ಯ ಸಭಾಪತಿಯವರೇ, ಸದುಪಯೋಗ ಮಾಡಿಕೊಳ್ಳುವಂತಹದ್ದರ ಹಿಂದೆ ಹಣ ದುರಪಯೋಗವಾಗುತ್ತಿದೆ ಎಂಬ ವಿಷಯವು ನನ್ನ ಗಮನಕ್ಕೆ ಬಂದಿದೆ. ಅದನ್ನು ನಿಯಂತ್ರಣ ಮಾಡಿ, ಅದನ್ನು ಸಹ ಸುವ್ಯವಸ್ಥಿತ ರೀತಿಯಲ್ಲಿ ತರುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

**ಶ್ರೀಮತಿ ಉಮಾಶ್ರೀ:–** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾರವರೇ, ತಾವು ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ,ಈ ಪ್ರಶ್ನೆಗೆ ತುಂಬಾ ಜನ ಸದಸ್ಯರು ಮಾತನಾಡಬೇಕೆಂದುಕೊಂಡಿದ್ದಾರೆ.

**ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾರವರೇ, ತಮ್ಮ ವಿಷಯವನ್ನು ತೆಗೆದುಕೊಂಡು ಮಾತನಾಡಿ. ನಾನು ಹೇಳಿದ ಮೇಲೆ ತಾವು ಮಾತನಾಡಬೇಕು.

**ಶ್ರೀ ಐವನ್ ಡಿ'ಸೋಜಾ:–** ಹಾಗಾಗಿ ...

**ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾರವರೇ, ನಾನು ತಮಗೆ ಮಾತನಾಡುವುದಕ್ಕೆ ಹೇಳಿದ್ದೇನೆ. ತಮ್ಮ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಸದನದಲ್ಲಿದ್ದಾರೆ. ತಾವು ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಇದನ್ನು ನಾಳೆ ತೆಗೆದುಕೊಳ್ಳಿ.

**ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾರವರೇ, ತಾವು ಈಗ ಮಾತನಾಡಿ ಎಂದು ಹೇಳಿದ್ದೇನೆ. ನಾಳೆ ತಮ್ಮ ವಿಷಯವನ್ನು ತೆಗೆದುಕೊಳ್ಳುವುದಿಲ್ಲ. ನಾನು ಬೆಳಗ್ಗೆಯಿಂದ ಪೀಠದಲ್ಲಿ ಕುಳಿತಿದ್ದೇನೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನಾನು ಕೂಡ ಬೆಳಗ್ಗೆಯಿಂದ ಕುಳಿತುಕೊಂಡಿದ್ದೇನೆ.

**ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾರವರೇ, ನಾನು ಕೂಡ ಬೆಳಗ್ಗೆಯಿಂದ ಕುಳಿತುಕೊಂಡಿದ್ದೇನೆ. ತಾವಾದರೇ ಹೊರಗಡೆ ಹೋಗುತ್ತೀರಾ ಬರುತ್ತೀರಾ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನಾನು ಕೂಡ ಈ ಕಡತವನ್ನು ನಾಲ್ಕು ದಿವಸದಿಂದ ತರುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾರವರೇ, ತಾವು ಮಾತನಾಡುತ್ತೀರಾ ಇಲ್ಲವೋ ಹೇಳಿ. ನಾನು ಈಗ ತಮಗೆ ಮಾತನಾಡುವುದಕ್ಕೆ ಹೇಳಿದ್ದೇನೆ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಎಲ್ಲರ ಅಭಿಪ್ರಾಯವಾಗಿದೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಎಲ್ಲರ ಅಭಿಪ್ರಾಯವೇನೆಂದರೆ, ನಾಳೆ ತೆಗೆದುಕೊಳ್ಳಿ ಎಂಬುದಾಗಿದೆ.

**ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾರವರೇ, ಅಜೆಂಡಾ ತುಂಬಾ ಇದೆ. ಅದನ್ನು ಹೇಗೆ ಮುಗಿಸಬೇಕು ಹೇಳಿ ನೋಡೋಣ. ಅಜೆಂಡಾ ದಿನ ದಿನ carry over ಆಗುತ್ತದೆ. ಯಾರು ಬರುವುದಿಲ್ಲ. ತಾವು ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಮಾನ್ಯ ರಾಮೋಜಿಯವರು....

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮ್ಮ colleague ರವರಾದ ಮಾನ್ಯ ರಾಮೋಜಿಯವರು ನಮ್ಮನ್ನೆಲ್ಲಾ dinner ಗೆ ಕರೆದಿದ್ದಾರೆ.

**ಶ್ರೀ ಐವನ್ ಡಿ’ಸೋಜಾ:–** ಮಾನ್ಯ ಸಭಾಪತಿಯವರೇ, ಅದಕ್ಕೆ ಹೋಗಬೇಕಾದ ಎಲ್ಲರಿಗೂ ಅನಿವಾರ್ಯತೆ ಇದೆ.

**ಸಭಾಪತಿಯವರು:–** ಮಾನ್ಯ ನಸೀರ್ ಅಹ್ಮದ್‌ರವರೇ, ಈ ರೀತಿ ಮಾಡಿದರೆ ಅಜೆಂಡಾ ಹೇಗೆ ಪೂರ್ತಿ ಮಾಡುವುದು ಹೇಳಿ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಅದು ತಮಗೆ ಬಿಟ್ಟಿರುವಂತಹ ವಿಚಾರ.

**ಸಭಾಪತಿಯವರು:–** ಮಾನ್ಯ ನಸೀರ್ ಅಹ್ಮದ್‌ರವರೇ, ದಿನದಿಂದ ದಿನಕ್ಕೆ ಅಜೆಂಡಾ ಜಾಸ್ತಿಯಾಗುತ್ತಾ ಹೋಗುತ್ತದೆ. ಮಾನ್ಯ ಸದಸ್ಯರಿಗೆ ನಾಳೆ ಮಾತನಾಡುವುದಕ್ಕೆ ಅವಕಾಶ ಸಿಗುವುದಿಲ್ಲ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ತಾವು ಸದನ ನಡೆಸುವುದು ನಮಗೆ ಖುಷಿಯಿದೆ.

**ಸಭಾಪತಿಯವರು:–** ಮಾನ್ಯ ಭೋಜೇಗೌಡರೇ, ಸದನ ಮುಗಿದ ತಕ್ಷಣವೇ ಸದಸ್ಯರೆಲ್ಲರೂ ಹೊರಟು ಹೋಗುತ್ತಾರೆ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ತಮ್ಮ commitment ನನಗೆ ಅರ್ಥವಾಗುತ್ತದೆ.

**ಸಭಾಪತಿಯವರು:–** ಮಾನ್ಯ ಭೋಜೇಗೌಡರೇ, ನೋಡಿ 15ನೇ ತಾರೀಖಿನಿಂದ repeat ಆಗುತ್ತಿದೆ. ಮತ್ತೆ ಮತ್ತೆ repeat ಆಗುತ್ತಿದೆ. ಇದರ ಬಗ್ಗೆ ತಾವು ವಿಚಾರ ಮಾಡಿ. ಅಜೆಂಡಾವನ್ನು ಯಾವಾಗ ಪೂರ್ತಿ ಮಾಡಬೇಕು ಹೇಳಿ. ಸದಸ್ಯರು ಯಾರು ಕುಳಿತುಕೊಳ್ಳುವುದಕ್ಕೆ ತಯಾರಿಲ್ಲ. ಸದನವನ್ನು ಹೇಗೆ ನಡೆಸಬೇಕು? ನಾಳೆ ಬೆಳಗ್ಗೆ ೯ ಗಂಟೆಗೆ ಸದನವನ್ನು ಕರೆಯೋಣವೆ?

**ಶ್ರೀ ಐವನ್ ಡಿ’ಸೋಜಾ:–** ಮಾನ್ಯ ಸಭಾಪತಿಯವರೇ, ಆಯಿತು. ತಾವು ನಾಳೆ ಬೆಳಗ್ಗೆ ೯ ಗಂಟೆಗೆ ಕರೆಯಿರಿ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ತಾವು ನಾಳೆ ದಿವಸ ಈ ವಿಷಯವನ್ನು ಹೇಳಿ ನಾಡಿದ್ದು ಬೆಳಗ್ಗೆ 9 ಗಂಟೆಗೆ ಸದನವನ್ನು ಕರೆಯಿರಿ.

**ಸಭಾಪತಿಯವರು:–** ಮಾನ್ಯ ಭೋಜೇಗೌಡರೇ, ತಾವು ವಿಚಾರ ಮಾಡಿ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರುಗಳು ಸದನಕ್ಕೆ ಬರಬೇಕಲ್ಲ. ಮಾನ್ಯ ಸಚಿವರು ಸದನದಲ್ಲಿ ಇಲ್ಲವೆಂದರೆ, ಪ್ರತಿ ಪಕ್ಷದವರು ಗಲಾಟೆ ಮಾಡಿದಾಗ, ತಾವು adjourn ಮಾಡುತ್ತೀರಿ.

**ಸಭಾಪತಿಯವರು:–** ಮಾನ್ಯ ಸಲೀಂ ಅಹಮದ್‌ರವರೇ, ತಾವು ಒಂದು solution ಹೇಳಿ. ಅಜೆಂಡಾ ದಿನದಿಂದ ದಿನಕ್ಕೆ ಮುಂದಕ್ಕೆ ಹಾಕಬೇಕಾಗುತ್ತದೆ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ತಾವು ಈಗ ತೆಗೆದುಕೊಳ್ಳಿ.

**ಸಭಾಪತಿಯವರು:–** ಇನ್ನೂ ಇಲ್ಲಿ ಯಾರು ಬರಬೇಕು? **(ಗೊಂದಲ)** ಮಾನ್ಯ ಸಚಿವರು ಹೊರಟು ಹೋಗುವವರನ್ನು ಸದನದಲ್ಲಿಯೇ ಕೂರಿಸಿದ್ದೇನೆ.

**ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸದನವನ್ನು ನಾಳೆ 10 ಗಂಟೆ 30 ನಿಮಿಷಕ್ಕೆ ಪ್ರಾರಂಭ ಮಾಡಿ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಆಯಿತು. ಮಾನ್ಯ ಸಲೀಂ ಅಹಮದ್‌ರವರೇ, ನಾವು ತಮಗೆ ಬೇಕಾದರೆ ಮನೆ ತನಕ ಬಂದು ಬಿಡುತ್ತೇವೆ. ತಮ್ಮ ಮನೆಯಲ್ಲಿ ಗಲಾಟೆಯಾಗಿದ್ದರೆ ಹೇಳಿ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರುಗಳು ಸದನಕ್ಕೆ ಬರಬೇಕಲ್ಲ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಲೀಂ ಅಹಮದ್‌ರವರೇ, ತಮ್ಮ ಮನೆಯಲ್ಲಿ ಏನಾದರೂ ಗಲಾಟೆಯಾಗಿದ್ದರೆ, ತಾವು ಇಲ್ಲಿ ಕುಳಿತಕೊಳ್ಳಬೇಕು ಎಂದಿದ್ದೀರಾ?

**ಶ್ರೀ ಐವನ್ ಡಿಸೋಜಾ:–** ಮಾನ್ಯ ಸಭಾಪತಿಯವರೇ, ನಾಳೆ ಸದನವನ್ನು 10 ಗಂಟೆ 30 ನಿಮಿಷಕ್ಕೆ ಪ್ರಾರಂಭ ಮಾಡಿ.

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆ 10 ಗಂಟೆಗೆ ಪ್ರಾರಂಭವಾಗುತ್ತದೆ.

**ಶ್ರೀ ಐವನ್ ಡಿಸೋಜಾ:–** ಮಾನ್ಯ ಸಭಾಪತಿಯವರೇ, ನಾಳೆ ಸದನವನ್ನು 10 ಗಂಟೆಗೆ ಪ್ರಾರಂಭ ಮಾಡಿ.

**15. ಪ್ರಕಟಣೆ**

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 113 ರ ಮೇರೆಗೆ ವಿಧಾನಸಭೆಯು ದಿನಾಂಕ 23.07.2024ರಂದು ಈ ಕೆಳಕಂಡ ವಿಧೇಯಕಗಳನ್ನು ಪುನರ್ ಪರ್ಯಾಲೋಚಿಸಿ ಅಂಗೀಕರಿಸಿತೆಂದು ತಿಳಿಸಿರುತ್ತಾರೆ.

1. ಕರ್ನಾಟಕ ವಿಧಾನಸಭೆಯಿಂದ ಅಂಗೀಕರವಾದ ರೂಪದಲ್ಲಿ ಮತ್ತು ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2024ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ.

2. ಕರ್ನಾಟಕ ವಿಧಾನಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕರಾರವಾದ ರೂಪದಲ್ಲಿ ಮತ್ತು ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕರಾರವಾದ ರೂಪದಲ್ಲಿರುವ 2024ನೇ ಸಾಲಿನ

ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ. ಸಭೆಯು ಒಪ್ಪಿದೆ ಎಂದು ನಾನು ಭಾವಿಸಿದ್ದೇನೆ.

**16. ಮಾನ್ಯ ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರುಗಳ ಹೇಳಿಕೆಗಳು.**

**ಅ)ವಿಷಯ:-ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿರುವ ಅಗಸ್ತ್ಯಲಿಂಗೇಶ್ವರ ಲಿಂಗಕ್ಕೆ ಮುಕ್ತಿ ದೊರಕಿಸುವ ಬಗ್ಗೆ.**

---

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) ರವರು ದಿನಾಂಕ: 19.07.2024ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ಸೂಚನೆಗೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

**ಆ) ವಿಷಯ:- ಆರೋಗ್ಯ ಇಲಾಖೆಯಲ್ಲಿ ಖಾಲಿಯಿರುವ ಆರೋಗ್ಯ ನಿರೀಕ್ಷಣಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.**

---

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಕೇಶವ ಪ್ರಸಾದ್.ಎಸ್ ರವರು ದಿನಾಂಕ: 19.07.2024ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ಸೂಚನೆಗೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

**ಇ) ವಿಷಯ: ಸಮಾಜ ಕಲ್ಯಾಣ ಇಲಾಖೆ ಅಧೀನದಲ್ಲಿ ಬರುವ ವಸತಿ ನಿಲಯಗಳಲ್ಲಿ ಸೂಕ್ತ ಸಿಬ್ಬಂದಿ ಮತ್ತು ಸೌಲಭ್ಯಗಳ ಕೊರತೆಯ ಬಗ್ಗೆ.**

---

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಸಮಾಜ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀಮತಿ ಹೇಮಲತಾ ನಾಯಕ್‌ರವರು ದಿನಾಂಕ: 19.07.2024ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ಸೂಚನೆಗೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

**ಈ) ವಿಷಯ: ಕಲಬುರಗಿ ಜಿಲ್ಲೆಯ ಆರ್‌ಎಮ್‌ಎಸ್‌ಎ ಪ್ರೌಢ ಶಾಲೆ ಸಿಬ್ಬಂದಿಗಳಿಗೆ 4-5 ತಿಂಗಳುಗಳಿಂದ ವೇತನ ಪಾವತಿಸದಿರುವ ಬಗ್ಗೆ.**

**---**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಶಶೀಲ್ ಜಿ. ನಮೋಶಿರವರು ದಿನಾಂಕ: 22.07.2024ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ಸೂಚನೆಗೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:–** ಈಗ ಸದನವನ್ನು ಬುಧವಾರ ಬೆಳಗ್ಗೆ 10.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 07 ಗಂಟೆ 29 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 24ನೇ ಜುಲೈ ಮಾಹೆ 2024ರ ಬುಧವಾರದಂದು ಬೆಳಗ್ಗೆ 10.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

**><><><**